ವಿಶ್ವವಾಣಿ

ವಿಶ್ವಾಸವೇ ವಿಶ್ವ

ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ನಿಮಿತ್ತ ಇಂದಿನ ಸಂಚಿಕೆ ಜತೆ 4 ಪುಟಗಳ ವಿಶೇಷ ಪುರವಣಿ ನೀಡಲಾಗಿದೆ.

ನಿರ್ಮಾಣ ವೆಚ್ಚ	ರೈಲು ಆವರ್ತನ ಅಂತರ
₹ 5057 ಕೋಟಿ	25 ನಿಮಿಷ
ಒಟ್ಟು ಉದ್ದ	
₹ 19.15 ಕಿ.ಮೀ.	

ಉತ್ತರ-ದಕ್ಷಿಣ ಸೇತುಬಂಧ

16	25,000	₹ 10	₹ 90	4
ಒಟ್ಟು ನಿಲ್ದಾಣ	ದೈನಂದಿನ ಪ್ರಯಾಣಿಕರು	ಕನಿಷ್ಠ ಟಿಕೆಟ್ ದರ	ಗರಿಷ್ಠ ಟಿಕೆಟ್ ದರ	ಓಡಾಡುವ ರೈಲು

ಸೊಂಪಾದ ಪುಟಗಳು

ಭೂತಾನ್‌ನಲ್ಲಿ ಒಂದು ಮಗು ಹುಟ್ಟಿದರೆ ಹತ್ತು ಸಸಿಗಳನ್ನು ನೆಡಬೇಕು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಚುನಾವಣೆಗಳಲ್ಲಿ ಮಾತ್ರ ಮುನ್ನೆಲೆಗೆ ಬರುವ ಮನುಸ್ಮೃತಿ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನೀವು ಅತಿಯಾಗಿ ಚಿಂತಿಸುವುದರಿಂದ ನಾಳಿನ ಸಮಸ್ಯೆಗಳು, ತೊಂದರೆಗಳು ನಿವಾರಣೆಯಾಗುವುದಿಲ್ಲ. ಆದರೆ ಇಂದಿನ ಮಾನಸಿಕ ನೆಮ್ಮದಿ ಹಾಳಾಗುವುದು ನಿಶ್ಚಿತ. ನಿಶ್ಚಿಂತೆಯಿಂದ ಇರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ವಕ್ರತುಂಡೋಕ್ತಿ

ಸಾಲ ಕೇಳುವವನ ಒಂದು ಅದ್ಭುತ ಗುಣ ಅಂದ್ರೆ, ಯಾರನ್ನಾದರೂ ನಂಬಿಸುವ ಆತನ ಸಾಮರ್ಥ್ಯ.

ರಾಹುಲ್ ಸೂಚನೆಯಂತೆ ತನಿಖೆಗೆ ಮುಂದಾದ ಸರಕಾರ

ಮತಗಳವಿನ ಬಗ್ಗೆ ತನಿಖೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ 'ಮತಗಳ್ಳತನ' ವಿವಾದ ಮುಂದುವರಿ ದಿದ್ದು, ಆರೋಪಕ್ಕೆ ಬಿಜೆಪಿಗರು ಮಾತ್ರವಲ್ಲದೇ 'ನಕಲಿ ಮತದಾರರು' ಎಂದು ಆರೋಪಿಸಿದ್ದ ಕೆಲ ಸಾರ್ವಜನಿಕರೂ ರಾಗಾ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ನಡುವೆ, ರಾಹುಲ್ ಗಾಂಧಿ ಅವರ ಸೂಚನೆಯಂತೆ ಮತಗಳ್ಳತನ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಮಹದೇವಪುರದಲ್ಲಿ ಮತಗಳ್ಳತನ ನಡೆದಿದೆ ಎನ್ನುವ ರಾಹುಲ್ ಗಾಂಧಿ ಆರೋಪಕ್ಕೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ದಾಖಲೆ ಸಮೇತ ತಿರುಗೇಟು ನೀಡಿದ್ದಾರೆ.

→ 4

ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವ ಬಗ್ಗೆ ಕಾನೂನು ಇಲಾಖೆ ಪರಿಶೀಲನೆ ನಡೆಸಲಿದೆ. ಅವರು ನೀಡುವ ಶಿಫಾರಸಿನ ಅನ್ವಯ ಕಾನೂನಿನ ಕ್ರಮ ಕೈಗೊಳ್ಳಲಾಗುವುದು. ಪರಿಶೀಲನಾ ಕಾರ್ಯವನ್ನು ತ್ವರಿತವಾಗಿ ನಡೆಸಿ ವರದಿ ನೀಡಲು ಅಡ್ವೋಕೇಟ್ ಜನರಲ್ ಅವರಿಗೆ ಸೂಚನೆ ನೀಡಲಾಗುವುದು. ಮತದಾರರ ಪಟ್ಟಿಯ ಸಂಬಂಧ ಸಂಪೂರ್ಣ ಅಧಿಕಾರವಿರುವುದು ಚುನಾವಣಾ ಆಯೋಗಕ್ಕೆ. ಆದ್ದರಿಂದ ಯಾವ ರೀತಿಯಲ್ಲಿ ಕ್ರಮವಹಿಸಬೇಕು ಎನ್ನುವ ಬಗ್ಗೆ ತೀರ್ಮಾನಿಸಲಾಗುವುದು.

– ಸಿದ್ದರಾಮಯ್ಯ ಮುಖ್ಯಮಂತ್ರಿ

ತನಿಖೆಗೆ ಅವಕಾಶವಿದೆಯೇ?

ಮತಗಳ್ಳತನದ ವಿರುದ್ಧ ತನಿಖೆ ನಡೆಸುವಂತೆ ರಾಜ್ಯ ಸರಕಾರಕ್ಕೆ ರಾಹುಲ್ ಗಾಂಧಿ ಸೂಚಿಸಿದ್ದರಿಂದ, ಕೆಲ ಸಚಿವರು ಉತ್ಸುಕರಾಗಿದ್ದಾರೆ. ಆದರೆ ಮೂಲಗಳ ಪ್ರಕಾರ ಚುನಾವಣಾ ಆಯೋಗದ ವಿರುದ್ಧ ತನಿಖೆ ನಡೆಸಲು ಕಾನೂನಾತ್ಮಕ ತೊಡಕಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಚುನಾವಣಾ ಆಯೋಗ ಸಾಂವಿಧಾನಿಕ ಸ್ಥಾನಮಾನ ಹೊಂದಿರುವುದರಿಂದ ರಾಜ್ಯ ಸರಕಾರದ ಅಧಿಕಾರಿಗಳು ತನಿಖೆ ನಡೆಸಲು ಅವಕಾಶವಿಲ್ಲ ಎನ್ನಲಾಗಿದೆ. ಆದ್ದರಿಂದ ನ್ಯಾಯಾಂಗ ತನಿಖೆಗೆ ಅವಕಾಶವಿದೆಯೇ ಎನ್ನುವ ಬಗ್ಗೆ ಕಾನೂನು ತಜ್ಞರಿಂದ ಸಲಹೆ ಕೇಳಿದ್ದಾರೆ. ಕಾನೂನು ತಜ್ಞರು ನೀಡುವ ಸಲಹೆಯ ಆಧಾರದಲ್ಲಿ ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಗಿದೆ ಎನ್ನಲಾಗಿದೆ.

ಸ್ಮಾರಕ ನಿರ್ಮಾಣಕ್ಕೆ ಕಲಾವಿದರ ಒತ್ತಾಯ

ವಿಷ್ಣು ಸಮಾಧಿ ತೆರವಿಗೆ ಆಕ್ರೋಶ

ಬೆಂಗಳೂರು: ಅಭಿಮಾನ್ ಸ್ಟುಡಿಯೊದಲ್ಲಿದ್ದ ಡಾ.ವಿಷ್ಣುವರ್ಧನ್ ಅವರ ಸಮಾಧಿಯನ್ನು ನೆಲಸಮ ಮಾಡಿರುವ ವಿಚಾರ ಅವರ ಅಭಿಮಾನಿಗಳಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿರುವ ನಡುವೆಯೇ ಕನ್ನಡ ಚಿತ್ರರಂಗ ನಟ–ನಟಿಯರು ಈ ಘಟನೆಗೆ ತೀವ್ರ ಬೇಸರ ಮತ್ತು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಮಾಧಿ ತೆರವು ಮಾಡಿರುವುದು ಹೇಡಿತನದ ಕೃತ್ಯ. ಆಗಬಾರದ್ದು ಆಗಿ ಹೋಗಿದೆ. ಮುಂದೇನು ಮಾಡಬೇಕೆಂದು ಚರ್ಚಿಸಬೇಕಾಗಿದೆ. ನ್ಯಾಯಾಲಯಕ್ಕೆ ಹೋಗುವುದಾದರೆ ಅಥವಾ ಭೂಮಿ ಖರೀದಿ ಮಾಡಿರುವವರಿಂದ ಮರು ಖರೀದಿ ಮಾಡುವುದಾದರೆ ಹಣಕಾಸು ಸಹಾಯ ಮಾಡಲು ಸಿದ್ಧ ಎಂದು ನಟ ಕಿಚ್ಚ ಸುದೀಪ್ ಹೇಳಿದ್ದಾರೆ. ಸಮಾಧಿ ತೆರವುಗೊಳಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ವಿಷ್ಣುವರ್ಧನ್ ಅವರ ಅಳಿಯ, ನಟ ಅನಿರುದ್ಧ್ ಬೇಸರ ವ್ಯಕ್ತಪಡಿಸಿದ್ದು ಸ್ಮಾರಕವನ್ನು ತೆರವು ಮಾಡುವ ವಿಚಾರ ನಮಗೆ ಗೊತ್ತೆ ಇರಲಿಲ್ಲ ಎಂದು ತಿಳಿಸಿದ್ದಾರೆ. ಇದೇ ವೇಳೆ ಬಾಲಣ್ಣ ಅವರ ಪುತ್ರಿ, ಗೀತಾ ಬಾಲಕೃಷ್ಣ, ಈ ಸಹೋದರನ ಮಗ ಕಾರ್ತಿಕ್‌ನಿಂದ ಹೀಗಾಗಿದೆ. ಇದನ್ನು ಪ್ರಶ್ನಿಸಿ ಕೋರ್ಟಿಗೆ ಹೋಗುವುದಾಗಿ ತಿಳಿಸಿದರು.

ಮಾಹಿತಿ ನೀಡಿದ ವಾಯುಪಡೆ ಮುಖ್ಯಸ್ಥ

ಪಾಕ್‌ನ 6 ವಿಮಾನ ಉಡೀಸ್

ಬೆಂಗಳೂರು: ಆಪರೇಷನ್ ಸಿಂದೂರ ವೇಳೆ ಭಾರತವು ಪಾಕಿಸ್ತಾನದ 6 ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ ಎಂದು ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಹೇಳಿದ್ದಾರೆ. ಪಾಕಿಸ್ತಾನದ 6 ಯುದ್ಧ ವಿಮಾನಗಳ ಪೈಕಿ ಒಂದು ಕಣ್ಗಾವಲು ವಿಮಾನವನ್ನು ಹೊಡೆದುರುಳಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಪಾಕಿಸ್ತಾನದ ರಕ್ಷಣಾ ಸಚಿವ ಆಸಿಫ್ ಖ್ವಾಜಾ, ಭಾರತೀಯ ವಾಯುಪಡೆಯ ಮುಖ್ಯಸ್ಥರ ಹೇಳಿಕೆಗಳನ್ನು ಸುಳ್ಳು ಎಂದು ಕರೆದಿದ್ದು, ಪಾಕಿಸ್ತಾನದ ಒಂದೇ ಒಂದು ವಿಮಾನವನ್ನು ಹೊಡೆದುರುಳಿಸುವಲ್ಲಿ ಭಾರತ ಯಶಸ್ವಿಯಾಗಲಿಲ್ಲ. ಬದಲಾಗಿ, ಪಾಕಿಸ್ತಾನವು ಆರು ಭಾರತೀಯ ಜೆಟ್‌ಗಳು, ಎಸ್ –400 ವಾಯು ರಕ್ಷಣಾ ವ್ಯವಸ್ಥೆಗಳು ಮತ್ತು ಹಲವಾರು ಡ್ರೋನ್‌ಗಳನ್ನು ನಾಶಪಡಿಸಿತು. ಪಾಕಿಸ್ತಾನವು ಹಲವಾರು ಭಾರತೀಯ ವಾಯುನೆಲೆಗಳನ್ನು ಸಹ ನಿಷ್ಕ್ರಿಯಗೊಳಿಸಿದೆ ಎಂದು ಎಕ್ಸ್ ಜಾಲತಾಣದಲ್ಲಿ ಬರೆದಿದ್ದಾರೆ.

ಮೆಟ್ರೋ ಹಳದಿ ಮಾರ್ಗ, ವಂದೇ ಭಾರತ್ ಉದ್ಘಾಟನೆ

ರಾಜಧಾನಿಗಿಂದು ಮೋದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿಗರ ಬಹುನಿರೀಕ್ಷಿತ ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸಲಿದ್ದು, ನಮ್ಮ ಮೆಟ್ರೋ ಉದ್ಘಾಟನೆಯೊಂದಿಗೆ ವಂದೇ ಭಾರತ್ ಮೂರು ರೈಲುಗಳಿಗೆ ಚಾಲನೆ ನೀಡಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಬಿಜೆಪಿ ಸಿದ್ಧಗೊಂಡಿದ್ದರೆ, ಕಾಂಗ್ರೆಸ್ ಸರಕಾರ 'ಶಿಷ್ಟಾಚಾರ'ದಲ್ಲಿ ಯಾವುದೇ ಸಮಸ್ಯೆಯಾಗದಂತೆ ಕ್ರಮವಹಿಸಲು ಸೂಚನೆ ನೀಡಿದೆ. ಇದರೊಂದಿಗೆ ನಮ್ಮ ಮೆಟ್ರೋದ ಹಳದಿ ಮಾರ್ಗದ 'ಕ್ರೆಡಿಟ್' ವಾರ್ ಜೋರಾಗಿರುವುದರಿಂದ, ಭಾನುವಾರ ಅಧಿಕೃತ ಕಾರ್ಯಕ್ರಮದಲ್ಲಿ ಮೋದಿ ಭಾಷಣಕ್ಕಾಗಿ ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದಾರೆ. ಎರಡು ದಿನಗಳ ಹಿಂದಷ್ಟೆ ಮತಗಳ್ಳತನ ಮಾಡಿ ಪ್ರಧಾನಿ ಸ್ಥಾನದಲ್ಲಿ ನರೇಂದ್ರ ಮೋದಿ ಕೂತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಭಾನುವಾರದ ಮೆಟ್ರೋ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಖಚಿತವಾಗಿದೆ.

→ 4

ಮೋದಿ ಕಾರ್ಯಕ್ರಮದ ವೇಳಾಪಟ್ಟಿ

- ಬೆಳಿಗ್ಗೆ 10.30ಕ್ಕೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮನ.
- 10.50ಕ್ಕೆ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ಎಚ್ ಕ್ಯೂಟಿಸಿ ಹೆಲಿಪ್ಯಾಡ್‌ಗೆ ಆಗಮನ
- ಬೆಳಿಗ್ಗೆ 11 ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ ಆಗಮನ
- 11.15 ಕ್ಕೆ ಬೆಳಗಾವಿ-ಬೆಂಗಳೂರು ಸೇರಿ 3 ವಂದೇ ಭಾರತ್ ರೈಲಿಗೆ ಚಾಲನೆ.
- 11.45ಕ್ಕೆ ಆರ್‌ವಿ ರಸ್ತೆಯ ರಾಗಿಗುಡ್ಡ ಮೆಟ್ರೋ ನಿಲ್ದಾಣಕ್ಕೆ ಆಗಮನ.
- 11.50 ರಿಂದ 12.50 ವರೆಗೂ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ
- ಮೆಟ್ರೋ ರೈಲಿನಲ್ಲಿಯೇ ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣಕ್ಕೆ ಪ್ರಯಾಣ

ಹಳದಿ ಮಾರ್ಗದ ಮಾರ್ಗದ ನಿಲ್ದಾಣಗಳು

ಆರ್‌ವಿ ರಸ್ತೆ, ರಾಗಿಗುಡ್ಡ, ಜಯದೇವ ಆಸ್ಪತ್ರೆ, ಬಿಟಿಎಂ ಲೇಔಟ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಬೊಮ್ಮನಹಳ್ಳಿ, ಹೊಂಗಸಂದ್ರ, ಕೂಡ್ಲುಗೇಟ್, ಸಿಂಗಸಂದ್ರ, ಹೊಸ ರಸ್ತೆ , ಬೆರೆಟೇನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ಕೋನಪ್ಪನ ಅಗ್ರಹಾರ, ಹೊಸೂರು ರಸ್ತೆ, ಹೆಬ್ಬಗೋಡಿ, ಬೊಮ್ಮಸಂದ್ರ (ಟರ್ಮಿನಲ್ ನಿಲ್ದಾಣ).

ಆಧುನಿಕ ನಗರಕ್ಕೆ ನವಪೀಳಿಗೆಯ ಸಂಚಾರ ಸೌಲಭ್ಯ

ರೂ.22,800 ಕೋಟಿ ಮೌಲ್ಯದ ಮೆಟ್ರೋ ಯೋಜನೆಗಳ ಕೊಡುಗೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ

ಬೆಂಗಳೂರು ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆ

(ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದವರೆಗೆ)

ಬೆಂಗಳೂರು ಮೆಟ್ರೋ ಹಂತ-3ರ ಶಂಕುಸ್ಥಾಪನೆ

ಇವರಿಂದ:

ಶ್ರೀ ನರೇಂದ್ರ ಮೋದಿ

ಸನ್ಮಾನ್ಯ ಪ್ರಧಾನ ಮಂತ್ರಿಗಳು

- ಬೆಂಗಳೂರು – ಬೆಳಗಾವಿ ವಂದೇ ಭಾರತ್ ರೈಲು
- ಅಮೃತ್‌ಸರ್ – ಶ್ರೀ ಮಾತಾ ವೈಷ್ಣೋದೇವಿ ಕತ್ರಾ ವಂದೇ ಭಾರತ್ ರೈಲು
- ನಾಗಪುರ್ (ಅಜ್ನಿ) – ಪುಣೆ ವಂದೇ ಭಾರತ್ ರೈಲು
  - ಅತ್ಯಧಿಕ ವೇಗದ ರೈಲುಗಳೊಡನೆ ಪ್ರಾದೇಶಿಕ ಸಂಪರ್ಕಗಳ ಹೆಚ್ಚಳ
  - ಪ್ರವಾಸೋದ್ಯಮಕ್ಕೆ ಉತ್ತೇಜನ: ಬೆಂಗಳೂರು – ಬೆಳಗಾವಿ ಮಾರ್ಗ
  - ಧಾರ್ಮಿಕ ಕ್ಷೇತ್ರಗಳಿಗೆ ಸಂಪರ್ಕ: ಅಮೃತ್‌ಸರ್ – ಕತ್ರಾ ಮಾರ್ಗ
  - ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಅನುಕೂಲ: ನಾಗಪುರ್ – ಪುಣೆ ಮಾರ್ಗ

- ಶಂಕುಸ್ಥಾಪನೆ – ಬೆಂಗಳೂರು ಮೆಟ್ರೋ ಹಂತ–3– ಜೆ.ಪಿ.ನಗರದಿಂದ ಕೆಂಪಾಪುರದವರೆಗೆ ಮತ್ತು ಹೊಸಹಳ್ಳಿಯಿಂದ ಕಡಬಗೆರೆವರೆಗೆ (44.65 ಕಿ.ಮೀ. ರೂ.15,611 ಕೋಟಿ)
  - ದೈನಂದಿನ ಪ್ರಯಾಣಿಕರ ಸಂಖ್ಯೆ : 6.35 ಲಕ್ಷ
  - ವಸತಿ ಪ್ರದೇಶಗಳು, ಕೈಗಾರಿಕಾ ಪ್ರದೇಶ, ವಾಣಿಜ್ಯ ಮತ್ತು ಶಿಕ್ಷಣ ಕೇಂದ್ರಗಳಿಗೆ ಅಡಚಣೆರಹಿತ ಪ್ರಯಾಣದ ಅನುಕೂಲ
  - ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ ಸೌಲಭ್ಯ

- ಉದ್ಘಾಟನೆ – ಬೆಂಗಳೂರು ಮೆಟ್ರೋ ಹಳದಿ ಮಾರ್ಗ – ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದವರೆಗೆ (19.15 ಕಿ.ಮೀ. ರೂ.7,160 ಕೋಟಿ)
  - ಐಟಿ ಕಾರಿಡಾರ್‌ಗಳಿಂದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಸೌಲಭ್ಯ
  - ಸಂಚಾರ ದಟ್ಟಣೆಯನ್ನು ಕಡಿಮೆ ಗೊಳಿಸುವುದು
  - ಪ್ರತಿದಿನ ಪ್ರಯಾಣದ ಅವಧಿಯನ್ನು 2 ಗಂಟೆ ಕಡಿಮೆಗೊಳಿಸುವುದು
  - ದೈನಂದಿನ ಪ್ರಯಾಣಿಕರ ಅಂದಾಜು ಪ್ರಮಾಣ ಸಂಖ್ಯೆ : 8.5 ಲಕ್ಷದಿಂದ 12.5 ಲಕ್ಷ

ದಿನಾಂಕ: 10ನೇ ಆಗಸ್ಟ್, 2025 (ಭಾನುವಾರ) ಸಮಯ: ಬೆಳಿಗ್ಗೆ 11.00 ಗಂಟೆಗೆ

ಘನ ಉಪಸ್ಥಿತಿ

ಶ್ರೀ ಥಾವರ್ ಚಂದ್ ಗೆಹ್ಲೋಟ್
ಸನ್ಮಾನ್ಯ ರಾಜ್ಯಪಾಲರು
ಕರ್ನಾಟಕ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ

ಶ್ರೀ ಮನೋಹರ್ ಲಾಲ್
ಮಾನ್ಯ ವಸತಿ ಮತ್ತು ನಗರ ವ್ಯವಹಾರಗಳ
ಹಾಗೂ ವಿದ್ಯುತ್ ಸಚಿವರು, ಭಾರತ ಸರ್ಕಾರ

ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಮಾನ್ಯ ಬೃಹತ್ ಕೈಗಾರಿಕೆ ಮತ್ತು
ಉಕ್ಕು ಸಚಿವರು, ಭಾರತ ಸರ್ಕಾರ

ಶ್ರೀ ಅಶ್ವಿನಿ ವೈಷ್ಣವ್
ಮಾನ್ಯ ರೈಲ್ವೆ, ಮಾಹಿತಿ ಮತ್ತು ಪ್ರಸಾರ, ವಿದ್ಯುನ್ಮಾನ,
ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ

ಶ್ರೀ ವಿ. ಸೋಮಣ್ಣ
ಮಾನ್ಯ ಜಲಶಕ್ತಿ ಮತ್ತು ರೈಲ್ವೆ ಖಾತೆ
ರಾಜ್ಯ ಸಚಿವರು, ಭಾರತ ಸರ್ಕಾರ

ಸುಶ್ರೀ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಹಾಗೂ ಕಾರ್ಮಿಕ
ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

'ಡಿಡಿ ನ್ಯೂಸ್' ನಲ್ಲಿ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಿಸಿ

ಕಾರ್ಯಕ್ರಮವನ್ನು ನಮ್ಮ ಮೆಟ್ರೋದ 'ಯೂಟ್ಯೂಬ್' ಮತ್ತು 'ಫೇಸ್‌ಬುಕ್' ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಗುವುದು.

ಸಮಾಚಾರ ಸಣ್ಣದಲ್ಲ

ಮೊದಲ ಬಾರಿಗೆ ಇ-ಪಾಸ್ ವ್ಯವಸ್ಥೆ

ಬೆಂಗಳೂರು: 79ನೇ ಸ್ವಾತಂತ್ರ್ಯ ದಿನಾಚರಣೆಗೆ ಸಕಲ ಸಿದ್ಧತೆಗಳು ಪೂರ್ಣಗೊಂಡಿದ್ದು, ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಕಾರ್ಯಕ್ರಮ ವೀಕ್ಷಿಸಲು ಸಾರ್ವಜನಿಕರಿಗೆ ಮೊದಲ ಬಾರಿಗೆ ಇ-ಪಾಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ. ಆಸಕ್ತರು ಸೇವಾಸಿಂಧು ವೆಬ್‌ಸೈಟ್ www.sevasindhu.karnataka.gov.in ಮೂಲಕ ಆಧಾರ್ ಹಾಗೂ ಮೊಬೈಲ್ ಫೋನ್ ಸಂಖ್ಯೆಯನ್ನು ನಮೂದಿಸಿ ಒಟಿಪಿ ಮೂಲಕ ಇ-ಪಾಸ್ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಪಾಸ್‌ನೊಂದಿಗೆ ಮೂಲ ಗುರುತಿನ ಚೀಟಿ ಕಡ್ಡಾಯವಾಗಿ ಹೊಂದಿರಬೇಕು. ಬೆಳಗ್ಗೆ 8.15ರ ಒಳಗೆ ಗೇಟ್ ಸಂಖ್ಯೆ 4ರಿಂದ ಮಾತ್ರ ಮೈದಾನವನ್ನು ಪ್ರವೇಶಿಸಬೇಕು. ನಿಗದಿತ ಸಮಯದ ನಂತರ ಇ-ಪಾಸ್ ಅಮಾನ್ಯವಾಗುತ್ತದೆ. ಇ-ಪಾಸ್ ವರ್ಗಾಯಿಸುವಂತಿಲ್ಲ. ಒಂದು ಇ ಪಾಸ್‌ಗೆ ಒಬ್ಬರಿಗೆ ಮಾತ್ರ ಪ್ರವೇಶ. ಕಾರ್ಯಕ್ರಮದ ಸಂದರ್ಭದಲ್ಲಿ ಇ-ಪಾಸ್‌ನ ಮುದ್ರಿತ ಪ್ರತಿ ಅಥವಾಡಿಜಿಟಲ್ (ಮೊಬೈಲ್) ಪ್ರತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಇ-ಪಾಸ್ ಬೇಕಾಗುವುದಿಲ್ಲ. 3 ಸಾವಿರ ಇ-ಪಾಸ್‌ಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಮೇಲೆ ವಿತರಿಸಲಾಗುತ್ತದೆ. ಇ ಪಾಸ್‌ನವರಿಗೆ ಮೈದಾನದೊಳಗೆ ಪಾರ್ಕಿಂಗ್ ಸೌಲಭ್ಯ ಒದಗಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಹೊಸ ಮಾರ್ಗಗಳಲ್ಲಿ ಬಸ್ ಸಂಚಾರ

ಬೆಂಗಳೂರು: ಬಿಎಂಟಿಸಿಯು ಪ್ರಯಾಣಿಕರ ಅನುಕೂಲಕ್ಕಾಗಿ ಆ.11ರಿಂದ ಹೊಸ ಮಾರ್ಗದಲ್ಲಿ ಬಿಎಂಟಿಸಿಯಿಂದ ಬಸ್ ಸಂಚಾರವನ್ನು ಆರಂಭಿಸಿದೆ. ಮಾರ್ಗಸಂಖ್ಯೆ 317-ಜಿಸಿ ಟಿನ್ ಫ್ಯಾಕ್ಟರಿಯಿಂದ ಕೆ.ಆರ್.ಪುರ, ಹೊಸಕೋಟೆ, ಅಟ್ಟೂರು, ಮೂಗಬಾಳ ಮಾರ್ಗವಾಗಿ ಚಿಕ್ಕನಹಳ್ಳಿ ಗೇಟ್‌ಗೆ ನಾಲ್ಕು ಬಸ್‌ಗಳ ಸಂಚಾರ ನಡೆಸಲಿದೆ. ಟಿನ್ ಫ್ಯಾಕ್ಟರಿ 06.15, 07.10, 07.40, 09.40, 10.05, 10.45, 11.15, 12.50, 13.20, 15.05, 16.30,17.05 ಹಾಗೂ ಚಿಕ್ಕನಹಳ್ಳಿ ಗೇಟ್ 07.40, 08.05, 08.45, 09.40, 11.15, 11.40, 13.30, 14.30, 15.00, 15.30, 17.00, 18.30, 19.05 ಬಸ್‌ಗಳು ಸಂಚರಿಸಲಿವೆ.

ಹೇಡಿತನದ ಕೆಲಸವೆಂದು ಟೀಕಿಸಿದ ಸುದೀಪ್ | ಸಮಾಧಿ ತೆರವು ವಿಚಾರ ನಮಗೆ ತಿಳಿದೇ ಇರಲಿಲ್ಲ: ಅನಿರುದ್ಧ್

ವಿಷ್ಣು ಸಮಾಧಿ ತೆರವು: ನಟರಿಂದ ಆಕ್ಷೇಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಭಿಮಾನ್ ಸ್ಟುಡಿಯೊದಲ್ಲಿದ್ದ ಡಾ.ವಿಷ್ಣುವರ್ಧನ್ ಅವರ ಸಮಾಧಿಯನ್ನು ನೆಲಸಮ ಮಾಡಿರುವ ವಿಚಾರ ಅವರ ಅಭಿಮಾನಿಗಳಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಸಮಾಧಿ ತೆರವುಗೊಳಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ವಿಷ್ಣುವರ್ಧನ್ ಅವರ ಅಳಿಯ, ನಟ ಅನಿರುದ್ಧ್ ಬೇಸರ ವ್ಯಕ್ತಪಡಿಸಿದ್ದಾರೆ.

ಅಭಿಮಾನ್ ಸ್ಟುಡಿಯೋದಲ್ಲಿರುವ ಜಾಗ ಅಪ್ಪಾಜಿಯವರ ಪುಣ್ಯಭೂಮಿ, ಅಲ್ಲಿಗೆ ಸಾಕಷ್ಟು ಅಭಿಮಾನಿಗಳು ಭೇಟಿ ನೀಡಿ ಸ್ಮಾರಕಕ್ಕೆ ಪೂಜೆ ಸಲ್ಲಿಸುತ್ತಾರೆ. ಅವರ ಹುಟ್ಟಿದ ದಿನ ಆಚರಿಸುತ್ತಾರೆ. ಅಂತೆಯೇ ಪುಣ್ಯಸ್ಮರಣೆಯ ದಿನದಂದೂ ಪೂಜೆ ಸಲ್ಲಿಸುತ್ತಾರೆ. ಹಾಗಾಗಿ ಪುಣ್ಯಭೂಮಿಗೆ ಬರುವ ಅಭಿಮಾನಿಗಳಿಗೆ ಅವಕಾಶ ಮಾಡಿಕೊಡಿ ಎಂದು ಬಾಲಣ್ಣ ಅವರ ಕುಟುಂಬದವರಿಗೆ ನಾನು ಸಾಕಷ್ಟು ಬಾರಿ ಕೇಳಿಕೊಂಡಿದ್ದೇನೆ. ನಿಮ್ಮ ಕುಟುಂಬದ ಜತೆ ಇನ್ನೊಂದು ಕುಟುಂಬಕ್ಕೆ ಗೌರವ ಸಲ್ಲಿಸಿ ಎಂದು ಮನವಿ ಮಾಡಿದ್ದೆ. ಆದರೆ, ಅವರು ನಮ್ಮ ಮಾತಿಗೆ ಮನ್ನಣೆ ನೀಡಲಿಲ್ಲ ಎಂದು ಅನಿರುದ್ಧ್ ಬೇಸರ ವ್ಯಕ್ತಪಡಿಸಿದ್ದಾರೆ.

ಸ್ಮಾರಕವನ್ನು ತೆರವು ಮಾಡುವ ವಿಚಾರ ನಮಗೆ ಗೊತ್ತೆ ಇರಲಿಲ್ಲ. ಆದರೂ ಕೆಲವರು ನಮ್ಮನ್ನು ವಿಲನ್ ಮಾಡಿ ಅವರು ಹೀರೊ ಆಗಲು ಪ್ರಯತ್ನಿಸುತ್ತಿದ್ದಾರೆ. ನಾನು ಈ ಹಿಂದೆಯೇ ಎರಡು ವಿಡಿಯೊಗಳನ್ನು ಹಂಚಿಕೊಂಡಿದ್ದೇನೆ. ಆ ಎರಡು ವಿಡಿಯೊದಲ್ಲಿ ಅಭಿಮಾನಿಗಳ ಜತೆ ಚರ್ಚೆ ಮಾಡಿದ್ದೇನೆ. ನಾನು ಯಾವತ್ತೂ ಅಪ್ಪಾಜಿ ಅಭಿಮಾನಿಗಳನ್ನು ವಿರೋಧ ಮಾಡಿಲ್ಲ. ಕೆಲವರು ನಮ್ಮ ಕುಟುಂಬದವರೇ ಸ್ಮಾರಕವನ್ನು ಮೈಸೂರಿಗೆ ಸ್ಥಳಾಂತರ ಮಾಡಿಸಿದ್ದಾರೆ ಎಂದು ವಿನಾಃಕಾರಣ ಆರೋಪ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅಭಿಮಾನ್ ಸ್ಟುಡಿಯೋದಲ್ಲಿದ್ದ ಡಾ.ವಿಷ್ಣುವರ್ಧನ್ ಅವರ ಸಮಾಧಿ

ಹೇಡಿತನದ ಕೃತ್ಯ: ಇನ್ನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಟ ಸುದೀಪ್ ತೀವ್ರ ಆಕ್ಷೇಪವ್ಯಕ್ತಪಡಿಸಿದ್ದು, ಸಮಾಧಿ ತೆರವು ಮಾಡಿರುವುದು ಹೇಡಿತನದ ಕೃತ್ಯ. ಆಗಬಾರದ್ದು ಆಗಿ ಹೋಗಿದೆ. ಎಲ್ಲಾ ಮುಗಿದು ಹೋಗಿದೆ. ಸಮಾಧಿಯನ್ನು ಉಳಿಸಿಕೊಳ್ಳುವುದಕ್ಕೆ ಸಾಕಷ್ಟು ಮನವಿ ಮಾಡಿದ್ದೇವು. ಆ ಕೆಲಸ ಅಧಿಕಾರದಲ್ಲಿದ್ದವರಿಗೆ ಸಾಧ್ಯವಿತ್ತು. ಆದರೆ, ಆಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸಮಾದಿ ತೆರವಿನಿಂದ ಎಲ್ಲರಿಗೂ ನೋವಾಗಿದೆ. ಆದರೆ, ಇಷ್ಟಕ್ಕೆ ಸುಮ್ಮನಾಗದೇ ನಾವೆಲ್ಲ ಮುಂದೆ ಹೋಗುವುದು ಉತ್ತಮ, ನಾವೇನು ಮಾಡಬೇಕು ಎಂಬುದನ್ನು ಚರ್ಚಿಸೋಣ. ಇನ್ನು ಯಾರ ಭಿಕ್ಷೆಯನ್ನೂ ಬೇಡುವುದು ಬೇಡ. ದೊಡ್ಡ ಪ್ರತಿಮೆ ಮಾಡೋಣ ಎಂಬ ಚರ್ಚೆಯಾಗಿದೆ. ಅದಕ್ಕೆ ನಾನು ಏನು ಮಾಡಬೇಕು ಅದನ್ನು ಮಾಡೇ ಮಾಡುತ್ತೇನೆ ಎಂದಿದ್ದಾರೆ.

ನ್ಯಾಯಾಲಯಕ್ಕೆ ಹೋಗುವುದಾದರೆ, ನಾನೂ ಬರಲು ಸಿದ್ಧ. ಸರಕಾರ, ನ್ಯಾಯಾಲಯ ಮತ್ತು ಆ ಭೂಮಿ ಖರೀದಿ ಮಾಡಿರುವವರಲ್ಲಿ ನನ್ನದೊಂದು ಮನವಿ- ನಿಮಗೆ ಏನು ಹಣಕಾಸು ಬೇಕೋ, ಅದನ್ನು ಕೊಡಲು ನಾನು ಮತ್ತು ನನ್ನಂತಹ ಲಕ್ಷಾಂತರ ಜನರು ಮುಂದೆ ಬರುತ್ತೇವೆ. ನಾನೇ ಮುಂದೆ ನಿಂತು ಅದನ್ನು ಮತ್ತೆ ಒಂದು ಸ್ಮಾರಕವಾಗಿ ಮರುಸ್ಥಾಪನೆ ಮಾಡುವುದಕ್ಕೆ ಮುಂದಾಗಿತ್ತೇನೆ. ಅದಕ್ಕೆ ಒಂದು ಅವಕಾಶ ಮಾಡಿ ಕೊಡಿ ಎಂದು ಒತ್ತಾಯಿಸಿದ್ದಾರೆ.

ಮನುಷ್ಯನ ಭಾವನೆಗಳಿಗಿಂತ, ಗೌರವಕ್ಕಿಂತ, ಅಭಿಮಾನಕ್ಕಿಂತ, ಈ ಒಂದು ಭೂಮಿ ವ್ಯವಹಾರ ಅಷ್ಟು ದೊಡ್ಡದಾಯಿತಾ? ಹಣ ನಮಗೆ ಅಷ್ಟು ಮುಖ್ಯ ಅಲ್ಲ.ಸರಕಾರ ಮಧ್ಯ ಪ್ರವೇಶ ಮಾಡಬೇಕು. ನ್ಯಾಯಾಲಯಕ್ಕೆ ಹೋಗುವುದಾದರೆ, ನಾನೂ ಬರಲು ಸಿದ್ಧ. ಸರಕಾರ, ನ್ಯಾಯಾಲಯ ಮತ್ತು ಆ ಭೂಮಿ ಖರೀದಿ ಮಾಡಿರುವವರಲ್ಲಿ ನನ್ನದೊಂದು ಮನವಿ- ನಿಮಗೆ ಏನು ಹಣಕಾಸು ಬೇಕೋ, ಅದನ್ನು ಕೊಡಲು ನಾನು ಮತ್ತು ನನ್ನಂತಹ ಲಕ್ಷಾಂತರ ಜನರು ಮುಂದೆ ಬರುತ್ತೇವೆ.

-**ಸುದೀಪ್**, ನಟ

ಸಾಧಕನಿಗೂ ಸಾವಿಲ್ಲ, ಕಲೆಗೂ ಸಾವಿಲ್ಲ. ವಿಷ್ಣು ಅಪ್ಪಾಜಿ ಸದಾ ಅಜರಾಮರ. ಕೋಟ್ಯಂತರ ಕನ್ನಡಿಗರ ಹೃದಯದಲ್ಲಿ ಗುಡಿ ಕಟ್ಟಿರುವ ವ್ಯಕ್ತಿಗೆ ಸ್ಮಾರಕ ಏಕೆ ಬೇಕು. ಆದರೂ ಸಹ ಈ ನಾಡಿನಲ್ಲಿ ಇಂಥಹಾ ಒಬ್ಬ ಕಲಾವಿದನಿಗೆ ಹೀಗೆ ಆಗಿದ್ದು ಖಂಡಿತ ಮನಸ್ಸಿಗೆ ನೋವುಂಟು ಮಾಡಿದೆ. ಕೇಳಲು ಸಾಕಷ್ಟು ಪ್ರಶ್ನೆಗಳಿವೆ. ಆದರೆ ಇದಕ್ಕೆಲ್ಲ ಉತ್ತರ, ನಾನು ಒಬ್ಬ ಕನ್ನಡಿಗನಾಗಿ, ಒಬ್ಬ ಕಲಾವಿದ ನಾಗಿ, ಈ ಒಂದು ಸಂದರ್ಭದಲ್ಲಿ ನಾನು ವಿಷ್ಣುವರ್ಧನ್ ಅವರ ಅಭಿಮಾನಿಗಳ ಜತೆಗೆ ನಿಂತಿದ್ದೇನೆ. ನಿಮ್ಮ ಮುಂದಿನ ನಡೆಗಾಗಿ ಕಾಯುತ್ತಿದ್ದೇನೆ.

-**ಧ್ರುವ ಸರ್ಜಾ**, ನಟ

ನನ್ನ ತಮ್ಮನ ಮಗ ಕಾರ್ತಿಕ್‌ನಿಂದಲೇ ಇದೆಲ್ಲ ಆಗುತ್ತಿದೆ. ನಮ್ಮ ತಂದೆ-ತಾಯಿ ನಿಧನರಾದ ಬಳಿಕ ನಮ್ಮ ನಡುವೆ ಒಡನಾಟ ಇರಲಿಲ್ಲ. ಇದೆಲ್ಲ ನನ್ನ ಗಮನಕ್ಕೆ ಬಂದಿರಲಿಲ್ಲ. ನನ್ನ ಜೀವಕ್ಕೆ ಬೆದರಿಕೆ ಹಾಕಿದ್ದಾರೆ. ಈ ಬಗ್ಗೆ ನಾನು ದೂರು ಕೊಟ್ಟಿದ್ದೆ. ಕಾರ್ತಿಕ್‌ಗೆ ರಾಜಕಾರಣಿಗಳ ಪರಿಚಯ ಚೆನ್ನಾಗಿದೆ. ನನಗೆ ಎಲ್ಲದರ ಮಾಹಿತಿ ಇದೆ. ಆದರೆ ನನ್ನ ಜೀವಕ್ಕೂ ಅಪಾಯ ಇದೆ. ದೊಡ್ಡದಾಗಿ ಬ್ಯುಸಿನೆಸ್ ಮಾಡೋಕೆ ಹೀಗೆ ಮಾಡಿದ್ದಾರೆ. ಆ ಸ್ಥಳದಲ್ಲಿ ನಾಲ್ಕು ಜನಕ್ಕೆ ಹಕ್ಕಿದೆ. ಆದರೆ ಅಲ್ಲಿ ಮೋಸ ನಡೆದಿದೆ. ಸಾಕ್ಷಿ ಸಮೇತ ಕೋರ್ಟ್‌ಗೆ ಹೋಗುವೆ.

– **ಗೀತಾ ಬಾಲಕೃಷ್ಣ**, ಬಾಲಣ್ಣ ಪುತ್ರಿ

ಜಮೀನಿನ ವಿವಾದ ಇರುವುದು ತಿಳಿದೇ ಇರಲಿಲ್ಲ. ಹಾಗೊಂದು ವೇಳೆ ಗೊತ್ತಿದ್ದರೆ ವಿಷ್ಣುವರ್ಧನ್ ಅವರ ಸಮಾಧಿಗೆ ನನ್ನ ಜಮೀನನ್ನೇ ಬಿಟ್ಟುಕೊಡುತ್ತಿದ್ದೆ. ವಿಷ್ಣುವರ್ಧನ್ ಅವರು ನಮ್ಮೆಲ್ಲರ ಆರಾಧ್ಯ ದೈವ. ಎಷ್ಟೊಂದು ಮಂದಿ ಅವರ ಸಮಾಧಿಗೆ ಸ್ಥಳ ಕೊಡಲು ತಯಾರು ಇದ್ದಾರೆ.

-**ಶ್ರುತಿ**, ನಟಿ

ಇದನ್ನು ಯಾರು ಮಾಡಿದರೆ, ಯಾಕೆ ಮಾಡಿದ್ದಾರೆ ಎನ್ನುವುದು ನನಗೂ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ. ಈ ಬಗ್ಗೆ ದೂರವಾಣಿ ಕರೆ ಬಂದಿದೆ ಅಷ್ಟೇ. ಇದನ್ನು ಕೇಳಿದ ತಕ್ಷಣ ಭಾವನೆಗಳಿಗೆ ಧಕ್ಕೆಯಾಗುವುದು ನಿಜ. ಇಂಥ ಘಟನೆಯಿಂದಾಗಿ ಅವರ ಕುಟುಂಬದವರಿಗೆ ತುಂಬಾ ಬೇಸರವಾಗಿರುತ್ತದೆ. ಅವರು ಕಾನೂನು ಹೋರಾಟ ಮಾಡಬಹುದು. ಆದ್ದರಿಂದ ಅವರ ಕೆಲಸವನ್ನು ಅವರಿಗೆ ಮಾಡಲು ಬಿಟ್ಟುಬಿಡಿ.

-**ವಿಜಯ ರಾಘವೇಂದ್ರ**, ನಟ

ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಆಯ್ಕೆ

ಬೆಂಗಳೂರು: ಮೆಡಿಕಲ್ ಕೌನ್ಸಿಲ್ ಕಮಿಟಿ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಿದ ನಂತರ ರಾಜ್ಯದಲ್ಲಿ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಆಯ್ಕೆ ದಾಖಲಿಸಲು ಅವಕಾಶ ನೀಡಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ನಿಗದಿಯಂತೆ ಎಂಸಿಸಿ ಫಲಿತಾಂಶ ಪ್ರಕಟಿಸಿದ್ದರೆ, ರಾಜ್ಯದಲ್ಲೂ ಸೀಟು ಹಂಚಿಕೆಗೆ ಆಯ್ಕೆ ದಾಖಲಿಸಲು ಅವಕಾಶ ನೀಡ ಬೇಕಿತ್ತು. ಆದರೆ ಎಂಸಿಸಿ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ಆ.11ರಂದು ಪ್ರಕಟಿಸುವುದಾಗಿ ಹೇಳಿರುವುದಕ್ಕೆ ರಾಜ್ಯದಲ್ಲೂ ಪ್ರಕ್ರಿಯೆ ಮುಂದೂಡಲಾಗಿದೆ ಎಂದರು.

ಲಾಲ್‌ಬಾಗ್ ಪುಷ್ಪಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ

ಬೆಂಗಳೂರು: ನಗರದಲ್ಲಿ ಸ್ವಾತಂತ್ರ್ಯೋತ್ಸವದ ಹಿನ್ನೆಲೆ ಲಾಲ್ ಬಾಗ್‌ನಲ್ಲಿ ನಡೆಯುತ್ತಿರುವ ಪುಷ್ಪಪ್ರದರ್ಶನಕ್ಕೆ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲಾಲ್ ಬಾಗ್ ನ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಾ.ಎಂ ಜಗದೀಶ್ ಮಾಹಿತಿ ಹಂಚಿಕೊಂಡಿದ್ದು, ಆ.8ರಂದು ಫಲ ಪುಷ್ಪ ಪ್ರದರ್ಶನವನ್ನು 41,133 ವಯಸ್ಕರು, 8016 ಮಕ್ಕಳು ಹಾಗೂ 5250 ಶಾಲಾ ಮಕ್ಕಳು ವೀಕ್ಷಿಸಿದ್ದು, ಒಟ್ಟು-54,399 ಜನರು ಭೇಟಿ ನೀಡಿದ್ದು, ಒಟ್ಟು ಮೊತ್ತ 32,16,720 ಸಂಗ್ರಹವಾಗಿದೆ. ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ ಶಾಲಿನಿ ರಜನೀಶ್ ಅವರು ಫಲ ಪುಷ್ಪ ಪ್ರದರ್ಶನವನ್ನು ವೀಕ್ಷಿಸಿದ್ದು, ಇಕೇಬಾನ ಮತ್ತು ಪೂರಕ ಕಲೆಗಳ ಪ್ರದರ್ಶನವನ್ನು ಅನಿವಾಸಿ ಭಾರತೀಯ ಸಂಘ ಉಪಾಧ್ಯಕ್ಷೆ ಡಾ ಆರತಿ ಕೃಷ್ಣ ವೀಕ್ಷಿಸಿದರು ಎಂದು ಮಾಹಿತಿ ನೀಡಿದರು.

ಫೆಲೋಶಿಪ್ ಹೆಚ್ಚಳಕ್ಕೆ ಮನವಿ

ಬೆಂಗಳೂರು: ಬೆಂಗಳೂರು ವಿವಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿಶೇಷಾಧಿಕಾರಿ ಪ್ರೊ. ಕೃಷ್ಣಮೂರ್ತಿ ನೇತೃತ್ವದಲ್ಲಿ ಬೆಂವಿವಿ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ ಸಮಾಜ ಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪವರನ್ನು ಭೇಟಿ ಮಾಡಿ ಫೆಲೋಶಿಪ್ ಮೊತ್ತ 10,000 ರು.ಗೆ ಹೆಚ್ಚಿಸಬೇಕು ಎಂದು ಮನವಿ ಮಾಡಲಾಯಿತು.



ಇಲಾಖೆಯಿಂದ ನೀಡುವ ಫೆಲೋಶಿಪ್ ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್ ಆದೇಶಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಈ ವ್ಯವಸ್ಥೆಯಿಂದ ವಿಳಂಬ, ಗೊಂದಲ ಮತ್ತು ಆರ್ಥಿಕ ತೊಂದರೆಗಳು ಉಂಟಾಗುತ್ತಿವೆ. ಇದರಿಂದ ಸಹಾಯಧನದ ಮೇಲೆ ಅವಲಂಬಿವಾಗಿರುವ ಎಸ್‌ಸಿ /ಎಸ್‌ಟಿ ಸಂಶೋಧಕರಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ತಕ್ಷಣವೇ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಲಾಯಿತು. ವಿದ್ಯಾರ್ಥಿಗಳ ಬೇಡಿಕೆಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ವಿದ್ಯಾರ್ಥಿಗಳ ಮನವಿಯನ್ನು ಪರಿಗಣಿಸುವ ಭರವಸೆ ನೀಡಿದ್ದಾರೆ. ಈ ವೇಳೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿಶೇಷಾಧಿಕಾರಿ ಪ್ರೊ. ಕೃಷ್ಣಮೂರ್ತಿ, ಒಕ್ಕೂಟ ಅಧ್ಯಕ್ಷ ಅರ್ಜುನ್, ಉಪಾಧ್ಯಕ್ಷ ಚಂದ್ರು ಮಿಡ್ಲು ಮುನಿ, ಬಸವರಾಜ್ ಮುಸಲಾಪುರ, ಗೋಪಾಲಕೃಷ್ಣ ಕೆ ಎ, ರವಿಕುಮಾರ್ ಅನಿಲ್ ಕುಮಾರ್ ವಿ ಇದ್ದರು.

ಆಟೋಗಳಲ್ಲಿ ಇಲ್ಲ ಚಾಲಕ ಪರವಾನಗಿ ಪ್ರದರ್ಶನ ಫಲಕ

ಬೆಂಗಳೂರು: ಪ್ರಯಾಣಿಕರ ಸುರಕ್ಷತೆಯ ಸಲುವಾಗಿ ಆರಂಭಿಸಲಾಗಿದ್ದ ಆಟೋ ರಿಕ್ಷಾಗಳ ಚಾಲಕ ಪರವಾನಗಿ ಪ್ರದರ್ಶನ ವ್ಯವಸ್ಥೆಯ ಬೋರ್ಡ್‌ಗಳು ಇತ್ತೀಚಿನ ಆಟೋಗಳಲ್ಲಿ ಕಾಣೆಸದಿರುವುದು ಪ್ರಯಾಣಿಕರ ಆತಂಕಕ್ಕೆ ಕಾರಣವಾಗಿದೆ. ಚಾಲಕ ಪರವಾನಗಿ ಪ್ರದರ್ಶನ ವ್ಯವಸ್ಥೆಯು ಪ್ರಯಾಣಿಕರಿಗೆ ಚಾಲಕರಿಂದ ಯಾವುದೇ ರೀತಿಯ ಕಿರುಕುಳವನ್ನು ತಪ್ಪಿಸಿ ಪ್ರಯಾಣಿಕರಿಗೆ ಸುರಕ್ಷತೆಯನ್ನು ಒದಗಿಸುವುದು. ಈ ಬೋರ್ಡ್‌ಗಳು ಚಾಲಕರ ಹೆಸರು, ಫೋಟೋ, ಚಾಲನಾ ಪರವಾನಗಿ ಸೇರಿದಂತೆ ವಿಳಾಸ, ಫೋನ್ ನಂಬರ್ ಮಾಹಿತಿಯನ್ನು ಒಳಗೊಂಡಿದ್ದು, ಚಾಲಕರು ನಿಯಮ ಪಾಲಿಸುವಂತೆ ಮತ್ತು ಮೀಟರ್ ಪ್ರಕಾರ ಸವಾರಿ ನಡೆಸುವಂತೆ ಮಾಡುವುದು ಈ ಬೋರ್ಡ್‌ನ ಉದ್ದೇಶವಾಗಿತ್ತು. ಜತೆಗೆ ಪ್ರಯಾಣಿಕರು ದೂರು ನೀಡಿದರೆ ಚಾಲಕರನ್ನು ಪತ್ತೆ ಹಚ್ಚಲು ಈ ಬೋರ್ಡ್‌ಗಳು ಸಹಕಾರಿಯಾಗುತ್ತಿತ್ತು.

ಆದರೆ ಇತ್ತೀಚಿನ ದಿನಗಳಲ್ಲಿ ಆಟೋಗಳಲ್ಲಿ ಈ ಬೋರ್ಡ್‌ಗಳು ಕಾಣುತ್ತಿಲ್ಲ. ಯಾವುದೇ ಅಹಿತಕರ ಘಟನೆಯ ಸಂದರ್ಭದಲ್ಲಿ ದೂರುಗಳನ್ನು ಸಲ್ಲಿಸಲು ಪ್ರಯಾಣಿಕರಿಗೆ ಆಟೋ ನೋಂದಣಿ ಸಂಖ್ಯೆಯನ್ನು ನೀಡಲು ಮಾತ್ರ ಸಾಧ್ಯವಾಗುತ್ತಿದೆ. ಬೋರ್ಡ್‌ಗಳಿದ್ದಾಗ ಮೀಟರ್ ಮೂಲಕ ದರ ಹಾಕಬೇಕಾಗುತ್ತದೆ. ಬೋರ್ಡ್‌ಗಳಿಲ್ಲದೆ ಬೇಕಾಬಿಟ್ಟಿ ಆಟೋ ಚಾರ್ಜ್ ಹಾಕುತ್ತಾರೆ ಎಂದು ಪ್ರಯಾಣಿಕರು ಹೇಳುತ್ತಾರೆ.

ಬೋರ್ಡ್ ಪ್ರದರ್ಶನ ಆರಂಭ

ಆದರ್ಶ ಆಟೋ ಮತ್ತು ಟ್ಯಾಕ್ಸಿ ಚಾಲಕರ ಒಕ್ಕೂಟವು ಬೋರ್ಡ್ ಪ್ರದರ್ಶನವನ್ನು ಕಡ್ಡಾಯಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. 2000 ಇಸವಿಯ ಆರಂಭದಲ್ಲಿ ರಾಜರಾಜೇಶ್ವರಿ ನಗರದಲ್ಲಿ ವಿದೇಶಿ ಮಹಿಳೆಯ ಮೇಲೆ ಅತ್ಯಾಚಾರ ನಡೆದ ನಂತರ ಅವರು ಈ ಆಲೋಚನೆಯನ್ನು ಮುಂದಿಟ್ಟರು. ಇದಕ್ಕೆ ವ್ಯತಿರಿಕ್ತವಾಗಿ, ಆಟೋರಿಕ್ಷಾ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ನಗರದಲ್ಲಿ ಹೆಚ್ಚಿನ ಆಟೋ ಸವಾರಿಗಳು ಖಾಸಗಿ ರೈಡ್-ಹೇಲಿಂಗ್ ಅಪ್ಲಿಕೇಶನ್‌ಗಳ ಮೂಲಕ ನಡೆಯುತ್ತವೆ, ಅಲ್ಲಿ ಎಲ್ಲಾ ವಿವರಗಳು ಲಭ್ಯವಿದೆ ಎನ್ನುತ್ತಾರೆ.

ಅಪಘಾತ: ನವ ವಿವಾಹಿತೆ ಸಾವು

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ನಿಮಿತ್ತ ಬೈಕ್‌ನಲ್ಲಿ ಪತಿಯೊಂದಿಗೆ ತವರು ಮನೆಗೆ ಹೋಗಿ ಹಿಂದಿರುಗುತ್ತಿದ್ದಾಗ ಲಾರಿ ಡಿಕ್ಕಿ ಹೊಡೆದ ಪರಿಣಾಮ ನವವಿವಾಹಿತೆ ಮೃತಪಟ್ಟಿರುವ ಘಟನೆ ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಎರಡುವರೆ ತಿಂಗಳ ಹಿಂದೆಯಷ್ಟೆ ಮದುವೆ ಯಾಗಿದ್ದ ಗೀತಾ (23) ಮೃತಪಟ್ಟ ದುರ್ದೈವಿ. ಅಪಘಾತದಲ್ಲಿ ಪತಿ ಸುನೀಲ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸುನೀಲ್ ಪಾನಿಪುರಿ ವ್ಯಾಪಾರಿಯಾಗಿದ್ದು, ಗೀತಾ ಗೃಹಿಣಿ. ವರಮಹಾಲಕ್ಷ್ಮಿ ಹಬ್ಬದ ನಿಮಿತ್ತ ಅರಿಶಿಣ-ಕುಂಕುಮಕ್ಕಾಗಿ ಕೆಂಗೇರಿಯಲ್ಲಿರುವ ತವರು ಮನೆಗೆ ಪತಿಯೊಂದಿಗೆ ಹೋಗಿ ಮಧ್ಯಾಹ್ನ 3.15 ರ ಸುಮಾರಿನಲ್ಲಿ ವಾಪಸ್ ಮಲ್ಲೇಶ್ವರಕ್ಕೆ ಹಿಂದಿರುಗುತ್ತಿದ್ದರು.

ಮಾರ್ಗ ಮಧ್ಯೆ ರಿಂಗ್ ರಸ್ತೆಯ ಲಗ್ಗೆರೆ ಬ್ರಿಡ್ಜ್ ಬಳಿ ಅತಿವೇಗ ಹಾಗೂ ಅಜಾಗರೂಕತೆಯಿಂದ ಬರುತ್ತಿದ್ದ ಲಾರಿ ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಕೆಳಗೆ ಬಿದ್ದರು. ಗಂಭೀರ ಗಾಯಗೊಂಡಿದ್ದ ಗೀತಾ ಅವರನ್ನು ಆಸ್ಪತ್ರೆಗೆ ಕರೆದೊಯ್ದಾಗ ವೈದ್ಯರು ಪರೀಕ್ಷಿಸಿ ಮಾರ್ಗಮಧ್ಯೆ ಮೃತಪಟ್ಟಿದ್ದಾರೆಂದು ತಿಳಿಸಿದ್ದಾರೆ.

ಸುದ್ದಿ ತಿಳಿದು ರಾಜಾಜಿನಗರ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಲಾರಿ ಚಾಲಕನನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಿಲೆಟಿನ್ ಪತ್ತೆ: ಮತ್ತೆ ಮೂವರ ಬಂಧನ

ಬೆಂಗಳೂರು: ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಜಿಲೆಟಿನ್ ಹಾಗೂ ಡಿಟೋನೇಟರ್ ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಕರಣದಲ್ಲಿ ಬಂಧಿತರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ. ಪ್ರಕರಣದಲ್ಲಿ 22 ಜೀವಂತ ಜಿಲೆಟಿನ್ ಕಡ್ಡಿಗಳು ಹಾಗೂ 30 ಎಲೆಕ್ಟ್ರಿಕ್ ಡಿಟೋನೇಟರ್‌ಗಳನ್ನು ವಶಕ್ಕೆ ಪಡೆಯಲಾಗಿತ್ತು. ಆರೋಪಿಗಳು ಕೋಲಾರದಿಂದ ಜಿಲೆಟಿನ್, ಡಿಟೋನೇಟರ್ ಸೇರಿ ಮತ್ತಿತರ ಸ್ಫೋಟಕ ಸಾಮಗ್ರಿಗಳನ್ನು ವಾಹನಗಳಲ್ಲಿ ಸಾಗಿಸುತ್ತಿದ್ದರು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕ್ವಾರಿ, ಕೊಳವೆಬಾವಿ ಕೊರೆಸಲು ಅಗತ್ಯವಿರುವ ಕಡೆಗಳಲ್ಲಿ ಸ್ಫೋಟಕಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು. ಕೋಲಾರದ ಶಿವಕುಮಾರ್, ನವೀನ್ ಸೇರಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಜುಲೈ 23ರಂದು ಮಧ್ಯಾಹ್ನ ಕಲಾಸಿಪಾಳ್ಯದ ಶೌಚಾಲಯದ ಬಳಿ ಜಿಲೆಟಿನ್ ಪತ್ತೆ ಆಗಿದ್ದವು.

AJAX
MAKES CONCRETE SENSE

ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್

ಕಾರ್ಪೊರೇಟ್ ಗುರುತಿನ ಸಂಖ್ಯೆ : L28245KA1992PLC013306
ನೋಂದಾಯಿತ ಕಚೇರಿ: #253/1, 11ನೇ ಮುಖ್ಯ, ಹಂತ III, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು – 560 058, ಕರ್ನಾಟಕ, ಭಾರತ.
ದೂರವಾಣಿ: +91 8296336111 ಇ–ಮೇಲ್: complianceofficer@ajax-engg.com
ವೆಬ್ಸೈಟ್: www.ajax-engg.com

ವಿಡಿಯೋ ಕಾನ್ಫರೆನ್ಸಿಂಗ್ ("ವಿಸಿ") / ಇತರ ಧ್ವನಿ ದೃಶ್ಯ ವಿಧಾನದ ("ಒಎವಿಎಂ") ಮೂಲಕ ನಡೆಯುವ 33ನೇ ವಾರ್ಷಿಕ ಮಹಾಸಭೆಯ ಬಗ್ಗೆ ಮಾಹಿತಿ.

ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್ ("ಕಂಪನಿ") ಸದಸ್ಯರ 33ನೇ ವಾರ್ಷಿಕ ಪ್ರಧಾನ ಸಭೆಯನ್ನು ("ಎಜಿಎಂ") ವಿಡಿಯೋ ಕಾನ್ಫರೆನ್ಸಿಂಗ್ ("ವಿಸಿ") / ಇತರ ಧ್ವನಿ ದೃಶ್ಯ ವಿಧಾನದ ("ಒಎವಿಎಂ") ಮೂಲಕ **ಶುಕ್ರವಾರ, ಸೆಪ್ಟೆಂಬರ್ 05, 2025 ರಂದು ಮಧ್ಯಾಹ್ನ 02:00 ಗಂಟೆಗೆ (ಭಾರತೀಯ ಕಾಲಮಾನ)** ನಡೆಯಲಿದ್ದು, ಇದು ಕಂಪನಿಗಳ ಕಾಯಿದೆ, 2013 ("ಕಾಯಿದೆ") ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು, ಹಾಗೂ ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿ, 2015 ("ಸೆಬಿ ಲಿಸ್ಟಿಂಗ್ ನಿಬಂಧನೆಗಳು") ಕ್ಕೆ ಅನುಸಾರವಾಗಿದೆ ಮತ್ತು ಇದರೊಂದಿಗೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ ಸುತ್ತೋಲೆಗಳು") ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸುತ್ತೋಲೆ ಸಂಖ್ಯೆ 20/2020 ದಿನಾಂಕ ಮೇ 05, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 02/2021 ದಿನಾಂಕ ಜನವರಿ 13, 2021, ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022 ದಿನಾಂಕ ಡಿಸೆಂಬರ್ 28, 2022, ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023 ದಿನಾಂಕ ಸೆಪ್ಟೆಂಬರ್ 25, 2023, ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 ಮತ್ತು ಭಾರತದ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ("ಸೆಬಿ ಸುತ್ತೋಲೆಗಳು") ಹೊರಡಿಸಿದ ಸುತ್ತೋಲೆ ಸಂಖೆ SEBI/HO/CFD/CMD1/ CIR/P/2020/79 ದಿನಾಂಕ ಮೇ 12, 2020, ಸುತ್ತೋಲೆ ಸಂಖ್ಯೆ SEBI/HO/CFD/ CMD2/ CIR/P/2021/11 ದಿನಾಂಕ ಜನವರಿ 15, 2021, ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2022/62 ದಿನಾಂಕ ಮೇ 13, 2022, ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/4 ದಿನಾಂಕ ಜನವರಿ 05, 2023, ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/ CIR/2023/167 ದಿನಾಂಕ ಅಕ್ಟೋಬರ್ 07, 2023 ಮತ್ತು ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024 ರ ಅನ್ವಯ, ಸೆಪ್ಟೆಂಬರ್ 30, 2025 ರವರೆಗೆ ವಿಸಿ/ಒಎವಿಎಂ ಮೂಲಕ ಎಜಿಎಂ ನಡೆಸಲು ವಿನಾಯಿತಿಯನ್ನು ವಿಸ್ತರಿಸಲಾಗಿದೆ. ಆದ್ದರಿಂದ, ಕಾಯಿದೆ ಮತ್ತು ಸೆಬಿ ಲಿಸ್ಟಿಂಗ್ ನಿಬಂಧನೆಗಳ ನಿಯಮಗಳಿಗೆ ಅನುಸಾರವಾಗಿ, ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ, ಕಂಪನಿಯು ತನ್ನ ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ವಿಧಾನದಲ್ಲಿ ಕಳುಹಿಸಲು ಅನುಮತಿಸಿದೆ.

ಕಂಪನಿಯ ಹಣಕಾಸು ವರ್ಷ 2024–25 ರ ವಾರ್ಷಿಕ ವರದಿ ಜೊತೆಗೆ ಎಜಿಎಂ ನೋಟಿಸ್ ('ಸೂಚನೆ') ಕಂಪನಿಯ ವೆಬ್‌ಸೈಟ್ ಆದ www.ajax-engg.com ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಹಾಗೂ ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ನ ವೆಬ್‌ಸೈಟ್ ಆದ www.evotingindia.com ನಲ್ಲಿ ಲಭ್ಯವಿರುತ್ತದೆ.

ಸದಸ್ಯರು ವಿಸಿ/ಒಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂನಲ್ಲಿ ಭಾಗವಹಿಸಬಹುದು. ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಪ್ರಕಾರ, ವಿಸಿ/ಒಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ. ಸದಸ್ಯರು ಸಿಡಿಎಸ್‌ಎಲ್ ಒದಗಿಸಿದ ಸಭೆಯ ಲೈವ್ ವೆಬ್‌ಕಾಸ್ಟ್ ಅನ್ನು www.evotingindia.com ನಲ್ಲಿ ವೀಕ್ಷಿಸಬಹುದು.

ಯಾವ ಸದಸ್ಯರ ಇಮೇಲ್ ವಿಳಾಸಗಳು ಕಂಪನಿ/ಡೆಪಾಸಿಟರಿಗಳು/ಡೆಪಾಸಿಟರಿ ಪಾರ್ಟಿಸಿಪಂಟ್‌ಗಳು ("ಡಿಪಿಎಸ್") ಮತ್ತು ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್, ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ("ಎಂಯುಎಫ್‌ಜಿ") ಜೊತೆಗೆ ನೋಂದಣಿಯಾಗಿವೆಯೋ, ಅವರಿಗೆ ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ಆಗಿ ಕಳುಹಿಸಲಾಗುತ್ತದೆ. ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ/ಆರ್‌ಟಿಎ/ಡೆಪಾಸಿಟರಿಗಳು/ಆಕ ಗಳೊಂದಿಗೆ ನೋಂದಾಯಿಸದ ಷೇರುದಾರರಿಗೆ, ಕಂಪನಿಯು ವೆಬ್-ಲಿಂಕ್ ಅನ್ನು ಒದಗಿಸುವ ಪತ್ರವನ್ನು ಕಳುಹಿಸುತ್ತದೆ. ಈ ಲಿಂಕ್‌ನಲ್ಲಿ ವಾರ್ಷಿಕ ವರದಿಯ (ಎಜಿಎಂ ನೋಟಿಸ್ ಸೇರಿದಂತೆ) ಸಂಪೂರ್ಣ ವಿವರಗಳು ಲಭ್ಯವಿರುತ್ತವೆ. ಇದಲ್ಲದೆ, ಸದಸ್ಯರು complianceofficer@ajax-engg.com ಗೆ ಇಮೇಲ್ ಕಳುಹಿಸುವ ಮೂಲಕ ಅಥವಾ ನಮ್ಮ ಆರ್‌ಟಿಎ ಯುಆರ್‌ಎಲ್ https://web.in.mpms.mufg.com/helpdesk/Service_Request.html ಬಳಸಿಕೊಂಡು ಸೇವಾ ವಿನಂತಿಯನ್ನು ಸಲ್ಲಿಸುವ ಮೂಲಕ ಮುದ್ರಿತ ಪ್ರತಿಯನ್ನು ಸಹ ಪಡೆಯಬಹುದು.

ವಾರ್ಷಿಕ ವರದಿ ಜೊತೆಗಿನ ಎಜಿಎಂ ನೋಟಿಸ್ ಅನ್ನು ಪಡೆಯಲು ಇಮೇಲ್ ವಿಳಾಸಗಳನ್ನು ನೋಂದಾಯಿಸುವ/ಪರಿಷ್ಕರಣೆ ಮಾಡುವ ವಿಧಾನ:

ಕಂಪನಿ ಅಥವಾ ನಿಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ನೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು ಈ ಕೆಳಗಿನ ವಿಧಾನದಲ್ಲಿ ಅದನ್ನು ನೋಂದಾಯಿಸಬಹುದು:

i. ನೀವು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದು, ಡೆಪಾಸಿಟರಿ ಪಾರ್ಟಿಸಿಪೆಂಟ್‌ನೊಂದಿಗೆ ನಿಮ್ಮ ಇಮೇಲ್ ಐಡಿಯನ್ನು ನೋಂದಾಯಿಸದಿದ್ದರೆ, ದಯವಿಟ್ಟು ಡೆಪಾಸಿಟರಿ ಪಾರ್ಟಿಸಿಪೆಂಟ್‌ನೊಂದಿಗೆ ನಿಮ್ಮ ಇಮೇಲ್ ಐಡಿಯನ್ನು ನೋಂದಾಯಿಸಿ/ಪರಿಷ್ಕರಣೆ ಮಾಡಿ ಅಥವಾ ಎಮ್‌ಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ಗೆ ಸರಿಯಾಗಿ ಸಹಿ ಮಾಡಿದ ವಿನಂತಿ ಪತ್ರವನ್ನು ಕಳುಹಿಸುವ ಮೂಲಕ ರಿಜಿಸ್ಟ್ರಾರ್ ಮತ್ತು ಶೇರು ಟ್ರಾನ್ಸ್‌ಫರ್ ಏಜೆಂಟ್‌ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಿ.

ii. ಒಂದು ವೇಳೆ, ನೀವು ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿದ್ದು, ನಿಮ್ಮ ಇಮೇಲ್ ಐಡಿಯನ್ನು ನೋಂದಾಯಿಸಿಲ್ಲವಾದರೆ, ದಯವಿಟ್ಟು ನಿಮ್ಮ ಇಮೇಲ್ ವಿಳಾಸವನ್ನು ಆರ್‌ಟಿಎಯ ವೆಬ್‌ಸೈಟ್ ಮೂಲಕ ಇಲೆಕ್ಟ್ರಾನಿಕ್ ವಿಧಾನದಲ್ಲಿ ಮಾತ್ರ ನೋಂದಾಯಿಸಲು/ಪರಿಷ್ಕರಣೆ ಮಾಡಲು ವಿನಂತಿಸಲಾಗಿದೆ. ಇದಕ್ಕಾಗಿ ಸೇವಾ ವಿನಂತಿಯನ್ನು ಸಲ್ಲಿಸಲು ಈ ಲಿಂಕ್ ಬಳಸಿ: https://web.in.mpms.mufg.com/helpdesk/Service_Request.html

ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂನಲ್ಲಿ ಇ–ವೋಟಿಂಗ್ ಮಾಡುವ ವಿಧಾನ:

ಕಂಪನಿಯು ಎಜಿಎಮ್‌ಗೂ ಮೊದಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಮತ್ತು ಎಜಿಎಮ್ ಸಮಯದಲ್ಲಿ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಸೇವೆಗಳನ್ನು ಪಡೆದುಕೊಂಡಿದೆ. ಕಂಪನಿಯು ತನ್ನ ಎಲ್ಲ ಸದಸ್ಯರಿಗೆ 33ನೇ ಎಜಿಎಂ ನೋಟಿಸ್‌ನಲ್ಲಿ ತಿಳಿಸಲಾದ ಎಲ್ಲ ನಿರ್ಣಯಗಳ ಮೇಲೆ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ('ರಿಮೋಟ್ ಇ–ವೋಟಿಂಗ್') ಒದಗಿಸುತ್ತಿದೆ. ಜೊತೆಗೆ, ಕಂಪನಿಯು ಎಜಿಎಂ ನೋಟಿಸ್‌ನಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತದಾನ ಮಾಡುವ ಸೌಲಭ್ಯವನ್ನು ('ಇ–ವೋಟಿಂಗ್') ಒದಗಿಸುತ್ತಿದೆ. ಎಲ್ಲ ಸದಸ್ಯರಿಗಾಗಿ (ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು/ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು/ಕಂಪನಿ/ಆರ್‌ಟಿಎಯಲ್ಲಿ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಸೇರಿದಂತೆ) ರಿಮೋಟ್ ಇ–ವೋಟಿಂಗ್ ಅಥವಾ ಎಜಿಎಂ ಸಮಯದಲ್ಲಿ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿವರವಾದ ಕಾರ್ಯವಿಧಾನಗಳು ಮತ್ತು ಸೂಚನೆಗಳನ್ನು ಕಂಪನಿಯ 33ನೇ ಎಜಿಎಂ ಸೂಚನೆಯಲ್ಲಿ ತಿಳಿಸಿದೆ.

ಮತದಾನದ ಮಾಹಿತಿ:

ಎಜಿಎಂ ನೋಟಿಸ್‌ನಲ್ಲಿ ತಿಳಿಸಲಾದ ವ್ಯವಹಾರಗಳ ಮೇಲೆ ಸಿಡಿಎಸ್‌ಎಲ್‌ನ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ದೂರದಿಂದಲೇ ತಮ್ಮ ಮತಗಳನ್ನು ಚಲಾಯಿಸಲು ಸದಸ್ಯರು ಅವಕಾಶವನ್ನು ಪಡೆಯುತ್ತಾರೆ.

ರಿಮೋಟ್ ಇ–ಮತದಾನದ ವಿವರಗಳು:

ರಿಮೋಟ್ ಇ–ಮತದಾನದ ಆರಂಭ ದಿನಾಂಕ ಮತ್ತು ಸಮಯ	ಮಂಗಳವಾರ, ಸೆಪ್ಟೆಂಬರ್ 2, 2025 ಸಮಯ 9:00 ಬೆಳಗ್ಗೆ
ರಿಮೋಟ್ ಇ–ಮತದಾನದ ಆರಂಭ ದಿನಾಂಕ ಮತ್ತು ಸಮಯ	ಗುರುವಾರ, ಸೆಪ್ಟೆಂಬರ್ 4, 2025 ಸಮಯ 5:00 ಸಂಜೆ

(ಎ) ಎಜಿಎಂಗಿಂತ ಮೊದಲು ರಿಮೋಟ್ ಇ–ವೋಟಿಂಗ್, (ಬಿ) ಎಜಿಎಂ ಸಮಯದಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು (ಸಿ) ವಿಸಿ / ಒಎವಿಎಂ ಮೂಲಕ ಎಜಿಎಮ್‌ಗೆ ಹಾಜರಾಗುವ ಬಗ್ಗೆ ವಿವರವಾದ ಸೂಚನೆಗಳನ್ನು ಎಜಿಎಂ ನೋಟಿಸ್‌ನ 'ಟಿಪ್ಪಣಿಗಳು' ವಿಭಾಗದಲ್ಲಿ ಒದಗಿಸಲಾಗುವುದು.

ರಿಮೋಟ್ ಇ–ವೋಟಿಂಗ್ (ಎಜಿಎಂ ಮೊದಲು ಅಥವಾ ಎಜಿಎಂ ಸಮಯದಲ್ಲಿ) ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳಿಗಾಗಿ, ನೀವು www.evotingindia.com ನಲ್ಲಿ ಸಿಡಿಎಸ್‌ಎಲ್‌ನ 'ಸಹಾಯ' ವಿಭಾಗದಲ್ಲಿ ಲಭ್ಯವಿರುವ 'ಪದೇ ಪದೇ ಕೇಳಲಾದ ಪ್ರಶ್ನೆ (ಎಫ್‌ಎಕ್ಯೂ)' ಮತ್ತು ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ ಟೋಲ್ ಫ್ರೀ ಸಂಖ್ಯೆ 1800 21 09911 ಗೆ ಕರೆ ಮಾಡಬಹುದು, ಅಥವಾ helpdesk.evoting@cdslindia.com ಗೆ ಇಮೇಲ್ ಕಳುಹಿಸಬಹುದು ಅಥವಾ ಹಿರಿಯ ಮ್ಯಾನೇಜರ್ ಶ್ರೀ ರಾಕೇಶ್ ದಳವಿ ಅವರನ್ನು 022–62343611 ಗೆ ಸಂಪರ್ಕಿಸಬಹುದು.

ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್‌ಗಾಗಿ

ಸಹಿ/–
ಶ್ರುತಿ ವಿಶ್ವನಾಥ್ ಶೆಟ್ಟಿ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: A33617

ಸ್ಥಳ: ಬೆಂಗಳೂರು
ದಿನಾಂಕ: 08 ಆಗಸ್ಟ್ 2025

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:409/ 2025

ಅರ್ಜಿದಾರರು: ಶ್ರೀ ತಿಮ್ಮಯ್ಯ ಬಿನ್ ಲೇಟ್ ತಿಮ್ಮಯ್ಯ ವಯಸ್ಸು 69 ವರ್ಷ, ವಾಸ:- ಸಂಬೇಗೌಡನದೊಡ್ಡಿ ಗ್ರಾಮ, ಹೊನ್ನಿಗನಹಳ್ಳಿ ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಸಂಬೇಗೌಡನದೊಡ್ಡಿ ಗ್ರಾಮ, ದಾಳಿಂಬ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಾಯಿ ಮತ್ತು 2ನೇ ಅರ್ಜಿದಾರರ ಅತ್ತೆ 3, 4 & 5ನೇ ಅರ್ಜಿದಾರರ ಅಜ್ಜಿಯವರಾದ ಮೃತ ವ್ಯಕ್ತಿ, ಶ್ರೀಮತಿ. ಪಾಲಮ್ಮ @ ವೆಂಕಟಮ್ಮ ಕೋಂ ಲೇಟ್ ತಿಮ್ಮಯ್ಯ, ರವರು ದಿನಾಂಕ:08.07.2014 ರಂದು ರಾಮನಗರ ಜಿಲ್ಲೆ, ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಸಂಬೇಗೌಡನದೊಡ್ಡಿ ಸ್ವಗ್ರಾಮದಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 20.09.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2025 ರ ಆಗಸ್ಟ್ 05 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ

ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ:05.08.2025

ನಿರ್ಮಾಪಕ ರಾಘವೇಂದ್ರ ಹೆಗ್ಡೆ ಮುಂಬೈನಲ್ಲಿ ದೂರು ದಾಖಲು

ಧ್ರುವ ವಿರುದ್ಧ ಹಣ ವಂಚನೆ ಆರೋಪ

ಬೆಂಗಳೂರು: ನಟ ಧ್ರುವ ಸರ್ಜಾ ಕೆಡಿ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆಯೇ ಅವರ ವಿರುದ್ಧ ಹಣ ವಂಚನೆ ಆರೋಪ ಕೇಳಿಬಂದಿದ್ದು ಎಫ್ ಐಆರ್ ಕೂಡ ದಾಖಲಾಗಿದೆ. ನಿರ್ಮಾಪಕ ರಾಘವೇಂದ್ರ ಹೆಗ್ಡೆ ಮುಂಬೈನಲ್ಲಿ ದೂರು ದಾಖಲಿಸಿದ್ದಾರೆ.

ನಾನು ನಿರ್ಮಿಸಿ, ನಿರ್ದೇಶಿಸಿದ್ದ ಜಗ್ಗು ದಾದ ಸಿನಿಮಾ ಯಶಸ್ಸು ಕಂಡಿತು. ಈ ವೇಳೆ ಧ್ರುವ ಸರ್ಜಾ, ನನ್ನ ಕಚೇರಿಗೆ ಬಂದು ಸಿನಿಮಾ ಮಾಡೋಣ ಎಂದು ಹೇಳಿ, ದಿ ಸೋಲ್ಜರ್ ಹೆಸರಿನ ಸಿನಿಮಾದ ಸ್ಕ್ರಿಪ್ಟ್ ಕೂಡ ನೀಡಿದರು. ಸಿನಿಮಾ ಒಪ್ಪಂದಕ್ಕೆ ಸಹಿ ಮಾಡುವುದಕ್ಕೂ ಮೊದಲು ಮೂರು ಕೋಟಿ ರೂಪಾಯಿ ನೀಡುವಂತೆ ಧ್ರುವ ಕೇಳಿದ್ದರು. ಹಣ ಪಡೆದ ನಂತರ ಧ್ರುವ ಅವಧಿ ವಿಸ್ತರಣೆಗೆ ಕೋರಿದರಂತೆ. ನಂತರ ಕೊವಿಡ್ ಬಂತು. ಕೊವಿಡ್ ಲಾಕ್‌ಡೌನ್ ಆಯಿತು. ಆ ಬಳಿಕವೂ ಅವರು ಪ್ರತಿಕ್ರಿಯಿಸಲಿಲ್ಲ. ಮಾತ್ರವಲ್ಲ, ಕರೆಗಳನ್ನು ಸ್ವೀಕರಿಸಿಲ್ಲ ಎಂದು ರಾಘವೇಂದ್ರ ದೂರಿನಲ್ಲಿ ಉಲ್ಲೇಖಿಸಿರುವುದು ತಿಳಿದುಬಂದಿದೆ. ಈ ದೂರಿನ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಮ್ಯಾನೇಜರ್ ಹೇಳಿದ್ದೇನು?

ಇನ್ನು ಈ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿರುವ ಧ್ರುವ ಸರ್ಜಾ ಮ್ಯಾನೇಜರ್ ಅಶ್ವಿನ್, ರಾಘವೇಂದ್ರ ಹೆಗ್ಡೆ ಮಾಡಿರುವ ಆರೋಪ ಸುಳ್ಳು. 2018ರಲ್ಲಿ ಸೋಲ್ಜರ್ ಸಿನಿಮಾ ಮಾಡಲು ಮೂರು ಕೋಟಿ ಹದಿನೈದು ಲಕ್ಷ ರು ನೀಡಿದ್ದರು. ಸಿನಿಮಾ ಮಾಡುವ ವಿಚಾರವಾಗಿ ಪ್ರತಿ ಬಾರಿ ಕಾಲ್ ಮಾಡಿದಾಗಲೂ ಅವರು ಬ್ಯುಸಿ ಇದ್ದುದ್ದಾಗಿ ಹೇಳುತ್ತಲೇ ಬರುತ್ತಿದ್ದರು. ನಾಲ್ಕೂವರೆ ವರ್ಷದ ಬಳಿಕ ಸಿನಿಮಾ ಸ್ಕ್ರಿಪ್ಟ್ ಕಳುಹಿಸಿದರು. ದ್ವಿತಿಯಾರ್ಧ ಇನ್ನೂ ಬಂದಿರಲಿಲ್ಲ. ನಾವು ಅವರ ಜತೆ ನಿರಂತರವಾಗಿ ಮಾತುಕತೆ ಮಾಡುತ್ತಲೇ ಇದ್ದೆವು. ಒಂದು ದಿನ ಬಂದು ಸೋಲ್ಜರ್ ಸಿನಿಮಾ ಮಾಡೋದು ಬೇಡ, ಬಜೆಟ್ ಜಾಸ್ತಿ ಆಗುತ್ತದೆ. ಮಾಡಿದರೂ ಕನ್ನಡದಲ್ಲಿ ಬೇಡ, ತೆಲುಗು ಅಥವಾ ಹಿಂದಿಯಲ್ಲಿ ಮಾಡೋಣ ಎಂದರು. ಇದಕ್ಕೆ ಧ್ರುವ ಒಪ್ಪಿಲ್ಲ. ಕನ್ನಡದಲ್ಲೇ ಸಿನಿಮಾ ಮಾಡಬೇಕು ಎಂದು ಪಟ್ಟು ಹಿಡಿದರು. ನಾವು ಹಣ ಕೊಡೋದಿಲ್ಲ ಎಂದು ಯಾವಾಗಲೂ ಹೇಳಿಲ್ಲ. ಎಲ್ಲವೂ ಕೋರ್ಟ್‌ನಲ್ಲಿ ಇತ್ಯರ್ಥ ಆಗಲಿದೆ ಎಂದಿದ್ದಾರೆ.

ಸ್ನೇಹಿತರಿಂದಲೇ ರೌಡಿಶೀಟರ್ ಕೊಲೆ

ಬೆಂಗಳೂರು: ಸ್ನೇಹಿತರುಗಳ ನಡುವೆ ಗಲಾಟೆ ನಡೆದು ರೌಡಿಶೀಟರ್‌ನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಡರಾತ್ರಿ ನಡೆದಿದೆ. ಚಿಕ್ಕಬಾಣವಾರದ ನಿವಾಸಿ ಪ್ರತಾಪ್ (29) ಕೊಲೆಯಾದ ರೌಡಿ. ಈತ ಗಂಗಮಗುಡಿ ಪೊಲೀಸ್ ಠಾಣೆಯ ರೌಡಿ ಶೀಟರ್. ತಡರಾತ್ರಿ 12.30 ರ ಸುಮಾರಿನಲ್ಲಿ ಪ್ರತಾಪ್ ಸ್ನೇಹಿತರೊಂದಿಗೆ ಮಾರುತಿನಗರದ ಬಾರ್‌ವೊಂದಕ್ಕೆ ಹೋಗಿ ಮದ್ಯಪಾನ ಮಾಡಿದ್ದಾನೆ. ನಂತರ ಹೊರಬಂದು ನಡೆದುಕೊಂಡು ಮನೆಗೆ ಹೋಗುತ್ತಿದ್ದಾಗ ಅವರುಗಳ ಮಧ್ಯೆಯೇ ಯಾವುದೋ ವಿಚಾರಕ್ಕೆ ಗಲಾಟೆಯಾಗಿ ಕೈ ಕೈ ಮಿಲಾಯಿಸಿಕೊಂಡಿದ್ದಾರೆ. ಆ ವೇಳೆ ಜಗಳ ವಿಕೋಪಕ್ಕೆ ತಿರುಗಿದ್ದು, ಜತೆಯಲ್ಲಿದ್ದ ಸ್ನೆಹಿತನೇ ಚಾಕುವಿನಿಂದ ಪ್ರತಾಪನಿಗೆ ಇರಿದಿದ್ದಾನೆ. ತೀವ್ರರಕ್ತಸ್ರಾವದಿಂದ ಗಂಭೀರ ಗಾಯಗೊಂಡಿದ್ದ ಪ್ರತಾಪ್ನನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ. ಮೂವರನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೋದಿ ಸಂಚರಿಸುವ ಮಾರ್ಗಗಳೆಲ್ಲ ಕಮಲಮಯ | ಹಳದಿ ಮೆಟ್ರೊ, ವಂದೇ ಭಾರತ್‌ಗೆ ಇಂದು ಚಾಲನೆ

ನಮೋ ಸ್ವಾಗತಕ್ಕೆ ಕಮಲ ಪಡೆ ಸಿದ್ಧತೆ

ಪಿಎಂ ಕಾರ್ಯಕ್ರಮ

- ಬೆಳಗ್ಗೆ 11 ಗಂಟೆಗೆ ಎಚ್‌ಕ್ಯೂಟಿಸಿ ಹೆಲಿಪ್ಯಾಡ್‌ನಿಂದ ರಸ್ತೆ ಮಾರ್ಗವಾಗಿ ಕೆಎಸ್‌ಆರ್ ರೈಲ್ವೇ ನಿಲ್ದಾಣಕ್ಕೆ ಪ್ರಯಾಣ. (ಮಾರ್ಗ ಮಧ್ಯೆ ಮೇಖ್ರಿ ವೃತ್ತ, ಚಾಲುಕ್ಯ ವೃತ್ತ ಮತ್ತು ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಪ್ರಧಾನಿಗೆ ಸ್ವಾಗತ)
- ಬೆಳಗ್ಗೆ 11.10ಕ್ಕೆ ಕೆಎಸ್‌ಆರ್ ರೈಲ್ವೇ ನಿಲ್ದಾಣಕ್ಕೆ ಪ್ರಧಾನಿ ಆಗಮನ.
- ಬೆಳಗ್ಗೆ 11.15ರಿಂದ 11.20ರವರೆಗೆ ಕೆಎಸ್‌ಆರ್ ರೈಲ್ವೆ ನಿಲ್ದಾಣದಲ್ಲಿ 3 ವಂದೇ ಮಾತರಂ ರೈಲುಗಳಿಗೆ ಚಾಲನೆ.
- ಬೆ.11.25ಕ್ಕೆ ಕೆಎಸ್‌ಆರ್ ರೈಲ್ವೆ ನಿಲ್ದಾಣದಿಂದ ಪ್ರಧಾನಿ ನಿರ್ಗಮನ. (ಮಾರ್ಗ ಮಧ್ಯೆ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್ ಎಂಡ್ ವೃತ್ತ ಮತ್ತು ರಾಗಿಗುಡ್ಡ ಮೆಟ್ರೋ ನಿಲ್ದಾಣದ ಬಳಿ ಪ್ರಧಾನಿಗೆ ಬಿಜೆಪಿ ಕಾರ್ಯಕರ್ತರ ಸ್ವಾಗತ)
- ಬೆಳಗ್ಗೆ 11.45ಕ್ಕೆ ರಾಗಿಗುಡ್ಡ ಮೆಟ್ರೋ ನಿಲ್ದಾಣಕ್ಕೆ ಆಗಮನ.
- ಬೆಳಗ್ಗೆ 11.45ರಿಂದ ಮಧ್ಯಾಹ್ನ 12.50ರವರೆಗೆ ರಾಗಿಗುಡ್ಡ ಮೆಟ್ರೋ ನಿಲ್ದಾಣದಿಂದ ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣದವರೆಗೆ ಮೆಟ್ರೋ ರೈಲಿನಲ್ಲಿ ಪ್ರಯಾಣ

- ಮ.12.50ಕ್ಕೆ ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣಕ್ಕೆ ಆಗಮನ
- 12.55ಕ್ಕೆ ಎಲೆಕ್ಟ್ರಾನಿಕ್ ಸಿಟಿ ಐಐಐಟಿ ಸಭಾಂಗಣಕ್ಕೆ ಆಗಮನ
- 1 ಗಂಟೆಗೆ ಸಭಾ ಕಾರ್ಯಕ್ರಮದ ವೇದಿಕೆಗೆ ಪ್ರಧಾನಿ ಆಗಮನ
- 1.25ಕ್ಕೆ ಮೆಟ್ರೋ 3ನೇ ಹಂತದ ಕಾಮಗಾರಿಗೆ ಶಂಕುಸ್ಥಾಪನೆ
- 1.30ರಿಂದ 2 ಗಂಟೆಯವರೆಗೆ ಪ್ರಧಾನಿ ಮೋದಿ ಭಾಷಣ
- 2.15ಕ್ಕೆ ರಸ್ತೆ ಮಾರ್ಗವಾಗಿ ಹೆಲಿಪ್ಯಾಡ್ ಗೆ ಆಗಮನ
- ಮಧ್ಯಾಹ್ನ 2.20ಕ್ಕೆ ಹೆಲಿಕಾಪ್ಟರ್ ಮೂಲಕ ಎಚ್‌ಎಎಲ್ ಏರ್‌ಪೋರ್ಟ್‌ಗೆ
- ಮಧ್ಯಾಹ್ನ 2.40ಕ್ಕೆ ಎಚ್‌ಎಎಲ್ ಏರ್‌ಪೋರ್ಟ್ ನಿಂದ ದೆಹಲಿಗೆ ಮೋದಿ ನಿರ್ಗಮನ

ಬೆಂಗಳೂರು: ಬೆಂಗಳೂರು-ಬೆಳಗಾವಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಹಾಗೂ ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಚಾಲನೆ ನೀಡಲು ಆಗಮಿಸುತ್ತಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿಗೆ ಸ್ವಾಗತ ಕೋಲು ಅವರು ಸಂಚರಿಸುವ ಮಾರ್ಗದ ಪ್ರತಿ ನಿಲ್ದಾಣದಲ್ಲಿಯೂ ರಾಜ್ಯ ಬಿಜೆಪಿ ಸಿದ್ಧತೆ ಮಾಡಿಕೊಂಡಿದೆ.

ಮೇಖ್ರಿ ವೃತ್ತ, ಚಾಲುಕ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್ ಎಂಡ್ ವೃತ್ತ ಹಾಗೂ ನಮ್ಮ ಮೆಟ್ರೊ ಹಳದಿ ಮಾರ್ಗದ ಎಲ್ಲಾ 16 ನಿಲ್ದಾಣಗಳ ಬಳಿ ಸಾವಿರಾರು ಕಾರ್ಯಕರ್ತರು ಪ್ರಧಾನಿಯವರನ್ನು ಸ್ವಾಗತಿಸಲಿದ್ದು, ಇದರ ನಿರ್ವಹಣೆಗಾಗಿ ಪ್ರಮುಖರನ್ನು ಪಕ್ಷ ನಿಯೋಜಿಸಿದೆ. ಪ್ರಧಾನಿ ಮೋದಿ ಆಗಮನ ಹಿನ್ನೆಲೆ ಬಿಜೆಪಿಯಿಂದ ಹಮ್ಮಿಕೊಂಡಿದ್ದ ರೋಡ್ ಶೋ ಸಮಯದ ಕೊರತೆಯಿಂದ ರದ್ದು ಮಾಡಲಾಗಿದೆ. ಹೀಗಾಗಿ, ಪ್ರತಿ ನಿಲ್ದಾಣದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿ ಮೋದಿಗೆ ಸ್ವಾಗತ ಕೋರಲು ನಿರ್ಧರಿಸಲಾಗಿದೆ.

ಮೋದಿ ಆಗಮಿಸುವ ಪ್ರಮುಖ ರಸ್ತೆಗಳಲ್ಲಿ ದಾರಿಯುದ್ದಕ್ಕೂ ಅವರಿಗೆ ಸ್ವಾಗತ ಕೋರಲು ಆಳೆತ್ತರದ ಕಟೌಟ್‌ಗಳನ್ನು ಅಳವಡಿಲಾಗಿದೆ. ಬಹುತೇಕ ಕಡೆ ಬಿಜೆಪಿಯ ಬಾವುಟಗಳು ರಾರಾಜಿಸುತ್ತಿದ್ದು, ಬೆಳಗ್ಗೆ 7.50ಕ್ಕೆ ದೆಹಲಿಯಿಂದ ವಿಮಾನ ಮೂಲಕ ಹೊರಟು 10.30ಕ್ಕೆ ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಪ್ರಧಾನಿ ಆಗಮಿಸಲಿದ್ದಾರೆ. 10.35ಕ್ಕೆ ಎಚ್‌ಎಎಲ್ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಏರ್‌ಫೋರ್ಸ್ ಕಮಾಂಡೊ ತರಬೇತಿ ಕೇಂದ್ರಕ್ಕೆ 10.55ಕ್ಕೆ ಆಗಮಿಸಲಿದ್ದಾರೆ. ಬೆಂಗಳೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮನ ಹಿನ್ನೆಲೆ ರಸ್ತೆಯ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಮೆಜೆಸ್ಟಿಕ್ ರೈಲ್ವೆ ನಿಲ್ದಾಣದಲ್ಲಿ ವಂದೇ ಭಾರತ್ ಉದ್ಘಾಟನೆ ಹಿನ್ನೆಲೆ ಮೆಜೆಸ್ಟಿಕ್ ಸುತ್ತಮುತ್ತ ಫ್ಲೆಕ್ಸ್ , ಬ್ಯಾನರ್ ಅಳವಡಿಕೆ ಮಾಡಲಾಗಿದೆ.

ಹಲವೆಡೆ ಸಂಚಾರ ನಿರ್ಬಂಧ

ಹಳದಿ ಮಾರ್ಗದ ಉದ್ಘಾಟನಾ ಕಾರ್ಯಕ್ರಮದ ಹಿನ್ನಲೆ ಪ್ರಧಾನಿ ಮೋದಿ ಸೇರಿದಂತೆ ಹಲು ಗಣ್ಯರು ಆಗಮಿಸುವ ಹಿನ್ನೆಲೆ ನಗರದ ಕೆಲ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ. ಬೆಂಗಳೂರಿನ ಮೇಖ್ರಿ ವೃತ್ತ, ಚಾಲುಕ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್ ಎಂಡ್ ಸರ್ಕಲ್, ರಾಗಿಗುಡ್ಡ, ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ಸ್ಟೇಷನ್‌ಗಳ ಬಳಿ ಮತ್ತು ಮೆಟ್ರೋ ಹಳದಿ ಮಾರ್ಗದ ಎಲ್ಲಾ ಮೆಟ್ರೋ ಸ್ಟೇಷನ್‌ಗಳಲ್ಲಿ ಸಾವಿರಾರು ಜನರು ಆಗಮಿಸುವ ಹಿನ್ನೆಲೆ ಬೆಂಗಳೂರಿನ ಹಲವು ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ.

ನಿರ್ಬಂಧಿಸಿದ ಮಾರ್ಗಗಳು

- ಮಾರೇನಹಳ್ಳಿ ಮುಖ್ಯ ರಸ್ತೆಯ ರಾಜಲಕ್ಷ್ಮೀ ಜಂಕ್ಷನ್‌ನಿಂದ ಮಾರೇನಹಳ್ಳಿ 18ನೇ ಮುಖ್ಯ ರಸ್ತೆಯವರೆಗೆ.
- ಮಾರೇನಹಳ್ಳಿ ಈಸ್ಟ್ ಎಂಡ್ ಮುಖ್ಯ ರಸ್ತೆ ಜಂಕ್ಷನ್‌ನಿಂದ ಅರವಿಂದ ಜಂಕ್ಷನ್‌ವರೆಗೆ
- ಸಿಲ್ಕ್ ಬೋರ್ಡ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಎಲಿವೇಟೆಡ್ ಫ್ಲೈಓವರ್, ಹೊಸೂರು ರಸ್ತೆಯ ಮೂಲಕ ಹೊಸೂರು ಕಡೆಗೆ.
- ಹೊಸೂರು ಕಡೆಯಿಂದ ಬೆಂಗಳೂರು ಕಡೆಗೆ.
- ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದ ಇನ್ಫೋಸಿಸ್ ಅವೆನ್ಯೂ, ವೇಲಾಂಕಣಿ ರಸ್ತೆ, ಎಚ್.ಪಿ. ಅವೆನ್ಯೂ ರಸ್ತೆಗಳಲ್ಲಿ ನಿರ್ಬಂಧ.

ಪರ್ಯಾಯ ಮಾರ್ಗ

- ಹೊಸೂರು ರಸ್ತೆಯಿಂದ ಕನಕಪುರ ರಸ್ತೆ, ಮೈಸೂರು ರಸ್ತೆ ಮತ್ತು ತುಮಕೂರು ರಸ್ತೆ ಕಡೆಗೆ ಸಂಚರಿಸುವ ವಾಹನಗಳು ಹೊಸೂರು ರಸ್ತೆ ಬೊಮ್ಮಸಂದ್ರ ಜಂಕ್ಷನ್‌ನಿಂದ ಜಿಗಣಿ ರಸ್ತೆ ಮುಖಾಂತರ ಬನ್ನೇರುಘಟ್ಟ ರಸ್ತೆಯಲ್ಲಿ ನೈಸ್ ರಸ್ತೆಯನ್ನು ತಲುಪಿ ಸಂಚರಿಸುವುದು.
- ನೈಸ್ ರಸ್ತೆಯಿಂದ ಹೊಸೂರು ಕಡೆಗೆ ಸಂಚರಿಸುವ ವಾಹನಗಳು ಬನ್ನೇರುಘಟ್ಟ ಜಂಕ್ಷನ್‌ನಲ್ಲಿ ಇಳಿದು ಜಿಗಣಿ ರಸ್ತೆ ಮುಖಾಂತರ ಬೊಮ್ಮಸಂದ್ರ ಜಂಕ್ಷನ್ ಹೊಸೂರು ರಸ್ತೆಯನ್ನು ತಲುಪಿ ಸಂಚರಿಸುವುದು.
- ಹೊಸೂರು ರಸ್ತೆಯಿಂದ ಸರ್ಜಾಪುರ ರಸ್ತೆ, ವರ್ತೂರು, ವೈಟ್ ಫೀಲ್ಡ್ ಹೊಸಕೋಟೆ ಕಡೆಗೆ ಸಂಚರಿಸುವ ವಾಹನಗಳು ಚಂದಾಪುರ ಜಂಕ್ಷನ್‌ನಿಂದ ದೊಮ್ಮಸಂದ್ರ ರಸ್ತೆ ಮುಖಾಂತರ ಸರ್ಜಾಪುರ ರಸ್ತೆಯನ್ನು ತಲುಪಿ ಸಂಚರಿಸುವುದು.
- ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ಬೆಳ್ಳಂದೂರು, ವೈಟ್ ಫೀಲ್ಡ್ ಹಾಗೂ ನಗರದ ಕಡೆಯಿಂದ ಹೊಸೂರು ಕಡೆಗೆ ಸಂಚರಿಸುವ ವಾಹನಗಳು ಸರ್ಜಾಪುರ ರಸ್ತೆ ಮೂಲಕ ಚಂದಾಪುರ ತಲುಪಿ ಹೊಸೂರು ಕಡೆ ಸಂಚರಿಸುವುದು.
- ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದಲ್ಲಿ ಸಂಚರಿಸುವ ವಾಹನಗಳು 2ನೇ ಕ್ರಾಸ್ ರಸ್ತೆ, ಶಿಕಾರಿಪಾಳ್ಯ ರಸ್ತೆ, ಹುಲಿಮಂಗಲ ರಸ್ತೆ, ಗೊಲ್ಲಹಳ್ಳಿ ರಸ್ತೆಗಳಲ್ಲಿ ಸಂಚರಿಸುವುದು.

ಮಾರೇನಹಳ್ಳಿ ಮುಖ್ಯ ರಸ್ತೆಯ ರಾಜಲಕ್ಷ್ಮೀ ಜಂಕ್ಷನ್‌ನಿಂದ ಮಾರೇನಹಳ್ಳಿ 18ನೇ ಮುಖ್ಯ ರಸ್ತೆಯ ಮಾರ್ಗವಾಗಿ ಜಯದೇವ ಕಡೆಗೆ ಸಂಚರಿಸುವ ವಾಹನ ಸವಾರರು ಬನಶಂಕರಿ ಬಸ್ ನಿಲ್ದಾಣದ ಕಡೆಯಿಂದ ಸಾರಕ್ಕಿ ಮಾರ್ಕೆಟ್ ರಸ್ತೆ/9ನೇ ಕ್ರಾಸ್ ರಸ್ತೆಯಲ್ಲಿ ಎಡ ತಿರುವು ಪಡೆದು ಐ.ಜಿ ಸರ್ಕಲ್, ಆರ್‌ವಿ . ಡೆಂಟಲ್ ಜಂಕ್ಷನ್ ಮಾರ್ಗವಾಗಿ 8ನೇ ಮುಖ್ಯ ರಸ್ತೆ 9ನೇ ಕ್ರಾಸ್ ರಸ್ತೆ ಜಂಕ್ಷನ್ ಮೂಲಕ ಜಯದೇವ ಕಡೆಗೆ ಸಂಚರಿಸಬಹುದಾಗಿರುತ್ತದೆ ಹಾಗೂ ಸಾರಕ್ಕಿ ಜಂಕ್ಷನ್ ಔಟರ್ ರಿಂಗ್ ರಸ್ತೆಯ ಮೂಲಕ ಸಹ ಬನ್ನೇರುಘಟ್ಟ ರಸ್ತೆ ಕಡೆಗೆ ಚಲಿಸಬಹುದು. ನಾಲ್ಕನೇ ಮುಖ್ಯ ರಸ್ತೆ ಕಡೆಯಿಂದ ಜಯದೇವ ಕಡೆಗೆ ಸಂಚರಿಸುವ ವಾಹನ ಸವಾರರು ರಾಜಲಕ್ಷ್ಮೀ ಜಂಕ್ಷನ್ನಲ್ಲಿ ಬಲ ತಿರುವು ಪಡೆದು ಸಾರಕ್ಕಿ ಮುಖ್ಯ ರಸ್ತೆಯಲ್ಲಿ ಎಡ ತಿರುವು ಪಡೆದುಕೊಂಡು ಐ.ಜಿ ಸರ್ಕಲ್ ಆರ್.ವಿ. ಡೆಂಟಲ್ ಮಾರ್ಗವಾಗಿ 8ನೇ ಮುಖ್ಯ ರಸ್ತೆ 9ನೇ ಕ್ರಾಸ್ ರಸ್ತೆ ಜಂಕ್ಷನ್ ಮೂಲಕ ಜಯದೇವ ಕಡೆಗೆ, ಬನ್ನೇರುಘಟ್ಟ ರಸ್ತೆ ಕಡೆಗೆ ಸಂಚರಿಸಬಹುದು.

ಹಳದಿ ಮೆಟ್ರೊದಲ್ಲಿ ಚಾಲಕ ಸಹಿತ ರೈಲು ಸಂಚಾರ

ಬೆಂಗಳೂರು: ಪ್ರಧಾನಿ ಮೋದಿಯವರು ಉದ್ಘಾಟಿಸಲಿರುವ ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಮೊದಲು ಲೋಕೋ ಪೈಲಟ್‌ಗಳು ರೈಲು ಸಂಚಾರ ನಡೆಸಲಿದ್ದು, ಆರು ತಿಂಗಳ ಬಳಿಕ ದತ್ತಾಂಶ ಆಧರಿಸಿ ಚಾಲಕ ರಹಿತ ವ್ಯವಸ್ಥೆಗೆ ಬದಲಾವಣೆಯಾಗಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ. ಆರ್.ವಿ. ರಸ್ತೆ-ಬೊಮ್ಮಸಂದ್ರ ಮಾರ್ಗದಲ್ಲಿ ಆಧುನಿಕ ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ ಅಳವಡಿಸಿದ್ದು, ನಮ್ಮ ಮೆಟ್ರೋ ಮೊದಲ ಆರು ತಿಂಗಳು ಅರೆ-ಸ್ವಯಂಚಾಲಿತ ಮೋಡ್‌ನಲ್ಲಿ ರೈಲಿನ ಸಂಚಾರವನ್ನು ನಡೆಸಲಿದೆ.

ಮೆಟ್ರೋದ ಹಿರಿಯ ಅಧಿಕಾರಿಯೊಬ್ಬರು ಈ ಕುರಿತು ಮಾತನಾಡಿ, ಆರಂಭದಲ್ಲಿ ಹಳದಿ ಮಾರ್ಗಕ್ಕೆ ಚಾಲಕರನ್ನು ನಿಯೋಜಿಸ ಲಾಗುತ್ತಿದ್ದು, ಕಾರ್ಯಾಚರಣೆಯ ಡೇಟಾ ಮತ್ತು ಇನ್ ಪುಟ್‌ಗಳ ಆಧಾರದ ಮೇಲೆ ಆರು ತಿಂಗಳ ಕಾರ್ಯಾಚರಣೆಯ ನಂತರವೇ ಸಂಪೂ ರ್ಣ ಸ್ವಯಂಚಾಲಿತ ಚಾಲಕರಹಿತ (ಜಿಒಎ-4) ಸಾಫ್ಟ್‌ವೇರ್‌ನ್ನು ಅಂತಿಮಗೊಳಿಸಲಾಗುತ್ತದೆ ಎಂದರು. ಆರು ತಿಂಗಳ ನಂತರ ಸಂಪೂರ್ಣ ಸ್ವಯಂಚಾಲಿತ ಚಾಲಕರಹಿತ ವ್ಯವಸ್ಥೆಗೆ ಬದಲಾಗಲು ಸಂಶೋಧನಾ ವಿನ್ಯಾಸ ಮತ್ತು ಮಾನದಂಡಗಳ ಸಂಸ್ಥೆ (ಆರ್‌ಡಿಎಸ್‌ಒ), ರೈಲ್ವೆ ಮಂಡಳಿ ಮತ್ತು ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರಿಂದ (ಸಿಎಂಆರ್‌ಎಸ್) ಅನು ಮೋದನೆ ಪಡೆಯಲಾಗುತ್ತದೆ. ಸ್ವತಂತ್ರ ಸುರಕ್ಷತಾ ಮೌಲ್ಯಮಾಪಕ (ಐಎಸ್‌ಎ), ಸಂಪೂರ್ಣ ಸ್ವಯಂಚಾಲಿತ ಚಾಲಕರಹಿತ ವ್ಯವಸ್ಥೆಯನ್ನು ಪರಿಶೀಲಿಸಿದ್ದರೂ, ಸಿಎಂಆರ್‌ಎಸ್ ಇದೀಗ ಅರೆ-ಸ್ವಯಂಚಾಲಿತ ಕಾರ್ಯಾಚರಣೆಗಳನ್ನು ಮಾತ್ರ ಅನುಮೋದಿಸಿದೆ. ಸ್ವಯಂಚಾಲಿತ ರೈಲು ಮೇಲ್ವಿಚಾರಣೆ ವ್ಯವಸ್ಥೆಯ ಏಕೀಕರಣ, ಸಮಗ್ರ ಸಿಬ್ಬಂದಿ ತರಬೇತಿ, ಕಾರ್ಯಾಚರಣೆಯ ಕೈಪಿಡಿಗಳಿಗೆ ಅಂತಿಮ ನವೀಕರಣ, ಸೈಬರ್ ಭದ್ರತಾ ಮೌಲ್ಯಮಾಪನ ಮತ್ತು ಪ್ಲಾಟ್ ಫಾರ್ಮ್ ಸುರಕ್ಷತಾ ಮಾನದಂಡ ಸೇರಿದಂತೆ ಹಲವಾರು ಪ್ರಮುಖ ಪ್ರಕ್ರಿಯೆಗಳು ಇನ್ನೂ ಬಾಕಿ ಉಳಿದಿವೆ.

ಒಂದು ಬೋಗಿಗೆ 7.30 ಕೋಟಿ ರು.

ಚೀನಾ ಮೂಲದ ಸಿಆರ್‌ಆರ್‌ಸಿ ಸಂಸ್ಥೆ ಹಾಗೂ ಕೋಲ್ಕೊತ್ತಾದ ಬಳಿ ತನ್ನ ಉತ್ಪಾದನಾ ಘಟಕ ಹೊಂದಿರುವ ಟಿಟಾಗರ್ ರೈಲ್ ಸಿಸ್ಟಮ್ ಲಿಮಿಟೆಡ್ ನಮ್ಮ ಮೆಟ್ರೋಗೆ 216 ಕೋಚ್‌ಗಳನ್ನು ಪೂರೈಸಲು ಒಪ್ಪಂದಕ್ಕೆ ಸಹಿ ಹಾಕಿದೆ. 216 ಕೋಚ್‌ಗಳ ಪೈಕಿ, 126 ಕೋಚ್‌ಗಳನ್ನು ನೇರಳೆ ಮತ್ತು ಹಸಿರು ಮಾರ್ಗಕ್ಕೆ ಹಾಗೂ 90 ಬೋಗಿಗಳನ್ನು ಹಳದಿ ಮಾರ್ಗಕ್ಕೆ ಮೀಸಲಿಡಲಾಗಿದೆ. 18 ಬೋಗಿಗಳು ಮಾತ್ರ ಹಳದಿ ಮಾರ್ಗಕ್ಕೆ ಬಂದಿದ್ದು, ಮುಂದಿನ ಕೆಲವೇ ದಿನದಲ್ಲಿ ಇನ್ನೂ ಆರು ಬೋಗಿಗಳು ನಮ್ಮ ಮೆಟ್ರೋಗೆ ಬಂದು ಸೇರಲಿವೆ. 2019ರಲ್ಲಿ ಸಿಆರ್‌ಸಿಸಿ 216 ಕೋಚ್‌ಗಳಿಗೆ 1,578 ಕೋಟಿ ರು. ಬಿಡ್ ಮಾಡಿತ್ತು.

ದಲಿತ ರೈತರಿಗೆ ಅನ್ಯಾಯ ಸದನದಲ್ಲಿ ಪ್ರಸ್ತಾಪಿಸುವೆ

ಬೆಂಗಳೂರು: ದಿನ್ನೂರು ಗ್ರಾಮದಲ್ಲಿ ದಲಿತ ರೈತರಿಗೆ ಅನ್ಯಾಯದ ಕುರಿತ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಸಲಾಗುವುದು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಬೆಂಗಳೂರಿನ ಕಾಡುಗೋಡಿ ಪ್ಲಾಂಟೇಷನ್, ದಿನ್ನೂರು ಗ್ರಾಮದಲ್ಲಿ ದಲಿತ ರೈತರಿಗೆ ಸೇರಿದ ಪ್ರದೇಶಕ್ಕೆ ಭೇಟಿ ನೀಡಿ ಮಾತನಾಡಿ, ಇಲ್ಲಿನ ಭೂಮಿ ಬಗ್ಗೆ ಅಧಿಕಾರಿಗಳು ವಿಶ್ಲೇಷಣೆ ಮಾಡಿಲ್ಲ. ತಲೆಯಲ್ಲಿ ಬುದ್ಧಿ ಇರುವ ಅಧಿಕಾರಿಗಳು ಕುಳಿತಿಲ. ಹೀಗಾಗಿ ಸಮಸ್ಯೆ ಆಗಿದೆ. ರೈಲ್ವೆ, ಮೆಟ್ರೊ, ಕೆಐಎಡಿಬಿಗೆ ಜಾಗ ಕೊಡಲಾ ಗಿದೆ. ಆಹಾರ ನಿಗಮಕ್ಕೂ ಜಾಗ ಕೊಟ್ಟಿ ದ್ದಾರೆ. ಅರಣ್ಯ ಇಲಾಖೆಯಲ್ಲಿ ಕೇವಲ 60 ಎಕರೆ 30 ಗುಂಟೆ ಜಾಗ ಇದೆ. 711 ಎಕರೆ ಅಲ್ಲ ಎಂದರು.

ಈ ಜಾಗದಿಂದ ಕೆಐಎಡಿಬಿಗೆ 153 ಎಕರೆ, ರೈಲ್ವೆಗೆ 228 ಎಕರೆ 30 ಗುಂಟೆ, ದೇವಸ್ಥಾನಕ್ಕೆ 2 ಎಕರೆಗೂ ಹೆಚ್ಚು ಜಾಗ ಕೊಡಲಾಗಿದೆ. ಇಂದಿರಾ ಕ್ಯಾಂಟೀನ್‌ಗೂ ಜಾಗ ನೀಡಿದ್ದಾರೆ. 20 ಎಕರೆ ಜಾಗ ಕೊಟ್ಟು ಈ ಕಾಲೋನಿ ಮಾಡಿದ್ದಾರೆ. ರಸ್ತೆ, ಸ್ಮಶಾನ, ಬಡಾವಣೆಗೆ, ಪೊಲೀಸ್ ಠಾಣೆಗೆ ಜಾಗ ಕೊಟ್ಟಿದ್ದಾರೆ. ನೀವು ಪೊಲೀಸ್ ಠಾಣೆ ಎತ್ತಿ ಹಾಕಿದ್ದೀರಾ ಎಂದು ಪ್ರಶ್ನಿಸಿದರು. ಅಲ್ಲದೆ, ಕೃಷಿಗೆ ಸುಮಾರು 125 ಎಕರೆ ಜಾಗ ಕೊಟ್ಟಿದ್ದಾರೆ. ಮೆಟ್ರೊಗೆ 45 ಎಕರೆ ಕೊಟ್ಟಿದ್ದಾರೆ. ಅರಣ್ಯ ಇಲಾಖೆ ಭೂಮಿ ಎಂದಿದ್ದು ಅತಿಕ್ರಮಣ ಆಗಿದ್ದರೆ ವಾಪಸ್ ಪಡೆಯಿರಿ ಎಂದು ಸುಪ್ರೀಂಕೋರ್ಟ್ ತಿಳಿಸಿದೆ ಎಂದರು.

ನಗರಾದ್ಯಂತ ಮಳೆ: ಯಲ್ಲೋ ಅಲರ್ಟ್

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲೂ ಭಾರೀ ಮಳೆಯಾಗುತ್ತಿದ್ದು, ಮುಂದಿನ ಮೂರು ದಿನಗಳ ಕಾಲ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶನಿವಾರ ಮಧ್ಯಾಹ್ನದಿಂದ ಯಶವಂತಪುರ ಸೇರಿದಂತೆ ಹಲವು ಭಾಗಗಳಲ್ಲಿ ಭಾರೀ ಮಳೆಯಾಗಿದ್ದು, ಪೂರ್ವ ವಲಯ ಹಾಗೂ ಯಲಹಂಕ ವಲಯ, ಟಿ.ದಾಸರಹಳ್ಳಿ, ವಿದ್ಯಾರಣ್ಯಪುರ, ಶಂಕರಮಠ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ. ಮಳೆಯ ಪರಿಣಾಮ ನಗರಾದ್ಯಂತ ತಂಪಿನ ವಾತಾವರಣ ಕಂಡು ಬಂದಿದೆ. ನಗರದ ಅನೇಕ ಭಾಗಗಳಲ್ಲಿ ಶನಿವಾರ ಗಾಳಿಯೊಂದಿಗೆ ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನ ಯಲಹಂಕ ವಲಯದ ಚೌಡೇಶ್ವರಿ ಬಡಾವಣೆ, ಪೂರ್ವ ವಲಯದ ದೇವರ ಜೀವನಹಳ್ಳಿ, ಗಂಗಾನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಉತ್ತಮ ಮಳೆ ಆಗಿದೆ. ನಾಗಸಂದ್ರ, ಎಚ್‌ಆರ್ ಬಿಆರ್, ಕೋರಮಂಗಳ, ಎಲೆಕ್ಟ್ರಾನಿಕ ಸಿಟಿ, ಹೊರ ಮಾವು, ರಾಜಮಹಲ್ ಗುಟ್ಟಹಳ್ಳಿ, ಸಂಜಯ್‌ನಗರ, ಹೆಬ್ಬಾಳ, ನಾಗವಾರ, ಹೆಸರಘಟ್ಟ ಸೇರಿದಂತೆ ವಿವಿಧೆಡೆ ಮಳೆ ಜೋರಾಗಿತ್ತು. ರಸ್ತೆಗಳಲ್ಲಿ ವಾಹನಗಳ ಸಂಚಾರ ಮಳೆಯಿಂದಾಗಿ ನಿಧಾನಗತಿಯಲ್ಲಿತ್ತು. ಇನ್ನೂ ಬೆಂಗಳೂರು ನಗರದಲ್ಲಿ ಹಗುರ ಮಳೆ ಆಗಲಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಮುಂದಿನ 48 ಗಂಟೆಗಳ ಕಾಲ ಭಾರೀ ಮಳೆ ಆಗಲಿದ್ದು, ಹವಾಮಾನ ಇಲಾಖೆ ಭಾನುವಾರ ಮತ್ತು ಸೋಮವಾರ ಎರಡು ದಿನ ಯೆಲ್ಲೋ ಅಲರ್ಟ್ ನೀಡಿದೆ.

ಗಾಳಿ ಸಹಿತ ಮಳೆ

ನಗರಾದ್ಯಂತ ಗರಿಷ್ಠ ತಾಪಮಾನ 29 ಹಾಗೂ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಮಳೆ ಪ್ರದೇಶಗಳಲ್ಲಿ ಬಿಸಿಲಿನ ದರ್ಶನ ಅಪರೂಪವಾಗಿದೆ. ಚಳಿ ಹಾಗೂ ತಂಪಿನ ವಾತಾವರಣ ಕಂಡು ಬಂದಿದೆ. ಇಂದು ಮತ್ತೆ ನಾಳೆ ದೇವನಹಳ್ಳಿ, ಚೆನ್ನರಾಯ ಪಟ್ಟಣ, ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಬೆಂಗಳೂರು ಗ್ರಾಮಾಂತರ ಭಾಗಗಳಲ್ಲಿ ಗಂಟೆಗೆ 40-50ಕಿಲೋ ಮೀಟರ್ ವೇಗದ ಗಾಳಿ ಸಹಿತ ಜೋರು ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಕರ್ನಾಟಕ ಕೇಂದ್ರ ಮುನ್ಸೂಚನೆ ನೀಡಿದೆ.

ರಾಹುಲ್‌ರದ್ದು ಹಿಟ್ ಅಂಡ್ ರನ್ ರೀತಿ ಆರೋಪ: ನಿಖಿಲ್

ಬೆಂಗಳೂರು: ರಾಹುಲ್ ಗಾಂಧಿ ಮತಗಳ್ಳತನ ಆರೋಪ ಹಿಟ್ ಅಂಡ್ ರನ್ ಕೇಸ್ ರೀತಿ ಆರೋಪಗಳು. ಇದರಲ್ಲಿ ಯಾವುದೇ ಉರಳಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿಗೆ ಆಗಮಿಸಿದ್ದ ರಾಹುಲ್ ಗಾಂಧಿ ಅವರು ಫ್ರೀಡಂ ಪಾರ್ಕ್‌ನಲ್ಲಿ ಮತಕಳ್ಳತನ ಬಗ್ಗೆ ಕೆಲವೊಂದು ಆಪಾದನೆಗಳ ಮಾಡಿದ್ದಾರೆ ಅವೆಲ್ಲವೂ ಹಿಟ್ ಅಂಡ್ ರನ್ ಆರೋಪ ಇದಕ್ಕೆ ಹುರುಳಿಲ್ಲ. ಚುನಾವಣಾ ಆಯೋಗ ಸ್ಪಷ್ಟವಾಗಿ ಹೇಳಿದೆ. ಆ ರೀತಿ ಏನಾದರೂ ಆಗಿದ್ದರೆ ಚುನಾವಣೆಯಾದ 45 ದಿನಗಳ ಪ್ರಕ್ರಿಯೆಯಲ್ಲಿ ಅವಕಾಶ ಇರುತ್ತೆ ಅದನ್ನು ಬಳಸಿಕೊಳ್ಳಬೇಕು. ಈಗ ಮತಕಳ್ಳತನ ಆಗಿದೆ, ಮತ್ತೊಂದು ಆಗಿದೆ ಅಂತ ಚರ್ಚೆ ಮಾಡಿದರೆ ಹೇಗೆ? ಘೋಷಣಾ ಪತ್ರಕ್ಕೆ ಸಹಿ ಹಾಕಿ ಏಕೆ ಆಯೋಗಕ್ಕೆ ಸಲ್ಲಿಸಲು ಮುಂದಾಗಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯಕ್ಕೆ ರಾಹುಲ್ ಗಾಂಧಿ ಅವರು ಸುಮ್ಮನೆ ಬಂದರು, ಮಾತಾಡಿದರು ಹೊರಟರು. ಮುಂದೆ ಬಿಹಾರ ಚುನಾವಣೆಯನ್ನು ಎದುರು ನೋಡ್ತಾ ಇದ್ದೇವೆ.ಈ ಚುನಾವಣೆಯನ್ನ ಮುಂದಿಟ್ಟುಕೊಂಡು, ಬಿಹಾರ ರಾಜ್ಯದ ಜನತೆಯನ್ನು ದಿಕ್ಕುತಪ್ಪಿಸಲು ರಾಹುಲ್ ಗಾಂಧಿ ಸೇರಿ ರಾಜ್ಯ ನಾಯಕರು ಹುನ್ನಾರ ಮಾಡ್ತಾ ಇದ್ದಾರೆ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ಇದು ಆರೋಪ ಅಷ್ಟೇ,ಆರೋಪದಲ್ಲಿ ಏನು ಹುರಳಿಲ್ಲ ಎಂದು ಸ್ಪಷ್ಟಪಡಿಸಿದರು.

ಈಗಾಗಲೇ ಮತಚೀಟಿಗೆ ಆಧಾರ್ ಜೋಡಿಸುವಂತೆ ಕುಮಾರಸ್ವಾಮಿ ಅವರು ಸಲಹೆ ನೀಡಿದ್ದಾರೆ. ಮಹದೇವಪುರ ಕ್ಷೇತ್ರದ ಬಗ್ಗೆ ರಾಹುಲ್ ಮಾಡಿರುವ ಆರೋಪಕ್ಕೆ ಅರವಿಂದ ಲಿಂಬಾವಳಿ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ನುಲಿಯ ಚಂದಯ್ಯ ಜಯಂತಿಯಲ್ಲಿ ತಂಗಡಗಿ ಅಭಿಮತ

ಯಾರಿಗೂ ಅನ್ಯಾಯವಾಗಲು ಸಿಎಂ ಬಿಡಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಳ ಮೀಸಲಾತಿ ನೀಡುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಸರಕಾರಕ್ಕೆ ಸಲ್ಲಿಸಿರುವ ವರದಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿದ್ದು, ಮುಖ್ಯಮಂತ್ರಿಗಳು ಯಾವ ಸಮುದಾಯಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ, ಎಲ್ಲರಿಗೂ ನ್ಯಾಯ ಕೊಡಿಸಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ ಅವರು, ಭೋವಿ, ಕೊರಮ, ಕೊರಚ ಹಾಗೂ ಲಂಬಾಣಿ ಸಮುದಾಯಗಳೊಂದಿಗೆಯೇ ನಾನಿದ್ದೇನೆ. ನಾವು ಒಂದೇ ತಕ್ಕಡಿಯಲ್ಲಿದ್ದೇವೆ. ಒಳ ಮೀಸಲಾತಿ ವಿಚಾರವಾಗಿ ಯಾವ ಸಮುದಾಯದವರು ಕೂಡ ಆತಂಕಪಡುವ ಅಗತ್ಯವಿಲ್ಲ ಎಂದರು. ಕಳೆದ ವರ್ಷದ ಜಯಂತಿ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊರಮ-ಕೊರಚ ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪನೆ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ 100*200 ಅಳತೆಯ ನಿವೇಶನವನ್ನು ಉಚಿತವಾಗಿ ನೀಡುವ ಭರವಸೆ ನೀಡಿದ್ದರು. ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ಮತ್ತೊಮ್ಮೆ ತಂದು ಭರವಸೆ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು. ನಮ್ಮ ಸರಕಾರ ತುಳಿತಕ್ಕೆ ಒಳಗಾದ ಸಮುದಾಯದವರ ಪರ ಇದೆ. ನಾನು ಇಲಾಖೆ ಸಚಿವನಾದ ಬಳಿಕ ಬಸವರಾಜ್ ಭಜಂತ್ರಿ ಅವರಿಗೆ ಸಂಗೀತ ವಿದ್ವಾನ್ ಪ್ರಶಸ್ತಿ, ನಿಂಗಪ್ಪ ಭಜಂತ್ರಿ ಅವರಿಗೆ ಜಾನಪದ ಪ್ರಶಸ್ತಿ ಹಾಗೂ ಬಾಗಲಕೋಟೆಯ ಬಸಪ್ಪ ಭಜಂತ್ರಿ ಅವರಿಗೆ ಟಿ.ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ನೀಡಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಜಿ ಚಂದ್ರಣ್ಣ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ವೆಂಕಟೇಶ್, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ, ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಮುನಿರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ, ಮುಖಂಡರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ನುಲಿ ಯ ಚಂದಯ್ಯ ಜಯಂತಿಯನ್ನು ಸಚಿವ ಶಿವರಾಜ್ ತಂಗಡಗಿ ಉದ್ಘಾಟಿಸಿದರು.

ಸನಾದಿ ಅಪ್ಪಣ್ಣ ಸಮಾಧಿ ಪ್ರವಾಸಿ ತಾಣ

ನಿಮ್ಮ ಸಮುದಾಯಕ್ಕೆ ವಿಧಾನ ಪರಿಷತ್ ಸದಸ್ಯ ಸ್ಥಾನ ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ. ಸಮುದಾಯ ಸಂಘಟನೆಯಾಗಿ ಸರಕಾರಕ್ಕೆ ತಮ್ಮ ಮನವಿಯನ್ನು ಸಲ್ಲಿಸಬೇಕು. ನಿಮ್ಮ ಸಮುದಾಯ ಸಂಘಟನೆ ಆಗದಿದ್ದಲ್ಲಿ, ಅಭಿವೃದ್ಧಿ ಸಾಧ್ಯವಿಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿರುವ ಶೆಹನಾಯಿ ವಾದಕ ಸನಾದಿ ಅಪ್ಪಣ್ಣ ಅವರ ಸಮಾಧಿಯನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ತಾಣವಾಗಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧ ಬಾಗಲಕೋಟೆ ಜಿಲ್ಲಾಧಿಕಾರಿ ಅವರಿಗೆ ಪತ್ರ ಬರೆದಿದ್ದು, ಮರು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು.

ನುಲಿಯ ಚಂದಯ್ಯ ಕಾಯಕಯೋಗಿ

ನುಲಿಯ ಚಂದಯ್ಯ ಕಾಯಕಯೋಗಿ. ಅವರು ಬಾಳಿದ ಬಾಳು, ಬೋಧಿಸಿದ ನೀತಿ, ರಚಿಸಿದ ವಚನಗಳು ಸರ್ವಕಾಲಕ್ಕೂ ಸರ್ವಸ್ಥಳಕ್ಕೂ ಸಲುವಂತಹದು. ಕಾಯಕ ಹಾಗೂ ದಾಸೋಹದ ತತ್ವವನ್ನು ನುಲಿಯ ಚಂದಯ್ಯ ಪ್ರತಿಪಾದಿಸಿದ್ದರು. ನಾವು ಅವರ ತತ್ವ ಚಿಂತನೆಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಸಚಿವ ಶಿವರಾಜ್ ತಂಗಡಗಿ ಸಲಹೆ ನೀಡಿದರು.

ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಟೀಕೆ

ರಾಹುಲ್ ಕಾಂಗ್ರೆಸ್‌ಗೆ ಮಾರಕ

ಬೆಂಗಳೂರು: ಭಾರತದ ಲೋಕಸಭೆಯ ಒಂದು ದುರದೃಷ್ಟವಂತೆ ರಾಹುಲ್ ಗಾಂಧಿಯವರು ವಿಪಕ್ಷ ನಾಯಕರಾಗಿದ್ದಾರೆ ಎಂದು ಶಾಸಕ ಎಸ್. ಸುರೇಶ್ ಕುಮಾರ್ ಟೀಕಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಹುಲ್ ಗಾಂಧಿಗೆ ರಚನಾತ್ಮಕತೆಯ ಅರಿವೇ ಇಲ್ಲ. ನಡೆ- ನುಡಿಯಲ್ಲಿ ವಿಶ್ವಾಸಾರ್ಹತೆ ಗಳಿಸದ ಒಬ್ಬ ವ್ಯಕ್ತಿ. ರಾಹುಲ್ ವಿಪಕ್ಷ ನಾಯಕರಾಗಿ ಮುಂದುವರೆಯುವರೆಗೆ ಕಾಂಗ್ರೆಸ್ಸಿಗೆ ಭವಿಷ್ಯವಿಲ್ಲ, ದೇಶಕ್ಕೆ ಹಿತವಿಲ್ಲ ಎಂದರು.ಸಿಗರೇಟ್ ಪೊಟ್ಟಣದಲ್ಲಿ ಧೂಮಪಾನ ಆರೋಗ್ಯಕ್ಕೆ ಹಾನಿಕರ ಎಂದು ಬರೆದಿ ರುತ್ತದೆ. ರಾಹುಲ್ ಗಾಂಧಿಯವರನ್ನು ಲೋಕಸಭೆ ವಿಪಕ್ಷ ನಾಯಕರಾಗಿ ಮುಂದು ವರೆಸುವುದು ಕಾಂಗ್ರೆಸ್ ಮಾತ್ರವಲ್ಲದೇ, ದೇಶಕ್ಕೆ ಹಾನಿಕರ. ಹಿಂದಿನ ಲೋಕಸಭಾ ವಿಪಕ್ಷ ನಾಯಕರ ಸಾಮರ್ಥ್ಯ, ತಿಳಿವಳಿಕೆ, ವಿಶ್ವಾಸಾರ್ಹತೆ, ಅಗತ್ಯ ಬಿದ್ದಾಗ ದೇಶಕ್ಕೆ, ಆಳುವ ಪಕ್ಷಕ್ಕೆ ಮಾರ್ಗದರ್ಶನ ಮಾಡುತ್ತಿದ್ದ ರೀತಿಯನ್ನು ಗಮನಿಸಿ ಹೋಲಿಸಿದರೆ, ಭಾರತದ ಲೋಕಸಭೆಯ ಒಂದು ದುರದೃಷ್ಟವಂತೆ ರಾಹುಲ್ ಗಾಂಧಿ ವಿಪಕ್ಷ ನಾಯಕರಾಗಿದ್ದಾರೆ ಎಂದು ಟೀಕಿಸಿದರು.

ಹಿಟ್ ಆಂಡ್ ರನ್, ಸ್ಪಿಟ್ ಆಂಡ್ ರನ್: ಫ್ರೀಡಂಪಾರ್ಕ್‌ನಲ್ಲಿ ರಾಹುಲ್ ಅವರು ಭಾಷಣ ಮಾಡಿದ್ದಾರೆ. ಅಲ್ಲಿಂದ ಚುನಾವಣಾ ಆಯೋಗದ ಕಚೇರಿಗೆ 500 ಮೀಟರ್ ದೂರ. ಭಾಷಣ ಮುಗಿಸಿ ಅಲ್ಲಿಗೆ ಹೋಗಿ ದೂರು ಕೊಡುವುದನ್ನು ಬಿಟ್ಟು ಹಿಟ್ ಆಂಡ್ ರನ್, ಸ್ಪಿಟ್ ಆಂಡ್ ರನ್ ಮಾಡಿದ್ದಾರೆ. ಕೇಳಿದರೆ ನಾನು ಪ್ರತಿಜ್ಞೆ ಪಡೆಯುವುದಿಲ್ಲ. ನನ್ನ ಶಬ್ದಗಳೇ ಪ್ರತಿಜ್ಞೆ ಎನ್ನುತ್ತಾರೆ. ಒಂದು ಕುಟುಂಬಕ್ಕೆ ಸೇರಿದವರು ಎಂಬ ಕಾರಣಕ್ಕೆ ರಾಹುಲ್ ಅವರ ಠೇಂಕಾರ, ಅಹಂಕಾರದ ನಡವಳಿಕೆ. ನಾನು ಚುನಾವಣಾ ಆಯೋಗಕ್ಕೆ ದೂರು ಕೊಡುವುದಿಲ್ಲ. ಚೀನಾದ ವಿಷಯ ಬಂದಾಗ ನೀವು ನಿಜವಾದ ಭಾರತೀಯರೇ ಎಂದು ಸುಪ್ರೀಂಕೋರ್ಟ್ ಕೇಳಿದರೆ, ಅವರ ಸಹೋದರಿ ಸುಪ್ರೀಂಕೋರ್ಟಿನವರು ಯಾರೆಂದು ಪ್ರಶ್ನಿಸುತ್ತಾರೆ ಎಂದು ಆಕ್ಷೇಪಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಎಸ್. ಸುರೇಶ್ ಕುಮಾರ್ ಮಾತನಾಡಿದರು.

> ರಾಹುಲ್ ಅವರು ಸಂವಿಧಾನ ಹಿಡಿದು ಓಡಾಡುತ್ತಾರೆ. ಅದು ಕವರ್ ಮಾತ್ರ ಸಂವಿಧಾನದ್ದು. ಒಳಗೆ ಖಾಲಿ ಹಾಳೆ ಎಂದು ನೋಡಿದವರು ಹೇಳಿದ್ದಾರೆ. ರಾಹುಲ್ ಗಾಂಧಿಯವರಿಗೆ ಸಂವಿಧಾನದ ಬಗ್ಗೆ ಮಾತನಾಡಲು ಎಷ್ಟು ಹಕ್ಕಿದೆ? ಇಂದಿರಾ ಗಾಂಧಿ ಹೆಸರು ಇಟ್ಟುಕೊಂಡು ರಾಜಕೀಯ ಮಾಡುವವರು. ಇವರು ಅವರ ಮೊಮ್ಮಗ. ಅವರ ಕಾಲದಲ್ಲಿ ಸಂವಿಧಾನಕ್ಕೆ ಆದಷ್ಟು ಅಪಚಾರ ಇಡೀ 70 ವರ್ಷದಲ್ಲಿ ಆಗಿಲ್ಲ.
>
> – ಸುರೇಶ್ ಕುಮಾರ್, ಮಾಜಿ ಸಚಿವ

ಸಮಾಚಾರ ಸಣ್ಣದಲ್ಲ

ಟಾರ್ಗೆಟ್ ಮಾಡಿದವನ ಬಿಟ್ಟು ಮತ್ತೊಬ್ಬನ ಹತ್ಯೆ

ಮಂಡ್ಯ: ವ್ಯಕ್ತಿಯೊಬ್ಬ ಧರಿಸಿದ್ದ ವೈಟ್ ಶರ್ಟ್‌ನಿಂದ ಟಾರ್ಗೆಟ್ ಮಾಡಿದವನನ್ನ ಬಿಟ್ಟು ಮತ್ತೊಬ್ಬನನ್ನು ಹತ್ಯೆಗೈದಿ ರುವ ಘಟನೆ ಮದ್ದೂರು ತಾಲೂ ಕಿನ

ಹೆಮ್ಮನಹಳ್ಳಿ ರಸ್ತೆ ಬಳಿ ನಡೆದಿದೆ. ವಡ್ಡರಹಳ್ಳಿ ಗ್ರಾಮದ ಅರುಣ್ (34) ಕೊಲೆಯಾದ ದುರ್ದೈವಿ. 8-10 ಮಂದಿ ದುಷ್ಕರ್ಮಿಗಳು ಸೇರಿ ಅರುಣ್‌ನನ್ನು ಲಾಂಗು, ಮಚ್ಚು, ಡ್ರ್ಯಾಗರ್‌ನಿಂದ ಚುಚ್ಚಿ ಚುಚ್ಚಿ ಕೊಲೆ ಮಾಡಿದ್ದಾರೆ. ಮೃತ ಅರುಣ್ ಸ್ನೇಹಿತ ಸೂರ್ಯ, ಸಹೋದರ ಉಮೇಶ್ ಹಾಗೂ ಸಂಬಂಧಿ ದೇವರಾಜ್ ಜತೆಗೆ ಬಾರ್‌ನಲ್ಲಿ ಪಾರ್ಟಿ ಮಾಡ್ತಿದ್ದ. ವಿಕಾಸ್ ನೊಂದಿಗೆ ಸೂರ್ಯ ಕಿರಿಕ್ ತೆಗೆದಿದ್ದ. ಅರುಣ್ ಇವರಿಬ್ಬರ ಜಗಳ ಬಿಡಿಸಿ ಮತ್ತೆ ಪಾರ್ಟಿ ಮುಂದುವರಿಸಿದ್ದ. ಕೆಲ ಹೊತ್ತಿನ ಬಳಿಕ ದುಷ್ಕರ್ಮಿಗಳು ಸೂರ್ಯನ ಮೇಲೆ ಅಟ್ಯಾಕ್‌ಗೆ ಯತ್ನಿಸಿದ್ದರು, ಈ ವೇಳೆ ಸೂರ್ಯ ಮತ್ತು ಟೀಂ ಎಸ್ಕೇಪ್ ಆಯಿತು. ಸೂರ್ಯ ವೈಟ್ ಶರ್ಟ್ ಹಾಕಿ ದ್ದಾನೆಂದು ವಿಕಾಸ್ ಸುಳಿವು ಕೊಟ್ಟಿದ್ದ. ಅದೇ ಸಮಯದಲ್ಲಿ ಅರುಣ್ ಕೂಡ ವೈಟ್ ಶರ್ಟ್ ಹಾಕಿದ್ದ. ಹಾ ಗಾಗಿ ವೈಟ್ ಶರ್ಟ್ ಹಾಕಿದ್ದ ಅರುಣ್‌ನನ್ನೇ ಸೂರ್ಯ ಎಂದು ತಿಳಿದು ಕೊಲೆ ಮಾಡಲಾಗಿದೆ.

ಧಾರ್ಮಿಕ ಸಂಸ್ಥೆಗಳ ಹೆಸರು ಕೆಡಿಸುವ ಹುನ್ನಾರ

ಹಾವೇರಿ: ಕೆಲವರು ಹಿಂದುತ್ವಕ್ಕೆ ಕಂಟಕ ತರಬೇಕು.

ಧಾರ್ಮಿಕ ಸಂಸ್ಥೆಗಳ ಮೇಲೆ ಹಿಂದುತ್ವದ ಸಂಘ ಸಂಸ್ಥೆಗಳಿಗೆ, ದೇಗುಲಗಳಿಗೆ ಕೆಟ್ಟದ್ದು ಮಾಡಬೇಕೆಂದು ಪಿತೂರಿ ಮಾಡುತ್ತಿದ್ದಾರೆ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಪರವಾಗಿ ಮಾತನಾಡಿದ ಅವರು, ವಿದೇಶಗಳಲ್ಲಿ 10 ವರ್ಷಗಳಲ್ಲಿ ಭಾರತದ ಗೌರವ ಹೆಚ್ಚಾಗಿದೆ. ಹಿಂದುತ್ವ ಬೆಳೆಯುತ್ತಿದೆ. ಇಡೀ ಜಗತ್ತೇ ಹಿಂದುತ್ವ ಆಗಬಹುದು ಎಂಬ ಭಯ ಕೆಲವರಿಗೆ ಕಾಡುತ್ತಿದೆ. ಭಾರತದ ಯಾವೊಬ್ಬ ಹಿಂದೂ ಗುರುಗಳು ನಾವು ಮತಾಂತರ, ಧರ್ಮಾಂತರ ಮಾಡಲ್ಲ. ಧರ್ಮದ ತತ್ವ ಸಿದ್ಧಾಂತಗಳನ್ನು ಬಿತ್ತುತ್ತಿದ್ದೇವೆ. ಧರ್ಮಸ್ಥಳ, ಶಬರಿಮಲೆ, ಇನ್ನೂ ಅನೇಕ ಕಡೆ ಆಧ್ಯಾತ್ಮ ಗುರುಗಳ ಒಳ್ಳೆ ಕಾರ್ಯಗಳನ್ನು ಬಿಟ್ಟು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಅಪಖ್ಯಾತಿ ತರುವುದು, ನಕಾರಾತ್ಮಕವಾಗಿ ಬಿಂಬಿಸುವ ಕೆಲಸ ನಡೆದಿದೆ. ನಾವೆಲ್ಲಾ ಹಿಂದೂಗಳು ಅವರ ಜತೆ ಇರಬೇಕು ಎಂದರು.

ಪಕ್ಕದ ಮನೆಗೆ ಯಾರೋ ಬೆಂಕಿ ಹಚ್ಚಿದ್ದಾರೆಂದರೆ ಅದನ್ನು ಕಾಯಿಸಿಕೊಳ್ಳಲು ಹೋಗಬೇಡಿ. ನಾಳೆ ಗಾಳಿ ಬಿಟ್ಟಾಗ ನಿಮ್ಮ ಮನೆಗೂ ಬೆಂಕಿ ಆವರಿಸಬಹುದು. ಇವತ್ತು ಅವರಿಗೆ ಆಗಿದೆ, ನಾಳೆ ನಮಗೂ ಆಗಬಹುದು. ನಾವೆಲ್ಲರೂ ಒಂದಾಗ ಬೇಕಿದೆ. ಇವತ್ತು ಹೆಗ್ಗಡೆಯವರಿಗೆ ಬಂದಿರಬಹುದು, ನಾಳೆ ನಮಗೂ ಆಗಬಹುದು. ನಮಗೂ ಹೆಗ್ಗಡೆಯವರಿಗೂ ಏನು ಸಂಬಂಧ ಎಂದು ಕುಳಿತರೆ ನಾಳೆ ನಮಗೂ ಬರಬಹುದು. ತಪ್ಪಾಗಿದ್ದರೆ ಕಾನೂನಿದೆ, ಕೋರ್ಟ್ ಇದೆ, ನಮಗೆ ನ್ಯಾಯಾಲಯ ದೊಡ್ಡದು. ಅದನ್ನು ತೀರ್ಮಾನ ಮಾಡಲು ನಾವ್ಯಾರು ಎಂದರು.

ಮೂರು ವರ್ಷಕ್ಕೆ ಪದವಿ, ಯುಜಿಸಿ ನಿಯಮಕ್ಕೆ ವಿರುದ್ಧ | ಎನ್‌ಇಪಿ-ಎಸ್‌ಇಪಿ ನಡುವೆ ವಿದ್ಯಾರ್ಥಿಗಳಿಗೆ ಸಮಸ್ಯೆ?

ರಾಜ್ಯ ಶಿಕ್ಷಣ ನೀತಿ: ಉನ್ನತ ಶಿಕ್ಷಣವೇ ತಲೆಬಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರೀಯ ಶಿಕ್ಷಣ ನೀತಿಗೆ ಸಡ್ಡು ಹೊಡೆದು ಕರ್ನಾಟಕ ಸರಕಾರ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಲು ಮುಂದಾಗಿದ್ದು, ಇದಕ್ಕೆ ಬೇಕಿದ್ದ ವರದಿ ಮುಖ್ಯಮಂತ್ರಿಗಳ ಕೈಸೇರಿದೆ. ಈ ಶಿಕ್ಷಣ ನೀತಿ ಜಾರಿಗೆ ಮಾಡಬೇಕೇ ಬೇಡವೇ ಎನ್ನುವ ತೀರ್ಮಾನ ಕೈಗೊಳ್ಳುವ ಮೊದಲೇ ಉನ್ನತ ಶಿಕ್ಷಣದಲ್ಲಿ ಎಸ್‌ಇಪಿ ಕಾರ್ಯಸಾಧುವೇ ಎನ್ನುವ ಅನುಮಾನ ಶುರುವಾಗಿದೆ.

ಹೌದು, ರಾಜ್ಯ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ರಾಜ್ಯ ಶಿಕ್ಷಣ ನೀತಿಯನ್ನು ಒಂದರಿಂದ ದ್ವಿತೀಯ ಪಿಯುಸಿ ತನಕ ಜಾರಿಗೊಳಿಸುವುದು ಬಹುದೊಡ್ಡ ಸವಾಲಿನ ಕೆಲಸವಲ್ಲ. ಆದರೆ ಪದವಿಯ ಬಳಿಕ ಬಹುತೇಕ ಕೋರ್ಸ್‌ಗಳು ಯುಜಿಸಿಯ 'ಮಾರ್ಗಸೂಚಿ'ಯಂತೆ ನಡೆಯುವುದರಿಂದ, ರಾಜ್ಯ ಶಿಕ್ಷಣ ನೀತಿ ಜಾರಿಯಾದರೆ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾಲಯಗಳಿಗೆ ಸಮಸ್ಯೆಯಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಈಗಾಗಲೇ ಕರ್ನಾಟಕ ಸೇರಿದಂತೆ ದೇಶಾದ್ಯಂತ ಎನ್‌ಇಪಿ ಜಾರಿಗೊಳಿಸಲಾಗಿದ್ದು, ಯುಜಿಸಿ ಎನ್‌ಇಪಿಗೆ ಸರಿಹೊಂದುವ ರೀತಿಯಲ್ಲಿ ಮಾರ್ಗಸೂಚಿ ಯನ್ನು ಸಿದ್ಧಪಡಿಸಿದೆ. ಆದರೆ ಕರ್ನಾಟಕದಲ್ಲಿ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಿದರೆ, ಯುಜಿಸಿಯ ಹಲವು ಮಾರ್ಗಸೂಚಿಗಳನ್ನು ಪಾಲಿಸಲು ಸಾಧ್ಯವಿಲ್ಲ. ಇದರೊಂದಿಗೆ ಕೇಂದ್ರ ಸೇವೆಗೆ ತೆರಳಲು ಬಯಸುವ ಅಭ್ಯರ್ಥಿಗಳಿಗೂ ಭಾರಿ ಸಮಸ್ಯೆಯಾಗಲಿದೆ ಎನ್ನುವುದು ಹಲವರ ವಾದವಾಗಿದೆ. ಉದಾಹರಣೆಗೆ, ಕೇಂದ್ರ ಸರಕಾರದ ಎನ್‌ಇಪಿಯಲ್ಲಿ ಪದವಿಯಲ್ಲಿ ನಾಲ್ಕು ವರ್ಷದ ಪದವಿಯನ್ನು ಆರಂಭಿಸಲಾಗಿತ್ತು. ಆದರೀಗ ಎಸ್‌ಇಪಿಯಲ್ಲಿ ಪದವಿಗೆ ಮೂರು ವರ್ಷ ಸಾಕೆನ್ನುವ ಸಲಹೆ ನೀಡಲಾಗಿದೆ. ಒಂದು ವೇಳೆ ಇದು ಜಾರಿಗೆ ಬಂದರೆ, ವಿದ್ಯಾರ್ಥಿಗಳು ಯಾವುದನ್ನು ಪಾಲಿಸಬೇಕು? ಎನ್ನುವ ಗೊಂದಲ ಶುರುವಾಗಲಿದೆ. ಇನ್ನು ಯುಜಿಸಿ, ನ್ಯಾಕ್ ಸಂಸ್ಥೆಗಳಿಂದ ವಿವಿ ಹಾಗೂ ಕಾಲೇಜುಗಳಿಗೆ ಮಾನ್ಯತೆ ಹಾಗೂ ಅನುದಾನಗಳು ಬರುತ್ತವೆ. ಆದರೆ ಕೇಂದ್ರ ಮಾರ್ಗಸೂಚಿ ಪಾಲಿಸದಿದ್ದರೆ, ಅನುದಾನ ಹಾಗೂ ಮಾನ್ಯತೆ ನೀಡದಿದ್ದರೆ ಏನು ಮಾಡಬೇಕು ಎನ್ನುವ ಗೊಂದಲಕ್ಕೆ ಸರಕಾರ ಉತ್ತರ ನೀಡಬೇಕಿದೆ.

ಅನುಷ್ಠಾನ ಕಷ್ಟವೆನ್ನುತ್ತಿರುವ ತಜ್ಞರು: ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದ ಹಲವರ ಪ್ರಕಾರ, ಉನ್ನತ ಶಿಕ್ಷಣದಲ್ಲಿ ಎಸ್‌ಇಪಿ ಜಾರಿ ಕಷ್ಟಸಾಧ್ಯ. ಸರಕಾರಿ ವಿಶ್ವವಿದ್ಯಾಲಯ ಗಳಿಗೆ ಹೆಚ್ಚು ಅನುದಾನ ರಾಜ್ಯ ಸರಕಾರಗಳು ನೀಡಿ ದರೂ, ಯುಜಿಸಿ ಮಾರ್ಗಸೂಚಿ ಗಳನ್ನೇ ವಿವಿಗಳು ಪಾಲಿಸುತ್ತವೆ. ಖಾಸಗಿ ವಿಶ್ವ ವಿದ್ಯಾಲಯಗಳಲ್ಲಿ ಬಹುತೇಕರು ಕೇಂದ್ರದ ಮಾರ್ಗ ಸೂಚಿ ಪಾಲಿಸುವುದರಿಂದ ಎಸ್‌ಇಪಿ ಪಾಲನೆಯಾಗುವುದಿಲ್ಲ. ಒಂದರಿಂದ ದ್ವಿತೀಯ ಪಿಯುಸಿವರೆಗೆ ಎಸ್‌ಇಪಿ ಮಾಡುವುದಕ್ಕೆ ಹೆಚ್ಚು ಅಡ್ಡಿಗಳಿಲ್ಲ. ಆದರೆ ಉನ್ನತ ಶಿಕ್ಷಣಕ್ಕೆ ಜಾರಿಗೊಳಿಸುವ ಮೊದಲು ಯೋಚಿಸುವುದು ಸೂಕ್ತ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನೂತನ ವಿವಿ ಆರಂಭಕ್ಕೆ ನಿರ್ದಿಷ್ಟ ಸಮಿತಿ

ಕಳೆದ ಸರಕಾರದ ಅವಧಿಯಲ್ಲಿ 6 ವಿವಿಗಳನ್ನು ಆರಂಭಿಸಿ, ಸೂಕ್ತ ಅನುದಾನ ನೀಡದೇ ಭಾರಿ ಗೊಂದಲ ಆಗಿತ್ತು. ಇದನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಶಿಕ್ಷಣ ನೀತಿಯಲ್ಲಿ ಇನ್ನು ಮುಂದೆ ಯಾವುದೇ ವಿಶ್ವವಿದ್ಯಾ ಲಯಗಳನ್ನು ಆರಂಭಿಸುವ ಮೊದಲು ಸೂಕ್ತ ಅಧ್ಯಯನ ನಡೆಸಬೇಕು. ಆರ್ಥಿಕ ವಾಗಿ, ಶೈಕ್ಷಣಿಕವಾಗಿ ವಿಶ್ವವಿದ್ಯಾಲಯದ ಅಗತ್ಯವಿದೆಯೇ ಎನ್ನುವ ಬಗ್ಗೆ ಪರಿಶೀ ಲಿಸಲು ಒಂದು ಸಮಿತಿಯನ್ನು ರಚಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಇದರೊಂದಿಗೆ ಎಲ್ಲ ವಿಭಾಗಗಳಲ್ಲಿ ಉನ್ನತ ಶಿಕ್ಷಣ ಶಿಕ್ಷಕರ ಅಕಾಡೆಮಿ ಕೇಂದ್ರ ಸ್ಥಾಪಿಸಿ, ಶಿಕ್ಷಕರಿಗೆ ಕಾಲಕಾಲಕ್ಕೆ ತರಬೇತಿ ನೀಡಬೇಕು. ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಭಾಷಾ ಬೋಧನೆ ಮತ್ತು ತರಬೇತಿಗಾಗಿ ಮುಕ್ತ ಕೇಂದ್ರ ತೆರೆಯಲು ಶಿಫಾರಸು ಮಾಡಲಾಗಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೂ ಕೆಇಎ ಪರೀಕ್ಷೆ

ಇಷ್ಟು ದಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕ ಅಧಿಕಾರವನ್ನು ಆಯಾ ವಿವಿಗಳಿಗೆ ನೀಡಲಾಗಿತ್ತು. ಇದರಿಂದ ಭ್ರಷ್ಟಾಚಾರದ ಆರೋಪಗಳು ಕೇಳಿಬರುತ್ತಿತ್ತು. ರಾಜ್ಯ ಶಿಕ್ಷಣ ನೀತಿಯಲ್ಲಿ, ವಿವಿಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿಗೆ ಕೆಇಎ ಮೂಲಕ ಲಿಖಿತ ಪರೀಕ್ಷೆ, ಸಂದರ್ಶನ ನಡೆಸಲು ಶಿಫಾರಸು ಮಾಡಿದೆ. ಸರಕಾರಿ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಕಾಲೇಜು ಶಿಕ್ಷಣ ಆಯ್ಕೆ ಸಮಿತಿ ಮಾಡಬೇಕು. ಅರ್ಹ ಯುಜಿಸಿ ಶಿಕ್ಷಕರಿಂದ ಅರ್ಜಿ ಸ್ವಿಕರಿಸಬೇಕು ಎಂದು ಹೇಳಲಾಗಿದೆ.

ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮೀಜಿಗಳಿಂದ ಪ್ರದಾನ | ಮಠದಲ್ಲಿ ಸುಧಾ ಮೂರ್ತಿ ಸೇವೆ

ನಿರ್ಮಲಾ ಸೀತಾರಾಮನ್‌ಗೆ ಭಾರತ ಲಕ್ಷ್ಮಿ ಬಿರುದು

ಉಡುಪಿ: ಇಲ್ಲಿನ ಶ್ರೀ ಕೃಷ್ಣ ಮಠದಲ್ಲಿ ನಡೆದ ನೂತನ



ಯಾಳಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಪರ್ಯಾಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಗಳು ಭಾರತ ಲಕ್ಷ್ಮಿ ಎಂಬ ಗೌರವ ಬಿರುದನ್ನು ಘೋಷಿಸಿದರು. ಅದಮಾರು ಮಠದ ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮೀಜಿಗಳು ಬಿರುದು ಪ್ರದಾನ ಮಾಡಿದರು.

ಈ ವೇಳೆ ನಿರ್ಮಲಾ ಸೀತಾರಾಮನ್ ಅವರು ಮಾತನಾಡಿ, ಶ್ರೀ ಕೃಷ್ಣನ ಸಂದೇಶಗಳನ್ನು ಪಠಿಸುವಲ್ಲಿ ಪುತ್ತಿಗೆ ಮಠದ ಕೊಡುಗೆ ಅನನ್ಯ. ಪ್ರತಿದಿನ ಜನರಿಂದ ಭಗವದ್ಗೀತೆ ಬರೆಯಿಸುವುದು ಒಂದು ಮಹಾಯಜ್ಞದಂತೆ ನಡೆಯುತ್ತಿದೆ. 1ಕೋಟಿ ಭಗವದ್ಗೀತೆಯ ಬರಹಗಳ ಸಂಗ್ರಹ ಶ್ಲಾಘನೀಯ ಕಾರ್ಯದಿಂದ ಶ್ರೀ ಕೃಷ್ಣನ ಸಂದೇಶವು ಪ್ರಪಂಚದಾದ್ಯಂತ ಹರಡಲಿದೆ.

ಕೃಷ್ಣ ಭಗವಂತನು ಭಾರತ ದೇಶವನ್ನು ಆಶೀರ್ವದಿಸಲಿ. ನಮ್ಮ ಪ್ರಧಾನ ಮಂತ್ರಿಗಳಿಗೆ ಶ್ರೀ ಕೃಷ್ಣನ ಆಶೀರ್ವಾದ ದೊರಕಲಿ. ನಾವು ಭಾರತಮಾತೆಯನ್ನು ದೇವಿಯಂತೆ ಭಾವಿಸುವ ಜನರು. ಪ್ರಧಾನ ಮಂತ್ರಿಗಳು ಸ್ವಾರ್ಥವಿಲ್ಲದೆ ದೇಶ ಸೇವೆ ಮಾಡುತ್ತಿದ್ದಾರೆ ಎಂದರು.

ಪಾತ್ರೆ ಸ್ವಚ್ಛಗೊಳಿಸಿದ ನಿರ್ಮಲಾ ಸೀತಾರಾಮನ್

ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯೆ ಹಾಗೂ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾ ಮೂರ್ತಿ ಕೂಡ ಹಾಜರಿದ್ದರು. ಇಬ್ಬರೂ ಚಂದ್ರ ಶಾಲೆಯಲ್ಲಿ ಕುಳಿತು ದೇವರ ಸೇವೆಗೆ ಹೂವು ಕಟ್ಟಿದರು. ಸುಧಾ ಮೂರ್ತಿ ಸ್ವತಃ ಹೂಮಾಲೆ ತಯಾರಿಸಿ ಕೃಷ್ಣನಿಗೆ ಅರ್ಪಿಸಿದರು. ನಿರ್ಮಲಾ ಸೀತಾರಾಮನ್ ಅವರು ಸಾಮಾನ್ಯ ಗೃಹಿಣಿಯರಂತೆ ದೇವರ ನೈವೇದ್ಯದ ಪಾತ್ರೆಗಳನ್ನು ತೊಳೆದು ಸ್ವಚ್ಛಗೊಳಿಸಿದರು. ಬಳಿಕ ಅನ್ನಬ್ರಹ್ಮನ ಸನ್ನಿಧಿಯಲ್ಲಿ ಆಹಾರ ತಯಾರಿಯಲ್ಲೂ ಭಾಗವಹಿಸಿದರು. ಶ್ರೀ ಕೃಷ್ಣ ಮಠದ ವಿಶೇಷ ಧಾರ್ಮಿಕ ಕಾರ್ಯಕ್ರಮದಲ್ಲಿ ಅವರು ತೋರಿಸಿದ ಸರಳತೆ ಮತ್ತು ಭಕ್ತಿ ಎಲ್ಲರ ಮನಸೂರೆಗೊಂಡಿತು.

ರಾಜಧಾನಿಗಿಂದು ಮೋದಿ

← ಮೊದಲಪುಟದಿಂದ

ಯಾವುದೇ ರೋಡ್‌ಶೋಗೆ ಅವಕಾಶವಿಲ್ಲ: ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಆಗಮಿಸುವುದು ಖಚಿತವಾಗುತ್ತಿದ್ದಂತೆ, ಅರ್ಧ ಕಿಲೋ ಮೀಟರ್ ರೋಡ್ ಶೋ ನಡೆಸಲಿದ್ದಾರೆ ಎನ್ನಲಾಗಿತ್ತು. ಬಿಜೆಪಿ ನಾಯಕರು ಆರಂಭದಲ್ಲಿ ರೋಡ್ ಶೋಗೆ ಪೂರ್ವಭಾವಿ ಸಭೆಗಳನ್ನು ನಡೆಸಿದ್ದರು. ಆದರೀಗ ಯಾವುದೇ ಅಧಿಕೃತ ರೋಡ್ ಶೋನಲ್ಲಿ ಮೋದಿ ಭಾಗವಹಿಸುತ್ತಿಲ್ಲ. ಬದಲಿಗೆ, ರಸ್ತೆ ಮೂಲಕ ತೆರಳುವ ಸಮಯದಲ್ಲಿ ಮೇಖ್ರಿ ವೃತ್ತ, ಚಾಲುಕ್ಯ ವೃತ್ತ ಮತ್ತು ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಸ್ವಾಗತ ಕೋರಲಿದ್ದಾರೆ. ರಾಗಿಗುಡ್ಡಕ್ಕೆ ತೆರಳುವ ಸಮಯದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್ ಎಂಡ್ ವೃತ್ತ ಮತ್ತು ರಾಗಿಗುಡ್ಡ ಮೆಟ್ರೋ ನಿಲ್ದಾಣದ ಬಳಿ ಪ್ರಧಾನಿಯವರನ್ನು ಬಿಜೆಪಿ ಕಾರ್ಯಕರ್ತರು ಸ್ವಾಗತಿಸಲಿದ್ದಾರೆ ಎಂದು ತಿಳಿದುಬಂದಿದೆ.

ಭಾರಿ ಭದ್ರತೆ: ಬೆಂಗಳೂರಿಗೆ ಮೋದಿ ಆಗಮನದ ಹಿನ್ನೆಲೆ 25 ಡಿಸಿಪಿಗಳು, 52 ಎಸಿಪಿ, 200 ಪಿಐ, 650 ಪಿಎಸ್‌ಐ, 1000 ಎಎಸ್‌ಐ, ಪುರುಷ ಹಾಗೂ ಮಹಿಳಾ ಕಾನ್ಸ್‌ಟೇಬಲ್‌ಗಳು 7,000 ಸೇರಿದಂತೆ ಸುಮಾರು 10 ಸಾವಿರ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ.

3ನೇ ಹಂತಕ್ಕೂ ಶಂಕುಸ್ಥಾಪನೆ

ಹಳದಿ ಮಾರ್ಗದ ಉದ್ಘಾಟನೆಯ ಜತೆಗೆ ಪ್ರಧಾನಿ ಮೋದಿ ಮೆಟ್ರೋದ 3ನೇ ಹಂತಕ್ಕೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಜೆ. ಪಿ. ನಗರ ಮೆಗಾಸಿಟಿ ಮಾಲ್‌ನಿಂದ ಕೆಂಪಾಪುರ (ಹೆಬ್ಬಾಳ) ನಡುವಣ ಆರೆಂಜ್ ಲೈನ್ ಮತ್ತು ಹೊಸಹಳ್ಳಿಯಿಂದ ಕಡಬಗೆರೆಗೆ ಸಂಪರ್ಕ ಕಲ್ಪಿಸಲಿರುವ ಬೂದು ಮಾರ್ಗದ 3ನೇ ಹಂತದ ಯೋಜನೆಗೆ 15,611 ಕೋಟಿ ರು. ವೆಚ್ಚ ಅಂದಾಜಿಸಲಾಗಿದೆ.

ಯಾವೆಲ್ಲ ಕಾರ್ಯಕ್ರಮಗಳಲ್ಲಿ ಭಾಗಿ?

- ಕೆಆರ್‌ಎಸ್ ರೈಲು ನಿಲ್ದಾಣದಲ್ಲಿ 3 ವಂದೇ ಭಾರತ್ ರೈಲುಗಳಿಗೆ ಚಾಲನೆ
- ರಾಗಿಗುಡ್ಡ ಮೆಟ್ರೋ ನಿಲ್ದಾಣದಲ್ಲಿ ಹಳದಿ ಮಾರ್ಗದ ಮೆಟ್ರೋಗೆ ಚಾಲನೆ
- ರಾಗಿಗುಡ್ಡ ನಿಲ್ದಾಣದಿಂದ ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣದವರೆಗೆ ಮೆಟ್ರೋ ಸಂಚಾರ

ಭಾನುವಾರ ಮೆಟ್ರೋ ಹಳದಿ ಮಾರ್ಗ ಉದ್ಘಾಟನೆಯಾಗುತ್ತಿದೆ. ಆದರೆ, ಬಿಜೆಪಿ ನಾಯಕರಾದ ವಿಜಯೇಂದ್ರ, ತೇಜಸ್ವಿ ಸೂರ್ಯ ಸೇರಿದಂತೆ ಅನೇಕ ಸಂಸದರು ಇಡೀ ಮೆಟ್ರೋ ಯೋಜನೆಯನ್ನು ಬಿಜೆಪಿಯ ಕೇಂದ್ರ ಸರಕಾರವೇ ಮಾಡಿರುವಂತೆ ಪ್ರಚಾರ ಪಡೆಯುತ್ತಿದ್ದಾರೆ. ಜತೆಗೆ ರಾಜ್ಯ ಸರಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಇವರಿಗೆ ಮೆಟ್ರೋ ಆರಂಭವಾಗಿದ್ದು ಯಾವಾಗ ಎಂಬ ಇತಿಹಾಸವೇ ಗೊತ್ತಿಲ್ಲ. ಬಿಜೆಪಿಯದ್ದು ಕೆಲಸಕ್ಕಿಂತ ಪ್ರಚಾರವೇ ಜಾಸ್ತಿ

-**ರಾಮಲಿಂಗಾರೆಡ್ಡಿ**, ಸಾರಿಗೆ ಸಚಿವ

ಕೃತ್ಯದ ವಿಡಿಯೊ ಶೇರ್‌ಮಾಡಿ ರಾಕ್ಷಸ ವರ್ತನೆ | ಮೂವರ ಬಂಧನ

ಬುದ್ಧಿಮಾಂದ್ಯ ಯುವತಿ ಮೇಲೆ ಗ್ಯಾಂಗ್‌ರೇಪ್

ಹಾಸನ: ನಗರದಲ್ಲಿ ಬುದ್ಧಿಮಾಂದ್ಯ ಯುವತಿಯನ್ನು ಕರೆದೊಯ್ದು ಸಾಮೂಹಿಕವಾಗಿ ಅತ್ಯಾಚಾರ ನಡೆಸಿರುವ ಪೈಶಾಚಿಕ ಕೃತ್ಯ ನಡೆದಿದೆ. ಹೀನ ಕೃತ್ಯವನ್ನು ವಿಡಿಯೊ ಮಾಡಿ ಯುವತಿಯ ತಮ್ಮನ ಮೊಬೈಲ್‌ಗೆ ದುರುಳರು ರವಾನೆ ಮಾಡಿದ್ದಾರೆ.

ಈ ಸಂಬಂಧ ಸಂತ್ರಸ್ತ ಯುವತಿ ಸಹೋದರ ನೀಡಿದ ದೂರು ಆಧರಿಸಿ ಪೆನ್‌ಷನ್‌ಮೊಹಲ್ಲಾ ಠಾಣೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಮೆಕ್ಯಾನಿಕ್ ಕೆಲಸ ಮಾಡುವ ವಿಶೇಷ ಚೇತನರಾಗಿರುವ ದಂಪತಿ ಪುತ್ರಿ ಬುದ್ಧಿಮಾಂದ್ಯಳಾಗಿದ್ದು, ಮನೆಯಲ್ಲಿಯೇ ಇದ್ದಳು. 8 ದಿನಗಳ ಹಿಂದೆ ತಂದೆ, ತಮ್ಮ ಕೆಲಸಕ್ಕೆ ಹೋಗಿದ್ದರು. ಹಲವು ದಿನಗಳಿಂದ ಹೊಂಚು ಹಾಕಿ, ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಂದ ಮೂವರು ಆರೋಪಿಗಳು, ಯುವತಿಯನ್ನು ಕರೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ.

ಮಾತ್ರವಲ್ಲದೆ ವಿಡಿಯೊ ರೆಕಾರ್ಡ್ ಮಾಡಿ ವೈರಲ್ ಮಾಡಿದ್ದಾರೆ. ಶುಕ್ರವಾರ ರಾತ್ರಿ ಕೆಲಸ ಮುಗಿಸಿ ಮನೆಗೆ ಬಂದ ವೇಳೆ ತಂಗಿ ಅತ್ಯಾಚಾರ ವಿಡಿಯೊ ಯುವತಿ ಸಹೋದರನ ಮೊಬೈಲ್‌ಗೆ ಆತನ ಸ್ನೇಹಿತ ಕಳುಹಿಸಿದ್ದಾನೆ. ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಸಲೀ ಕಾರಣ ತಿಳಿದಿದೆ. ಈ ಸಂಬಂಧ ಅಬ್ದುಲ್ ಅಫ್ತಾಬ್, ರಾಜಿಕ್ ಪಾಷ, ಉಮ್ರಾನ್ ಮೇಲೆ ಪೊಲೀಸರಿಗೆ ದೂರಿ ನೀಡಿದ ಬಳಿಕ ಮೂವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಗಾಂಜಾ ತಡೆಗಟ್ಟಲು ಸ್ಥಳೀತಯರು ಒತ್ತಾಯ

ಹಾಸನ ನಗರದಲ್ಲಿ ಗಾಂಜಾ ಮಾರಾಟ ಹೆಚ್ಚಾಗಿದ್ದು, ಇದರಿಂದಾಗಿ ಅಕ್ರಮ ಚಟುವಟಿಕೆಗಳು ಹೆಚ್ಚಾಗಿವೆ. ನಶೆಯಲ್ಲಿಯೇ ದುರುಳರು ಗ್ಯಾಂಗ್ ರೇಪ್ ನಡೆಸಿದ್ದಾರೆ ಎನ್ನಲಾಗಿದೆ. ಮಾದಕ ತಡೆಗಟ್ಟಲು ಸ್ಥಳೀಯರು ಆಗ್ರಹಿಸಿದರು.

ರ‍್ಯಾಗಿಂಗ್‌ಗೆ ಬೇಸತ್ತು ವಿದ್ಯಾರ್ಥಿನಿ ಆತ್ಮಹತ್ಯೆ

ಬಾಗಲಕೋಟೆ: ಸಹಪಾಠಿಗಳು ರ‍್ಯಾಗಿಂಗ್ ಮಾಡಿದ್ದಕ್ಕೆ

ಮನನೊಂದು ಡೆತ್‌ನೋಟ್ ಬರೆದಿಟ್ಟು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ನಡೆದಿದೆ.

ಗುಳೇದಗುಡ್ಡ ಪಟ್ಟಣದ ಖಾಸಗಿ ಕಾಲೇಜಿನ ಬಿಎ ಅಂತಿಮ ವರ್ಷದ ವಿದ್ಯಾರ್ಥಿನಿ ಅಂಜಲಿ ಮುಂಡಾಸ (21) ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶುಕ್ರವಾರ ಕಾಲೇಜಿನಲ್ಲಿ ಸಹಪಾಠಿಗಳಾದ ವರ್ಷಾ ಹಾಗೂ ಪ್ರದೀಪ್ ಸೇರಿ ಅಂಜಲಿಗೆ ರ‍್ಯಾಗಿಂಗ್ ಮಾಡಿದ್ದರು. ಇದರಿಂದ ಮಾನಸಿಕ ಕಿರುಕುಳ ಅನುಭವಿಸಿದ್ದ ಅಂಜಲಿ, ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದಾಳೆ. ಈ ಸಂಬಂಧ ವರ್ಷಾ ಜಮ್ಮನಕಟ್ಟಿ ಹಾಗೂ ಪ್ರದೀಪ್ ಅಳಗುಂದಿ ಇನ್ನಿತರರ ಮೇಲೆ ಗುಳೇದಗುಡ್ಡ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಜಮೀನುಗಳಿಗೆ ನುಗ್ಗಿದ ನೀರು | ಬೆಳೆಗಳು ಜಲಾವೃತ, ಕೊಚ್ಚಿಹೋದ ರಸ್ತೆಗಳು

ರಾಜ್ಯದಲ್ಲಿ ಮತ್ತೆ ಮಳೆ ಅಬ್ಬರ

ಮಳೆಯಿಂದ ಚನ್ನಪಟ್ಟಣದ ಮುಖ್ಯರಸ್ತೆ ನದಿಯಂತಾಗಿರುವುದು.

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಮಳೆ ಅಬ್ಬರಿಸುತ್ತಿದ್ದು, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಗದಗ, ರಾಮನಗರದಲ್ಲಿ ಅವಾಂತರ ಸೃಷ್ಟಿಯಾಗಿದೆ.

ಯಾದಗಿರಿ ಜಿಲ್ಲೆಯಾದ್ಯಂತ ಶನಿವಾರ ಸಂಜೆ ಸುರಿದ ಮಳೆ ಪರಿಣಾಮ ಸಾವಿರಾರು ಎಕರೆ ಜಲಾವೃತ ಆಗಿದೆ. ಬೆಳೆಗಳು ಸಂಪೂರ್ಣ ನಾಶ ಆಗಿದ್ದು, ಅನ್ನದಾತರನ್ನು ಕಂಗಾಲು ಮಾಡಿದೆ. ಜಿಲ್ಲೆಯ ಹಲವೆಡೆ ಶನಿವಾರ ಬೆಳಿಗ್ಗೆಯಿಂದಲೇ ಜಿಟಿ ಜಿಟಿಯೊಂದಿಗೆ ಆರಂಭವಾದ ವರ್ಷಧಾರೆ ಮಧ್ಯಾಹ್ನದೊತ್ತಿಗೆ ಭಾರೀ ಪ್ರಮಾಣದಲ್ಲಿ ಸುರಿದ ಹಿನ್ನೆಲೆ ಶಹಾಪುರ ಸೇರಿದಂತೆ ಕೆಂಭಾವಿ ವಲಯದ ಹಲವು ಜಮೀನುಗಳಿಗೆ ನೀರು ಹೊಕ್ಕು ಹೊಡ್ಡುಹೊಡಿವೆ. ಹತ್ತಿ, ತೊಗರಿ, ಮೆಣಸಿನಕಾಯಿ ಸೇರಿ ಇನ್ನಿತರ ಬೆಳೆಗಳು ಹಾನಿಗೀಡಾಗಿವೆ. ಕೆಂಭಾವಿ ಪಟ್ಟಣದ ಹಲವು ರಸ್ತೆ ಹಳ್ಳಗಳಾಗಿವೆ. ರಸ್ತೆ ಮೇಲೆ ನೀರು ನಿಂತ ಪರಿಣಾಮ ಸುಗಮ ಸಂಚಾರಕ್ಕೆ ವ್ಯತ್ಯಯ ಆಗಿದೆ.

ಕಿತ್ತುಹೋದ ಗ್ರಾಮ ಸಂಪರ್ಕ ರಸ್ತೆ: ಗದಗ ಜಿಲ್ಲೆಯಲ್ಲೂ ಎಡೆಬಿಡದೆ ಸುರಿದ ಮಳೆಯಿಂದ ಸಾಕಷ್ಟು ಪ್ರಮಾಣದಲ್ಲಿ ಬೆಳೆಗಳು ಹಾಳಾಗಿದ್ದು, ಮಳೆಯ ರಭಸಕ್ಕೆ ಅನೇಕ ರಸ್ತೆಗಳು ಕಿತ್ತು ಹೋಗಿ ಗ್ರಾಮಗಳ ಸಂಪರ್ಕ ಕಳೆದುಕೊಂಡಿವೆ. ಅಲ್ಲದೆ ಹಲವು ಗ್ರಾಮಗಳ ಜನರು ಸುತ್ತು ಬಳಸಿ ಬರಬೇಕಾದ ಸ್ಥಿತಿ ನಿರ್ಮಾಣವಾಗಿದ್ದು ಇದರಿಂದ ಸಂಕಷ್ಟ ಎದುರಾಗಿದೆ.

ಲಕ್ಷ್ಮೇಶ್ವರ ತಾಲೂಕಿನ ಬಟ್ಟೂರು ಬಡ್ನಿ, ಮಧ್ಯ ರಸ್ತೆ ಕಿತ್ತು ಹೋಗಿದ್ದು, ಗದಗ ತಾಲೂಕಿನ ನೀಲಗುಂದ, ಅಂತೂರು ಬೆಂತೂರು ಮಧ್ಯ ಸಂಪರ್ಕ ನೀಡುವ ರಸ್ತೆಗಳು ಅರ್ಧ ಕಿತ್ತು ಹೋಗಿದ್ದು, ನರಗುಂದ ತಾಲೂಕಿನ ಕುರ್ಲಗೇರಿ ತಡಹಾಳ ಸಂಪರ್ಕಿಸುವ ರಸ್ತೆ ಬೆಣ್ಣೆಹಳ್ಳ ರಭಸಕ್ಕೆ ರಸ್ತೆ (ಬ್ರಿಜ್) ಕುಸಿದಿದ್ದು ಇದರಿಂದ ಜನ ಪರದಾಡುವಂತಾಗಿದೆ. ಅಲ್ಲದೆ ಅನೇಕ ಗ್ರಾಮೀಣ ರಸ್ತೆಗಳು ಮಳೆಗೆ ಕೊಚ್ಚಿ ಹೋಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ.ಅಲ್ಲದೆ ಭಾರೀ ಮಳೆಗೆ ಸೇತುವೆ ಮುಳುಗಡೆಯಾಗಿ ಗದಗ-ನಾಯಕನೂರು- ನರಗುಂದ ಸಂಪರ್ಕ ಸ್ಥಗಿತವಾಗಿದೆ ಒಟ್ಟಾರೆ ಮಳೆಯು ಸಾಕಷ್ಟು ಅವಾಂತರ ಸೃಷ್ಟಿಸಿದೆ.

ಚನ್ನಪಟ್ಟಣದಲ್ಲಿ ನದಿಯಂತಾದ ರಸ್ತೆ: ಶನಿವಾರ ಸಂಜೆ ಸುರಿದ ಮಳೆಗೆ ಚನ್ನಪಟ್ಟಣದಲ್ಲಿ ಅವಾಂತರವೇ ಸೃಷ್ಟಿಯಾಗಿದ್ದು, ರಸ್ತೆಯಲ್ಲಿ ನದಿಯಂತೆ ನೀರು ಹರಿದ ಪರಿಣಾಮ ಜನರು ಪರದಾಡಬೇಕಾಯಿತು. ಚನ್ನಪಟ್ಟಣದ ಅಂಚೆ ಕಚೇರಿ ರಸ್ತೆ, ಬೆಂಗಳೂರು-ಮೈಸೂರು ಹೆದ್ದಾರಿ, ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ಮಳೆ ನೀರು ರಸ್ತೆಯಲ್ಲಿ ಹರಿದು ವಾಹನ ಸವಾರರು ಪರದಾಡಬೇಕಾಯಿತು. ಚರಂಡಿಯಲ್ಲಿ ನೀರು ಸರಾಗವಾಗಿ ಹರಿದು ಹೋಗದ ಕಾರಣ ನೀರು ರಸ್ತೆಯಲ್ಲಿ ಹರಿದಿದೆ. ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ಗೂ ನೀರು ನುಗ್ಗಿ ಪರದಾಟ ನಡೆಸಬೇಕಾಯಿತು. ಕಾರು ಚಾಲಕರೊಬ್ಬರು ರಸ್ತೆಯಲ್ಲಿ ತುಂಬಿದ್ದ ನೀರಿನಲ್ಲಿ ಸಿಲುಕಿ ಪರದಾಡಿದರು.

ಸಿಡಿಲು ಬಡಿದು ರೈತ ಸಾವು

ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಮದಲಿಂಗನಾಳ ಗ್ರಾಮದಲ್ಲಿ ಸಿಡಿಲು ಬಡಿದು ಯುವ ರೈತ ಪರಮಣ್ಣ ಕಕ್ಕೇರಿ (28) ಮೃತಪಟ್ಟಿದ್ದಾನೆ. ಒಂದೇ ಕುಟುಂಬದ ನಾಲ್ವರು ಸಹೋದರರು ಹಾಗೂ ಕುಟುಂಬಸ್ಥರು ಹೊಲದಲ್ಲಿ ಬಿತ್ತನೆ ಕಾರ್ಯ ನಿರ್ವಹಿಸಲು ತೆರಳಿದ್ದಾಗ. ಮಳೆ ಬರಲು ಪ್ರಾರಂಭಿಸಿದ್ದು, ಮರದ ಕೆಳಗೆ ಆಶ್ರಯ ನಿಂತಿದ್ದ ವೇಳೆ ಸಿಡಿಲು ಬಡಿದು ಪರಮಣ್ಣ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹಿರಿಯ ಸಹೋದರ ಹಣಮಂತ್ರಾಯ ಗಂಭೀರವಾಗಿ ಗಾಯಗೊಂಡಿದ್ದು, ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೆಕ್ಕೆಜೋಳ ಸಂಪೂರ್ಣ ಜಲಾವೃತ

ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆ ಸುರಿದ ಪರಿಣಾಮ ಚಳ್ಳಕೆರೆ ತಾಲೂಕಿನ ವಿವಿಧೆಡೆ ಜಮೀನುಗಳು ಜಲಾವೃತಗೊಂಡಿವೆ. ಭಾರೀ ಮಳೆಗೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಗೋಪನಹಳ್ಳಿಯ ರೈತ ಮಧು ಎಂಬವರ ಜಮೀನು ಜಲಾವೃತಗೊಂಡಿದೆ. ಅಡಿಕೆ, ತೆಂಗು, ಮೆಕ್ಕೆಜೋಳ, ತರಕಾರಿ ಬೆಳೆಗಳು ಜಲಾವೃತಗೊಂಡಿದ್ದು, ನಾಲ್ಕು ಎಕರೆಗೂ ಹೆಚ್ಚು ಜಮೀನು ಜಲಮಯವಾಗಿದೆ.

ಮತಗಳ್ಳತನದ ಬಗ್ಗೆ ತನಿಖೆ

← ಮೊದಲಪುಟದಿಂದ

ಭಾನುವಾರ ಮತಪಟ್ಟಿಯಲ್ಲಿ 'ನಕಲಿ' ಹೆಸರು ಎಂದಿದ್ದ ಮಂಜುಳಾ ಎನ್ನುವ ಮಹಿಳೆ ಮತ್ತು ಒಂದೇ ಮನೆಯಲ್ಲಿ 80 ಮತಗಳು ಎಂದಿದ್ದ ಮನೆಯ ಮಾಲೀಕರು ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಖಂಡಿಸಿದ್ದಾರೆ. ಬಿಜೆಪಿ ನಾಯಕರು ರಾಹುಲ್ ಗಾಂಧಿ ಹೇಳಿಕೆಗೆ ಕಿಡಿಕಾರಿದ್ದಾರೆ. ಮತಗಳ್ಳತನಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ತನಿಖೆ ನಡೆಸಲಿ ಎಂದು ಪ್ರತಿಭಟನಾ ಭಾಷಣದಲ್ಲಿ ರಾಹುಲ್ ಆಗ್ರಹಿಸುತ್ತಿದ್ದಂತೆ ಯಾವ ರೀತಿಯ ತನಿಖೆ ನಡೆಸಬೇಕು ಎನ್ನುವ ಲೆಕ್ಕಾಚಾರದಲ್ಲಿ ರಾಜ್ಯ ಸರಕಾರವಿದೆ. ಆದರೆ ಯಾವ ಸ್ವರೂಪದಲ್ಲಿ ತನಿಖೆ ನಡೆಸಬೇಕು? ಎಸ್‌ಐಟಿ ರಚಿಸಬೇಕೋ ಅಥವಾ ನ್ಯಾಯಾಂಗ ತನಿಖೆಯೋ ಇಲ್ಲವೇ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಆಯೋಗ ರಚಿಸಬೇಕೋ ಎನ್ನುವ ಗೊಂದಲದಲ್ಲಿ ಸರಕಾರವಿದೆ ಎಂದು ಮೂಲಗಳು ತಿಳಿಸಿವೆ.

ದಿನೇಶ್ ಗುಂಡುರಾವ್ ವಾಹನ ಮುತ್ತಿಗೆ ಯತ್ನ

ಬೆಳಗಾವಿ: ರೈತರ ಸಮಸ್ಯೆಗಳ ಕುರಿತ ಮನವಿ ಪತ್ರ ಸ್ವೀಕರಿಸಲು ಸಚಿವ ದಿನೇಶ ಗುಂಡೂರಾವ್ ಅವರು ನಿರಾಕರಿಸಿದ್ದನ್ನು ಖಂಡಿಸಿ ರೈತರ ಪರ ಸಂಘಟನೆಗಳು ಗೂಡೂರಾವ್ ಅವರ ವಾಹನ ಮುತ್ತಿಗೆ ಯತ್ನಿಸಿದ ಘಟನೆ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ನಡೆದಿದೆ.

ಹುಕ್ಕೇರಿ ಪಟ್ಟಣದ ತಾಲೂಕಾ ಆಸ್ಪತ್ರೆಯ ಆವರಣದಲ್ಲಿ ನಿರ್ಮಿಸಿರುವ ವಸತಿಗೃಹ ಕಟ್ಟಡಗಳ, ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯ ಸಂಕುಸ್ಥಾಪನೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ ಅವರನ್ನು ಸರಕಾರಿ ಕಾರ್ಯಕ್ರಮ ಮುಗಿದ ನಂತರ ರೈತರ ಸಮಸ್ಯೆ, ಸರಕಾರಿ ಆಸ್ಪತ್ರೆ ಸೌಲಭ್ಯ ಹೈಟೆಕ್ ಯಂತ್ರಗಳ ಕೊರತೆ ಕುರಿತು ಮನವಿ ಪತ್ರದಲ್ಲಿ ಉಲ್ಲೇಕಿಸಲಾಗಿತ್ತು.

ಆದರೆ ದಿನೇಶ್ ಗುಂಡೂರಾವ್ ಅವರು ನಿರಾಕರಿಸಿದ ಕಾರಣ ವಾಹನಕ್ಕೆ ಅಡ್ಡಿಪಡಿಸಿ, ಕರ್ನಾಟಕ ರಾಜ್ಯ ರೈತ ಸಂಘ, ಕೂಲಿ ಕಾರ್ಮಿಕರ ಹಿತಾಸಕ್ತಿ ಸಂಘ, ಮತ್ತು ಹಸಿರುಸೇನೆ. ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು ಪೊಲೀಸರು ಚದುರಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಗೋಪಾಲ ಮರಬಸನ್ನವರ, ತಾಲೂಕಾ ಅಧ್ಯಕ್ಷ ಸಂಜು ಹಾವನ್ನವರ, ತಾಲೂಕಾ ಗೌರವಧ್ಯಕ್ಷ ರವಿ ಕಾಂಬಳೆ, ರಾಜ್ಯ ಉಪಾಧ್ಯಕ್ಷ ಜೀವುಲಾ ವಂಟಮೂರಿ, ರೈತರಾದ ರಾಮಪ್ಪಾ ವಾಸೇದಾರ, ಮತ್ತಿತರರು ಇದ್ದರು.

ಸಮಾಚಾರ ಸಣ್ಣದಲ್ಲ

300ಕ್ಕೂ ಹೆಚ್ಚು ಅಡಿಕೆ ಗಿಡಗಳಿಗೆ ಕೊಡಲಿ

ದಾವಣಗೆರೆ: ಫಸಲಿಗೆ ಬಂದಿದ್ದ 300ಕ್ಕೂ ಹೆಚ್ಚು ಅಡಿಕೆ ಗಿಡಗಳನ್ನು ದುಷ್ಕರ್ಮಿಗಳು ಕಡಿದು ಹಾಕಿರುವ ಘಟನೆ ಜಗಳೂರು ತಾಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಅಜ್ಜಪ್ಪ ಎಂಬವರಿಗೆ ಸೇರಿದ ನಾಲ್ಕು ವರ್ಷದ ಅಡಿಕೆ ಗಿಡಗಳನ್ನು ದುಷ್ಕರ್ಮಿಗಳು ಕಡಿದು ಹಾಕಿದ್ದಾರೆ. ಅವರು ಬೆಳಗ್ಗೆ ಜಮೀನಿಗೆ ಬಂದಾಗ ದುಷ್ಕರ್ಮಿಗಳ ಕೃತ್ಯ ಬೆಳಕಿಗೆ ಬಂದಿದೆ. ಫಸಲಿಗೆ ಬಂದಿದ್ದ ಅಡಿಕೆ ಗಿಡಗಳನ್ನು ಕಳೆದುಕೊಂಡು ರೈತ ಕಣ್ಣೀರಿಟ್ಟಿದ್ದಾನೆ. ಸ್ಥಳಕ್ಕೆ ಜಗಳೂರು ಪೊಲೀಸ್ ಠಾಣೆಯ ಸಿಪಿಐ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ದುಷ್ಕರ್ಮಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಇಡಿಯಿಂದ ₹ 9.5 ಕೋಟಿ ಆಸ್ತಿ ಜಪ್ತಿ

ಮಂಗಳೂರು: ಬ್ಯಾಂಕ್‌ಗಳಿಂದ ಸಾಲ ಕೊಡಿಸುವ ಆಮಿಷ ಒಡ್ಡಿ ಕಮಿಷನ್ ರೂಪದಲ್ಲಿ ಉದ್ಯಮಿ ಗಳಿಂದ ಕೋಟ್ಯಂತರ ರು. ಪಡೆದು ವಂಚಿಸಿದ್ದ ನಗರದ ರೋಷನ್ ಸಲ್ದಾನ್‌ಗೆ ಸಂಬಂಧಿಸಿದ ಪ್ರಕರಣಗಳಲ್ಲಿ 5 ಕಡೆ (ಇಡಿ) ಅಧಿಕಾರಿಗಳು ಶೋಧ ನಡೆಸಿದ್ದಾರೆ. 5.75 ಕೋಟಿ ಮೌಲ್ಯದ ಮೀನುಗಾರಿಕೆಯ ಬೋಟ್‌ಗಳು ಸೇರಿದಂತೆ 9.5 ಕೋಟಿ ಮೊತ್ತದ ಆಸ್ತಿಯನ್ನು ಮುಟ್ಟುಗೋಲು ಹಾಕಲಾಗಿದೆ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳೂರು ಉಪವಲಯ ಕಚೇರಿಯ ಪ್ರಕಟಣೆ ತಿಳಿಸಿದೆ. ಕಂಕನಾಡಿ ಬೊಲ್ಲಗುಡ್ಡದ ರೋಷನ್ ಸಲ್ದಾನ ವಿರುದ್ಧ ಮಂಗಳೂರು ಮತ್ತು ಚಿತ್ರದುರ್ಗದಲ್ಲಿ ದಾಖಲಾಗಿದ್ದ ದೂರುಗಳ ಆಧಾರದಲ್ಲಿ ಜುಲೈ 17ರಂದು ಆತನ ವಿಲಾಸಿ ಬಂಗಲೆ ಮೇಲೆ ದಾಳಿ ನಡೆಸಿದ ನಗರದ ಸೆನ್ ಠಾಣೆ ಪೊಲೀಸರು ಆತನನ್ನು ಬಂಧಿಸಿದ್ದರು. ಕಡಿಮೆ ಬಡ್ಡಿಗೆ ಕೋಟ್ಯಂತರ ಸಾಲ ಕೊಡಿಸುವುದಾಗಿ ಹೇಳಿ ಕಮಿಷನ್ ಮತ್ತು ಸ್ಟ್ಯಾಂಪ್ ಡ್ಯೂಟಿ ನೆಪದಲ್ಲಿ ಹಲವು ಉದ್ಯಮಿಗಳಿಂದ ಅಂದಾಜು 39 ಕೋಟಿ ಮೊತ್ತವನ್ನು ರೋಷನ್, ಆತನ ಪತ್ನಿ ಡಾಫ್ನಿ ನಿತು ಡಿಸೋಜಮತ್ತು ಇತರರು ಪಡೆದು ವಂಚಿಸಿದ್ದಾರೆ.

ಸ್ವಗ್ರಾಮದಲ್ಲಿ ಅಗ್ನಿವೀರ ಯೋಧನ ಅಂತ್ಯಸಂಸ್ಕಾರ

ಶಿವಮೊಗ್ಗ: ಮೈಸೂರಿನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ಅಗ್ನಿವೀರ ಯೋಧ ಪ್ರಜ್ವಲ್ (21) ಅವರ ಅಂತ್ಯ ಸಂಸ್ಕಾರ ಸಾಗರ ತಾಲೂಕಿನ ಉಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಿಗಳೆ ಮನೆ ಗ್ರಾಮದಲ್ಲಿ ನಡೆಯಿತು. ಪ್ರಜ್ವಲ್ ಅವರು ಎರಡು ವರ್ಷದಿಂದ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಜಿಗಳೆಮನೆಯ ರಾಮಚಂದ್ರ ಮತ್ತು ರಾಜೇಶ್ವರಿ ದಂಪತಿಗಳ ಪುತ್ರರಾದ ಪ್ರಜ್ವಲ್ ಕಳೆದ ವಾರ ರಜೆ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಆಗಮಿಸಿದ್ದರು. ಖಾಸಗಿ ಕಾರ್ಯನಿಮಿತ್ತ ಮೈಸೂರಿಗೆ ಹೋಗಿ ದ್ದಾಗ ಬೈಕ್ ಅಪಘಾತದಲ್ಲಿ ಅವರು ಮೃತಪಟ್ಟಿದ್ದರು.

ಬಾದಾಮಿಯಲ್ಲಿ ಸಿದು ಮತ ಖರೀದಿಸಿ ಗೆಲುವು

ಮೈಸೂರು: ಚುನಾವಣಾ ಆಯೋಗ ಮತ್ತು ಬಿಜೆಪಿ ವಿರುದ್ಧ ಚುನಾವಣೆಯಲ್ಲಿ ಮತಗಳ್ಳತನ ಗಂಭೀರ ಆರೋಪ ಮಾಡಿದ ಕಾಂಗ್ರೆಸ್‌ಗೆ ಸಿ.ಎಂ.ಇಬ್ರಾಹಿಂ ತಿರುಗೇಟು ನೀಡಿದ್ದಾರೆ. ಬಾದಾಮಿಯಲ್ಲಿ ಸಿದ್ದರಾಮಯ್ಯ ಗೆದ್ದಿದ್ದು ಮತ ಖರೀದಿಯಿಂದ ಎಂದು ಆರೋಪಿಸಿದರು. ಬಾದಾಮಿಯಲ್ಲಿ ಸಿದ್ದರಾಮಯ್ಯ ಸೋಲುವ ಹಂತದಲ್ಲಿ ಇದ್ದರು. ನಾವು ಚಿಮ್ಮನಕಟ್ಟಿ ಸೇರಿ ಸಾಲ ಮಾಡಿ 3000 ವೋಟ್ ಖರೀದಿ ಮಾಡಿದ್ದೆವು. ಕಡಿಮೆ ಅಂತರದಲ್ಲಿ ಗೆದ್ದೇ ಗೆಲ್ತೀರಾ ಅಂತ ಸಿದ್ದರಾಮಯ್ಯಗೆ ಹೇಳಿದ್ದೆ. ಅದೇ ರೀತಿ ಫಲಿತಾಂಶ ಬಂತು. ಕೊನೆಗೆ ಸಿದ್ದರಾಮಯ್ಯ 6 ತಿಂಗಳ ನಂತರ ಆ ಸಾಲ ವಾಪಸ್ ಕೊಟ್ಟಿದ್ದಾರೆ. ಈ ವಿಚಾರ ಹೇಳೋಕೆ ನನಗೆ ಯಾವುದೇ ಭಯ ಇಲ್ಲ ಎಂದರು.

ಫನ್‌ತರಂಗ
- ರಘುಪತಿ ಶೃಂಗೇರಿ -

'ಟ್ರಂಪ್ ಹಾವಳಿ'



ಮೈಸೂರಿನಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ ಭವನ ಶಂಕುಸ್ಥಾಪನೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಚಾಲನೆ

ಕಾಂಗ್ರೆಸ್ ಕಚೇರಿ ಪ್ರಜಾಪ್ರಭುತ್ವ ಉಳಿಸುವ ಸೌಧ



ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು: ಕಾಂಗ್ರೆಸ್ ಕಚೇರಿ ನಮಗೆಲ್ಲ ದೇಗುಲವಿದ್ದಂತೆ. ಶಾಸಕರು ಹಾಗೂ ಬ್ಲಾಕ್ ಅಧ್ಯಕ್ಷರು ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಕಚೇರಿ ನಿರ್ಮಾಣ ಮಾಡಿದಾಗ ಮಾತ್ರ ಕಾಂಗ್ರೆಸ್ ಪಕ್ಷ ನಿಮಗೆ ಟಿಕೆಟ್ ನೀಡಿ ಶಾಸಕರನ್ನಾಗಿ ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ. ಇಲ್ಲವಾದರೆ ಪಕ್ಷಕ್ಕೆ ನಿಮ್ಮ ಕೊಡುಗೆ ಏನೂ ಇರುವುದಿಲ್ಲ ಎಂದು ಸಂಕೋಚವಿಲ್ಲದೇ ಹೇಳುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿದ ಅವರು, ಇದು ಹೆಸರಿಗೆ ಕಾಂಗ್ರೆಸ್ ಭವನ. ಕಾಂಗ್ರೆಸ್ ಕಾರ್ಯಕರ್ತರ ಪಾಲಿಗೆ ಇದೊಂದು ದೇವಸ್ಥಾನ. ಪ್ರಜಾಪ್ರಭುತ್ವ ಉಳಿಸುವ ಸೌಧ ಇದು. ಸಿದ್ದರಾಮಯ್ಯ, ಯತೀಂದ್ರ, ಮಹದೇವಪ್ಪನವರು ಇದನ್ನು ಮಾಡುತ್ತಾರೆ ಎಂಬುದಷ್ಟೇ ಅಲ್ಲ, ಪ್ರತಿಯೊಬ್ಬ ಕಾರ್ಯಕರ್ತರು ಕೈಲಾದಷ್ಟು ದೇಣಿಗೆ ನೀಡಿ ಈ ಭವನ ನಿರ್ಮಾಣಕ್ಕೆ ನೆರವಾಗಬೇಕು. ಅದು 100 ರೂ.ಆಗಿರಲಿ, 1 ಸಾವಿರ ಆಗಿರಲಿ. ಈ ಕಟ್ಟಡ ನಿರ್ಮಾಣಕ್ಕೆ ನಿಮ್ಮ ಸೇವೆಯೂ ಇದೆ ಎಂಬ ಭಾವನೆ ನಿಮಗೆ ನಿಮ್ಮ ಮನೆಯವರಿಗೆ ಇರಬೇಕು ಎಂದು ಹೇಳಿದರು.

ತನ್ವೀರ್ ಸೇಠ್ ಅವರು, ತಿವಾರಿ ಅವರ ಮನವಿ ಮೇರೆಗೆ ಹಾಗೂ ಕಾಂಗ್ರೆಸ್ ಪಕ್ಷ ನನಗೆ ಆರು ಬಾರಿ ಟಿಕೆಟ್ ನೀಡಿದೆ ಎಂದು ಈ ಆಸ್ತಿಯನ್ನು ಕಾಂಗ್ರೆಸ್ ಪಕ್ಷಕ್ಕೆ ವರ್ಗಾವಣೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಅವರಿಗೆ ತುಂಬು ಹೃದಯದ ಅಭಿನಂದನೆ ಸಲ್ಲಿಸು ತ್ತೇನೆ. ಮಹಾತ್ಮ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿವೆ. ಇಂದು ಆ ಸ್ಥಾನದಲ್ಲಿ ನಮ್ಮವರೇ ಆದ ಮಲ್ಲಿಕಾರ್ಜುನ ಖರ್ಗೆ ಅವರು ಕುಳಿತಿದ್ದಾರೆ. ಇದರ ನೆನಪಿನಲ್ಲಿ ರಾಜ್ಯದ 100 ಕಡೆ ಕಾಂಗ್ರೆಸ್ ಕಚೇರಿ ನಿರ್ಮಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು.

ಇತ್ತೀಚೆಗೆ ಮದ್ದೂರಿನಲ್ಲಿ ಶಾಸಕ ಉದಯ್ ಅವರು ತಮ್ಮ ಹಣದಲ್ಲಿ ನಿವೇಶನ ಖರೀದಿ ಮಾಡಿ ಪಕ್ಷಕ್ಕೆ ನೀಡಿದರು.

ಅದೇ ರೀತಿ ಎನ್.ಟಿ.ಶ್ರೀನಿವಾಸ್, ರೋಣ ಶಾಸಕರು, ಸಂತೋಷ್ ಲಾಡ್, ಶರಣಪ್ರಕಾಶ್ ಪಾಟೀಲ್ ಅವರು ಪಕ್ಷಕ್ಕೆ ತಮ್ಮ ಜಾಗವನ್ನು ನೀಡಿದ್ದಾರೆ. ನಾನು ರಾಮನಗರದಲ್ಲಿ ನಿವೇಶನ ನೀಡಿ ಕಟ್ಟಡ ನಿರ್ಮಾಣವಾಗುತ್ತಿದೆ. ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಅವರು 1 ಕೋಟಿ ನೀಡುವುದಾಗಿ ಹೇಳಿದ್ದು, ಸ್ಥಳೀಯ ಶಾಸಕ ಇಕ್ಬಾಲ್ ಹುಸೇನ್ ಅವರು 1 ಕೋಟಿ ನೀಡುವುದಾಗಿ ಹೇಳಿದ್ದಾರೆ. ಇತರೆ ಶಾಸಕರು ತಮ್ಮ ಕ್ಷೇತ್ರದಲ್ಲಿ ಕಚೇರಿ ನಿರ್ಮಾಣದ ಜತೆಗೆ 50 ಲಕ್ಷ ಘೋಷಿಸಿದ್ದಾರೆ ಎಂದರು. ಸಚಿವ ಮಹಾದೇವಪ್ಪ, ಕೆ.ವೆಂಕಟೇಶ್, ಸಂಸದ ಸುನೀಲ್ ಬೋಸ್ ಶಾಸಕ ರಾದ ಡಾ.ಯತೀಂದ್ರ, ಸೇರಿ ಹಲವರಿದ್ದರು.

ವರುಣಾ: ₹ 1107 ಕೋಟಿ ಕಾಮಗಾರಿಗೆ ಸಿಎಂ ಚಾಲನೆ

ಮೈಸೂರು: ಸಮಾಜದಲ್ಲಿರುವ ಆರ್ಥಿಕ ಅಸಮಾನತೆ ನಿವಾರಿಸಲೆಂದೇ ನಮ್ಮ ಸರಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರು.1107.72 ಕೋಟಿ ಮೌಲ್ಯದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ಮತ್ತು ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವರುಣಾ ಕ್ಷೇತ್ರದಲ್ಲಿ 1107.72 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ಎಲ್ಲಾ ಯಾವುದೇ ಜಾತಿ ಧರ್ಮವನ್ನು ಪರಿಗಣಿಸದೆ ಎಲ್ಲಾ ಜಾತಿಯ ಬಡವರು, ರೈತರು, ಮಹಿಳೆಯರು, ಆರ್ಥಿಕವಾಗಿ ಹಿಂದುಳಿದವರ ಏಳಿಗೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

2023 ರ ಚುನಾವಣಾ ಸಂದರ್ಭದಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ನೀಡುವುದಾಗಿ ಭರವಸೆ ನೀಡಿ ದ್ದೆವು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ಅನ್ನ ಭಾಗ್ಯ, ಶಕ್ತಿ ಯೋಜನೆ, ಗೃಹ ಲಕ್ಷ್ಮಿ, ಗೃಹ ಜ್ಯೋತಿ ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಬಡವರ ಏಳಿಗೆಗೆ ಆರ್ಥಿಕ ಅಸಮಾನತೆ ಹೋಗಲಾಡಿಸಲು ಕ್ರಮ ವಹಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 55 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಗುರುತು ಬಿಟ್ಟು ಹೋಗುವುದೇ ಮುಖ್ಯ

ಹುಟ್ಟು ಸಾವಿನ ಮಧ್ಯೆ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ. ನಾವು ಯಾರೂ ಶಾಶ್ವತವಾಗಿ ಉಳಿಯುವುದಿಲ್ಲ. ನಿಮ್ಮ ಗುರುತು ಬಿಟ್ಟು ಹೋಗಬೇಕು ಎಂದು ಶಾಸಕರಾದ ದರ್ಶನ್ ಧ್ರುವನಾರಾಯಣ, ವೆಂಕಟೇಶ್, ರವಿಶಂಕರ್ ಅವರಿಗೆ ಹೇಳುತ್ತೇನೆ. ನಾವು ದೇವರಾಜ ಅರಸು, ಅಜೀಜ್ ಸೇಠ್ ಅವರನ್ನು ನಾವು ಸ್ಮರಿಸುತ್ತೇವೆ. ಅದೇ ರೀತಿ ನಿಮ್ಮನ್ನು ಸಹ ಭವಿಷ್ಯದಲ್ಲಿ ಜನ ಸ್ಮರಿಸಬೇಕು ಎಂದು ಡಿಸಿಎಂ ಡಿಕೆ ಶಿವಕುಮಾರ್ ಕರೆ ನೀಡಿದರು.

ಶಾಸಕರ ಮನೆಯೇ ಕಾಂಗ್ರೆಸ್ ಕಚೇರಿ ಆಗಬಾರದು

ಶಾಸಕರ ಮನೆಯಲ್ಲಿ ಕಾಂಗ್ರೆಸ್ ಕಚೇರಿ ಮಾಡುವುದಲ್ಲ, ಶಾಶ್ವತವಾಗಿ ಪಕ್ಷಕ್ಕಾಗಿ ಕಚೇರಿ ಇರಬೇಕು. ಈ ಹಿಂದೆಯೇ ಕಾಂಗ್ರೆಸ್ ಕಚೇರಿ ನಿರ್ಮಾಣ ಮಾಡಬೇಕಿತ್ತು ಎಂದು ನಾನು ಸಿದ್ದರಾಮಯ್ಯ ಹಾಗೂ ಮಹದೇವಪ್ಪ ಅವರ ಜತೆ ಚರ್ಚೆ ಮಾಡಿದ್ದೆ. ತಡವಾದರೂ ಈಗ ಈ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ. ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್ ಹಾಗೂ ಜಿಲ್ಲಾಧ್ಯಕ್ಷರ ಪಕ್ಷ ನಿಷ್ಠೆ, ನಾಯಕತ್ವ, ಪಕ್ಷ ಸಂಘಟನೆ ವಿಚಾರದಲ್ಲಿ ನನಗೆ ಸಂತೋಷ ತಂದಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಮತಗಳ್ಳತನ ವರದಿ ನೀಡಲು ಅಡ್ವೊಕೇಟ್ ಜನರಲ್‌ಗೆ ಸೂಚಿಸಲಾಗುವುದು: ಸಿಎಂ

ಕಾನೂನು ಇಲಾಖೆ ಶಿಫಾರಸಿನಂತೆ ಕ್ರಮ

ಮೈಸೂರು: ಮತಗಳ್ಳತನ ಕುರಿತಂತೆ ಕಾನೂನು ಇಲಾಖೆ ಪರಿಶೀಲನೆ ನಡೆಸಿ ನೀಡುವ ಶಿಫಾರಸಿನಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮತಗಳ್ಳತನ ಆಗಿದೆ ಎನ್ನಲಾದ ಬಿಜೆಪಿ ವಿರುದ್ಧದ ಆರೋಪದ ವಿಚಾರವಾಗಿ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಗಳ್ಳತನದ ಪರಿಶೀಲನಾ ಕಾರ್ಯವನ್ನು ತ್ವರಿತವಾಗಿ ನಡೆಸಿ ವರದಿ ನೀಡಲು ಅಡ್ವೊಕೇಟ್ ಜನರಲ್ ಅವರಿಗೆ ಸೂಚನೆ ನೀಡಲಾಗುವುದು. ಮತದಾರರ ಪಟ್ಟಿಯ ಸಂಬಂಧ ಸಂಪೂರ್ಣ ಅಧಿಕಾರವಿರುವುದು ಚುನಾವಣಾ ಆಯೋಗಕ್ಕೆ ಎಂದರು.

ಕಾಂಗ್ರೆಸ್‌ನವರು ಈಗ ಮತಗಳ್ಳತನದ ಬಗ್ಗೆ ಪ್ರಸ್ತಾಪಿಸಿರುವುದು ಏಕೆ ಎಂದು ಬಿಜೆಪಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿಯವರು ತಪ್ಪು ಮಾಡಿ ಸುಳ್ಳು ಹೇಳುತ್ತಿದ್ದಾರೆ. ರಾಹುಲ್ ಗಾಂಧಿ ಅವರು ಸಾಕ್ಷಿ ಸಮೇತ ವಿಚಾರಗಳನ್ನು ತಿಳಿಸಿದ್ದಾರೆ. ಈ ಎಲ್ಲವೂ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗದ ಬಳಿ ಲಭ್ಯವಿದೆ. ದಾಖಲಾತಿಗಳ ಬಗ್ಗೆಯೇ ಪ್ರಸ್ತಾಪ ಮಾಡಿದ್ದಾರೆ. ಒಂದು ಸಣ್ಣ ಕೊಠಡಿಯಲ್ಲಿ 80 ಜನ ವಾಸ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ನಾವು ಈ ಬಗ್ಗೆ ಅಧ್ಯಯನ ಮಾಡಿದ ನಂತರ ವಿಷಯ ತಿಳಿದಿದೆ ಎಂದರು.

ಚುನಾವಣೆಗಳಲ್ಲಿ ಕೈವಾಡ: ಮತಗಳ್ಳತನದ ಬಗ್ಗೆ ನ್ಯಾಯಾಂಗದ ಸ್ವಯಂ ಪ್ರೇರಿತವಾಗಿ ಮಧ್ಯ ಪ್ರವೇಶ ಮಾಡಬೇಕು ಎಂಬ ಮಧ್ಯಮಗಳ ಪ್ರಶ್ನೆಗೆ ಉತ್ತರಿಸಿ, ಚುನಾವಣೆಗಳಲ್ಲಿ ಇವಿಎಂಗಳಲ್ಲಿ, ಮತದಾರರ ಪಟ್ಟಿಗಳಲ್ಲಿ ಕೈವಾಡ ನಡೆಯುತ್ತಿದೆ ಎಂದು ನಾವು ಮೊದಲಿನಿಂದ ಹೇಳುತ್ತಾ ಬಂದಿದ್ದೇವೆ. ನನ್ನ ಪ್ರಕಾರ ರಾಹುಲ್ ಗಾಂಧಿ ಮಾಧ್ಯಮಗಳಲ್ಲಿ ಪ್ರದರ್ಶನ ಮಾಡಿದ್ದು ನಿಜ ಎಂದರು.

ಚುನಾವಣಾ ಆಯೋಗ ಹೊಣೆ: ಉಪಚುನಾವಣೆಯಲ್ಲಿ ಸತ್ತವರೆಲ್ಲಾ ಮತ ಹಾಕಿ ಗೆಲ್ಲಿಸಿದ್ದಾರೆ ಎಂಬ ಹೇಳಿಕೆ ಬಗ್ಗೆ ಉತ್ತರಿಸಿದ ಸಿಎಂ, ಸತ್ತವರು ಮತ ಹಾಕಿದ್ದರೆ ಅದಕ್ಕೆ ಯಾರು ಜವಾಬ್ದಾರರು? ಚುನಾವಣಾ ಆಯೋಗ ಇದಕ್ಕೆ ನೇರ ಹೊಣೆ ಎಂದು ಆರೋಪಿಸಿದರು.

ಮತ ಖರೀದಿ ಬಗ್ಗೆ ಗೊತ್ತಿಲ್ಲ: ಸಿಎಂ

ಸಿದ್ದರಾಮಯ್ಯ ಅವರು ಬಾದಾಮಿ ಕ್ಷೇತ್ರದಲ್ಲಿ ಮೂರು ಸಾವಿರ ಮತಗಳನ್ನು ಖರೀದಿ ಮಾಡಿ ಗೆದ್ದಿದ್ದು ಎಂಬ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಇಬ್ರಾಹಿಂ ನಮ್ಮ ಪಕ್ಷದವರಲ್ಲ. ನಾನು ಪ್ರಚಾರಕ್ಕಾಗಿ ಬಾದಾಮಿಗೆ ಹೋಗಿದ್ದೆ. ಅದು ಬಿಟ್ಟರೆ ನನಗೆ ಏನೂ ಗೊತ್ತಿಲ್ಲ. ನಾನು 1600 ಮತಗಳಿಂದ ಗೆದ್ದಿದ್ದು. ಈ ವಿಚಾರ ನನಗೆ ಹೊಸದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ನಾವು ಹದಿನಾರು ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಆಂತರಿಕ ಸಮೀಕ್ಷೆ ತಿಳಿಸಿತ್ತು. ಆದರೆ ನಾವು ಗೆದ್ದಿದ್ದು 9 ಸ್ಥಾನಗಳನ್ನು ಮಾತ್ರ. ಇದೆಲ್ಲವನ್ನು ಗಮನಿಸಿದಾಗ ಬಿಜೆಪಿಯಿಂದ ಮತಗಳ್ಳತನ ಆಗಿರುವುದು ದೃಢವಾಗುತ್ತದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ತರಾತುರಿಯಲ್ಲಿ ಮತ ಪಟ್ಟಿ ಡಿಲೀಟ್ ಯಾಕೆ

ವಿಜಯಪುರ: ಮತದಾರ ಪಟ್ಟಿಯ ಮಾಹಿತಿಯನ್ನು 45 ದಿನಗಳಲ್ಲಿ ಅಳಿಸಿ ಹಾಕಲಾಗಿದೆ ತರಾತುರಿಯಲ್ಲಿ ಯಾಕೆ ಡಿಲೀಟ್ ಮಾಡಲಾಗಿದೆ ಎಂದು ಪ್ರಶ್ನೆ ಸಚಿವ ಎಂ.ಬಿ.ಪಾಟೀಲ ಪ್ರಶ್ನೆ ಮಾಡಿದರು.

ಮತಗಳ್ಳತನ ವಿಚಾರದ ಬಗ್ಗೆ ಮಾತನಾಡಿದ ಅವರು, ಮತದಾರರ ಪಟ್ಟಿಯ ಗೋಲ್ಮಾಲ್ ಕುರಿತು ರಾಹುಲ್ ಗಾಂಧಿ ಅವರು ಹೇಳಿದ್ದಾರೆ. ಫ್ರೀಡಂಪಾರ್ಕ್ ಸಮಾವೇಶದಲ್ಲಿಯೂ ಈ ವಿಚಾರ ಪ್ರಸ್ತಾಪವಾಗಿದೆ. ಮಹದೇವಪುರದಲ್ಲಿ ನಡೆದ ಅಕ್ರಮ ಕುರಿತು ಮಾಹಿತಿ ನೀಡಲಾಗಿದೆ. ಮತದಾರರ ಪಟ್ಟಿಯನ್ನು ಡಿಜಿಟಲ್ ಫಾರ್ಮೆಟ್‌ನಲ್ಲಿ ಕೊಡಿ ಎಂದು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಒತ್ತಾಯ ಮಾಡಿದೆ. ಡಿಜಿಟಲ್ ರೂಪದಲ್ಲಿ ಕೊಟ್ಟರೆ ನಕಲಿ ಕುರಿತು ಎಲ್ಲವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಾಗಿ ಡಿಜಿಟಲ್ ಫಾರ್ಮೆಟ್‌ನಲ್ಲಿ ಮಾಹಿತಿ ಕೊಡುತ್ತಿಲ್ಲ. ಮಹದೇವಪುರ ಒಂದು ಉದಾಹರಣೆ ಅಷ್ಟೇ ಸೆಲ್ ಫಾರ್ಮೆಟ್ ನಲ್ಲಿ ಮತದಾರ ಮಾಹಿತಿಯನ್ನು ಕೊಟ್ಟರೆ 524 ಲೋಕಸಭಾ ಕ್ಷೇತ್ರಗಳ ಸಂಪೂರ್ಣ ಮಾಹಿತಿಯು ಸಿಗಲಿದೆ. ಇದರಿಂದ ಎಲ್ಲೆಲ್ಲಿ ಅಕ್ರಮವಾಗಿದೆ ಎಂದು ತಿಳಿದು ಬರುತ್ತದೆ. ಪಾರದರ್ಶಕವಾಗಿ ಚುನಾವಣೆ ನಡೆದಿದ್ದರೆ. ಡಿಜಿಟಲ್ ಫಾರ್ಮೆಟ್ ನಲ್ಲಿ ಕೊಡಲು ಯಾಕೆ ಹಿಂಜರಿಕೆ. ಮತದಾರರ ಮಾಹಿತಿಯನ್ನು ಕನಿಷ್ಠ 5 ವರ್ಷವಾದರೂ ಸಂಗ್ರಹಿಸಿ ಇಡಬೇಕು ಎಂದು ಹೇಳಿದರು.

---

20 ಅಡಿ ಅಗಲ, 10 ಅಡಿ ಆಳಕ್ಕೆ ಭೂಮಿ ಉತ್ಖನನ, ಸಿಗದ ಕಳೇಬರ

ಧರ್ಮಸ್ಥಳದ ಬಾಹುಬಲಿ ಬೆಟ್ಟದಲ್ಲಿ ಶೋಧ

ಮಂಗಳೂರು: ಧರ್ಮಸ್ಥಳದಲ್ಲಿ ಶವ ಹೂತಿಟ್ಟ ಪ್ರಕರಣದಲ್ಲಿ ಎಸ್‌ಐಟಿ ಶೋಧ ಕಾರ್ಯ ಮುಂದುವರಿಸಿದೆ. ಅನಾಮಿಕ ದೂರುದಾರ ನೀಡಿದ್ದ ಮಾಹಿತಿ ಆಧರಿಸಿ ಶನಿವಾರ ಹೊಸ ಸ್ಥಳ ದಲ್ಲಿ ಉತ್ಖನನ ನಡೆಸಲಾಗಿದೆ. ಬಾಹುಬಲಿ ಬೆಟ್ಟದ ಒಣಮರದ ಕೆಳಗೆ ಶವ ಹೂತಿರೋದಾಗಿ ಅನಾಮಿಕ ಹೇಳಿದ್ದರಿಂದ, ಸುಮಾರು 10 ಅಡಿ ಭೂಮಿ ಅಗೆದು ಎಸ್‌ಐಟಿ ಶೋಧ ನಡೆಸಿದೆ. 20 ಅಡಿ ಅಗಲ, 20 ಅಡಿ ಉದ್ದ ಅಗೆದರೂ ಏನೂ ಪತ್ತೆಯಾಗಿಲ್ಲ. ಇನ್ನು, 16ನೇ ಪಾಯಿಂಟ್‌ಗೆ 15 ಅಡಿ ದೂರ ದಲ್ಲಿರೋ ಮತ್ತೊಂದು ಸ್ಥಳದಲ್ಲೂ ಶೋಧ ನಡೆಸಿ ದರು. ಏನೂ ಸಿಕ್ಕಿಲ್ಲ.

ಮತ್ತಿಬ್ಬರೂ ಎಸ್‌ಐಟಿಗೆ ದೂರು: ಈ ಮಧ್ಯೆ, ಪ್ರಕರಣಕ್ಕೆ ಹೊಸ ಟ್ವಿಸ್ಟ್ ಸಿಕ್ಕಿದ್ದು ಅನಾಮಿಕ ಹೆಣ ಹೂತಿದ್ದನ್ನು ನೋಡಿದ್ದಾಗಿ ಮತ್ತೆ ಇಬ್ಬರು ಎಸ್‌ಐಟಿಗೆ ದೂರು ನೀಡಿದ್ದಾರೆ. ಸ್ಥಳೀಯ ಧರ್ಮಸ್ಥಳ ಠಾಣೆಗೆ ಅಧಿಕೃತ ದೂರು ನೀಡಲು ಎಸ್‌ಐಟಿ ಸೂಚನೆ ನೀಡಿದೆ. ಇಬ್ಬರೂ ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದಾರೆ. ಇದುವರೆಗೆ 16 ಸ್ಥಳಗಳಲ್ಲಿ ಉತ್ಖನನ ನಡೆಸಲಾಗಿದ್ದು, 6ನೇ ಪಾಯಿಂಟ್‌ನಲ್ಲಷ್ಟೇ ಅಸ್ಥಿ ಕುರುಹು ಸಿಕ್ಕಿದೆ. ತಾಂತ್ರಿಕ ಸಮಸ್ಯೆಯಿಂದ 13ನೇ ಪಾಯಿಂಟ್ ಶೋಧ ಸ್ಥಗಿತಗೊಳಿಸಲಾಗಿದೆ.

ಎಸ್‌ಐಟಿಗೆ ಪೊಲೀಸ್ ಠಾಣೆಯ ಮಾನ್ಯತೆ

ಧರ್ಮಸ್ಥಳದಲ್ಲಿ ಕಳೆದ ಎರಡು ಮೂರು ವಾರದಿಂದ ವಿಶೇಷ ತನಿಖಾ ತಂಡ ನಡೆಸುತ್ತಿರುವ ಕಾರ್ಯಾಚರಣೆಯ ನಡುವೆ, ಇದೀಗ ಎಸ್‌ಐಟಿಗೆ ಪೊಲೀಸ್ ಠಾಣಾ ಮಟ್ಟದ ಅಧಿಕಾರವನ್ನು ರಾಜ್ಯ ಸರಕಾರ ನೀಡಿ ಆದೇಶ ಹೊರಡಿಸಿದೆ. ಎಸ್‌ಐಟಿಗೆ ಪೊಲೀಸ್ ಠಾಣೆ ಅಧಿಕಾರ ನೀಡಿರುವುದರಿಂದ ಸ್ವತಂತ್ರವಾಗಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿ ಚಾರ್ಜ್‌ಶೀಟ್ ನ್ಯಾಯಾಲಯಕ್ಕೆ ಸಲ್ಲಿಸಬಹುದಾಗಿದೆ. ಧರ್ಮಸ್ಥಳ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ನಿಗೂಢ ಹಾಗೂ ಅಸಹಜ ಸಾವಿಗೀಡಾಗಿ ದಾಖಲಾಗಿರುವ ಈ ಹಿಂದಿನ ಪ್ರಕರಣಗಳನ್ನು ಮರು ತನಿಖೆ ನಡೆಸಬಹುದಾಗಿದೆ. ಸದ್ಯ ಅನಾಮಿಕ ವ್ಯಕ್ತಿಯು ನೂರಾರು ಶವಗಳನ್ನು ಹೂತಿರುವುದಾಗಿ ಹೇಳಿಕೆ ನೀಡಿದ್ದರಿಂದ ಗುರುತಿಸಲಾದ 19 ಕಡೆಗಳಲ್ಲಿ ಎಸ್‌ಐಟಿ ಶೋಧ ಕಾರ್ಯ ನಡೆಸುತ್ತಿದೆ.

354ನೇ ಆರಾಧನೆ ಉತ್ಸವ | ರಾಯರಿಗೆ ಪ್ರಸಾದ ರೂಪದಲ್ಲಿ ಆಗಮಿಸಿದ ತಿರುಪತಿ ತಿಮ್ಮಪ್ಪನ ಶೇಷ ವಸ್ತ್ರ

ನೂತನ ಪುಷ್ಕರಣಿಗೆ ಶ್ರೀಗಳಿಂದ ಚಾಲನೆ, ತೆಪ್ಪೋತ್ಸವ

ರಾಯಚೂರು: ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354 ನೇ ಆರಾಧನೆಯ ಪ್ರಯುಕ್ತ ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ (ಟಿಟಿಡಿ) ಎಇಒ ಶ ರಾಮಕೃಷ್ಣ ಅವರು ತಿರುಮಲ ತಿರುಪತಿ ದೇವಸ್ಥಾನದ ಪವಿತ್ರ ಶ್ರೀವಾರಿ ಶೇಷ ವಸ್ತ್ರವನ್ನು ಪ್ರಸಾದ ರೂಪದಲ್ಲಿ ತಂದಿದ್ದು, ಶ್ರೀ ಮಠದ ಅಧಿಕಾರಿಗಳು ಮತ್ತು ಪಂಡಿತರು ಅವರನ್ನು ಮಹಾದ್ವಾರದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಿ, ಅವರನ್ನು ಮಧ್ವ ಕಾರಿಡಾರ್ ಮೂಲಕ ಮಂಗಳವಾದ್ಯಗಳೊಂದಿಗೆ ಶ್ರೀ ಮಠಕ್ಕೆ ಕರೆ ತರಲಾಯಿತು.

ಮೊದಲು ಮಂಚಲಮ್ಮನಿಗೆ ಸೀರೆಯನ್ನ ಅರ್ಪಿಸಿದ ನಂತರ, ರಾಮಕೃಷ್ಣ ಅವರು ಶ್ರದ್ಧಾ ಭಕ್ತಿಯಿಂದ ಶ್ರೀವಾರಿ ಶೇಷ ವಸ್ತ್ರವನ್ನು ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಗೆ ಹಸ್ತಾಂತರಿಸಿದರು. ಸ್ವಾಮೀಜಿಯವರು ಭಕ್ತಿಯಿಂದ ಶ್ರೀ ರಾಯರ ಮೂಲ ಬೃಂದಾವನಕ್ಕೆ ಶೇಷ ವಸ್ತ್ರವನ್ನ ವಸ್ತ್ರವನ್ನು ಅರ್ಪಿಸಿದರು.

ಸ್ವಾಮೀಜಿಯವರು ರಾಮಕೃಷ್ಣ ಮತ್ತು ಅವರ ಕುಟುಂಬದವರಿಗೆ ಫಲಪುಷ್ಪ ಸ್ಮರಣಿಕೆ ಮತ್ತು ಫಲಮಂತ್ರಾಕ್ಷತೆಯೊಂದಿಗೆ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಭಕ್ತರಿಗೆ ಆಶೀರ್ವಚನ ನೀಡಿದ ಪೂಜ್ಯರು ತಿರುಪತಿ ಮತ್ತು ಮಂತ್ರಾಲಯದ ನಡುವೆ ಶತ ಶತಮಾನಗಳಿಂದ ಅವಿನಾಭಾವ ಸಂಬಂಧ ಇದೆ. ಪ್ರತಿ ವರ್ಷ ರಾಯರ ಆರಾಧನಾ ಸಂದರ್ಭದಲ್ಲಿ ತಿರುಪತಿ ತಿರುಮಲ ದೇವಸ್ಥಾನದಿಂದ ಪ್ರಸಾದ ರೂಪದ ಶೇಷ ವಸ್ತ್ರ ಆಗಮಿಸಿಧ. ಇದು ತಿರುಪತಿ ತಿಮ್ಮಪ್ಪನ ಆಶೀರ್ವಾದ ಅವರ ಅಂತರಂಗದ ಭಕ್ತ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ದೊರೆತ ಆಶೀರ್ವಾದ ಎಂದು ಭಾವಿಸುತ್ತೇವೆ.

ತಿರುಪತಿ ಮತ್ತು ಮಂತ್ರಾಲಯ ನಡುವೆ ಧಾರ್ಮಿಕ, ಸಂಸ್ಕೃತಿಕ ಸಂಬಂಧಗಳು ಮತ್ತಷ್ಟ ಗಟ್ಟಿಗೊಳ್ಳುತ್ತಿದೆ ಎಂದರು.

ಇದಕ್ಕೂ ಮೊದಲು ರಾಯರ ಮೂಲ ಬೃಂದಾವನ ನೈರ್ಮಲ್ಯ ವುಸರ್ಜನೆ, ಪಂಚಾಮೃತಾಭಿಷೇಕ ಮಾಡಿ ಹೂಗಳಿಂದ ಅಲಂಕಾರ ಮಾಡಲಾಯಿತು. ಭಕ್ತರು ರಾಯರ ಬೃಂದಾವನದ ಶಿಲಾ ಮಂಟಪಕ್ಕೆ ಸುವರ್ಣ ಲೇಪಿತ ಕವಚಗಳನ್ನ ಅಳವಡಿಸಲಾಯಿತು. ನಂತರ ಸುಬುಧೇಂದ್ರ ತೀರ್ಥ ಸ್ವಾಮಿಜಿಯಿಂದ ಮೂಲ ರಾಮ ದೇವರ ಪೂಜೆ ಕಾರ್ಯಕ್ರಮ ನೆರವೇರಿತು. ಸಾವಿರಾರು ಭಕ್ತರು ಈ ಪುಣ್ಯ ಕಾರ್ಯವನ್ನ ಕಣ್ತುಂಬಿ ಕೊಂಡು ಧನ್ಯತೆಯನ್ನು ಅನುಭವಿಸಿದರು.

ಮಂತ್ರಾಲಯದಲ್ಲಿ ನಿರ್ಮಿಸಲಾಗಿರುವ ನೂತನ ಕಲ್ಯಾಣಿಗೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಲೋಕಾರ್ಪಣೆ ಮಾಡಿದರು.

ಮಂತ್ರಾಲಯ ಶ್ರೀಗಳಿಂದ ಪುಷ್ಕರಣಿಗೆ ಚಾಲನೆ

ಮೊದಲ ಬಾರಿಗೆ ಪುಷ್ಕರಣಿ (ಕಲ್ಯಾಣಿ) ಯನ್ನು ಭಕ್ತರು ದೇಣಿಗೆ ರೂಪದಲ್ಲಿ ನಿರ್ಮಿಸಿದ್ದು, ಶ್ರೀಗಳು ವಿದ್ಯುಕ್ತ ಚಾಲನೆ ನೀಡಿದರು. ಉತ್ಸವ ರಾಯರ ಮೂರ್ತಿಯನ್ನ ತೆಪ್ಪದಲ್ಲಿ ಪ್ರತಿಷ್ಠಾಪಿಸಿ, ಪುಷ್ಕರಣಿಯಲ್ಲಿ ಮೂರು ಸುತ್ತು ಹಾಕುವ ತೆಪ್ಪೋತ್ಸವ ಕಾರ್ಯವನ್ನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮಠದ ಸಿಬ್ಬಂದಿ, ಶ್ರೀಮಠದ ವಿಧ್ವಾಂಸರು, ಸಾವಿರಾರು ಭಕ್ತರು ಭಾಗಿಯಾಗಿದ್ದರು.

ಪ್ರವಾಸಿ ಪ್ರಪಂಚ ಅಂದ್ರೆ, ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ಭೂತಾನ್‌ನಲ್ಲಿ ಒಂದು ಮಗು ಹುಟ್ಟಿದರೆ ಹತ್ತು ಸಸಿಗಳನ್ನು ನೆಡಬೇಕು!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಭೂತಾನ್‌ನಲ್ಲಿ ಪ್ರತಿ ಮಗು ಜನಿಸಿದಾಗ, ಮರದ ಹತ್ತು ಸಸಿಗಳನ್ನು ನೆಡಬೇಕು ಎಂಬ ನಿಯಮವಿದೆಯಂತೆ, ಹೌದಾ?'' ಎಂದು ನಮ್ಮ ಗೈಡ್ ಅನ್ನು ಕೇಳಿದೆ. ನಾನು ಈ ಸಂಗತಿಯನ್ನು ಕೆಲವು ವರ್ಷಗಳ ಹಿಂದೆ 'ರೀಡರ್ಸ್ ಡೈಜೆಸ್ಟ್'ನಲ್ಲಿ ಓದಿದ್ದೆ. ಅದಕ್ಕೆ ಆತ ''ನಮ್ಮ ದೇಶದಲ್ಲಿ ಅಂಥ ಕಾನೂನೇನೂ ಇಲ್ಲ. ಆದರೆ ವಾಸ್ತವದಲ್ಲಿ ಇದು ಒಂದು ಪ್ರೀತಿಯ ಮತ್ತು ಸಾಂಕೇತಿಕ ಆಚರಣೆ. ಈ ಆಚರಣೆಯು ವಿಶೇಷವಾಗಿ ರಾಜಮನೆತನದಲ್ಲಿ ಯಾರಾದರೂ ಜನಿಸಿದ ಸಂದರ್ಭಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಇದು ದೇಶದ ಪರಿಸರ ಪ್ರೇಮ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಒಂದು ಆಚರಣೆ'' ಎಂದು ಹೇಳಿದ. ಅಂದರೆ ಈಗಲೂ ಕೆಲವರು ತಮ್ಮ ಮನೆಯಲ್ಲಿ ಮಗು ಹುಟ್ಟಿದ ತಕ್ಷಣ ಮರದ ಹತ್ತು ಸಸಿಗಳನ್ನು ನೆಡುತ್ತಾರೆ.

ಭೂತಾನಿಯರು ಬೌದ್ಧ ಧರ್ಮವನ್ನು ಪಾಲಿಸುವವರು. ಬೌದ್ಧ ಧರ್ಮದಲ್ಲಿ ಮರಗಳಿಗೆ ದೈವಿಕ ಸ್ಥಾನ. ಅವುಗಳನ್ನು ಜೀವನದ ಮೂಲವೆಂದು ಪರಿಗಣಿಸುತ್ತಾರೆ. ಮರಗಳು ದೀರ್ಘಾಯುಷ್ಯ, ಆರೋಗ್ಯ, ಸೌಂದರ್ಯ ಮತ್ತು ಕರುಣೆಯ ಸಂಕೇತಗಳಾಗಿವೆ. ಒಂದು ಮಗು ಜನಿಸಿದಾಗ ಮರದ ಸಸಿಯನ್ನು ನೆಡುವುದು, ಮಗುವಿನ ಜೀವನವೂ ಮರದಂತೆಯೇ ಆರೋಗ್ಯಕರವಾಗಿ, ಬಲಿಷ್ಠವಾಗಿ, ಪರೋಪಕಾರಿಯಾಗಿ ಮತ್ತು ದೀರ್ಘಕಾಲದವರೆಗೆ ಇರಲಿ ಎಂದು ಆಶಿಸುವುದರ ಸಂಕೇತವಾಗಿದೆ. 2016ರಲ್ಲಿ, ಭೂತಾನ್ ರಾಜ ಜಿಗ್ಮೆ ಖೇಸರ್ ನಮ್ಗ್ಯೆಲ್ ವಾಂಗ್ಚುಕ್ ಮತ್ತು ರಾಣಿ ಜೆಟ್ಸುನ್ ಪೆಮಾ ಅವರಿಗೆ ಮಗುವಾದಾಗ, ದೇಶದಾದ್ಯಂತ ಈ ಆಚರಣೆ ದೊಡ್ಡ ಮಟ್ಟದಲ್ಲಿ ನಡೆಯಿತು. ಅಂದು ಒಂದು ಲಕ್ಷದ ಎಂಟು ಸಾವಿರ ಸಸಿಗಳನ್ನು ನೆಡಲಾಯಿತು. 108 ಎಂಬುದು ಬೌದ್ಧ ಧರ್ಮದಲ್ಲಿ ಪವಿತ್ರ ಸಂಖ್ಯೆಯಾಗಿದ್ದು, ಇದು ಜ್ಞಾನೋದಯವನ್ನು ಸಾಧಿಸಲು 108 ನ್ಯೂನತೆಗಳನ್ನು ನಿವಾರಿಸಬೇಕು ಎಂಬ ನಂಬಿಕೆಯನ್ನು ಪ್ರತಿನಿಧಿಸುತ್ತದೆ.

ಈ ಸಸಿಗಳನ್ನು ರಾಜಕುಮಾರನಿಗಾಗಿನ ಪ್ರಾರ್ಥನೆ ಮತ್ತು ಶುಭಾಶಯಗಳ ಸಂಕೇತವಾಗಿ ನೆಡಲಾಯಿತು. ಇದರಲ್ಲಿ ಸುಮಾರು 82,000 ಕುಟುಂಬಗಳು ತಲಾ ಒಂದು ಸಸಿಯನ್ನು ನೆಟ್ಟರೆ, ಉಳಿದ ಸಸಿಗಳನ್ನು ಸ್ವಯಂಸೇವಕರು ದೇಶದ ವಿವಿಧೆಡೆ ನೆಟ್ಟರು. ಭೂತಾನ್ ಪರಿಸರ ಸಂರಕ್ಷಣೆಗೆ ಅಗ್ರಗಣ್ಯ ಆದ್ಯತೆ ನೀಡುವ ದೇಶವಾಗಿದೆ. ಇದರ ಸಂವಿಧಾನದ ಪ್ರಕಾರ, ದೇಶದ ಶೇ. 60ರಷ್ಟು ಪ್ರದೇಶವು ಯಾವಾಗಲೂ ಅರಣ್ಯದಿಂದ ಆವರಿಸಿರಬೇಕು. ಪ್ರಸ್ತುತ, ಭೂತಾನ್‌ನ ಶೇ. 70ರಷ್ಟು ಭೂಮಿ ಅರಣ್ಯದಿಂದ ಆವೃತವಾಗಿದೆ. ಈ ಸಸಿ ನೆಡುವ ಆಚರಣೆ ಭೂತಾನ್‌ನ ಈ ಪರಿಸರ ಬದ್ಧತೆಗೆ ಒಂದು ಸ್ಪಷ್ಟ ಉದಾಹರಣೆಯಾಗಿದೆ. ಭೂತಾನ್ ವಿಶ್ವದ ಏಕೈಕ 'ಕಾರ್ಬನ್ ನೆಗೆಟಿವ್' ದೇಶವಾಗಿದೆ. ಅಂದರೆ ಇದು ಉತ್ಪಾದಿಸುವುದಕ್ಕಿಂತ ಹೆಚ್ಚು ಇಂಗಾಲವನ್ನು ಹೀರಿಕೊಳ್ಳುತ್ತದೆ.

ಈ ಆಚರಣೆಯು ಕೇವಲ ಒಂದು ಕುಟುಂಬಕ್ಕೆ ಸೀಮಿತವಲ್ಲ. ಇದು ಇಡೀ ಸಮಾಜವನ್ನು ಒಳಗೊಳ್ಳುತ್ತದೆ. ಮಗು ಹುಟ್ಟಿದಾಗ ಮರದ ಸಸಿ ನೆಡುವುದು, ಮರಗಳ ಕುರಿತ ಪ್ರೀತಿಯನ್ನು ಮತ್ತು ಪರಿಸರದ ಮಹತ್ವವನ್ನು ಪೀಳಿಗೆಯಿಂದ ಪೀಳಿಗೆಗೆ ಹಂಚಿಕೊಳ್ಳುವ ಒಂದು ವಿಶಿಷ್ಟ ವಿಧಾನವಾಗಿದೆ. ಈ ಆಚರಣೆಯು ಇಡೀ ಸಮುದಾಯವನ್ನು ಒಗ್ಗೂಡಿಸಿ, ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಪಾತ್ರವನ್ನು ತಿಳಿಸುತ್ತದೆ. ಹೀಗಾಗಿ ಭೂತಾನ್‌ನಲ್ಲಿ ಎಲ್ಲಿಯೇ ಹೋದರೂ ಹಸಿರು, ಎಲ್ಲಿಯೇ ಹೋದರೂ ಕಾಡು ಗಾಢವಾಗಿ ಕಂಗೊಳಿಸುತ್ತದೆ.

ಪ್ರತಿಯೊಂದು ಕುಟುಂಬವೂ ಪ್ರತಿ ಮಗುವಿನ ಜನನದ ಸಂದರ್ಭದಲ್ಲಿ ಹತ್ತು ಸಸಿಗಳನ್ನು ನೆಡಬೇಕು ಎಂದು ಸರಕಾರ ನಿಯಮ ರೂಪಿಸದೇ ಇರಬಹುದು. ಆದರೆ, ಹಲವು ಕುಟುಂಬಗಳು ಮಗುವಿನ ಜನನದ ಗೌರವಾರ್ಥವಾಗಿ ಸಸಿಗಳನ್ನು ನೆಡುವುದು ಒಂದು ಸಾಮಾನ್ಯ, ಜವಾಬ್ದಾರಿಯುತ ಮತ್ತು ಪ್ರೀತಿಯ ಆಚರಣೆಯಾಗಿದೆ. ಈ ಸಸಿಗಳು ಮಗುವಿನ ಜತೆಗೆ ಬೆಳೆಯುತ್ತವೆ ಎಂಬುದು ಜನಪ್ರಿಯ ನಂಬಿಕೆ. ಹೀಗೆ, ಭೂತಾನ್‌ನಲ್ಲಿ ಮಗು ಜನಿಸಿದಾಗ ಮರದ ಸಸಿ ನೆಡುವುದು ಕೇವಲ ಪರಿಸರ ಸಂರಕ್ಷಣೆಯ ಭಾಗವಲ್ಲ, ಬದಲಿಗೆ ಇದು ಅವರ ಸಂಸ್ಕೃತಿ, ಧರ್ಮ ಮತ್ತು ಸಂತೋಷವನ್ನು ವ್ಯಕ್ತಪಡಿಸುವ ಒಂದು ಸುಂದರ ಸಂಪ್ರದಾಯವಾಗಿದೆ.

ಭೂತಾನ್‌ನಲ್ಲಿ ಯಾವುದೇ ನಿಯಮವನ್ನಾದರೂ ಸರಕಾರ ಕಾನೂನು ಮಾಡಿ ಜಾರಿಗೆ ತರಬೇಕೆಂದಿಲ್ಲ. ರಾಜಮನೆತನದವರು ಅಥವಾ ಧರ್ಮಗುರುಗಳು ಹೇಳಿದರೆ ಅದನ್ನು ಶಿರಸಾ ಪಾಲಿಸುತ್ತಾರೆ. ಅದೇ ಅವರಿಗೆ ಕಾನೂನು. 'ಮಗು ಹುಟ್ಟಿದಾಗ, ಹತ್ತು ಸಸಿಗಳನ್ನು ನೆಡಬೇಕು' ಎಂಬ ನಿಯಮವೂ ಹೀಗೇ ಆಚರಣೆಗೆ ಬಂದಿದೆ. ಅದರಲ್ಲೂ ಭೂತಾನಿಯರು ಅರಣ್ಯ ಸಂರಕ್ಷಣೆಯಲ್ಲಿ ಮತ್ತು ಪರಿಸರದ ಹಿತ ಕಾಯುವುದರಲ್ಲಿ ಯಾವ ನಿಯಮವನ್ನಾದರೂ ತಲೆ ಮೇಲೆ ಹೊತ್ತುಕೊಂಡು ಪಾಲಿಸುತ್ತಾರೆ. ಅದನ್ನು ಉಲ್ಲಂಘಿಸುವ ಪ್ರಶ್ನೆಯೇ ಇಲ್ಲ. ಹೀಗಾಗಿ ಭೂತಾನ್‌ನಲ್ಲಿ ಅಗತ್ಯಕ್ಕಿಂತ ಹೆಚ್ಚು ಕಾಡು ಇದೆ.

ಹಲ್ಲುನೋವು ಬಂದರೆ...

ಹಲ್ಲುನೋವು ಬಂದಾಗ, ಹಲ್ಲಿನ ಡಾಕ್ಟರ್‌ರನ್ನು ಭೇಟಿಯಾಗಲು, ಅವರಿಗೆ ಹಲ್ಲುಗಳನ್ನು ತೋರಿಸಲು, ಭೂತಾನಿಯರು ವಿದೇಶಕ್ಕೆ (ಭಾರತಕ್ಕೆ) ಹೋಗುತ್ತಾರೆ ಅಂದ್ರೆ ನಂಬಬೇಕು!

ವಾಸ್ತವದಲ್ಲಿ, ಭೂತಾನ್‌ನ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ದಂತ ಆರೋಗ್ಯ ಸೇವೆಗಳನ್ನು ದೇಶದ ಎಲ್ಲ ನಾಗರಿಕರಿಗೆ ಉಚಿತವಾಗಿ ನೀಡಲು ಪ್ರಯತ್ನಿಸುತ್ತಿದೆ. ಇದು ಭೂತಾನ್‌ನ ವಿಶಿಷ್ಟವಾದ, ಸಾರ್ವತ್ರಿಕ ಆರೋಗ್ಯ ಸೇವಾನೀತಿಯ ಭಾಗವಾಗಿದೆ. ಭೂತಾನ್‌ನಲ್ಲಿ ಸರಕಾರಿ ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳಲ್ಲಿ ಎಲ್ಲ ವೈದ್ಯಕೀಯ ಸೇವೆಗಳು ಸಂಪೂರ್ಣವಾಗಿ ಉಚಿತ. ದಂತ ಚಿಕಿತ್ಸೆಯೂ ಇದಕ್ಕೆ ಹೊರತಾಗಿಲ್ಲ. ಸಾಮಾನ್ಯ ದಂತ ತಪಾಸಣೆ, ಹಲ್ಲು ಕೀಳಿಸುವುದು ಮತ್ತು ಫಿಲ್ಲಿಂಗ್‌ಗಳಂಥ ಮೂಲಭೂತ ಸೇವೆಗಳನ್ನು ದೇಶದ ಪ್ರತಿಯೊಬ್ಬ ನಾಗರಿಕನೂ ಉಚಿತವಾಗಿ ಪಡೆಯಬಹುದು.

ಭೂತಾನ್‌ನ ಜನಸಂಖ್ಯೆ 7.92 ಲಕ್ಷ. ಆ ಪೈಕಿ ದಂತವೈದ್ಯರು ಒಂದು ನೂರಕ್ಕಿಂತ ಕಮ್ಮಿಯಿದ್ದಾರೆ. ಅಲ್ಲಿನ ಆರೋಗ್ಯ ಇಲಾಖೆ ದಂತ ಆರೋಗ್ಯ ಸೇವೆಗಳನ್ನು ಸುಧಾರಿಸಲು ನಿರಂತರವಾಗಿ ಕೆಲಸ ಮಾಡುತ್ತಿದೆ. ಆದರೂ, ಸಂಪನ್ಮೂಲಗಳು ಮತ್ತು ವೈದ್ಯಕೀಯ ಸಿಬ್ಬಂದಿಯ ಕೊರತೆಯಿಂದಾಗಿ, ಎಲ್ಲರಿಗೂ ಸುಲಭವಾಗಿ ತಲುಪುವಷ್ಟು ದಂತ ಚಿಕಿತ್ಸಾಲಯಗಳು ಮತ್ತು ವೈದ್ಯರನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಅದರಲ್ಲೂ ದೂರದ, ಗುಡ್ಡಗಾಡು ಮತ್ತು ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ದಂತ ಚಿಕಿತ್ಸೆ ಒದಗಿಸುವುದು ಕಷ್ಟಕರ.

ದೂರದ ಪ್ರದೇಶಗಳ ಜನರಿಗೆ ದಂತ ಸೇವೆಗಳನ್ನು ಒದಗಿಸಲು, ಆರೋಗ್ಯ ಸಚಿವಾಲಯವು ನಿಯತವಾಗಿ 'ಡೆಂಟಲ್ ಔಟ್‌ರೀಚ್ ಕ್ಲಿನಿಕ್'ಗಳನ್ನು ಆಯೋಜಿಸುತ್ತದೆ. ಈ ಕ್ಲಿನಿಕ್‌ಗಳಲ್ಲಿ ದಂತ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ದೂರದ ಗ್ರಾಮಗಳಿಗೆ ಭೇಟಿ ನೀಡಿ, ಅಲ್ಲಿನ ಜನರಿಗೆ ಮೂಲಭೂತ ದಂತ ತಪಾಸಣೆ ಮತ್ತು ಚಿಕಿತ್ಸೆ ನೀಡುತ್ತಾರೆ.

ತಜ್ಞ ದಂತವೈದ್ಯರ ಕೊರತೆಯಿಂದಾಗಿ, ಈ ಸೇವೆಗಳಿಗೆ ಬಹಳ ಹೆಚ್ಚಿನ ಬೇಡಿಕೆ ಇದ್ದು, ರೋಗಿಗಳು ಚಿಕಿತ್ಸೆಗಾಗಿ ಒಂದು ವರ್ಷಕ್ಕಿಂತ ಹೆಚ್ಚು ಕಾಯುವ ಪರಿಸ್ಥಿತಿ ಇದೆ. ಈ ಕಾರಣದಿಂದಾಗಿ ಅನೇಕ ಭೂತಾನಿಯರು ಉತ್ತಮ ಮತ್ತು ತ್ವರಿತ ಚಿಕಿತ್ಸೆಗಾಗಿ ಭಾರತಕ್ಕೆ ಬರುತ್ತಾರೆ. ಹಲ್ಲು ನೋವಿಗೂ ಭೂತಾನಿಯರಿಗೆ ವಿದೇಶಕ್ಕೆ ಹೋಗಬೇಕಾದ ಸ್ಥಿತಿ!

ಭೂತಾನಿಯರು ಮತ್ತು ಉಡುಪು

ಕೊಡವರಿಗೆ ಅವರದ್ದೇ ಆದ ಉಡುಪು, ದಿರಿಸು ಇದೆ. ಆದರೆ ಅವರು ಅದನ್ನು ನಿತ್ಯವೂ ಧರಿಸುವುದಿಲ್ಲ. ಹಬ್ಬ-ಹರಿದಿನ ಅಥವಾ ವಿಶೇಷ ದಿನಗಳಂದು ಮಾತ್ರ ಧರಿಸುತ್ತಾರೆ. ಇದು ಎಲ್ಲ ಜನಾಂಗಗಳಲ್ಲೂ ಸಾಮಾನ್ಯ. ಇಂದು, ಅನೇಕ ದೇಶಗಳಲ್ಲಿ ಸಾಂಪ್ರದಾಯಿಕ ಉಡುಪುಗಳನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸಲಾಗುತ್ತದೆ.

ಆದರೆ ಭೂತಾನಿಯರು ಹಾಗಲ್ಲ, ಭೂತಾನ್‌ನಲ್ಲಿ ಸಾಂಪ್ರದಾಯಿಕ ಉಡುಪುಗಳು ಜನರ ದೈನಂದಿನ ಜೀವನದ ಭಾಗವಾಗಿವೆ. ಇದು ಕೇವಲ ಉಡುಪಲ್ಲ, ಬದಲಾಗಿ ಅವರ ರಾಷ್ಟ್ರೀಯ ಅಸ್ಮಿತೆ, ಸಂಸ್ಕೃತಿ ಮತ್ತು ಇತಿಹಾಸದ ಸಂಕೇತ. ಭೂತಾನಿಯರು ತಮ್ಮ ಪರಂಪರೆಯ ಉಡುಪುಗಳನ್ನು ನಿತ್ಯವೂ ಧರಿಸುತ್ತಾರೆ. ಇದು ಆ ದೇಶದ ಸಂಸ್ಕೃತಿ ಮತ್ತು ಇತಿಹಾಸದ ಅನನ್ಯತೆಗೆ ನಿದರ್ಶನ.

'ಘೋ' ಎಂಬುದು ಭೂತಾನಿನ ಪುರುಷರು ಧರಿಸುವ, ಮೊಣಕಾಲಿನವರೆಗಿನ ಒಂದು ಉದ್ದದ ವಸ್ತ್ರ. ಇದು ಜಪಾನಿನ ಕಿಮೋನೋ ಅಥವಾ ಸ್ಕಾಟ್ಲೆಂಡ್‌ನ ಕಿಲ್ಟ್ ಅನ್ನು ಹೋಲುತ್ತದೆ. ಇದನ್ನು ಧರಿಸಿದಾಗ, ಸೊಂಟದ ಸುತ್ತ ಒಂದು ದೊಡ್ಡ ಮಡಿಕೆ ಬೀಳುತ್ತದೆ. ಈ ಜೇಬು ರಹಿತ ಉಡುಪು ಆಧುನಿಕ ಜಗತ್ತಿನಲ್ಲಿ ಅಸಾಮಾನ್ಯವೆಂದು ಕಾಣಿಸಬಹುದು, ಆದರೆ ಇದು ಭೂತಾನಿಯರಿಗೆ ತುಂಬಾ ಉಪಯುಕ್ತವಾಗಿದೆ. ಅವರು ಈ ಮಡಿಕೆಯಲ್ಲಿ ತಮ್ಮ ಮೊಬೈಲ್ ಫೋನ್‌ಗಳು, ಪಾಕಿಯ (ಬಿದಿರಿನ ಕಪ್) ಮತ್ತು ಇತರ ವೈಯಕ್ತಿಕ ವಸ್ತುಗಳನ್ನು ಇಡುತ್ತಾರೆ.

'ಘೋ' ವಸ್ತ್ರವನ್ನು ಧರಿಸುವುದು ಒಂದು ಕಲೆ. ಇದನ್ನು ಮೊದಲು ಎಡದಿಂದ ಬಲಕ್ಕೆ ಸುತ್ತಿ ನಂತರ ಬೆಲ್ಟ್‌ನಿಂದ ಭದ್ರಪಡಿಸಲಾಗುತ್ತದೆ. ಇದರ ಜತೆಗೆ, ಬಿಳಿ ಬಣ್ಣದ ಉದ್ದ ತೋಳಿನ ಕುಪ್ಪಸ (ತೆಗೋ) ವನ್ನು ಒಳಗೆ ಧರಿಸಲಾಗುತ್ತದೆ. ಇದು ತೋಳಿನ ಮೂಲಕ ಕಾಣುತ್ತದೆ. 'ಘೋ' ಧರಿಸುವ ಶೈಲಿಯು ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಕೂಡ ಸೂಚಿಸುತ್ತದೆ. ಉದಾಹರಣೆಗೆ, ಅಧಿಕಾರಿಗಳು ಮತ್ತು ರಾಜಮನೆತನದ ಸದಸ್ಯರು ತಮ್ಮ 'ಘೋ'ವನ್ನು ಧರಿಸುವಾಗ, ಕೆಲವು ನಿರ್ದಿಷ್ಟ ನಿಯಮಗಳನ್ನು ಪಾಲಿಸುತ್ತಾರೆ.

ಹಾಗೆಯೇ 'ಕೀರಾ' ಎಂಬುದು ಭೂತಾನ್ ಮಹಿಳೆಯರ ಸಾಂಪ್ರದಾಯಿಕ ಉಡುಪು. ಇದು ಉದ್ದವಾದ, ಮೊಣಕಾಲಿನ ವರೆಗಿನ ಉಡುಪು. ಇದನ್ನು ಎರಡು ಕಡೆಗಳಿಂದ ಭುಜಗಳಿಗೆ ಪಿನ್ ಮಾಡಲಾಗುತ್ತದೆ ಮತ್ತು ಸೊಂಟಕ್ಕೆ ಬೆಲ್ಟ್‌ನಿಂದ ಭದ್ರಪಡಿಸಲಾಗು ತ್ತದೆ. ಇದನ್ನು ಒಳಗೆ ಉದ್ದನೆಯ ಕುಪ್ಪಸದೊಂದಿಗೆ ಧರಿಸಲಾಗುತ್ತದೆ. ಕೀರಾದ ಬಣ್ಣ ಮತ್ತು ವಿನ್ಯಾಸವು ವ್ಯಕ್ತಿಯ ಅಭಿರುಚಿ ಮತ್ತು ಸಾಮಾಜಿಕ ಸ್ಥಾನವನ್ನು ಸೂಚಿಸಬಹುದು. ಇದನ್ನು ಕೈಯಿಂದ ನೇಯ್ದ ಪಟ್ಟೆಗಳಿಂದ ತಯಾರಿಸಲಾಗುತ್ತದೆ. ಇದನ್ನು ನೇಯಲು ಗಂಟೆಗಟ್ಟಲೆ ಶ್ರಮ ಬೇಕಾಗುತ್ತದೆ. ಹಬ್ಬಗಳು ಮತ್ತು ವಿಶೇಷ ಸಂದರ್ಭಗಳಲ್ಲಿ, ಮಹಿಳೆಯರು ತಮ್ಮ ಅತ್ಯುತ್ತಮ 'ಕೀರಾ' ಧರಿಸುತ್ತಾರೆ, ಅವುಗಳನ್ನು ರೇಷ್ಮೆ ಮತ್ತು ಇತರ ದುಬಾರಿ ಬಟ್ಟೆಗಳಿಂದ ತಯಾರಿಸುತ್ತಾರೆ.

ಭೂತಾನ್ ಸರಕಾರ 'ಡ್ರಿಗಲಾ ನಮ್ಜಾ' ಎಂಬ ಸಂಹಿತೆಯನ್ನು ಅನುಸರಿಸುತ್ತದೆ. ಇದರರ್ಥ 'ಒಳ್ಳೆಯ ಶಿಷ್ಟಾಚಾರದ ನಿಯಮ' ಅಂತ. ಇದು ಉಡುಪು, ನಡವಳಿಕೆ ಮತ್ತು ಶಿಷ್ಟಾಚಾರವನ್ನು ನಿಯಂತ್ರಿಸುವ ಒಂದು ವ್ಯವಸ್ಥೆ. ಈ ನಿಯಮಗಳ ಪ್ರಕಾರ, ಎಲ್ಲ ನಾಗರಿಕರು, ವಿಶೇಷವಾಗಿ ಸರಕಾರಿ ಕಚೇರಿಗಳು, ಶಾಲೆಗಳು, ಮಠಗಳು ಮತ್ತು ಇತರ ಅಧಿಕೃತ ಸ್ಥಳಗಳಲ್ಲಿ, ಸಾಂಪ್ರದಾಯಿಕ ಉಡುಪು ಧರಿಸುವುದು ಕಡ್ಡಾಯ. 'ಡ್ರಿಗಲಾ ನಮ್ಜಾ' ವಿಭಿನ್ನ ಸಂದರ್ಭಗಳಲ್ಲಿ ವಿಭಿನ್ನ ಉಡುಪುಗಳನ್ನು ಧರಿಸಲು ಸೂಚಿಸುತ್ತದೆ. ಉದಾಹರಣೆಗೆ, ರಾಜಮನೆತನದ ಸದಸ್ಯರು, ಸರಕಾರಿ ಅಧಿಕಾರಿಗಳು ಮತ್ತು ಹಿರಿಯರು ಕೆಲವು ವಿಶೇಷ ಬಣ್ಣದ ರೇಷ್ಮೆ ಶಾಲನ್ನು (ಕಬ್ನೇ) ಧರಿಸಬೇಕು.

ಭೂತಾನ್ ಕೂಡ ಆಧುನಿಕತೆಯ ಪ್ರಭಾವಕ್ಕೆ ಒಳಗಾಗುತ್ತಿದೆ. ಆದರೆ, ಆ ದೇಶವು ತನ್ನ ಸಾಂಪ್ರದಾಯಿಕ ಉಡುಪು ಮತ್ತು ಸಂಸ್ಕೃತಿಯನ್ನು ಕಾಪಾಡಲು ಬದ್ಧವಾಗಿದೆ. ಈ ಉಡುಪುಗಳನ್ನು ಧರಿಸುವುದು ಜನರ ದೈನಂದಿನ ಬದುಕಿನ ಭಾಗವಾಗಿರುವುದರಿಂದ, ಇದು ಯುವ ಪೀಳಿಗೆಗೆ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಅದಕ್ಕೆ ಗೌರವ ನೀಡಲು ಸಹಾಯ ಮಾಡುತ್ತದೆ.

ಸಾಂಪ್ರದಾಯಿಕ ಉಡುಪುಗಳು ಭೂತಾನ್‌ನ ರಾಷ್ಟ್ರೀಯ ಗುರುತು ಮತ್ತು ಪ್ರಜ್ಞೆಯ ಪ್ರಮುಖ ಭಾಗವಾಗಿವೆ. ಇವು ಆ ದೇಶದ ರಾಷ್ಟ್ರೀಯ ಹೆಮ್ಮೆ ಮತ್ತು ಪ್ರಾದೇಶಿಕ ಪ್ರಜ್ಞೆಯನ್ನು ಬಲಪಡಿಸುತ್ತವೆ. ಭೂತಾನ್ ತನ್ನ ಸಂಪ್ರದಾಯಗಳಿಗೆ ನೀಡಿರುವ ಮಹತ್ವ, ಆಧುನಿಕ ಜಗತ್ತಿನಲ್ಲಿ ತಮ್ಮ ಗುರುತನ್ನು ಕಳೆದುಕೊಳ್ಳಲು ಬಯಸದ ರಾಷ್ಟ್ರಗಳಿಗೆ ಒಂದು ಮಾದರಿಯಾಗಿದೆ.

ತಂಬಾಕು ಮಾರಾಟ ನಿಷೇಧ

ನನ್ನ ಜತೆಗಿದ್ದ ಸ್ನೇಹಿತರಿಬ್ಬರು ಸಾರ್ವಜನಿಕ ಸ್ಥಳಗಳಲ್ಲಿ ನಿಂತು ಸಿಗರೇಟು ಸೇದುತ್ತಿದ್ದರು. ಅಲ್ಲಿಗೆ ಆಗಮಿಸಿದ ನಮ್ಮ ಗೈಡ್, ''ಸರ್, ದಯವಿಟ್ಟು ಇಲ್ಲಿ ಸಿಗರೇಟು ಸೇದುವಂತಿಲ್ಲ'' ಎಂದು ಹೇಳಿದ. ಅದಕ್ಕೆ ನನ್ನ ಸ್ನೇಹಿತರು, ''ಇದು ಬಯಲು ಪ್ರದೇಶ. ಇಲ್ಲಿ ಸೇದಿದರೆ ಏನಾಗುತ್ತದೆ?'' ಎಂದು ಕೇಳಿದರು. ಅದಕ್ಕೆ ಗೈಡ್, ''ನನ್ನ ಲೈಸೆನ್ಸ್ ರದ್ದಾಗುತ್ತದೆ'' ಎಂದ. ಭೂತಾನಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ವಿದೇಶಿಯರು ಸಿಗರೇಟು ಸೇದಿದರೆ, ಅವರೊಂದಿಗಿರುವ ಸ್ಥಳೀಯರು ದಂಡ ಪೀಕಬೇಕಾಗುತ್ತದೆ. ಈ ವಿಷಯದಲ್ಲಿ ಯಾವ ರಿಯಾಯತಿಯೂ ಇಲ್ಲ. ಅಷ್ಟಾಗಿಯೂ ನನ್ನ ಸ್ನೇಹಿತರು ಕದ್ದು ಮುಚ್ಚಿ ಸಿಗರೇಟು ಸೇದಿದರೆ, ಹೆಚ್ಚು ಆತಂಕಕ್ಕೆ ಒಳಗಾಗುತ್ತಿದ್ದವನು ನಮ್ಮ ಗೈಡ್.

ನಿಮಗೆ ಗೊತ್ತಿರಬಹುದು, ಭೂತಾನ್ ತಂಬಾಕು ಮಾರಾಟವನ್ನು ಸಂಪೂರ್ಣ ನಿಷೇಧಿಸಿದ ಮೊದಲ ದೇಶ. ಭೂತಾನ್ ಒಂದು ಸಣ್ಣ ರಾಷ್ಟ್ರವಾದರೂ, ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ಹಲವಾರು ವಿಶಿಷ್ಟ ನೀತಿಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ ಪ್ರಮುಖವಾದದ್ದು ಧೂಮಪಾನ ಮತ್ತು ತಂಬಾಕು ಉತ್ಪನ್ನಗಳ ಮಾರಾಟದ ಸಂಪೂರ್ಣ ನಿಷೇಧ. 2004ರಲ್ಲಿ ಜಾರಿಗೆ ಬಂದ ಈ ನಿಯಮದಿಂದ, ಭೂತಾನ್ ಪ್ರಪಂಚದ ಮೊದಲ 'ತಂಬಾಕು ಮಾರಾಟ ನಿಷೇಧಿತ' ರಾಷ್ಟ್ರವಾಗಿ ಇತಿಹಾಸ ನಿರ್ಮಿಸಿತು.

ಭೂತಾನ್‌ನ ಸಮಾಜದಲ್ಲಿ ಆರೋಗ್ಯ, ಪರಿಸರ ಮತ್ತು ನೈತಿಕ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ. ಬೌದ್ಧ ಧರ್ಮದಲ್ಲಿ ದೇಹ ಮತ್ತು ಮನಸ್ಸಿನ ಶುದ್ಧಿಯನ್ನು ಕಾಪಾಡುವುದು ಪ್ರಮುಖ. ಧೂಮಪಾನದಿಂದ ಉಂಟಾಗುವ ಹಾನಿ, ಆರೋಗ್ಯದ ಕುಸಿತ ಹಾಗೂ ವ್ಯಸನವು ಈ ತತ್ವಕ್ಕೆ ವಿರುದ್ಧ. ವಿಶ್ವ ಆರೋಗ್ಯ ಸಂಸ್ಥೆ (WHO) ವರದಿ ಪ್ರಕಾರ, ತಂಬಾಕು ಸೇವನೆ ಹೃದಯರೋಗ, ಕ್ಯಾನ್ಸರ್, ಉಸಿರಾಟದ ಸಮಸ್ಯೆಗಳನ್ನು ಹೆಚ್ಚಿಸುತ್ತದೆ. ಭೂತಾನ್‌ನ Gross National Happiness ತತ್ವದಲ್ಲಿ, ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯವು ಪ್ರಮುಖ ಸೂಚಕವಾಗಿದೆ.

2004ರಲ್ಲಿ ಭೂತಾನ್ ಸರಕಾರ ತಂಬಾಕು ಉತ್ಪನ್ನಗಳ ಮಾರಾಟವನ್ನು ಸಂಪೂರ್ಣ ನಿಷೇಧಿಸಿತು. ದೇಶದ ಯಾವುದೇ ಅಂಗಡಿ, ಮಾರುಕಟ್ಟೆ ಅಥವಾ ಹೋಟೆಲ್‌ಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಿಲ್ಲ ಎಂದು ಹೇಳಿತು. ಬಸ್ ನಿಲ್ದಾಣ, ಕಚೇರಿ, ಉದ್ಯಾನ, ಶಾಲೆ, ದೇವಸ್ಥಾನ- ಎಲ್ಲೆಡೆ ಧೂಮಪಾನಕ್ಕೆ ಕಟ್ಟುನಿಟ್ಟಿನ ನಿಷೇಧ ಹೇರಿತು. ಉಲ್ಲಂಘಿಸಿದವರಿಗೆ ಭಾರಿ ದಂಡ ಅಥವಾ ನ್ಯಾಯಾಂಗ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿತು. ಭೂತಾನ್ ಸರಕಾರ ತಂಬಾಕು ಬಳಕೆಯನ್ನು ಶೇಕಡಾ ನೂರಕ್ಕೆ ನೂರು ನಿಷೇಧಿಸಲಿಲ್ಲ, ಆದರೆ ಖಾಸಗಿ ಬಳಕೆಗೆ ನಿರ್ದಿಷ್ಟ ಷರತ್ತುಗಳೊಂದಿಗೆ ಅವಕಾಶ ನೀಡಿದೆ. ಜನರು ತಂಬಾಕು ಉತ್ಪನ್ನಗಳನ್ನು ಹೊರ ರಾಷ್ಟ್ರಗಳಿಂದ ಖರೀದಿಸಿ ತರಬಹುದು. ಆಮದು ಮಾಡಿದಾಗ ಸುಮಾರು ಶೇ.100ರಿಂದ ಶೇ.200ರವರೆಗೆ ಕಸ್ಟಮ್ಸ್ ತೆರಿಗೆ ವಿಧಿಸಲಾಗುತ್ತದೆ. ಈ ತೆರಿಗೆ ಮತ್ತು ನಿಯಂತ್ರಣದಿಂದ ತಂಬಾಕು ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಸರಕಾರದ ಉದ್ದೇಶ.

ಭೂತಾನ್ ಸರಕಾರ ಈ ಕಾನೂನನ್ನು ಕೇವಲ ಘೋಷಣೆಯಾಗಿ ಮಾಡಲಿಲ್ಲ, ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಲವಾರು ಕ್ರಮಗಳನ್ನು ಕೈಗೊಂಡಿತು. ಗಡಿಭಾಗಗಳಲ್ಲಿ ತಂಬಾಕು ಕಳ್ಳಸಾಗಣೆ ತಡೆಯಲು ನಿಗಾ ಇಟ್ಟಿತು. ಸಾರ್ವಜನಿಕ ಸಹಭಾಗಿತ್ವದಿಂದಾಗಿ, ಧೂಮಪಾನ ನಿಷೇಧ ಪಾಲನೆಗೆ ಜನರಿಂದಲೇ ಪ್ರೋತ್ಸಾಹ ದಕ್ಕಿತು. ಭೂತಾನ್‌ನ ಆರೋಗ್ಯ ಇಲಾಖೆಯ ವರದಿಯ ಪ್ರಕಾರ, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಯುವಕರಲ್ಲಿ ಧೂಮಪಾನ ಪ್ರಮಾಣ ಕಡಿಮೆಯಾಗಿದೆ. ಶ್ವಾಸಕೋಶ ಸಂಬಂಧಿ ಕಾಯಿಲೆಗಳ ಪ್ರಮಾಣದಲ್ಲಿ ಕ್ರಮೇಣ ಕಡಿತವಾಗಿದೆ. ಭೂತಾನ್‌ನ ತಂಬಾಕು ಮಾರಾಟ ನಿಷೇಧದ ಕ್ರಮವನ್ನು ವಿಶ್ವ ಆರೋಗ್ಯ ಸಂಸ್ಥೆ (WHO) ಶ್ಲಾಘಿಸಿದೆ. ಇತರ ದೇಶಗಳಿಗೆ 'ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿ ದೃಢ ನಿಲುವು' ಎಂದು ಅದು ಕೊಂಡಾಡಿದೆ.

ಭೂತಾನ್‌ನ ಧೂಮಪಾನ ನಿಷೇಧದ ಕ್ರಮ ಕೇವಲ ಆರೋಗ್ಯ ಕಾನೂನಲ್ಲ. ಇದು ದೇಶದ ಸಂಸ್ಕೃತಿ, ಬೌದ್ಧ ಧರ್ಮದ ಮೌಲ್ಯಗಳು ಹಾಗೂ Gross National Happiness ತತ್ವದ ಅವಿಭಾಜ್ಯ ಭಾಗ. ಧೂಮಪಾನದಿಂದ ದೂರವಿರುವುದು ದೈಹಿಕ ಶುದ್ಧತೆಯ ಸಂಕೇತ. ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಮತ್ತು ಆರೋಗ್ಯ ಕಾಪಾಡಲು ಇದು ಸಹಕಾರ ನೀಡುತ್ತದೆ. ಇದು ಸರಕಾರ, ಸಮಾಜ ಮತ್ತು ಧರ್ಮ ಈ ಮೂರೂ ಸಹಮತದಿಂದ ಜಾರಿಗೊಳಿಸಿದ ನೀತಿಯಾಗಿದೆ. ಸಣ್ಣ ರಾಷ್ಟ್ರವೂ ದೊಡ್ಡ ಬದಲಾವಣೆಗೆ ದಾರಿದೀಪವಾಗಬಹುದು. ಭೂತಾನ್‌ನಂತೆ, ಇತರ ದೇಶಗಳೂ ಆರೋಗ್ಯ ಮತ್ತು ಸಂತೋಷಕ್ಕೆ ಪ್ರಾಮುಖ್ಯ ನೀಡಿದರೆ, ಜಗತ್ತು ಹೆಚ್ಚು ಶುದ್ಧ ಮತ್ತು ಆರೋಗ್ಯಕರವಾಗಿರಬಹುದು.

ಕೆಲವು ತಮಾಷೆಯ ಸಂಭಾಷಣೆಗಳು

ನಾನು ಭೂತಾನಿನಲ್ಲಿ ಇದ್ದ ಸಮಯದಲ್ಲಿ ಕೇಳಿದ ಕೆಲವು ತಮಾಷೆಯ ಪ್ರಸಂಗಗಳಿವು:

ಪ್ರವಾಸಿಗ: 'ಭೂತಾನ್‌ನಲ್ಲಿ ಮಳೆ ಯಾವಾಗ ಬೀಳುತ್ತದೆ?'

ಸ್ಥಳೀಯ: 'ಮಳೆ ಬರುವ ಸಮಯ ದೇವರಿಗೆ ಮಾತ್ರ ಗೊತ್ತಿರುತ್ತದೆ... ಆದರೆ ನಾವು ಬಟ್ಟೆ ಒಣಗಿಸಿದ ದಿನವೇ ಅದು ಬರೋದು ಖಚಿತ!'

ಭೂತಾನ್‌ನ ರಾಜಧಾನಿ ಥಿಂಪುವಿಗೆ ಬಂದ ಪ್ರವಾಸಿಗ ಆಶ್ಚರ್ಯದಿಂದ ಕೇಳಿದ:

'ಇಲ್ಲಿ ಟ್ರಾಫಿಕ್ ಸಿಗ್ನಲ್ ಏಕೆ ಇಲ್ಲ?'

ಟ್ಯಾಕ್ಸಿ ಚಾಲಕ: 'ಇಲ್ಲಿ ವಾಹನಗಳಿಗಿಂತ ಯಾಕ್ (ಹಿಮಾಲಯದ ಎಮ್ಮೆ)ಗಳೇ ಹೆಚ್ಚು, ಅವುಗಳಿಗೆ ಸಿಗ್ನಲ್ ಅರ್ಥವಾಗೊಲ್ಲ'.

ಶೀತಕಾಲದಲ್ಲಿ ಪ್ರವಾಸಿಗ ಹೋಟೆಲ್ ಮಾಲೀಕನಿಗೆ ಹೇಳಿದ:

'ಎಷ್ಟೊಂದು ಚಳಿಯಿದೆ, ಕಾಫಿ ಬೇಗ ತಂದುಕೊಡಿ!'

ಮಾಲೀಕ: 'ಚಿಂತಿಸಬೇಡಿ ಸರ್, ಎಷ್ಟೇ ಬೇಗ ತಂದರೂ ಅದು ಮಾತ್ರ ಬಿಸಿಯಾಗಿರುವುದಿಲ್ಲ!'

ವಿದೇಶಿಗ: 'ನೀವು ಜಿಮ್‌ಗೆ ಹೋಗುವುದಿಲ್ಲವೇ?'

ಗ್ರಾಮಸ್ಥ: ನಮ್ಮ ಜಿಮ್ ಬೆಟ್ಟದ ಮೇಲೆ ಇದೆ... ಅಲ್ಲಿ ಹೋಗುವಷ್ಟರಲ್ಲಿ ನಾವು ವ್ಯಾಯಾಮ ಮುಗಿಸಿರುತ್ತೇವೆ'.

ಪ್ರವಾಸಿಗ: 'ಬಿಲ್ ಇಷ್ಟು ಜಾಸ್ತಿ ಯಾಕೆ? ತಿಂಡಿ ಉಚಿತ ಅಂತ ಬೇರೆ ಬೋರ್ಡು ಹಾಕಿದ್ದೀರಿ?'

ಹೋಟೆಲ್ ಮಾಲೀಕ: 'ನಿಜ, ನೀವು ತಿಂದುದು ಉಚಿತ... ಆದರೆ ಬೆಟ್ಟದ ನೋಟಕ್ಕೆ ನಾವು ಚಾರ್ಜ್ ಮಾಡ್ತೀವಿ!'

ಪ್ರವಾಸಿಗ: 'ನಾನು ರಾಜನಿಗೆ ಉಡುಗೊರೆಯಾಗಿ ಖಾಲಿ ಪೆಟ್ಟಿಗೆ ಕೊಟ್ಟೆ. ಏಕೆ ಗೊತ್ತಾ?'

ಸ್ಥಳೀಯ: 'ಏಕೆ?'

ಪ್ರವಾಸಿಗ: ಅದರೊಳಗೆ Gross National Happiness ತುಂಬಿದೆ... ಅದು ಕಾಣಲ್ಲ, ಆದರೆ ಅನುಭವಿಸಬಹುದು!'

ಸ್ಥಳೀಯ: 'ನಮ್ಮ ಈ ಬೆಟ್ಟ ಎಷ್ಟು ಎತ್ತರ?'

ಪ್ರವಾಸಿಗ: 'ಹೆಚ್ಚು ಎತ್ತರ ಇಲ್ಲ, ಆದರೆ ಗುಂಡು ಹಾಕಿ ಹತ್ತಿದ್ರೆ ಅದು ಎವರೆಸ್ಟ್‌ನಂತೇ ಕಾಣಿಸುತ್ತದೆ!'

ತಪಸ್ವಿನಿ ವೃದ್ಧಕನ್ಯೆ ಪ್ರಥಮರಾತ್ರಿಗಷ್ಟೇ ತರುಣಿಯಾದಳು!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಪ್ಪ ಮಹಾತಪಸ್ವಿಯಾದರೆ ಅವನ ಮಾನಸಪುತ್ರಿಯದು ಅಪ್ಪನನ್ನೂ ಮೀರಿಸಿದ ತಪಃಶಕ್ತಿ. ಇದು ಕುಣಿಗಾರ್ಗ್ಯ ಎಂಬ ಬ್ರಹ್ಮರ್ಷಿ ಮತ್ತವನ ಮಾನಸಪುತ್ರಿ ಸುಲಭಾಮೈತ್ರೇಯಿಯ ಕಥೆ. ಮಹಾಭಾರತದ ಶಲ್ಯಪರ್ವದಲ್ಲಿ ಬರುತ್ತದೆ. ಜೀವನದಲ್ಲಿ ರೀತಿನೀತಿಗಳನ್ನು ಗೌರವಿಸುವುದು ಮತ್ತು ಪಾಲಿಸುವುದರ ಮಹತ್ತ್ವ ಅಷ್ಟೇ ಅಲ್ಲದೆ ನೀತಿನಿಯಮಗಳನ್ನು ಮುರಿಯಲಿಕ್ಕೆ ನಾವೇಕೆ ಹಾತೊರೆಯುತ್ತೇವೆ ಎಂಬುದಕ್ಕೆ ಸಂಬಂಧಿಸಿದಂತೆ ಇದರಲ್ಲಿ ನಮಗೆಲ್ಲರಿಗೂ ದೊಡ್ಡದೊಂದು ಪಾಠವಿದೆ. ಓದಿ ಅರ್ಥಮಾಡಿಕೊಂಡು ಅನುಸರಿಸಿದರೆ ಪುಣ್ಯವಿದೆ.

ಸಾಹಿತ್ಯಿಕ ಶ್ರೀಮಂತ ಪದಪುಂಜಗಳಿಂದ ಕಥೆಯನ್ನು ಆರಂಭಿಸುವುದಾದರೆ- ಮಹಾವೀರ್ಯನಾದ ಮಹಾಯಶಸ್ವಿಯಾದ ಕುಣಿಗಾರ್ಗ್ಯ ಎಂಬ ಬ್ರಹ್ಮಋಷಿಯಿದ್ದನು. ಕುಣಿ ಎಂದರೆ ಗಿಡ್ಡ ಎಂಬರ್ಥ, ಗರ್ಗ ಋಷಿಯ ವಂಶದವನಾದ್ದರಿಂದ ಗಾರ್ಗ್ಯ. ತಪಸ್ವಿಗಳಲ್ಲಿ ಶ್ರೇಷ್ಠನಾದ ಆ ವಿಭುವು ವಿಪುಲ ತಪಸ್ಸನ್ನು ತಪಿಸಿ, ಸುಂದರ ಹುಬ್ಬಿನ ಮಗಳೊರ್ವಳನ್ನು ಮನಸ್ಸಿನಿಂದಲೇ ಸೃಷ್ಟಿಸಿದನು. ಅವಳಿಗೆ ಸುಲಭಾಮೈತ್ರೇಯೀ ಎಂದು ಹೆಸರಿಟ್ಟನು. ಅನುಪಮ ಲಾವಣ್ಯವತಿಯಾದ ಅವಳನ್ನು ನೋಡಿ ಮಹಾಯಶಸ್ವಿ ಕುಣಿಗಾರ್ಗ್ಯನು ಪರಮಪ್ರೀತನಾದನು. ತನ್ನಲ್ಲಿದ್ದ ಸಕಲ ವಿದ್ಯೆಗಳನ್ನೂ ಶಾಸ್ತ್ರಗಳನ್ನೂ ಮಗಳಿಗೆ ಧಾರೆಯೆರೆದನು. ಯಜ್ಞಯಾಗಾದಿ ವಿಧಿವಿಧಾನಗಳನ್ನೂ ಅವಳಿಗೆ ಕಲಿಸಿದನು. ತಂದೆಯನ್ನು ಅನುಸರಿಸುತ್ತ ಅವಳೊಬ್ಬ ತಪಸ್ವಿನಿಯೇ ಆಗಿ ಬೆಳೆದಳು. ಪ್ರಾಪ್ತವಯಸ್ಕಳಾದ ಮೇಲೆ ಅವಳನ್ನೊಬ್ಬ ತೇಜಸ್ವಿ ಋಷಿಕುಮಾರನಿಗೆ ಕೊಟ್ಟು ಮದುವೆ ಮಾಡಿಕೊಡಬೇಕೆಂದು ಕುಣಿಗಾರ್ಗ್ಯ ಋಷಿಯ ಆಕಾಂಕ್ಷೆಯಿದ್ದದ್ದು. ಆದರೆ ಎಷ್ಟು ವರರನ್ನು ತೋರಿಸಿದರೂ ಯಾರಲ್ಲಿಯೂ ಅವಳಿಗೆ ಅನುರಾಗ ಉಂಟಾಗಲಿಲ್ಲ. ಕಮಲದ ಎಸಳುಗಳಂಥ ಕಣ್ಣುಗಳಿದ್ದ ಆ ಕಲ್ಯಾಣೀ ಅನಿಂದಿತೆಗೆ ಸಮನೆನಿಸಿದ ಪತಿ ದೊರಕಲೇ ಇಲ್ಲ. ಆದ್ದರಿಂದ ಸುಲಭಾಮೈತ್ರೇಯಿ ಕನ್ಯೆಯಾಗಿಯೇ ಉಳಿದಳು. ಕುಣಿಗಾರ್ಗ್ಯನು ಇನ್ನು ತನ್ನ ಆಯುಷ್ಯ ಮುಗಿಯಿತೆಂದು ದೇಹ ತ್ಯಜಿಸಿ ಸ್ವರ್ಗಕ್ಕೆ ತೆರಳಿದನು. ಸುಲಭಾಮೈತ್ರೇಯಿ ಅದೇ ಆಶ್ರಮವನ್ನು ತನ್ನ ನೆಲೆಯನ್ನಾಗಿ ಮಾಡಿಕೊಂಡು ತಪಸ್ಸಿಗೆ ತೊಡಗಿದಳು. ಮೊದಲು ಉಪವಾಸಾದಿಗಳಿಂದ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದಳು. ಬ್ರಹ್ಮಚಾರಿಣಿಯಾಗಿ ಜೀವನ ಸವೆಸಿದಳು. ನಿರ್ಜನವನದಲ್ಲಿ ಪಿತೃ-ದೇವತೆಗಳ ಅರ್ಚನೆಯಲ್ಲಿ ನಿರತಳಾಗಿ ತಪಸ್ಸಿನಿಂದ ತನ್ನ ದೇಹವನ್ನು ಪೀಡಿಸಿಕೊಂಡಳು. ಕ್ರಮೇಣ ಅವಳ ತಪಸ್ಸು ಮತ್ತಷ್ಟು ಕಠಿಣವಾಗಿ ದೀರ್ಘಕಾಲದವರೆಗೆ ನಡೆಯಿತು.

ತನ್ನನ್ನು ಕೃತಕೃತ್ಯಳೆಂದು ಭಾವಿಸಿದ್ದರೂ ಶ್ರಮಾನ್ವಿತಳಾದ ಸುಲಭಾಮೈತ್ರೇಯಿ ವರ್ಷಗಳು ಕಳೆದಂತೆ ವೃದ್ಧಾಪ್ಯದಿಂದ ಕೃಶಳಾದಳು. ಆಶ್ರಮದಲ್ಲಿ ಸುಲಭವಾಗಿ ಅತ್ತಿಂದಿತ್ತ ಓಡಾಡಲಿಕ್ಕೆ ಅಸಮರ್ಥಳಾಗುವಷ್ಟು ಅವಳಲ್ಲಿ ಮುಪ್ಪಡರಿತು. ಆದರೂ ತಪಸ್ಸಿನ ಮೇಲಿನ ಅವಳ ನಂಬಿಕೆ ಅಚಲವಾಗಿಯೇ ಉಳಿದಿತ್ತು. ಅವಳ ವೃದ್ಧಾವಸ್ಥೆಯನ್ನು ನೋಡಿ ಜನರು ಅವಳನ್ನು 'ವೃದ್ಧಕನ್ಯೆ', 'ವೃದ್ಧ ತಪಸ್ವಿನಿ' ಎಂದೆಲ್ಲ ಕರೆಯಲಾರಂಭಿಸಿದರು. ಆಕೆ ತನ್ನದೇ ದೇಹದಿಂದ ದೂರ ಸರಿಯುತ್ತಿದ್ದಾಳೇನೋ ಎಂದು ಭಾಸವಾಗುತ್ತಿತ್ತು. ಆದರೆ ಆಕೆಯ ಅಂತರಾತ್ಮ ಮಾತ್ರ ಇನ್ನಷ್ಟು ಸಾಧನೆಯತ್ತ ಮುಖ ಮಾಡಿತ್ತು. ಆದ್ದರಿಂದ ತಪಸ್ಸನ್ನು ಮುಂದುವರಿಸಿದ್ದಳು. ಒಂದು ದಿನ, ತಾನು ಹಾಸಿಗೆಯಿಂದ ಸಹಾಯವಿಲ್ಲದೆ ಎದ್ದು ನಿಲ್ಲಲಾಗದ ಸ್ಥಿತಿಗೆ ಬಂದಿದ್ದುದನ್ನು ಕಂಡು ಅವಳಿಗೆ ಆಘಾತವಾಯ್ತು. ಬ್ರಹ್ಮಮುಹೂರ್ತದಲ್ಲಿ ಎದ್ದು ತನ್ನ ನಿತ್ಯಕ್ರಮಗಳನ್ನು ಪ್ರಾರಂಭಿಸುವುದು ಅವಳಿಂದ ಸಾಧ್ಯವಾಗಲಿಲ್ಲ. ಅಲ್ಲಿಯವರೆಗೆ ಯಾರನ್ನೂ ಅವಲಂಬಿಸದಿದ್ದವಳಿಗೆ ಅದೊಂದು ತೀವ್ರ ಸಂಕಟದ ಕ್ಷಣವೇ ಆಗಿತ್ತು. ಎರಡನೆಯ ದಿನದಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಹಾಸಿಗೆಯಿಂದೆದ್ದು ಒಂದುಹೆಜ್ಜೆ ಮುಂದಿಡುವುದೂ ಅಸಾಧ್ಯವಾಯಿತು. ತಪಸ್ಸಿಲ್ಲದೆ, ವ್ರತವಿಲ್ಲದೆ, ತಾನು ಬದುಕಿರುವುದೇ ವ್ಯರ್ಥವೆಂದು ತಿಳಿದುಕೊಂಡಳು. ಭೂಮಿಗೆ ಭಾರವಾಗಿ ಇರುವುದಕ್ಕಿಂತ ಈಗಿಂದೀಗಲೇ ದೇಹ ತ್ಯಜಿಸಬೇಕು ಎಂಬ ನಿರ್ಣಯಕ್ಕೆ ಬಂದಳು. ತನ್ನ ತಪಸ್ಸಿನ ಬಲ ಮತ್ತು ಫಲಗಳಿಂದಾಗಿ ಸದ್ಗತಿ ಸಿಗುವುದೆಂದು ಅವಳು ನಂಬಿದ್ದಳು.

ಹಾಗೆ ವೃದ್ಧಕನ್ಯೆ ದೇಹ ತ್ಯಜಿಸಲು ನಿರ್ಧರಿಸಿದ ಕ್ಷಣದಲ್ಲೇ ನಾರದ ಮಹರ್ಷಿ ಆಕೆಯ ಆಶ್ರಮಕ್ಕೆ ಆಗಮಿಸಿದರು. ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಅವರು ಬರುತ್ತಿದ್ದಂತೆ ಆಶ್ರಮ ಒಮ್ಮಿಂದೊಮ್ಮೆಲೇ ಬೆಳಗಿತು. ದೇವಲೋಕದಿಂದ ಸಂದೇಶವಾಹಕನೆಂಬಂತೆ ಬಂದ ನಾರದ ಮಹರ್ಷಿಯನ್ನು ಸ್ವಾಗತಿಸಲು ವೃದ್ಧಕನ್ಯೆ ಕಷ್ಟಪಟ್ಟು ಎದ್ದು ನಿಂತಳು. ಗೌರವ ಸ್ವೀಕರಿಸಿ ಆಕೆಯ ಮನದಿಂಗಿತವನ್ನು ಅರಿತ ನಾರದ ಮಹರ್ಷಿ ಇಂತೆಂದರು: ''ಅಯ್ಯೋ! ಶುದ್ಧಾತ್ಮೆ ಮಹಾತಪಸ್ವಿನಿಯೇ, ನಿನ್ನ ತಪಸ್ಸು ಮಹತ್ತರವಾದದ್ದು ಮತ್ತು ಗೌರವಾರ್ಹವಾದದ್ದು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಬಾಲ್ಯದಿಂದಲೂ ತಪಸ್ಸಿನಲ್ಲೇ ತೊಡಗಿಸಿಕೊಂಡು ಬಾಳಿನುದ್ದಕ್ಕೂ ತಪಸ್ವಿನಿಯಾಗಿಯೇ ಇದ್ದು ಇದೀಗ ವಾರ್ಧಕ್ಯವನ್ನು ಹೊಂದಿರುವೆಯಾದರೂ ಸ್ತ್ರೀಯರಿಗೆ ಮುಖ್ಯವಾದ ವಿವಾಹಸಂಸ್ಕಾರದ ಮಟ್ಟಿಗೆ ನೀನು ಸಂಸ್ಕಾರಹೀನೆ. ದೇವಲೋಕದ ದೇವತೆಗಳು ಹೇಳುವ ಪ್ರಕಾರ, ವಿವಾಹಸಂಸ್ಕಾರವನ್ನು ಪೂರೈಸದ ಕನ್ಯೆಗೆ ದೇವಲೋಕದ ಪುಣ್ಯದ ಸ್ಥಳಗಳಲ್ಲಿ ಸ್ಥಾನ ಸಿಗುವುದಿಲ್ಲ. ನಾನಿದನ್ನು ದೇವಲೋಕದಲ್ಲಿ ಚರ್ಚೆಯ ವೇಳೆ ಅನೇಕ ಬಾರಿ ಕೇಳಿದ್ದೇನೆ. ಆದ್ದರಿಂದ, ಅವಿವಾಹಿತೆಯಾದ ನಿನಗೆ ದೇವಲೋಕ ಪ್ರವೇಶ ಸಾಧ್ಯವಿಲ್ಲ!''.

ವೃದ್ಧಕನ್ಯೆಯು ನಾರದ ಮಹರ್ಷಿಯ ಮಾತುಗಳನ್ನೆಲ್ಲ ಶಾಂತ ಚಿತ್ತದಿಂದ ಕೇಳಿದಳು. ಯಾವುದಕ್ಕೇ ಆದರೂ ವ್ಯಗ್ರವಾಗಿ ಪ್ರತಿಕ್ರಿಯಿಸುವ ಬದಲು ಮೃದುವಾಗಿ ಪ್ರತಿಸ್ಪಂದಿಸುವುದು ಅವಳಿಗೆ ಅಭ್ಯಾಸವಾಗಿಹೋಗಿತ್ತು. ಮನಸ್ಸಲ್ಲೇ ಯೋಚಿಸಿದಳು: ತಾನು ತಪಸ್ಸನ್ನು ಯಾವುದೇ ಪ್ರತಿಫಲದ ಅಪೇಕ್ಷೆಯಿಂದ ಮಾಡಿದುದಲ್ಲ, ದೇವಲೋಕವನ್ನು ಪಡೆಯಬೇಕೆಂಬ ಆಶಯದಿಂದಂತೂ ಅಲ್ಲವೇಅಲ್ಲ. ಆದರೆ ಜೀವನದಲ್ಲಿ ಇನ್ನೂ ಏನಾದರೂ ಉಳಿದಿದ್ದರೆ, ಈ ಸತ್ವ ಪರೀಕ್ಷೆಯನ್ನು ಸಹ ವಿನಮ್ರತೆಯಿಂದಲೇ ಸ್ವೀಕರಿಸುತ್ತೇನೆ ಎಂದು. ಅವಳು ತಪಸ್ಸಿನಲ್ಲಿ ಸದಾ ಉನ್ನತ ಚಿಂತನೆಯನ್ನೇ ಪಾಲಿಸುತ್ತಿದ್ದವಳು. ರೀತಿನೀತಿಗಳನ್ನು ಅನುಸರಿಸುವುದು ಆಕೆಗೆ ಚೆನ್ನಾಗಿ ಗೊತ್ತು. ಕಠಿಣ ವ್ರತನಿಯಮಗಳನ್ನು ಪಾಲಿಸಲಿಕ್ಕೆ ಅಪಾರ ಆತ್ಮಸ್ಥೈರ್ಯ, ಶಿಸ್ತು, ಸಂಯಮ ಮತ್ತು ಸ್ವನಿಯಂತ್ರಣ ಇರಬೇಕಾಗುತ್ತದೆಂದೂ ಬಲ್ಲಳು. ಆದರೆ ಈಗ, ಈ ಹೊಸ ಲೋಕನಿಯಮ ಪೂರೈಸಬೇಕಾದರೆ ಇತರರ ಸಹಕಾರವೂ ಅಗತ್ಯವಿತ್ತು. ಅವಳು ಮನಸ್ಸಿನಲ್ಲೇ ಚರ್ಚಿಸಿ, ದೇವಲೋಕದ ಈ ನಿಯಮಗಳು ಬಹುಶಃ ಮನುಷ್ಯರ ಮತ್ತು ದೇವರ ನಡುವಿನ ಆಟಗಳೇ ಇರಬೇಕು, ವಿಧಿಲಿಖಿತ ಅಂದರೆ ಇದೇ ಇರಬೇಕು ಎಂದುಕೊಂಡಳು. ಆಸೆ-ಆಕಾಂಕ್ಷೆಗಳೇ ಎಲ್ಲ ಮಾನವಕರ್ಮಗಳ ಪ್ರೇರಕ. ಆಕೆಯಾದರೋ ತಪಸ್ವಿನಿಯಾಗಿ ಬ್ರಹ್ಮಸತ್ಯವನ್ನು ಹುಡುಕಿದವಳು. ಅವಳ ತಪಸ್ಸಿನಲ್ಲಿ ಆಧ್ಯಾತ್ಮಿಕ ಸಾಧನೆಯ ಏಕೈಕ ಧ್ಯೇಯವಿತ್ತೇ ಹೊರತು ಐಹಿಕ ಸುಖಲೋಲುಪತೆಯ, ಭಾಗ್ಯಸಂಚಯದ ಯಾವುದೇ ಬಯಕೆಗಳಿರುತ್ತಿರಲಿಲ್ಲ. ಆದ್ದರಿಂದ ದೇವಲೋಕದ ನಿಯಮ ಅವಳಿಗೆ ಸ್ವಲ್ಪ ವಿಚಿತ್ರವಾಗಿಯೇ ಕಂಡಿತ್ತು. ಆದರೂ, ಮುಂದಿನ ಪ್ರಯಾಣದ ಗೊಂದಲ ಪರಿಹರಿಸಲು ಅವಳು ಅಲ್ಲಿ ನೆರೆದಿದ್ದ ಇತರ ಋಷಿಗಳೊಡನೆ ಒಮ್ಮೆ ಮಾತನಾಡಲು ನಿರ್ಧರಿಸಿದಳು.

''ಗೌರವಾನ್ವಿತ ಋಷಿಗಳೇ, ನಾನು ಈ ನಿಯಮವನ್ನು ಸ್ವೀಕರಿಸುತ್ತೇನೆ. ನನ್ನ ತಂದೆ ಬ್ರಹ್ಮರ್ಷಿ ಕುಣಿಗಾರ್ಗ್ಯರು ನನಗೆ ಬೋಧಿಸಿದ್ದ ಧರ್ಮದ ಮೂಲತತ್ತ್ವ 'ಬಹುದ್ವಾರಸ್ಯ ಧರ್ಮಃ' ಎಂದಿತ್ತು. ಧರ್ಮ ಬಹುರೂಪದ್ದು. ಸತ್ಯ, ದಯೆ, ತಪಸ್ಸು, ಶೌಚ, ತಿತಿಕ್ಷೆ (ಸಹನೆ), ಶಮ, ದಮ, ಅಹಿಂಸೆ, ಬ್ರಹ್ಮಚರ್ಯ, ತ್ಯಾಗ, ಸಂತೋಷ, ಆತ್ಮವಿಮರ್ಶೆ, ಆತ್ಮಸಮರ್ಪಣ... ಎಲ್ಲವೂ ಧರ್ಮವೇ. ದೇವತೆಗಳ ನಿಯಮವನ್ನು ನಾನೊಂದು ತಪಸ್ಸು ಅಥವಾ ತಿತಿಕ್ಷೆಯೆಂಬಂತೆ ಸ್ವೀಕರಿಸುತ್ತೇನೆ. ಅಲ್ಲದೇ ದೇವಲೋಕದಲ್ಲಿ ಅಂಥ ನಿಯಮಗಳಿರುವುದರ ಹಿಂದೆ ಏನಾದರೂ ಕಾರಣವೂ ಖಂಡಿತ ಇದ್ದೇಇರುತ್ತದೆ. ಭೂಲೋಕದಲ್ಲಿ ಹೇಗೆ ನಾವೆಲ್ಲ ನೀತಿನಿಯಮಗಳನ್ನು ಪಾಲಿಸಿ ಬದುಕಬೇಕೆಂದು ಬಯಸುತ್ತೇವೋ ದೇವಲೋಕದಲ್ಲಿಯ ಆಚರಣೆಗಳು ಮತ್ತು ಅವುಗಳ ಸಂಕೀರ್ಣತೆಯನ್ನೂ ನಾನು ಅಷ್ಟೇ ಪ್ರಮಾಣದಲ್ಲಿ ಗೌರವಿಸುತ್ತೇನೆ...'' ಎಂದು ವೃದ್ಧಕನ್ಯೆ ಹೇಳಿದಾಗ, ಸಭೆಯಲ್ಲಿದ್ದ ಒಬ್ಬ ಋಷಿ ಎದ್ದು ಹೇಳಿದರು: ''ವೃದ್ಧಕನ್ಯೆ, ನಾವು ಈ ನಿಯಮಗಳನ್ನು ರೂಪಿಸಿದ್ದಲ್ಲ. ಆದರೆ ಅವುಗಳ ಪಾಲನೆ ಮಾಡಬೇಕೆಂಬ ಹೊಣೆ ನಮ್ಮದು.'' ವೃದ್ಧಕನ್ಯೆ ಮುಂದುವರಿದು ''ನಾನು ಭೂಲೋಕದ ನಿಯಮಗಳಿಗೆ ಬದ್ಧಳಾಗಿದ್ದಂತೆ, ದೇವಲೋಕಕ್ಕೂ ಬದ್ಧಳಾಗುತ್ತೇನೆ. ಆದರೆ ನಿಯಮಗಳು ಸತ್ಯ ಮತ್ತು ನೈತಿಕತೆಯೊಂದಿಗೆ ಇರುವುದು ಮುಖ್ಯ. ದೇವತೆಗಳು ಈ ನಿಯಮಗಳನ್ನು ಏಕೆ ರೂಪಿಸಿದರು ಎಂಬ ಪ್ರಶ್ನೆಯನ್ನು ವಿಚಾರಿಸಬೇಕೆಂದು ನಾನು ವಿನಂತಿಸುತ್ತೇನೆ. ನೀವೆಲ್ಲ ನೋಡುತ್ತಿರುವಂತೆ ನಾನು ವೃದ್ಧಕನ್ಯೆ. ಕುಣಿಗಾರ್ಗ್ಯರ ಮಾನಸಪುತ್ರಿ. ನನ್ನ ಕೈಹಿಡಿಯಲು ಯಾರೂ ಮುಂದೆ ಬರುವ ಲಕ್ಷಣಗಳು ಕಾಣುತ್ತಿಲ್ಲ. ಆದ್ದರಿಂದ, ಯಾರಾದರೂ ನನ್ನೊಂದಿಗೆ ವಿವಾಹವಾಗಲು ಸಿದ್ಧರಿದ್ದರೆ, ನಾನು ನನ್ನ ತಪಃಫಲದ ಅರ್ಧ ಭಾಗವನ್ನು, ಅಂದರೆ ನನ್ನಲ್ಲಿರುವ ಐಶ್ವರ್ಯವನ್ನು ಅವರಿಗೆ ಅರ್ಪಿಸುತ್ತೇನೆ'' ಎಂದಳು.

ಆಕೆಯ ಶ್ರೇಷ್ಠ ಪ್ರಸ್ತಾವನೆಯನ್ನು ಸಭೆಯಲ್ಲಿದ್ದ ಋಷಿಗಳು ಅಂಗೀಕರಿಸಿದರು. ಅವರಲ್ಲಿ ಒಬ್ಬ ಯುವ ಋಷಿ ಶೃಂಗವಾನ್. ಆತ ಗಾಲವ ಋಷಿಯ ಸುಪುತ್ರ. ವೃದ್ಧಕನ್ಯೆಯ ಕೈಹಿಡಿಯುವ ಆಸಕ್ತಿ ವ್ಯಕ್ತಪಡಿಸಿದನು, ಆದರೆ ಒಂದು ಷರತ್ತಿನೊಂದಿಗೆ. ಷರತ್ತು ಎಂದಾಕ್ಷಣ ವೃದ್ಧಕನ್ಯೆಗೆ ತುಸು ಆಶ್ಚರ್ಯವೇ ಆಯಿತು. ಆದರೂ ಸಾವರಿಸಿಕೊಂಡು ಏನದು ಷರತ್ತು ಎಂದು ಕೇಳಿದಳು.

''ಈ ವಿವಾಹವು ಕೇವಲ ಉತ್ತಮ ಲೋಕಕ್ಕೆ ಹತ್ತುವ ಉದ್ದೇಶಕ್ಕೆ ನಡೆಯುತ್ತಿದೆ. ಆಮೇಲೆ ನೀವು ದೇಹತ್ಯಾಗ ಮಾಡಲು ಇಚ್ಛಿಸುತ್ತೀರೆಂದು ಗೊತ್ತು. ಆದ್ದರಿಂದ ನನ್ನ ಷರತ್ತು ಇಂತಿದೆ. ಒಂದು ರಾತ್ರಿಗಷ್ಟೇ ಸೀಮಿತವಾಗಿ ನನ್ನ ಪತ್ನಿ ಆಗುವುದಾದರೆ ನಾನು ನಿಮ್ಮನ್ನು ಮದುವೆಯಾಗುತ್ತೇನೆ'' ಎಂದನು ಶೃಂಗವಾನ್. ವೃದ್ಧಕನ್ಯೆ ಆ ಷರತ್ತಿಗೆ ಕೂಡಲೇ ಒಪ್ಪಿದಳು. ಅದೇ ಸಭೆಯಲ್ಲಿ ಋಷಿಗಳ ಸಮ್ಮುಖದಲ್ಲಿ ಸಂಪ್ರದಾಯಬದ್ಧವಾಗಿ ವಿವಾಹ ಸಮಾರಂಭ ನಡೆಯಿತು. ಪಾಣಿಗ್ರಹಣವೂ ಸಂಪೂರ್ಣವಾಯಿತು. ಶೃಂಗವಾನ್ ಮತ್ತು ವೃದ್ಧಕನ್ಯೆ ಪತಿ-ಪತ್ನಿಯರೆನಿಸಿದರು. ಗುರುಹಿರಿಯರು ಅವರನ್ನು ಆಶೀರ್ವದಿಸಿದರು. ಅಂದು ಮುಸ್ಸಂಜೆ ಪವಾಡಸದೃಶವಾಗಿ ವೃದ್ಧಕನ್ಯೆಯು ಒಬ್ಬಳು ಸುಂದರ ತರುಣಿಯಾಗಿ ರೂಪಾಂತರಗೊಂಡಳು! ಅಲ್ಲಿದ್ದವರೆಲ್ಲರೂ ಆ ಅಪ್ರತಿಮ ಸುಂದರಿಯನ್ನು ವಿಸ್ಮಯದಿಂದ ನೋಡಿದರು. ಯಾವ ಅಪ್ಸರೆಯಿವಳು ಎಂದು ಚಕಿತರಾದರು. ಯುವವಧು ತನ್ನ ವೈಯಾರದಿಂದ ಶೃಂಗವಾನ್‌ನನ್ನು ಮೋಡಿ ಮಾಡಿದಳು. ಸುಗಂಧದ್ರವ್ಯಗಳಿಂದ ಕೂಡಿದ ಅವಳ ದಿವ್ಯ ಆಭರಣಗಳು, ದೈವಿಕ ಮಾಲೆಗಳು ಶೃಂಗವಾನ್‌ನನ್ನು ಇನ್ನಿಲ್ಲದಂತೆ ವಿಚಲಿತಗೊಳಿಸಿದವು. ತನ್ನನ್ನೇ ಬೆಳಗಿಸುವಂತಿದ್ದ ಅವಳನ್ನು ನೋಡಿ ಅವನು ಸಂತೋಷದಿಂದ ಉಬ್ಬಿಹೋದನು. ಸಮಯ, ಸ್ಥಳ, ಸಂದರ್ಭಗಳ ಪರಿವೆಗಳನ್ನೆಲ್ಲ ಕಳೆದುಕೊಂಡು ಶೃಂಗಾರದ ಉನ್ಮಾದಕ್ಕೊಳಗಾದನು. ಅವಳೊಂದಿಗೆ ಏಕಾಂತವಾಸ ಸುಖವನ್ನು ಮೈಮನ ತುಂಬ ಅನುಭವಿಸಿದನು.

ಮರುದಿನ ಬ್ರಹ್ಮಮುಹೂರ್ತದಲ್ಲಿ ಎದ್ದ ನವವಧುವು ಶೃಂಗವಾನ್‌ನಿಗೆ ಅವನದೇ ಷರತ್ತನ್ನು ನೆನಪಿಸಿದಳು. ''ನೀನೇ ಮಾಡಿಕೊಂಡ ಒಪ್ಪಂದದಂತೆ ನಾನು ನಿನ್ನೊಡನೆ ಒಂದು ರಾತ್ರಿ ವಾಸಿಸಿದ್ದೇನೆ. ನಿನಗೆ ಮಂಗಳವಾಗಲಿ. ನಾನಿನ್ನು ಹೊರಡುತ್ತೇನೆ.'' ಎಂದಳು. ಅದನ್ನು ಕೇಳಿ ಶೃಂಗವಾನ್‌ನಿಗೆ ಆಘಾತವಾಯಿತು. ಇಷ್ಟು ಲಾವಣ್ಯವತಿಯಾದ ವಧು ಇನ್ನುಮುಂದೆ ತನ್ನೊಂದಿಗೆ ಇರುವುದಿಲ್ಲವೆಂದು ನೆನೆದು ತುಂಬ ದುಃಖಿತನಾದನು. ಅವಳೊಡನೆ ಒಂದು ರಾತ್ರಿಯ ಪ್ರಣಯಜೀವನದಿಂದಲೇ ಅವನಿಗೆ ಅವಳಲ್ಲಿ ಅಪರಿಮಿತ ಅನುರಾಗ ಉಂಟಾಗಿತ್ತು. ಆದರೆ ಈಗ ಅವನ ವೈವಾಹಿಕ ಆನಂದದ ಕನಸುಗಳೆಲ್ಲ ನುಚ್ಚುನೂರಾಗಿದ್ದವು. ನವವಧುವಿನಿಂದ ಬೇರ್ಪಡುವ ಆಲೋಚನೆ ಅವನನ್ನು ತೀವ್ರವಾಗಿ ನೋಯಿಸಿತು. ತಡೆಯಲು ಪ್ರಯತ್ನಿಸಿದನು ಆದರೆ ವ್ಯರ್ಥವಾಯಿತು. ''ನನ್ನ ಪ್ರಿಯತಮೆಯೇ, ನಾನು ಈ ಬೇರ್ಪಡುವಿಕೆಯಿಂದ ಬಳಲುತ್ತಿರುವಾಗ ನೀನು ನನ್ನನ್ನು ಇಷ್ಟು ಸುಲಭವಾಗಿ ಬಿಟ್ಟುಹೋಗಲು ಸಿದ್ಧಳಾಗಿರುವುದು ಹೇಗೆ? ನೀನು ನನ್ನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ನಿನ್ನ ಮೇಲೆ ನನಗೆ ಪ್ರೀತಿಯಿದೆ. ಪ್ರೀತಿಯಲ್ಲಿ ಯಾವಾಗಲೂ ಹೆಣ್ಣೇ ಗಂಡನ್ನು ಹೆಚ್ಚು ಹಚ್ಚಿಕೊಳ್ಳುವುದೆಂದು ತಿಳಿದಿದ್ದೇನೆ. ಆದರೆ ನೀನೇಕೆ ಇಷ್ಟು ಸುಲಭವಾಗಿ ನುಣುಚಿಕೊಳ್ಳುತ್ತಿರುವೆ? ಓ ಯುವವಧುವೇ, ನಿನ್ನ ವರ್ತನೆ ನಿಜಕ್ಕೂ ನನ್ನಲ್ಲಿ ಗೊಂದಲವನ್ನುಂಟುಮಾಡಿದೆ. ಪುಟಿದೇಳುವ ತಾರುಣ್ಯ ಮತ್ತು ಸೌಂದರ್ಯವಿರುವ ನಿನಗೆ ಹೃದಯದಲ್ಲಿ ಯಾವುದೇ ಉತ್ಸಾಹವಿಲ್ಲದಿರುವುದು ಸಾಧ್ಯವೇ? ಅಥವಾ ನಾನು ನಿನ್ನ ಕನಸಿನ ಪುರುಷನಲ್ಲವೇ?'' ಎನ್ನುತ್ತ ಪರಿಪರಿಯಾಗಿ ಅವಳ ಮೇಲಿನ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದನು. ತನ್ನನ್ನು ತ್ಯಜಿಸಬಾರದೆಂದು ಬೇಡಿಕೊಂಡನು. ಮನಸ್ಸು ಬದಲಾಯಿಸುವಂತೆ ಅವಳನ್ನು ಮತ್ತಷ್ಟು ಒತ್ತಾಯಿಸಿದನು. ಷರತ್ತು ಹಾಕಿದ್ದು ತಾನು ಆದ್ದರಿಂದ ಈಗ ಅದನ್ನು ಬದಲಾಯಿಸಲಿಕ್ಕೂ ಸಿದ್ಧ ಎಂದು ಅವಳಲ್ಲಿ ವಿಜ್ಞಾಪಿಸಿದನು.

ವೃದ್ಧಕನ್ಯೆ ಮುಗುಳ್ನಗುತ್ತ ಮೃದುವಾಗಿ ಉತ್ತರಿಸಿದಳು: ''ಓ ಮುನಿವರನೇ, ಆ ಷರತ್ತನ್ನು ಹಾಕಿದ್ದು ನೀನೇ ಮತ್ತು ಆ ಷರತ್ತಿಗೆ ಒಪ್ಪಿಗೆ ಕೊಟ್ಟಿದ್ದು ನಾನೇ ಎಂದು ನನಗೆ ತಿಳಿದಿದೆ. ನಿಯಮಗಳನ್ನು ಹಾಕುವವನು ಆ ಷರತ್ತಿಗೆ ಬದ್ಧನಾಗಿಲ್ಲದಿದ್ದರೆ ಯಾವುದೇ ಭರವಸೆ ಅಥವಾ ನಿಯಮ ಹೇಗೆ ಕಾರ್ಯನಿರ್ವಹಿಸುತ್ತದೆ? ನೀನೀಗ ನಿಯಮವನ್ನು ಬದಲಾಯಿಸಲು ಬಯಸಿದರೆ ಅದು ಮತ್ತೊಂದು ಆಟ, ಮತ್ತೊಂದು ಕಾನೂನು, ಮತ್ತೊಂದು ಬದ್ಧತೆ ಆಗುತ್ತದೆ. ಅದು ಒಂದೇ ಆಗಲು ಸಾಧ್ಯವಿಲ್ಲ!'' ಎಂದು ಹೇಳಿದಳು. ಶೃಂಗವಾನ್‌ನ ಮನಃಸ್ಥಿತಿ ಅವಳಿಗೆ ಅರ್ಥವಾಗಿತ್ತು. ಆ ತೊಳಲಾಟವು ಅವನಿಗೆ ಅವನದೇ ಷರತ್ತನ್ನು ಮರೆತುಬಿಡುವಂತೆ ಮಾಡಿತ್ತು. ಮತ್ತೆ ಅದನ್ನು ನೆನಪಿಸದೆ, ಗೌರವದಿಂದ ಕೈಮುಗಿದು ಶೃಂಗವಾನ್‌ನ ಜೀವನದಿಂದ ವೃದ್ಧಕನ್ಯೆ ಹೊರಬಂದಳು. ತೀವ್ರ ಹತಾಶೆಯಲ್ಲಿದ್ದ ಶೃಂಗವಾನ್‌ನಿಗೆ, ವೃದ್ಧಕನ್ಯೆಯನ್ನು ಸಿಕ್ಕಿಸಲೆಂದು ಷರತ್ತಿನ ಬಲೆ ತಾನು ಹೆಣೆದದ್ದು ಈಗ ತನ್ನನ್ನೇ ಸುತ್ತಿಕೊಂಡಿರುವುದು ಅರಿವಾಯಿತು. ಶೃಂಗವಾನ್‌ನಿಂದ ಬೀಳ್ಕೊಂಡ ವೃದ್ಧಕನ್ಯೆ ಪುನಃ ಹೇಳಿದಳು: ''ಈ ತೀರ್ಥದಲ್ಲಿ ಸಮಾಹಿತರಾಗಿ ದಿವೌಕಸರಿಗೆ ತರ್ಪಣಗಳನ್ನಿತ್ತು ಒಂದು ರಾತ್ರಿ ವಾಸಿಸುವವರಿಗೆ ಐವತ್ತೆಂಟು ವರ್ಷಗಳವರೆಗೆ ಬ್ರಹ್ಮಚರ್ಯವನ್ನು ಪಾಲಿಸಿದ ಪುಣ್ಯಫಲವು ದೊರೆಯುತ್ತದೆ''.

ಬುದ್ಧಿವಂತ ತಪಸ್ವಿನಿ, ತನ್ನನ್ನು ತಾನು ಪ್ರತಿಜ್ಞೆಯಿಂದ ಮುಕ್ತಗೊಳಿಸಿಕೊಂಡು, ತನ್ನ ಮುಂದಿನ ಪ್ರಯಾಣವನ್ನು ಪ್ರಾರಂಭಿಸಲು ಇದು ಸರಿಯಾದ ಸಮಯ ಎಂದು ಭಾವಿಸಿದಳು. ಸೂರ್ಯನ ಚಿನ್ನದ ಕಿರಣಗಳು ಹರಿಯುತ್ತಿದ್ದಂತೆ, ಪ್ರಶಾಂತವಾದ ಕಾಂತಿಯಿಂದ ಆವರಿಸಲ್ಪಟ್ಟಿದ್ದ ಪವಿತ್ರ ಶಾಂತಿಯುತ ಆಶ್ರಮದ ಸುತ್ತಲೂ ನೋಡಿದಳು. ಮನಸ್ಸಲ್ಲೇ ಯೋಚಿಸಿದಳು, ''ಈ ಸ್ಥಳ ಎಷ್ಟು ಅದ್ಭುತ ಮತ್ತು ದೈವಿಕವಾಗಿದೆ. ನನ್ನ ತಂದೆಯ ಈ ಆಶ್ರಮದಲ್ಲಿ ತಮ್ಮ ಪಾದವನ್ನು ಇಡುವವರು, ತೀರ್ಥಯಾತ್ರೆಯನ್ನು ಕೈಗೊಳ್ಳುವವರು ಧನ್ಯರು!'' ತನ್ನ ತಪಸ್ಸು ದೇವಲೋಕದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಅವಳು ಭಾವಿಸಿದಳು. ಆದ್ದರಿಂದ, ಭೂಲೋಕದ ಜನರು ತನ್ನ ತಪಸ್ಸಿನ ಫಲಗಳಿಂದ ಆಶೀರ್ವದಿಸಲ್ಪಡಬೇಕೆಂದು ಅವಳು ಬಯಸಿದಳು. ತ್ಯಾಗದಲ್ಲಿಯೇ ಶಾಶ್ವತ ಆನಂದವನ್ನು ಅನುಭವಿಸುವಂತಾಗುವುದು. 'ತ್ಯಾಗೇನ ಅಮೃತತ್ವಂ ಅಸಿ' ಎಂಬ ಅವಳ ತಂದೆಯ ಮಾತುಗಳು ಅವಳ ಕಿವಿಗಳಲ್ಲಿ ರಿಂಗಣಿಸುತ್ತಿದ್ದವು. ಕೆಲ ಕ್ಷಣಗಳಲ್ಲಿಯೇ ಆ ಸಾಧ್ವಿಯು ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ಹೋದಳು. ಶೃಂಗವಾನ್ ಅವಳ ರೂಪವನ್ನೇ ಸ್ಮರಿಸಿಕೊಳ್ಳುತ್ತಾ ದೀನನಾದನು. ಒಪ್ಪಂದದಂತೆ ಬಹಳ ಕಷ್ಟದಿಂದ ಅವಳ ತಪಸ್ಸಿನ ಅರ್ಧಫಲವನ್ನು ಸ್ವೀಕರಿಸಿದ್ದನು. ಅವಳ ರೂಪಬಲ ಮತ್ತು ಆಕರ್ಷಣೆಯನ್ನು ಮರೆಯುವುದಕ್ಕೋಸ್ಕರ ತನ್ನನ್ನು ಸಾಧನೆಗೆ ತೊಡಗಿಸಿಕೊಳ್ಳುವುದು ಅವನ ಆಶಯವಾಗಿತ್ತು. ಆದರೆ ಮನಸ್ಸು ತೀವ್ರವಾಗಿ ಜರ್ಜರಿತವಾಗಿತ್ತು. ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಭಾವನೆಗಳು ಉಮ್ಮಳಿಸುತ್ತಿದ್ದವು. ಅವಳಿಗಾಗಿ ದುಃಖಿಸುತ್ತಾ, ಅವಳು ತನ್ನ ಸ್ವರ್ಗೀಯ ನಿವಾಸಕ್ಕೆ ಹೋದ ತರುವಾಯ, ಹತಾಶೆಯಿಂದ ಅವನು ಕೂಡ ತನ್ನ ದೇಹವನ್ನು ತ್ಯಜಿಸಿದನು.

ಇಂತು, ಶ್ರಾವಣ ಮಾಸದ ಮೂರನೆಯ ಭಾನುವಾರದಲ್ಲೊಂದು ಪುರಾಣಕಥನ/ವಾಚನ/ಶ್ರವಣ ಸಮಾಪ್ತವಾದುದು.

ಚುನಾವಣೆಗಳಲ್ಲಿ ಮಾತ್ರ ಮುನ್ನೆಲೆಗೆ ಬರುವ ಮನುಸ್ಮೃತಿ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಭಾರತದಲ್ಲಿ ಚುನಾವಣೆಗಳು ಬಂತೆಂದರೆ ಮನುಸ್ಮೃತಿಯ ಪುಸ್ತಕಗಳನ್ನು ಮುದ್ರಣ ಮಾಡುವವರಿಗೆ ಒಂದು ರೀತಿಯ ಸುಗ್ಗಿಯ ಕಾಲ. ಕಾರಣ ಅದರ ಸಾವಿರಗಟ್ಟಲೆ ಪ್ರತಿಗಳನ್ನು ಸುಡುವ ಒಂದು ವರ್ಗ ಈ ದೇಶದಲ್ಲಿದೆ. ಅದರಲ್ಲೂ ಉತ್ತರಪ್ರದೇಶ ಹಾಗೂ ಬಿಹಾರ ರಾಜ್ಯಗಳಲ್ಲಿ ಮನುಸ್ಮೃತಿಯ ಪುಸ್ತಕಗಳು ಹೆಚ್ಚಾಗಿ ಮುದ್ರಣವಾಗುತ್ತವೆ ಮತ್ತು ಸುಡುವ ಕೆಲಸವೂ ಆಗುತ್ತವೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಒಮ್ಮೆ ಮಾತ್ರ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟಿರುವುದನ್ನು ನಾವು ಓದುತ್ತೇವೆ. ಆದರೆ, ತರುವಾಯದಲ್ಲಿ ಈ ಮನುಸ್ಮೃತಿಯನ್ನು ಸುಡುವ ಪರಂಪರೆಗೆ ನಾಂದಿ ಹಾಡಿದವರು ಉತ್ತರ ಪ್ರದೇಶದ ಬಹುಜನ ಸಮಾಜ ಪಕ್ಷದ ಸಂಸ್ಥಾಪಕರಾದ ಕಾನ್ಶಿರಾಮ್ ಅವರು. ಅವರ ಶಿಷ್ಯೆಯಾಗಿದ್ದ ಮಾಯಾವತಿಯವರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದರು. ಮನುಸ್ಮೃತಿಯನ್ನು ಸುಡುವ ಆಂದೋಲನದ ಬಲದಿಂದ ಮಾಯಾವತಿಯವರು ಒಂದೆರಡು ಬಾರಿ ಅಧಿಕಾರಕ್ಕೂ ಬಂದಿದ್ದರು. ಅಲ್ಲಿಂದ ಈಚೆಗೆ, ಚುನಾವಣೆಗಳು ಸಮೀಪಿಸುವಾಗ ಮನುಸ್ಮೃತಿಯನ್ನು ಸುಡುವುದು ಮತ್ತು ಅದರ ವಿರುದ್ಧ ಪುಂಖಾನುಪುಂಖವಾಗಿ ಹೇಳಿಕೆಗಳನ್ನು ಕೊಡುವುದು ಬಿಜೆಪಿಯನ್ನು ಹೊರತುಪಡಿಸಿದ ಭಾರತದ ಮಿಕ್ಕ ಕೆಲ ಪಕ್ಷಗಳ ರಾಜಕಾರಣಿಗಳಿಗೆ ಒಂದು ರೀತಿಯ ಹವ್ಯಾಸ (ಚಟ) ಆಗಿಬಿಟ್ಟಿದೆ.

ಈಗ ಮತ್ತೆ ಬಿಹಾರದಲ್ಲಿ ಚುನಾವಣೆಗಳು ನಡೆಯುವ ಕಾಲ ಬಂದಿದೆ. ಹಾಗಾಗಿ, ಮತ್ತೆ ಮನುಸ್ಮೃತಿಯ ಕುರಿತ ಮಾತುಗಳು ಕೇಳಿಬರುತ್ತಿವೆ. ''ಬಿಜೆಪಿ ಮತ್ತು ಅದರ ಮೂಲಸ್ರೋತವಾದ ಆರ್‌ಎಸ್‌ಎಸ್ ಇವು ಮನುವಾದಿ ಸಂಘಟನೆಗಳಾಗಿವೆ. ಬಿಜೆಪಿಯಲ್ಲಿರುವವರು ಮನುವಾದಿಗಳು ಹಾಗೂ ಈಗ ಜಾರಿಯಲ್ಲಿರುವ ಸಂವಿಧಾನವನ್ನು ಕಸದಬುಟ್ಟಿಗೆಸೆದು ಮನುಸ್ಮೃತಿಯ ಆಧಾರದಲ್ಲಿ ಈಗ ಹೊಸ ಸಂವಿಧಾನದ ರಚನೆಯಾಗುತ್ತಿದೆ'' ಎಂದೆಲ್ಲಾ ಬೊಬ್ಬೆ ಶುರುವಾಗಿಬಿಟ್ಟಿವೆ. ಒಂದು ಮಾತಂತೂ ಸತ್ಯ– ಈ ಮನುಸ್ಮೃತಿಯನ್ನು ಸುಡುವ ಜನರಲ್ಲಿ ಬಹುತೇಕರು ಆ ಗ್ರಂಥವನ್ನು ಸಮಗ್ರವಾಗಿ ಅಧ್ಯಯನ ಮಾಡಿದವರಲ್ಲ ಹಾಗೂ ಅದರೊಳಗೆ ಏನಿದೆ ಎನ್ನುವುದು ಅವರುಗಳಿಗೆ ಬೇಕಾಗಿಯೂ ಇಲ್ಲ. ಮನುವಾದ ಎಂದರೆ ಏನು ಎನ್ನುವುದೂ ಇಂಥವರಿಗೆ ಸರಿಯಾಗಿ ಗೊತ್ತಿಲ್ಲ (ಗೊತ್ತಿದ್ದವರು ಮಾತಾಡುವುದಿಲ್ಲ). ಆದರೆ, ಮನುಸ್ಮೃತಿಯ ಪ್ರತಿಗಳನ್ನು ಸುಟ್ಟರೆ, ಸನಾತನ ಪರಂಪರೆಯನ್ನು ಹೀಗಳೆದರೆ, ತಾನೊಬ್ಬ ಪ್ರಗತಿಪರ ಮುಖಂಡ, ದಮನಿತರ ನಾಯಕ ಎನಿಸಿಕೊಂಡು, ಚುನಾವಣೆಗಳಲ್ಲಿ ಹೆಚ್ಚು ಮತ ಗಳಿಸಬಹುದು ಎನ್ನುವ ಗ್ರಹಿಕೆಯಷ್ಟೇ ಕೆಲವರಲ್ಲಿ ಇದೆ.

ನೂರಕ್ಕಿಂತಲೂ ಹೆಚ್ಚಿನ ಸ್ಮೃತಿಗಳು ಇಂದು ನಮಗೆ ಲಭ್ಯವಿವೆ. ಇವುಗಳಲ್ಲಿ ಮನು, ಯಾಜ್ಞವಲ್ಕ್ಯ, ಪರಾಶರ, ವಿಷ್ಣು, ಆಂಗೀರಸ, ಕಾತ್ಯಾಯನ, ಬೃಹಸ್ಪತಿ, ವ್ಯಾಸ್ಯ ಇತ್ಯಾದಿ ಸ್ಮೃತಿಗ್ರಂಥಗಳನ್ನು ನಾವು ಮುಖ್ಯವಾಗಿ ಹೆಸರಿಸಬಹುದಾಗಿದೆ. ಈ ಪೈಕಿ ಮನುಸ್ಮೃತಿ, ಪರಾಶರ ಸ್ಮೃತಿ ಹಾಗೂ ಯಾಜ್ಞವಲ್ಕ್ಯ ಸ್ಮೃತಿಗಳು ತುಂಬಾ ಪ್ರಖ್ಯಾತವಾದವುಗಳಾಗಿವೆ. ಅದರಲ್ಲೂ, ಖ್ಯಾತಿ–ಕುಖ್ಯಾತಿಯ ವಿಷಯ ಬಂದಾಗ ಮನುಸ್ಮೃತಿಯನ್ನು ಯಾವ ಸ್ಮೃತಿಗ್ರಂಥಗಳೂ ಮೀರಿಸಲಾರವು.

ವೇದ ಸಂಸ್ಕೃತಿಯ ಆಧಾರದಲ್ಲಿ ವರ್ತಿಸುವ ಸನಾತನ ಹಿಂದೂ ಧರ್ಮ ಹಾಗೂ ಎಲ್ಲ ವರ್ಗಗಳನ್ನೂ ಒಳಗೊಂಡ ಹಿಂದೂ ಸಮಾಜದ ಮುಖ್ಯ ಸಂಚಾಲಕ ಗ್ರಂಥಗಳೆಂದರೆ ಅವು ಸ್ಮೃತಿಗ್ರಂಥಗಳು. ಸ್ಮೃತಿಗಳಲ್ಲಿ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಈ ನಾಲ್ಕೂ ಪುರುಷಾರ್ಥಗಳ ವಿವೇಚನೆ ಇದೆ. ಇವುಗಳಲ್ಲಿ ವರ್ಣ ಹಾಗೂ ಅರ್ಥ ವ್ಯವಸ್ಥೆಗಳು, ವರ್ಣಾಶ್ರಮಧರ್ಮ, ವಿಶೇಷ ಸಂದರ್ಭಗಳಲ್ಲಿ ನಡೆಸಬೇಕಾದ ಕರ್ಮಗಳು, ಪ್ರಾಯಶ್ಚಿತ್ತ ಶಾಸನಗಳನ್ನು ಮಾಡುವ ರೀತಿಗಳು, ದಂಡವ್ಯವಸ್ಥೆ ಹಾಗೂ ಮೋಕ್ಷದ ಸಾಧನಗಳ ನಿರ್ಣಯಗಳಿವೆ. ಪ್ರಾಚೀನ ಭಾರತದ ಈ ಸ್ಮೃತಿಗಳು, ಮಾನವನ ದಿನನಿತ್ಯದ ಚಟುವಟಿಕೆಗಳ ಮಾರ್ಗದರ್ಶಿಗಳೂ ಆಗಿವೆ. ಅದಕ್ಕಾಗಿಯೇ, ಮನುಸ್ಮೃತಿಯನ್ನು 'ಮಾನವ ಧರ್ಮಶಾಸ್ತ್ರ' ಎಂದೇ ಕರೆಯಲಾಗುತ್ತದೆ. ವ್ಯಕ್ತಿಯೊಬ್ಬನ ಸಾಮಾಜಿಕ ಜೀವನಕ್ಕೆ, ಕ್ರಮಬದ್ಧ ಬದುಕಿಗೆ, ಗಂಡು–ಹೆಣ್ಣಿನ ಸಂಬಂಧ, ಶಿಕ್ಷಣ, ನಡಾವಳಿ, ಹಿರಿ–ಕಿರಿಯರ ಹೊಣೆಗಾರಿಕೆಗಳು, ಮೂಲಭೂತ ಕರ್ತವ್ಯಗಳು, ವ್ಯಕ್ತಿಗತ ಬದುಕಿನ ಸ್ವಚ್ಛತೆ ಮುಂತಾದವು ಅತ್ಯಾವಶ್ಯಕ ಅಂಶಗಳು ಎಂಬುದನ್ನು ಅಂದಿನ ಸಾಮಾಜಿಕ ವ್ಯವಸ್ಥೆ ಕಂಡುಕೊಂಡಿತ್ತು. ಸಮಾಜವು ಧರ್ಮಯುತವಾಗಿ ನಡೆಯಬೇಕು ಎಂಬುದೇ ಇದರ ಮೂಲ ಉದ್ದೇಶವಾಗಿದೆ.

ಮನುಸ್ಮೃತಿಯು 12 ಅಧ್ಯಾಯಗಳು ಮತ್ತು 2,600ಕ್ಕೂ ಹೆಚ್ಚು ಶ್ಲೋಕಗಳನ್ನು ಒಳಗೊಂಡಿದೆ. ಈ ಸ್ಮೃತಿಗ್ರಂಥಕ್ಕೆ ಕೆಲವು ವ್ಯಾಖ್ಯಾನಗಳೂ ಇವೆ. ಈ ಗ್ರಂಥವನ್ನು ಸರಿಸುಮಾರು ಎರಡನೇ ಶತಮಾನದಲ್ಲಿ ರಚಿಸಲಾಗಿದೆ ಎಂದು ನಂಬಲಾಗಿದೆಯಾದರೂ, ಕಾಲಾನುಕ್ರಮದಲ್ಲಿ ಅನೇಕ ಸಂಗತಿಗಳು ಈ ಗ್ರಂಥಕ್ಕೆ ಸೇರ್ಪಡೆಯಾಗಿವೆ ಎಂದೂ ಹೇಳುವವರಿದ್ದಾರೆ. ಮನುಸ್ಮೃತಿಯ 12 ಅಧ್ಯಾಯಗಳು ಒಳಗೊಂಡಿರುವ ವಿಚಾರಗಳನ್ನು, ಬ್ರಹ್ಮಾಂಡ ಮತ್ತು ಮಾನವರ ಸೃಷ್ಟಿ, ವೇದಗಳು, ಸ್ಮೃತಿ ಮತ್ತು ಉತ್ತಮ ನಡತೆ, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವರ್ಣಗಳ ಕರ್ತವ್ಯಗಳು, ಜೀವನದ ಹಂತಗಳು (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ), ಆಹಾರ ಕಾನೂನುಗಳು, ಆಚರಣೆಗಳು ಮತ್ತು ದೈಹಿಕ ಶುಚಿತ್ವ, ಕಾನೂನು ಮತ್ತು ನ್ಯಾಯ ವ್ಯವಸ್ಥೆ, ಸಮಾಜದಲ್ಲಿ ಮಹಿಳೆಯರ ಪಾತ್ರಗಳು, ವಿವಾಹ ನಿಯಮಗಳು ಮತ್ತು ಆನುವಂಶಿಕತೆ, ವಿವಿಧ ಕಾನೂನುಗಳು, ಕರ್ಮ ಮತ್ತು ಪುನರ್ಜನ್ಮದ ತತ್ವಶಾಸ್ತ್ರ, ಪ್ರಾಯಶ್ಚಿತ್ತ ಮತ್ತು ನೈತಿಕತೆ ಹಾಗೂ ಅಂತಿಮವಾಗಿ ಆಧ್ಯಾತ್ಮಿಕ ಗುರಿಗಳು ಮತ್ತು ಮೋಕ್ಷದ ಮಾರ್ಗ ಎಂದು ಸ್ಥೂಲವಾಗಿ ಪಟ್ಟಿಮಾಡಬಹುದಾಗಿದೆ.

ಮನುಸ್ಮೃತಿಯು, ಪ್ರಾಚೀನ ಭಾರತೀಯ ಸಮಾಜದಲ್ಲಿನ ರಾಜರು ಮತ್ತು ಆಡಳಿತಗಾರರ (ರಾಜಧರ್ಮ) ಕರ್ತವ್ಯಗಳು ಮತ್ತು ಜವಾಬ್ದಾರಿಗಳಿಗೆ ಸ್ಪಷ್ಟವಾದ ಚೌಕಟ್ಟನ್ನು ಒದಗಿಸುತ್ತದೆ. ರಾಜರ ಪಾತ್ರವು ಕೇವಲ ರಾಜಕೀಯ ಮಾತ್ರವಲ್ಲ, ಅವರ ಪ್ರಜೆಗಳ ಬಗ್ಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಟ್ಟಿಕೊಡುವ ಕರ್ತವ್ಯವನ್ನು ಸಹ ಒಳಗೊಂಡಿದೆ. ಜನರನ್ನು ಅವ್ಯವಸ್ಥೆಯಿಂದ ರಕ್ಷಿಸಲು ಮತ್ತು ಸಾಮಾಜಿಕ ಸಾಮರಸ್ಯ, ಶಾಂತಿ ಮತ್ತು ಕಲ್ಯಾಣವನ್ನು ಕಾಪಾಡಿಕೊಳ್ಳಲು ರಾಜನ ಅಧಿಕಾರವನ್ನು ರಚಿಸಲಾಗಿದೆ. ರಾಜನನ್ನು ನಾಲ್ಕು ವರ್ಣಗಳ ಸಾಮಾಜಿಕ ವ್ಯವಸ್ಥೆಯ ರಕ್ಷಕ ಎಂದು ಇಲ್ಲಿ ಚಿತ್ರಿಸಲಾಗಿದೆ. ತಮ್ಮ ಪ್ರಜೆಗಳನ್ನು ರಕ್ಷಿಸುವುದು ಮತ್ತು ಅವರ ಜೀವನ, ಆಸ್ತಿ ಮತ್ತು ನಂಬಿಕೆಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ಅಪರಾಧಗಳನ್ನು ತಡೆಗಟ್ಟುವುದು, ವ್ಯಾಪಾರಿಗಳು ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ರಾಜನ ಪ್ರಾಥಮಿಕ ಕರ್ತವ್ಯವೆಂದು ಹೇಳಲಾಗಿದೆ. ಅಷ್ಟೇ ಅಲ್ಲದೆ, ಮನುಸ್ಮೃತಿಯು ನ್ಯಾಯಯುತ ಮತ್ತು ದಕ್ಷ ನ್ಯಾಯಾಂಗ ವ್ಯವಸ್ಥೆಯ ಮಹತ್ವವನ್ನು ಒತ್ತಿಹೇಳುತ್ತದೆ. ತ್ವರಿತ, ನಿಷ್ಪಕ್ಷಪಾತಿ ಮತ್ತು ಎಲ್ಲರ ಕೈಗೆಟುಕುವ ನ್ಯಾಯವನ್ನು ರಾಜರು ಒದಗಿಸಬೇಕು ಎಂದು ಇದು ಸಾರುತ್ತದೆ.

ದಂಡ ಅಥವಾ ಶಿಕ್ಷೆಯು ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವ ಪ್ರಮುಖ ಸಾಧನವಾಗಿದೆ, ಮಾನವ ಸ್ವಭಾವವು ಸ್ವಾಭಾವಿಕವಾಗಿ ಭ್ರಷ್ಟಾಚಾರಕ್ಕೆ ಗುರಿಯಾಗುತ್ತದೆ, ಶಿಕ್ಷೆಯ ಭಯವು ಜನರನ್ನು ಶಿಸ್ತುಬದ್ಧವಾಗಿಡಲು ಮತ್ತು ಅವರಿಗೆ ನಿಯೋಜಿಸಲಾದ ಸಾಮಾಜಿಕ ಪಾತ್ರಗಳಲ್ಲಿ ಮಾತ್ರ ಪ್ರವೃತ್ತರಾಗಲು ಸಹಾಯಮಾಡುತ್ತದೆ ಎಂದು ಮನುಮಹರ್ಷಿ ನಂಬಿದ್ದ ಹಾಗೆ ಕಾಣಿಸುತ್ತದೆ. ತಮ್ಮ ಪ್ರಜೆಗಳ ರಕ್ಷಣೆಗಾಗಿ ಅವರಿಂದ ತೆರಿಗೆ ಸಂಗ್ರಹಿಸುವ ಅಧಿಕಾರವನ್ನು ರಾಜರು ಹೊಂದಿದ್ದಾರೆ; ತೆರಿಗೆ ನೀಡುವವನ ಸಾಮರ್ಥ್ಯ ಮತ್ತು ಉದ್ಯೋಗವನ್ನು ಪರಿಗಣಿಸಿ ತೆರಿಗೆಗಳನ್ನು ವಿಧಿಸಬೇಕು ಎಂದು ಪಠ್ಯವು ಸಲಹೆ ನೀಡುತ್ತದೆ. ಸಂಗ್ರಹಿಸಿದ ತೆರಿಗೆಗಳನ್ನು ಜನರ ಕಲ್ಯಾಣಕ್ಕಾಗಿ, ಕೃಷಿ, ವ್ಯಾಪಾರ ಮತ್ತು ಕೈಗಾರಿಕೆಯನ್ನು ಉತ್ತೇಜಿಸಲು ಬಳಸಬೇಕು ಎಂದೂ ಅದು ಹೇಳುತ್ತದೆ.

ಮನುಸ್ಮೃತಿಯು ರಾಜ್ಯಗಳ ನಡುವಿನ ವಿವಾದಗಳನ್ನು ಪರಿಹರಿಸಲು, ರಾಜತಾಂತ್ರಿಕ ಮತ್ತು ಶಾಂತಿಯುತ ವಿಧಾನಗಳನ್ನು ಒತ್ತಿಹೇಳುತ್ತದೆ. ಇಲ್ಲಿ ಯುದ್ಧವನ್ನು ಕೊನೆಯ ಉಪಾಯವೆಂದು ಪರಿಗಣಿಸಲಾಗುತ್ತದೆ. ಇದನ್ನು ಪ್ರಾಥಮಿಕವಾಗಿ ಸ್ವರಕ್ಷಣೆ ಅಥವಾ ಪ್ರದೇಶದ ವಿಸ್ತರಣೆಗಾಗಿ ಮಾತ್ರ ಸಮರ್ಥಿಸಲಾಗುತ್ತದೆ. ನಾಗರಿಕರು ಮತ್ತು ದುರ್ಬಲರ ರಕ್ಷಣೆ, ಪ್ರಮಾಣಾನುಗುಣವಾದ ಬಲಪ್ರಯೋಗ ಮತ್ತು ಶರಣಾಗುವವರಿಗೆ ಹಾನಿ ಮಾಡದಿರುವುದು ಸೇರಿದಂತೆ, ನ್ಯಾಯಯುತ ಯುದ್ಧದ ನಿಯಮಗಳನ್ನು ಸಹ ಇದು ವಿವರಿಸುತ್ತದೆ.

ಮನುಸ್ಮೃತಿಯು ರಾಜನ ಆಡಳಿತದಲ್ಲಿ ನೈತಿಕತೆ ಮತ್ತು ಧಾರ್ಮಿಕ ತತ್ವಗಳ ಮಹತ್ವವನ್ನು ಒತ್ತಿಹೇಳುತ್ತದೆ. ರಾಜನು ನೀತಿವಂತ, ಪ್ರಾಮಾಣಿಕ ಮತ್ತು ನಿಗದಿತ ನೀತಿ ಸಂಹಿತೆಗಳನ್ನು ಅನುಸರಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಆದರ್ಶ ರಾಜನನ್ನು ಸ್ವಯಂ ನಿಯಂತ್ರಿತ, ಶುದ್ಧ, ನಿಷ್ಪಕ್ಷಪಾತ ಮತ್ತು ಗೌರವಾನ್ವಿತ ಎಂದು ಇದರಲ್ಲಿ ವಿವರಿಸಲಾಗಿದೆ. ಅವರು ಜ್ಞಾನವುಳ್ಳವರಾಗಿರಬೇಕು, ಬುದ್ಧಿವಂತರಾಗಿರಬೇಕು, ದೃಢವಾಗಿರಬೇಕು ಎಂದು ಇದು ಹೇಳುತ್ತದೆ.

ಪ್ರಾಚೀನ ಭಾರತೀಯ ಸಮಾಜವನ್ನು ರೂಪಿಸುವಲ್ಲಿ ಐತಿಹಾಸಿಕವಾಗಿ ಮಹತ್ವದ ಮತ್ತು ಪ್ರಭಾವಶಾಲಿಯಾದ ಪಾತ್ರವನ್ನು ಮನುಸ್ಮೃತಿ ನಿರ್ವಹಿಸಿದ್ದರೂ, ಜಾತಿ ವ್ಯವಸ್ಥೆಯನ್ನು ಉತ್ತೇಜಿಸಿದ್ದಕ್ಕಾಗಿ ಹಾಗೂ ಮಹಿಳೆಯರು ಮತ್ತು ಕೆಳಜಾತಿಗಳ ವಿರುದ್ಧ ತಾರತಮ್ಯ ಮಾಡುವ ಪಿತೃಪ್ರಧಾನ ದೃಷ್ಟಿಕೋನಗಳನ್ನು ಅನುಮೋದಿಸಿದ್ದಕ್ಕಾಗಿ ಅದು ಟೀಕೆಗಳನ್ನು ಎದುರಿಸಿದೆ. ಜಾತಿ ವ್ಯವಸ್ಥೆಯನ್ನು ಉತ್ತೇಜಿಸುವುದು, ಲಿಂಗ ಅಸಮಾನತೆ ಮತ್ತು ಕೆಲವು ಗುಂಪುಗಳಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಿದ್ದಕ್ಕಾಗಿ ಮನುಸ್ಮೃತಿ ವಿವಾದಾತ್ಮಕ ಗ್ರಂಥವಾಗಿದೆ. ಈ ಪಠ್ಯವು ಜಾತಿ ವ್ಯವಸ್ಥೆಯಲ್ಲಿ ಕೆಳಗಿರುವವರಿಗೆ ಕಠಿಣ ಶಿಕ್ಷೆಗಳನ್ನು ಒಳಗೊಂಡಂತೆ ಕಟ್ಟುನಿಟ್ಟಾದ ಜಾತಿ ಶ್ರೇಣಿಯನ್ನು ಸಮರ್ಥಿಸುತ್ತದೆ ಎನ್ನುವವರಿದ್ದಾರೆ. ಅಷ್ಟೇ ಅಲ್ಲದೆ, 'ಇದು ಮಹಿಳೆಯರ ಸ್ವಾತಂತ್ರ್ಯವನ್ನು ಕಸಿಯುವಂಥದ್ದಾಗಿದೆ, ಉದಾಹರಣೆಗೆ, ಮಹಿಳೆ ಯಾವಾಗಲೂ ತನ್ನ ತಂದೆ, ಪತಿ ಅಥವಾ ನಂತರ ಮಕ್ಕಳ ಅಧೀನಳಾಗಿ ಇರಬೇಕು ಎಂದು ಹೇಳುತ್ತದೆ' ಎಂದು ಕೆಲವರು ದೂರುತ್ತಾರೆ.

ವಾಸ್ತವಿಕವಾಗಿ ನೋಡಿದರೆ, ಜಾತಿ–ವರ್ಣವ್ಯವಸ್ಥೆಗಳು ಕೇವಲ ಹಿಂದೂ ಸಮಾಜದಲ್ಲಿರುವ ಸಂಗತಿಯಲ್ಲ. ಇಸ್ಲಾಮ್, ಕ್ರಿಶ್ಚಿಯನ್ ಹಾಗೂ ಬೌದ್ಧ ಧರ್ಮಗಳಲ್ಲೂ, ಮೇಲು–ಕೀಳು ಎಂಬ ತಾರತಮ್ಯ ಇದ್ದೇ ಇದೆ. ಹಾಗೆ ನೋಡಿದರೆ, ಇತರ ಧರ್ಮಗಳಲ್ಲಿ ಅದು ಹಿಂದೂ ಧರ್ಮದಲ್ಲಿರುವುದಕ್ಕಿಂತ ಹೆಚ್ಚಾಗಿಯೇ ಇದೆ ಎಂತಲೇ ಹೇಳಬಹುದಾಗಿದೆ. ಆದರೆ ದೂರುವುದಕ್ಕೆ ಮಾತ್ರ ಹಿಂದೂ ಧರ್ಮವನ್ನು ಕೆಲವರು ಬಳಸಿಕೊಳ್ಳುತ್ತಾರಷ್ಟೇ. ಕೆಲವು ವರ್ಷಗಳ ಹಿಂದೆ 'ಬಿಬಿಸಿ' ವಾಹಿನಿಯು, ಮನುಸ್ಮೃತಿಯಲ್ಲಿ ಪ್ರತಿಪಾದಿಸಲಾಗಿದೆ ಎಂದು ಹೇಳಲಾಗುವ ತಾರತಮ್ಯಗಳ ಕುರಿತು ಒಂದು ಕಾರ್ಯಕ್ರಮವನ್ನು ಬಿತ್ತರಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇತಿಹಾಸವನ್ನು ನೋಡಿದರೆ, ಬ್ರಾಹ್ಮಣರನ್ನೂ ಸೇರಿ ಮೇಲುವರ್ಗದವರು ಎಂದು ಕರೆಯಿಸಿಕೊಳ್ಳುವವರು ಯಾರೂ, ಅಧಿಕಾರದ ಅಥವಾ ಕಾನೂನು ರಚಿಸುವ ದಂಡನೆಯ ಸ್ಥಾನದಲ್ಲಿ ಇದ್ದಿರುವುದು ನಮಗೆ ಕಂಡುಬರುವುದಿಲ್ಲ. ಬ್ರಾಹ್ಮಣರಂತೂ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಯಾವತ್ತೂ ಸಬಲರಾಗಿರಲಿಲ್ಲ; ಬ್ರಾಹ್ಮಣ ಯಾವಾಗಲೂ 'ಬಡಬ್ರಾಹ್ಮಣ'ನೇ ಆಗಿದ್ದ. ಇನ್ನೂ ಮುಂದೆ ಹೋಗಿ ನೋಡಿದರೆ, ಈ ಸ್ಮೃತಿಗ್ರಂಥದ ರಚನಾಕಾರನಾದ ಮನುವು ಯಾವ ಜಾತಿಗೆ ಸೇರಿದ್ದ ಎನ್ನುವ ಮಾಹಿತಿಯೂ ಇಲ್ಲ. ಬ್ರಾಹ್ಮಣರಿಗೆ ಗಾಯತ್ರೀ ಮಂತ್ರವನ್ನು ಕೊಟ್ಟ ಮಹರ್ಷಿ ವಿಶ್ವಾಮಿತ್ರ, ಹಿಂದೆ ಕ್ಷತ್ರಿಯ ರಾಜನಾಗಿದ್ದ ಎನ್ನುವುದನ್ನು ನೋಡುವಾಗ, ಸಮಾಜಕ್ಕೆ ಒಂದು ವ್ಯವಸ್ಥೆಯನ್ನು ರೂಪಿಸಿಕೊಟ್ಟ ಮನು, ಬ್ರಾಹ್ಮಣನೇ ಆಗಿರಬೇಕಿಲ್ಲವಲ್ಲ! ಹಾಗೆ ನೋಡಿದರೆ, ಈ ಸ್ಮೃತಿಗ್ರಂಥದ 2600 ಶ್ಲೋಕಗಳಲ್ಲಿ ಬಹುಪಾಲು ಶ್ಲೋಕಗಳು ಮೇಲ್ವರ್ಗದವರು ಎನಿಸಿಕೊಂಡಿರುವವರಿಗೆ ಮತ್ತು ಅಧಿಕಾರದ ಸ್ಥಾನದಲ್ಲಿರುವವರಿಗೆ ನಿಯಮವನ್ನೂ ಹಾಗೂ ತಪ್ಪಿದಲ್ಲಿ ಕಠಿಣವಾದ ಶಿಕ್ಷೆಗಳನ್ನೂ ಹೇಳುವುದಕ್ಕೇ ಮೀಸಲಿಟ್ಟಿದ್ದಾನೆ ಮನು.

ಇನ್ನು, ಈ ಮಾನವಧರ್ಮ ಶಾಸ್ತ್ರವನ್ನು ಕೇವಲ ಮನು ಎನ್ನುವವನೊಬ್ಬ ರಚಿಸಿದ್ದಾನೆ ಎಂತಲೂ ನಿರ್ಧಾರವಾಗಿ ಹೇಳಲಾಗದು. ಅನೇಕ ಜ್ಞಾನಿಗಳು ಸೇರಿ ಸಮಷ್ಟಿಯಿಂದ ಈ ನೀತಿಶಾಸ್ತ್ರದ ಗ್ರಂಥವನ್ನು ರಚಿಸಿರಲಿಕ್ಕೂ ಸಾಕು. ಅದರ ಮುಂದಾಳತ್ವವನ್ನು ಮನು ಎನ್ನುವ ಋಷಿ ವಹಿಸಿದ್ದರಿಂದ, ಅದಕ್ಕೆ 'ಮನುಸ್ಮೃತಿ' ಎನ್ನುವ ಹೆಸರು ಬಂದಿರುವ ಸಾಧ್ಯತೆಗಳೂ ಇವೆ. ನಮ್ಮ ಸಂವಿಧಾನ ರಚನೆಗೆ ಒಂದು ಸಮಿತಿ ಇತ್ತು ಮತ್ತು ಡಾ. ಅಂಬೇಡ್ಕರ್ ಅವರು ಆ ಸಮಿತಿಯ ಅಧ್ಯಕ್ಷರಾಗಿ ಸಂವಿಧಾನ ರಚನೆಯ ಕಾರ್ಯಭಾರವನ್ನು ಸಮರ್ಥವಾಗಿ ನಿರ್ವಹಿಸಿದ್ದರಿಂದ, ಬಾಯಿಮಾತಿಗೆ 'ಇದು ಅಂಬೇಡ್ಕರ್ ರಚಿತ ಸಂವಿಧಾನ' ಎನ್ನುವುದಿಲ್ಲವೇ? ಹಾಗೆ ಇದು 'ಮನುಸ್ಮೃತಿ' ಎಂದಾಗಿರಬಹುದು.

ಇನ್ನು, 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎನ್ನುವ ಮಾತನ್ನು ಮನುಸ್ಮೃತಿಯಲ್ಲಿ ಹೇಳಿದ್ದಾರೆ ಎನ್ನುವವರಿಗೆ, 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎನ್ನುವ ಅದೇ ಮನುಸ್ಮೃತಿಯ ಮಾತು ಅರ್ಥವಾಗುವುದೇ ಇಲ್ಲ. ಅಥವಾ ಇರಾನ್, ಅಫ್ಘಾನಿಸ್ತಾನ ಹಾಗೂ ಪಾಕಿಸ್ತಾನಗಳಂಥ ಇತರ ದೇಶಗಳಲ್ಲಿ ಅಥವಾ ಧರ್ಮಗಳಲ್ಲಿ, ಮೂಲಭೂತವಾದಿಗಳು ಮಹಿಳೆಯರನ್ನು ಇವತ್ತಿಗೂ ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಎನ್ನುವುದು ಕಾಣುವುದೇ ಇಲ್ಲ. ಅವರುಗಳಿಗೆ ತಾಲೀಬಾನ್ ವ್ಯವಸ್ಥೆ, ಐಎಸ್‌ಐ ಮುಂತಾದ ಸಂಘಟನೆಗಳು ಮಹಿಳೆಯರನ್ನು ನಡೆಸಿಕೊಳ್ಳುತ್ತಿರುವ ರೀತಿ ಸರಿಯಾಗೇ ಕಾಣಿಸುತ್ತದೆ. ಭಾರತದಲ್ಲೇ ಇದ್ದ 'ತ್ರಿವಳಿ ತಲಾಖ್' ಪದ್ಧತಿ ಸರಿಯಾಗೇ ಇದೆ ಎನಿಸುತ್ತದೆ. ಮನುಸ್ಮೃತಿಯನ್ನು ಪ್ರವರ್ತಿಸಿದ ದೇಶದಲ್ಲಿ ಇಂದು ಸರ್ವಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿರುವುದು ಇವರ ಅರಿವಿಗೇ ಬರುವುದಿಲ್ಲ. ಒಂದು ಮಾತನ್ನಂತೂ ನಿರ್ಧಾರವಾಗಿ ಹೇಳಬಹುದು– ಮಹಿಳೆಯರಿಗೆ ಭಾರತೀಯ ಸನಾತನ ಸಂಸ್ಕೃತಿ ನೀಡಿದ ಮರ್ಯಾದೆಯನ್ನು ಇನ್ನಾವ ಸಂಸ್ಕೃತಿಯೂ ನೀಡಿಲ್ಲ.

ಸಮಕಾಲೀನ ಹಿಂದೂ ಧರ್ಮವು ಸಾರ್ವತ್ರಿಕವಾಗಿ ಮನುಸ್ಮೃತಿಯನ್ನು ಅನುಸರಿಸುತ್ತಿಲ್ಲ ಮತ್ತು ಅನೇಕ ಆಧುನಿಕ ಹಿಂದೂ ಚಿಂತಕರು ಅದರ ವಿವಾದಾತ್ಮಕ ಅಂಶಗಳಿಂದ ಅಂತರವನ್ನು ಕಾಯ್ದುಕೊಂಡು ಬರುತ್ತಾರೆ. ಮನುಸ್ಮೃತಿಯ ಪರವಾಗಿ ಮಾತನಾಡಿದರೆ ನಾವು ಸಮಾಜದಲ್ಲಿ ಖಳನಾಯಕರಾಗುತ್ತೇವೆ ಎನ್ನುವ ಭಾವನೆ ಈ ಪಂಡಿತರುಗಳಿಗಿದೆ. ಅದೇ ಇನ್ನೊಂದು ಕಡೆ, ಇಂದಿನ ಕಾಲಕ್ಕೆ ಪ್ರಸ್ತುತವಲ್ಲದಿದ್ದರೂ, 'ಮನುಸ್ಮೃತಿಯನ್ನು ಹೀಗಳೆದರೆ ಅಥವಾ ಅದರ ಪ್ರತಿಯನ್ನು ಸುಟ್ಟರೆ, ಪ್ರಗತಿಪರರು ಎನಿಸಿಕೊಂಡು ರಾಜಕೀಯವಾಗಿ ಬೆಳೆಯಬಹುದು' ಎನ್ನುವ ವಾತಾವರಣವಿದೆ.

'ಮನುಸ್ಮೃತಿಯ ಪ್ರಸ್ತುತತೆಯು ಅದರ ಕಾಲಘಟ್ಟಕ್ಕೆ ಸೀಮಿತವಾಗಿದೆ' ಎಂದು ಕೆಲವರು ವಾದಿಸಿದರೆ, 'ಸಾಮಾಜಿಕ ರಚನೆಗಳು ಮತ್ತು ವರ್ತನೆಗಳ ಮೇಲೆ ಅದರ ಪ್ರಭಾವ ಇಂದಿಗೂ ಇದೆ' ಎನ್ನುವವರೂ ಇದ್ದಾರೆ. ಅದನ್ನು ಅರ್ಥಮಾಡಿಕೊಳ್ಳಲು ಒಂದು ಐತಿಹಾಸಿಕ ದೃಷ್ಟಿಕೋನದ ಅಗತ್ಯವಿದೆ; ಇಂದಿನ ಸಂದರ್ಭದಲ್ಲಿ ಮನುಸ್ಮೃತಿಯನ್ನು ವಿಶ್ಲೇಷಣೆ ಮಾಡುವಾಗ ಅದನ್ನು ಅದರ ಕಾಲಕ್ಕೆ ಹೋಗಿ ನೋಡುವುದು ಅಗತ್ಯವಾಗಿದೆ. ಸನಾತನ ಧಾರ್ಮಿಕತೆ, ಸಾರ್ವಕಾಲಿಕವಾದ ಕಾನೂನು ಅಥವಾ ನ್ಯಾಯದಾನ, ವೇದಕಾಲದ ಇತಿಹಾಸ ಮತ್ತು ಜಗತ್ತು ಮೆಚ್ಚಿದ್ದ ನಮ್ಮ ಭಾರತೀಯ ಪುರಾತನ ತತ್ವಶಾಸ್ತ್ರಗಳ ಕುರಿತು ಆಸಕ್ತಿ ಹೊಂದಿರುವವರಿಗೆ, ಮನುಸ್ಮೃತಿ ಇಂದಿಗೂ ಆಕರ ಗ್ರಂಥವಾಗಿ ಸಹಾಯಮಾಡುತ್ತದೆ.

ವಿಚಿತ್ರವೆಂದರೆ, ಜಿಹಾದಿ ಮನಸ್ಥಿತಿಗಳನ್ನು ಪ್ರವರ್ತಿಸುವ ಅನ್ಯ ಸಂಸ್ಕೃತಿಗಳ ಗ್ರಂಥಗಳು ನಮ್ಮಲ್ಲಿ ಕೆಲವರಿಗೆ ಸ್ವೀಕಾರಾರ್ಹ ಮತ್ತು ಸ್ತುತ್ಯರ್ಹ; ಆದರೆ ಸಮಾಜದಲ್ಲಿ ಶಿಸ್ತನ್ನು ರೂಪಿಸುವ ಮತ್ತು ಸಮಾಜಮರ್ಯಾದೆ ಎಂದರೆ ಏನು ಎನ್ನುವುದನ್ನು ಜಗತ್ತಿಗೆ ಕಲಿಸಿಕೊಟ್ಟ, ಒಟ್ಟಾರೆ ಸಾರ್ವಕಾಲಿಕವಾದ ಲೋಕಹಿತದ ಉಪದೇಶಗಳನ್ನು ನೀಡುವ ನಮ್ಮದೇ ಆದ ಸ್ಮೃತಿಗ್ರಂಥಗಳೆಂಬ 'ಜ್ಞಾನದ ಬುತ್ತಿ' ಇಂಥವರಿಗೆ ನಮಗೆ ಅಪಥ್ಯ! ಇಂಥ ಚಿತ್ತಸ್ಥಿತಿಯವರಿಗೆ ಏನೂ ಮಾಡಲಾಗದು...!

ಕಾವಿಯನ್ನು ಸಡಿಲಿಸಿ ಸ್ವಾಮೀಜಿ ಅಪಚಾರ ಎಸಗಿದರೇ?

ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಕಾರಿನ ಹಿಂಬಾಗಿಲನ್ನು ನಿಧಾನವಾಗಿ ತೆರೆದು ಕೆಳಗಿಳಿದ ಕಟ್ಟುಮಸ್ತಾದ ಆಸಾಮಿಯ ಕಡೆಗೆ ಬೆರಳುಮಾಡಿ ತೋರಿಸಿದ ಅವಧೂತರು, ''ನೀವು ಊಹಿಸಿದ ಅಡುಗೆಭಟ್ಟ 'ನಳಪಾಕ' ಅಲ್ಲ ಸ್ವಾಮಿ ಕಳ್ಳಬೆಕ್ಕು; ಎದುರಿಗೆ ನಿಂತಿದೆ ನೋಡಿ ಕಥೆಯ ಸಸ್ಪೆನ್ಸು ಮತ್ತು ಕ್ಲೈಮ್ಯಾಕ್ಸು'' ಎಂದು ಹೇಳಿದ್ದನ್ನು ಕೇಳಿ, ಕೆಲಕ್ಷಣದ ಹಿಂದಷ್ಟೇ ಅವರನ್ನು ಪ್ರಶ್ನಿಸಿದ್ದ ಶಿಷ್ಯರು ನಿಜಕ್ಕೂ ಅವಾಕ್ಕಾಗಿದ್ದರು. ಅದಕ್ಕೆ ಕಾರಣವೂ ಇತ್ತು. ಆ ಕಟ್ಟುಮಸ್ತಾದ ಆಸಾಮಿ ಬೇರಾರೂ ಆಗಿರದೆ, ಅವಧೂತರನ್ನು ಭೇಟಿಮಾಡಲು ಸರ್ಕಲ್ ಇನ್ಸ್‌ಪೆಕ್ಟರ್ ಜತೆಯಲ್ಲಿ ಬಂದಿದ್ದ ಹಿರಿಯ ರಾಜಕಾರಣಿಯ ಮಗನೇ ಆಗಿದ್ದ! ಆ ರಾಜಕಾರಣಿಯ 'ಉತ್ತರಾಧಿಕಾರಿ' ಎಂದೇ ಬಿಂಬಿಸಲ್ಪಟ್ಟಿದ್ದ ಆ ಕಟ್ಟುಮಸ್ತಾದ ತರುಣ, ಅಪ್ಪ ಕಟ್ಟಿದ್ದ 'ರಾಜಕಾರಣದ ಕೋಟೆ'ಯನ್ನು ಮತ್ತಷ್ಟು ಭದ್ರಪಡಿಸುವುದರ ಜತೆಗೆ, ತನ್ನ 'ಉತ್ತರಾಧಿಕಾರಿತ್ವ'ದ ಪರಿಕಲ್ಪನೆಯನ್ನೂ ಜನಮನದಲ್ಲಿ ಆಳವಾಗಿ ಬೇರೂರಿಸಬೇಕು ಎಂಬ ಹುಕಿಗೆ ಬಿದ್ದು ಅಪ್ಪನ ಜತೆಯಲ್ಲಿ ಊರೂರು ಸುತ್ತುತ್ತಿದ್ದ. ಹೀಗಾಗಿ ಆ ತರುಣ ಸಾಕಷ್ಟು ಜನರಿಗೆ ಗೊತ್ತಿದ್ದ. ಹಾಗೆ ಆತನ ಚಹರೆಯ ಪರಿಚಯವಿದ್ದವರಲ್ಲಿ ಅವಧೂತರ ಶಿಷ್ಯರೂ ಸೇರಿದ್ದರು. ಆದರೆ ಈತ ಕಥೆಯ 'ಸಸ್ಪೆನ್ಸ್' ಮತ್ತು 'ಕ್ಲೈಮ್ಯಾಕ್ಸ್' ಆಗಲಿಕ್ಕೆ ಹೇಗೆ ಸಾಧ್ಯ? ಎಂಬ ಪ್ರಶ್ನೆ ಶಿಷ್ಯರ ಮನದಲ್ಲಿ ಗಿರಕಿ ಹೊಡೆಯುತ್ತಲೇ ಇತ್ತು...

ಕಾರಿನಿಂದ ಇಳಿದು ಮಳ್ಳನಂತೆ ಸುಮ್ಮನೆ ನಿಂತಿದ್ದ ಆ 'ಯುವ ರಾಜಕಾರಣಿ'...! ಎದುರಿಗೆ ಜನಸಮುದಾಯವನ್ನು ಕಂಡಾಗಲೆಲ್ಲಾ ತಾನೇ ಮುಂದಡಿಯಿಟ್ಟು ಅವರಿವರ ಕೈಕುಲುಕುತ್ತಿದ್ದ ಆ ಮಹಾನುಭಾವ, ಇಂದು ಮಾತ್ರ ಕೈಕಟ್ಟಿ ತೆಪ್ಪಗೆ ನಿಂತಿದ್ದ. ಅದಕ್ಕೆ ಕಾರಣ, ಮುಂದಡಿಯಿಟ್ಟು ಅವಧೂತರ ಮನೆಯ ಬಾಗಿಲು ಬಡಿಯುವ ಧೈರ್ಯವಾಗಲೀ ತಾಕತ್ತಾಗಲೀ ಅವನಲ್ಲಿ ಉಳಿದಿರಲಿಲ್ಲ. ಜತೆಗೆ ಆತನ ಕಾಲುಗಳು ಲಘುವಾಗಿ ನಡುಗುತ್ತಿದ್ದವು. ಅವಧೂತರ ಭೇಟಿಗೆ ದೂರದ ಪಟ್ಟಣದಿಂದ ಕಾರಿನಲ್ಲಿ ಕರೆತರುವಾಗಲೇ, ಆತನ ಅಪ್ಪ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಕಡೆಯಿಂದ ಒದಗಿದ್ದ ಮುನ್ನೆಚ್ಚರಿಕೆಯ ಪಾಠಗಳೂ ಅದಕ್ಕೆ ಕಾರಣವಾಗಿದ್ದಿರಬೇಕು! ಏಕೆಂದರೆ, ಒಂದು ದಿನದ ಹಿಂದೆ ಅವರಿಬ್ಬರೂ ತಮ್ಮ ಭೇಟಿಗೆ ಮನೆಯ ಹಿತ್ತಲಿಗೇ ಬಂದಿದ್ದಾಗ ಅವಧೂತರು ತಮ್ಮ ಶಿಷ್ಯರನ್ನೆಲ್ಲಾ ಮನೆಯೊಳಗೆ ಕಳಿಸಿ, ಅವರಿಬ್ಬರ ಜತೆಗಿನ ಏಕಾಂತದ ಮಾತುಕತೆಗೆ ಅನುವುಮಾಡಿಕೊಟ್ಟಿದ್ದ ಸಂದರ್ಭದಲ್ಲಿ ''ಓಹೋ... ನಿಮಗೆ ಇಷ್ಟೊಂದು ಧಾರ್ಷ್ಟ್ಯವೇ?'' ಎಂದು ಸಿಂಹಗರ್ಜನೆಯ ಸ್ವರೂಪದಲ್ಲಿ ಅಬ್ಬರಿಸಿ, ಅವರಿಬ್ಬರ ಕೊಬ್ಬಿಳಿಸಿ ಕಳಿಸಿದ್ದರು. ಸಾಲದೆಂಬಂತೆ, ಅವರು ತಂದಿದ್ದ ಹಣ್ಣು–ಹೂವು, ಸಿಹಿತಿನಿಸಿನ ಪೊಟ್ಟಣಗಳನ್ನು ಸ್ವೀಕರಿಸಲು ಬಿಲ್‌ಕುಲ್ ಒಪ್ಪದೆ, ''ಅವನ್ನು ಹೇಗೆ ತಂದಿದ್ದಿರೋ, ಹಾಗೇ ನಿಮ್ಮ ಕಾರಿನಲ್ಲಿ ವಾಪಸ್ ತೆಗೆದುಕೊಂಡು ಹೋಗಿಬಿಡಿ...'' ಎಂದು ಕಟ್ಟಾಜ್ಞೆ ವಿಧಿಸಿದ್ದರು. ಹೀಗೆ ಸುಡುಮಾತಿನಲ್ಲೇ ತಪರಾಕಿ ತಿಂದಿದ್ದ ಆ ಹಿರಿಯ ರಾಜಕಾರಣಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್, 'ಅವಧೂತರ ಜತೆ ನಡೆದುಕೊಳ್ಳುವ ಬಗೆ ಹೇಗೆ' ಎಂಬುದರ ಕುರಿತು ಆ ಯುವ ರಾಜಕಾರಣಿಗೆ ದಾರಿಯುದ್ದಕ್ಕೂ 'ಬಾಯಿಪಾಠ' ಹೇಳಿಕೊಂಡು ಬಂದಿರುವುದರ ಸಾಧ್ಯತೆಯಿತ್ತು. ಹೀಗಾಗಿ ಆ ಯುವ ರಾಜಕಾರಣಿ ತನ್ನ ಕೈ–ಬಾಯಿ–ಕುಚೇಷ್ಟೆಗಳಿಗೆಲ್ಲಾ ಬೀಗ ಹಾಕಿಕೊಂಡು ಕಾರಿನ ಬಳಿ ತೆಪ್ಪಗೆ ನಿಂತಿದ್ದ. ಸದ್ಯಕ್ಕೆ ಅವನಲ್ಲಿ ಕಾಣಬರುತ್ತಿದ್ದುದು ಕಾಲುಗಳ ನಡುಕವಷ್ಟೇ..!

ಅವಧೂತರ ಜತೆಗೇ ನಿಂತುಕೊಂಡಿದ್ದು ಇವಿಷ್ಟೂ ದೃಶ್ಯವೈಭವವನ್ನು ಹಜಾರದ ಕಿಟಕಿಯಿಂದಲೇ ವೀಕ್ಷಿಸಿದ ಶಿಷ್ಯರಲ್ಲಿ ಒಬ್ಬರು ಅಪ್ರಯತ್ನವಾಗಿ ಅವಧೂತರ ಕಡೆಗೊಮ್ಮೆ ನೋಡಿದರು...

ಆ ನೋಟವನ್ನು ಗ್ರಹಿಸಿದ ಅವಧೂತರು, ''ಆ ಮೂವರಿಗೂ ಮನೆಯ ಬಾಗಿಲು ತೆರೆಯುವ ಅಗತ್ಯವಿಲ್ಲ ಸ್ವಾಮೀ... ಮೂಲೆಯಲ್ಲಿರೋ ಗೋಣಿಚೀಲದಿಂದ ಮೂರು ತೆಂಗಿನಕಾಯಿಗಳನ್ನು ಹೆಕ್ಕಿ ತೆಗೆದು, ನೀವಾಗೇ ಅವರಿದ್ದಲ್ಲಿಗೆ ತೆರಳಿ ಕೊಟ್ಟುಬಿಡಿ, ನಂತರ ಇಲ್ಲಿಂದ ಹೊರಡುವಂತೆ ತಿಳಿಸಿ ಬಂದುಬಿಡಿ, ಅಷ್ಟೇ!'' ಎಂದು ಹೇಳಿ ಆ ಶಿಷ್ಯರ ಉತ್ತರಕ್ಕೂ ಕಾಯದೆ ಮಿಕ್ಕ ಶಿಷ್ಯರೊಂದಿಗೆ ಹಿತ್ತಲಿಗೆ ಮರಳಿದರು. ಮನೆಯ ಹೊರಗೇ ನಿಂತಿದ್ದ ಆ ಮೂವರಿಗೂ ಅವಧೂತರ ಸೂಚನೆಯಂತೆಯೇ ತೆಂಗಿನಕಾಯಿಗಳನ್ನು ಕೊಟ್ಟ ಆ ಶಿಷ್ಯರು, ''ನೀವಿನ್ನು ಹೊರಡಬಹುದಂತೆ'' ಎಂದಷ್ಟೇ ಚುಟುಕಾಗಿ ಹೇಳಿ, ಮನೆಯ ಹಿತ್ತಲಿಗೆ ಮರಳಿದರು. 'ಇನ್ನು ನಿನ್ ಕಥೆ ಅಷ್ಟೇ' ಎನ್ನುವ ಧಾಟಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆ ಯುವ ರಾಜಕಾರಣಿಯ ಕಡೆಗೆ ಹತಾಶನೋಟವನ್ನು ಚೆಲ್ಲಿದರು. ತಮ್ಮ ಉತ್ತರಾಧಿಕಾರಿಯಾಗಿ ಮುಂದೆ ರಾಜಕೀಯದ ಆಗಸದಲ್ಲಿ ಸೂರ್ಯನಂತೆ ಬೆಳಗಬೇಕಿದ್ದ ತಮ್ಮ ಕುಲಪುತ್ರ, ಶುರುವಿನಲ್ಲೇ ಹೀಗೆ 'ಖಗ್ರಾಸ ಸೂರ್ಯಗ್ರಹಣ'ಕ್ಕೆ ಒಳಗಾಗುವಂತಾಗಿದ್ದಕ್ಕೆ ಹಿರಿಯ ರಾಜಕಾರಣಿ ಕಾರಿನ ಕಿಟಕಿಗೆ ಹಣೆಹಣೆ ಚಚ್ಚಿಕೊಂಡರು. 'ಬಂದ ದಾರಿಗೆ ಸುಂಕವಿಲ್ಲ' ಎಂಬ ಮಾತಿನಂತೆ ಆ ಮೂವರೂ ಅಲ್ಲಿಂದ ಫೇರಿ ಕೀಳಬೇಕಾಗಿ ಬಂತು..!

ಹಿತ್ತಲಲ್ಲಿ ಶಿಷ್ಯರೊಡನೆ ಕೂತಿದ್ದ ಅವಧೂತರಲ್ಲಿ ಉಸಿರಾಟ ತೀವ್ರವಾಗಿತ್ತು, ಮನಸ್ಸಿನಲ್ಲಿ ಸಂಕ್ಷೋಭೆ ಗಿರಕಿ ಹೊಡೆಯುತ್ತಿತ್ತು. ಕಾರಣ, ಸರ್ಕಲ್ ಇನ್ಸ್‌ಪೆಕ್ಟರ್, ಹಿರಿಯ ರಾಜಕಾರಣಿ ಮತ್ತು ಅವರ ಮಗ ತಮ್ಮ ಭೇಟಿಗೆ ಬಂದಿದ್ದು ಅವಧೂತರಿಗೆ ಪಥ್ಯವಾಗಿರಲಿಲ್ಲ. ಇದನ್ನು ಕಣ್ಣಲ್ಲೇ ಅಳೆದ ಶಿಷ್ಯರು ಅವರೊಂದಿಗೆ ಮಾತಿಗಿಳಿಯುವ ಧೈರ್ಯವನ್ನೂ ತೋರಲಿಲ್ಲ. ಆದರೆ ಅವರಲ್ಲಿ 'ಮನ–ಮಂಥನ' ನಡೆಯುತ್ತಲೇ ಇತ್ತು– 'ಮೊದಲ ಭೇಟಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಹಿರಿಯ ರಾಜಕಾರಣಿಯನ್ನು ಮನೆಯೊಳಗಷ್ಟೇ ಏನು ಹಿತ್ತಲಿನವರೆಗೂ ಬಿಟ್ಟುಕೊಂಡಿದ್ದರು ಅವಧೂತರು; ಆದರೆ ಈ ಸಲ ಅವರಿಗೆ ಮನೆಬಾಗಿಲೂ ತೆರೆಯಲಿಲ್ಲ. ಯುವ ರಾಜಕಾರಣಿಯನ್ನು ಕಂಡು ಅವಧೂತರು ಕೆರಳಿದ್ದಾರೆಂದರೆ, ಕಥೆಯ ಸಸ್ಪೆನ್ಸು ಮತ್ತು ಕ್ಲೈಮ್ಯಾಕ್ಸು ಎಂದು ಅವರಿಂದಲೇ ಬೆರಳುಮಾಡಿ ತೋರಿಸಲ್ಪಟ್ಟ ಆತನೇ ಶಾರದೆಯ ಕಥನದಲ್ಲಿನ ಖಳನಾಯಕ ಎಂದಾಯಿತಲ್ಲಾ? ಹಾಗಿದ್ದರೆ ಮಠದ ಸ್ವಾಮೀಜಿ, ಸಂಸ್ಥೆಯ ಮ್ಯಾನೇಜರ್, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಹಿರಿಯ ರಾಜಕಾರಣಿ ಹಾಗೆ ಅವಧೂತರ ಭೇಟಿಗೆ ಹಾತೊರೆದಿದ್ದೇಕೆ? ಅವರಲ್ಲಿ ಕೆಲವರು ತಪ್ಪಿತಸ್ಥರಂತೆ ಅವಧೂತರಲ್ಲಿ ಅಲವತ್ತುಕೊಂಡು ರೋದಿಸಿದ್ದೇಕೆ? ಅಡುಗೆಭಟ್ಟ 'ನಳಪಾಕ'ನ ಉದ್ಯೋಗಕ್ಕೆ ಸಂಚಕಾರ ಬಂದಿದ್ದೇಕೆ? ಶಾರದೆಯ ವಿಷಯದಲ್ಲಿ ಯುವ ರಾಜಕಾರಣಿ ತೋರಿದ ಅಸಭ್ಯ ವರ್ತನೆಯನ್ನೇ ಇವರೆಲ್ಲರೂ ತೋರಿದರೇ? ಆ ಕಾರಣಕ್ಕೇ ತಪ್ಪಿತಸ್ಥ ಭಾವನೆಯಲ್ಲಿ ಅವರೆಲ್ಲಾ ಪ್ರಲಾಪಿಸುವಂತಾಯಿತೇ? ಕಥೆಯ ಸಸ್ಪೆನ್ಸು ಮತ್ತು ಕ್ಲೈಮ್ಯಾಕ್ಸು ಬಿಚ್ಚಿಕೊಳ್ಳುವ ಘಟ್ಟ ಬಂದಿದ್ದರೂ ಈ ಗೊಂದಲಗಳು ಪರಿಹಾರವಾಗುತ್ತಿಲ್ಲವಲ್ಲಾ..?' ಎಂಬೆಲ್ಲಾ 'ಪ್ರಶ್ನಾಸಾಗರ'ದ ಮಂಥನದಲ್ಲಿ ಶಿಷ್ಯರು ವ್ಯಸ್ತರಾಗಿದ್ದರು...

ಭಾಗ-13

''ತಪ್ಪೆಸಗಿದ್ದು ಆ 'ಮರಿ ಪುಢಾರಿ' ಮಾತ್ರವೇ ಅಲ್ಲ; ಸ್ವಾಮೀಜಿ, ಮ್ಯಾನೇಜರ್, ಅಡುಗೆಭಟ್ಟ 'ನಳಪಾಕ', ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಹಿರಿಯ ರಾಜಕಾರಣಿ ಹೀಗೆ ಎಲ್ಲರೂ ಸಾಕಷ್ಟು ಎಡವಿದ್ದಾರೆ ಕಣ್ರಯ್ಯಾ...'' ಎಂಬ ಅವಧೂತರ ದನಿ ಕೇಳುತ್ತಿದ್ದಂತೆಯೇ ಶಿಷ್ಯರು ಕಲ್ಪನಾವಿಹಾರದಿಂದ ವಾಸ್ತವ ಪ್ರಪಂಚಕ್ಕೆ ಮರಳಿದರು. ತಮ್ಮ ಮಾತಿನಿಂದ ಶಿಷ್ಯರ ಹಣೆಗಳಲ್ಲಿ ಪ್ರಶ್ನಾರ್ಥಕ ಚಿಹ್ನೆಗಳು ಮೂಡಿದ್ದನ್ನು ಕಂಡ ಅವಧೂತರು ಮಾತನ್ನು ಮುಂದುವರಿಸುತ್ತಾ, ''ಸನ್ಯಾಸಧರ್ಮವನ್ನು ಒಂದಿಷ್ಟು ಕಾಲ ತೊರೆದ ಸ್ವಾಮೀಜಿ, ಸ್ವಾರ್ಥಕ್ಕೆ ಸಿಲುಕಿ ಕೆಲಕಾಲ ಕರ್ತವ್ಯಪ್ರಜ್ಞೆ ಮರೆತ ಮ್ಯಾನೇಜರ್, ತನ್ನ ಕಸುಬಿಗೆ ಇದ್ದ ಇತಿಮಿತಿಯನ್ನು ಮರೆತು ಉದ್ಧಟತನ ಮೆರೆದ ಅಡುಗೆಭಟ್ಟ 'ನಳಪಾಕ', ಸರಕಾರವಿತ್ತ ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಸರ್ಕಲ್ ಇನ್ಸ್‌ಪೆಕ್ಟರ್, ಮಗನ ಕುಕೃತ್ಯದ ಅರಿವಿದ್ದೂ ಅವನಿಗೆ ಬಡಿದು ಬುದ್ಧಿ ಹೇಳದ ಹಿರಿಯ ರಾಜಕಾರಣಿ ಈ ಎಲ್ಲರೂ ಶಾರದೆಯ ಕಥನದಲ್ಲಿ ಖಳನಾಯಕರೇ. ಹೀಗಾಗಿ, ಆಕೆಯ ಪ್ರಕರಣವು ದೈವನಿರ್ಮಿತ ನ್ಯಾಯಾಲಯದಲ್ಲಿ ವಿಚಾರಣೆಗೆ ಬರುತ್ತಿದ್ದಂತೆ, ಪೈಪೋಟಿಗೆ ಬಿದ್ದವರಂತೆ ಒಬ್ಬರಾದ ಮೇಲೊಬ್ಬರು ಸಾಕ್ಷ್ಯ ಹೇಳಲು ಬರಬೇಕಾಯಿತು. ಅದು ದೈವನಿಯಮ'' ಎಂದು ಹೇಳಿ ಅರೆಕ್ಷಣ ನಿಲ್ಲಿಸಿದರು.

ಈ ಮಾತಿಗೆ ಅಪ್ರತಿಭರಾದ ಶಿಷ್ಯರೊಬ್ಬರು, ''ಅಂದರೆ, ಮೊಳಕೆಯಲ್ಲೇ ಚಿವುಟಿ ಸರಿಮಾಡಬಹುದಾಗಿದ್ದ ಅಪಸವ್ಯವನ್ನು ಇವರೆಲ್ಲರೂ ಮುಂದುವರಿಸಿಕೊಂಡು ಬಂದರಾ ಗುರುಗಳೇ? ಸನ್ಯಾಸಧರ್ಮವನ್ನು ಪರಿಪಾಲಿಸಬೇಕಿದ್ದ ಮಠದ ಸ್ವಾಮೀಜಿಯೂ ಇದರಲ್ಲಿ ಸೇರಿಕೊಂಡುಬಿಟ್ಟರಾ?'' ಎಂದು ಏರುದನಿಯಲ್ಲಿ ಪ್ರಶ್ನಿಸಿದರು.

ಈ ಪ್ರಶ್ನೆಗೆ ಅವಧೂತರು ವಿಷಾದದ ದನಿಯಲ್ಲಿ, ''ಸರ್ವಸಂಗ ಪರಿತ್ಯಾಗಿಯಾಗಿ ಇರಬೇಕಾಗಿದ್ದ ಆ ಮಹಾನುಭಾವ ತನ್ನ ಕಾವಿಯನ್ನು ಕೊಂಚ ಸಡಿಲಿಸಿದ್ದೇ ಅಪಸವ್ಯದ ಮುಂದುವರಿಕೆಗೆ ಮುನ್ನುಡಿಯಾಯಿತು'' ಎಂದು ಹೇಳಿ, ''ಛೇ... ಛೇ..'' ಎಂದು ಲೊಚಗುಟ್ಟಿದರು. ಈ ಮಾತಿಗೆ ಶಿಷ್ಯರೊಬ್ಬರು ಸಂಕ್ಷೋಭೆಗೊಂಡು, ''ಗುರುಗಳೇ, ಹೌದಾ...?'' ಎನ್ನುತ್ತಾ ವ್ಯಗ್ರರಾದರು.

ಅವರ ತಲೆ ನೇವರಿಸಿದ ಅವಧೂತರು, ''ಶಾಂತತೆಯನ್ನು ಕಾಯ್ದುಕೊಳ್ಳಿ. ಆ 'ಧರ್ಮಸೂಕ್ಷ್ಮ'ದ ಉಲ್ಲಂಘನೆ'ಯ ಕುರಿತು ವಿವರಿಸುವೆ'' ಎಂದು ಸಮಾಧಾನಿಸಿದರು...

(ಮುಂದುವರಿಯುವುದು)

ರಾಖಿ ಭಾಯ್: ದುಷ್ಟ ರಕ್ಷಕ, ಸಿಸ್ಟರ್ ರಕ್ಷಕ!

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಿನಿಮಾ ರಂಗ ಮತ್ತು ರಾಜಕೀಯ ರಂಗ ಮೊದಲಿನಿಂದಲೂ ದೂರ ದೂರ ಇರುವಂಥವೇನಲ್ಲ. ಸಿನಿಮಾ ರಂಗದಲ್ಲಿ ಹೆಸರು ಮಾಡಿ, ತಮ್ಮ ಕಾಲ ಮುಗಿಯುತ್ತಾ ಬಂದಂತೆ, ತಮ್ಮ ಡಿಮ್ಯಾಂಡ್ ಕಮ್ಮಿ ಆಗುತ್ತಾ ಬಂದಂತೆ ಹಲವರು ಮೆಲ್ಲಗೆ ರಾಜಕೀಯ ಮಾತಾಡೋಕೆ ಶುರು ಮಾಡೋದು ಸಹಜ. ಆದರೆ ಇತ್ತೀಚೆಗೆ ಈಗಿನ್ನೂ ಅಂಬೆಗಾಲಿಡುತ್ತಿರುವ ನಟ–ನಟಿಯರೂ ರಾಜಕೀಯದ ಬಗ್ಗೆ ಮಾತಾಡೋಕೆ ಶುರು ಮಾಡ್ತಾ ಇರೋದು ಹೊಸ ಟ್ರೆಂಡು. ಕನ್ನಡದಲ್ಲಿ ಅನಂತ್‌ನಾಗ್, ಅಂಬರೀಶ್ ಅವರಂಥ ಹಿರಿಯರ ನಂತರ ಈಗಿನ ಸಿನಿಮಾ ಹೀರೋಗಳು ರಾಜಕೀಯದ ವರಸೆ ಶುರುಮಾಡಿದ್ದಾರೆ. ಉಪೇಂದ್ರ ಅವರಂಥ ಕೆಲವರು ರಾಜಕೀಯದಲ್ಲಿ ಭವಿಷ್ಯ ಕಂಡುಕೊಳ್ಳುವ ಪ್ರಯತ್ನಕ್ಕೆ ಈಗಲೇ ಮುನ್ನುಡಿ ಬರೆಯುತ್ತಿದ್ದಾರೆ. ಇನ್ನು ಚೇತನ್ ಅವರಂಥ ನಟ ಸಾಮಾಜಿಕ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರೂ ರಾಜಕೀಯದ ಬಗ್ಗೆ ಮಾತನಾಡುತ್ತಿರುತ್ತಾರೆ. ಆದರೆ ಇವರ ಹೊರತಾಗಿ ಒಂದೆರಡು ಸಿನಿಮಾ ಮಾಡಿದ ನಟ–ನಟಿಯರೂ ಈಗ ರಾಜಕೀಯ ಪ್ರಿಯರಾಗಿದ್ದಾರೆ. ರಿಶಭ್ ಶೆಟ್ಟಿಯಂಥವರು ರಾಜಕೀಯವಾಗಿ ಸಕ್ರಿಯರಾಗಿಲ್ಲವಾದರೂ ಮುಂದೊಂದು ದಿನ ಕೆಲಸಕ್ಕೆ ಬರುತ್ತೆ ಎಂಬ ದಾರಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಇದೇ ಹಾದಿಯಲ್ಲಿ, ಕೆಲಸಕ್ಕೆ ಬಾರದ ನಾಲ್ಕು ಸಿನಿಮಾ ಮಾಡಿರುವಂಥವರೂ ಕೆಲಸಕ್ಕೆ ಬಾರದ ಮಾತಾಡುತ್ತಿರೋದು ಮಾತ್ರ ಎಲ್ಲೆಡೆ ಚರ್ಚೆಗೆ ಕಾರಣವಾಗುತ್ತಿದೆ. ಯಾರಿಗೂ ಹೆಸರೇ ಗೊತ್ತಿಲ್ಲದ ಸಿನಿಮಾದಿಂದ ನಾಯಕಿ ಎನಿಸಿಕೊಂಡ ಕೆಲ ಸೋ–ಕಾಲ್ಡ್ ನಟಿಯರು ಎಲ್ಲ ಪ್ರಯತ್ನಗಳ ನಡುವೆಯೂ ಚಿತ್ರರಂಗದಲ್ಲಿ ನಟಿ ಅಂತ ಗುರುತಿಸಿಕೊಳ್ಳೋಕಾಗಿಲ್ಲ ಅಂತಲೋ ಏನೋ ಈಗ, ವಯಸ್ಸಾದ ಮೇಲೆ ರಾಜಕೀಯ ಪಕ್ಷಗಳನ್ನು ಒಲಿಸಿಕೊಂಡು ರಾಜಕೀಯ ಪ್ರವೇಶಿಸುವ ಆಸೆ ಇಟ್ಟುಕೊಂಡವರಂತೆ ವರ್ತಿಸುತ್ತಿದ್ದಾರೆ. ಬಾಲಿವುಡ್‌ನಲ್ಲಿ ಸ್ಮೃತಿ ಇರಾನಿ, ಕಂಗನಾ ರಣಾವತ್ ಅವರೆಲ್ಲ ಮಾತಾಡುವಾಗ ನಾನೂ ಮಾತಾಡಿದ್ರೆ ಅವರಂತೆ ಆಗಬಹುದು ಅಂತ ಕನಸು ಕಾಣೋದ್ರಲ್ಲಿ ತಪ್ಪಿಲ್ಲ ಬಿಡಿ. ಆದರೆ ಕೇವಲ ತಮ್ಮ ಸ್ವಾರ್ಥಸಾಧನೆಗಾಗಿ, ದೇಶದ ಹಿರಿಯ ನಾಯಕರ ಬಗ್ಗೆ, ಮಹಾತ್ಮರ ಬಗ್ಗೆ ಹಗುರವಾಗಿ ಮಾತಾಡುವ ಮೂಲಕ ಕೆಲವು ಸಿನಿಮಾ ನಾಯಕಿಯರು ತಮ್ಮ ಆತುರ ಮತ್ತು ಅಜ್ಞಾನವನ್ನ ತೋರಿಸಿಕೊಳ್ಳುತ್ತಿರೋದು ನಗೆಪಾಟಲಿಗೆ ಈಡಾಗಿರೋದಂತೂ ನಿಜ.

ಲೂಸ್ ಟಾಕ್

ರಾಖಿ ಕಟ್ಟಿಸಿಕೊಂಡ ಯುವಕ

- **ಏನ್ ರಾಕಿ ಭಾಯ್, ಕೈ ತುಂಬಾ ರಾಖಿ ಕಟ್ಕೊಂಡು 'ರಾಖಿ ಭಾಯ್' ಆಗ್ಬಿಟ್ಟಿದ್ದೀರಾ?**
– ಏನ್ ಮಾಡೋದು, ರಕ್ಷಾಬಂಧನದ ದಿನ ಕೈಯಲ್ಲಿ ರಾಖಿ ಇಲ್ಲದೆ 'ಕ್ಲೀನ್ ಹ್ಯಾಂಡ್' ಅನ್ನಿಸಿಕೊಳ್ಳೋ ಯೋಗ ನಮಗಿಲ್ಲ.
- **ಸರಿ, ಬ್ರೋ ಅನ್ನೋ ಸ್ನೇಹಿತರಿಗೂ, ರಾಖಿ ಕಟ್ಟೋ ಸೋದರಿಯರಿಗೂ ಏನ್ ವ್ಯತ್ಯಾಸ?**
– ಏನಿಲ್ಲ. ಸ್ನೇಹಿತರನ್ನ 'ಸಿಸ್ಯಾ' ಅಂತ ಕರೀತಿವಿ. ಸೋದರಿಯರನ್ನ 'ಸಿಸ್' ಅಂತ ಕರೀತಿವಿ
- **ನಿಮ್ಮ ಹಳೇ ಹುಡುಗಿ ಏನೂ ರಾಖಿ ಕಟ್ಟೋಕೆ ಬಂದಿಲ್ವಾ?**
– ಅಯ್ಯೋ, ಅವಳನ್ನ ಲವ್ ಮಾಡಿ ಆಗ ಆಟೋ ಓಡಿಸೋ ಲೆವೆಲ್‌ಗೆ ಬಂದು, 'ರಿಕ್ಷಾ ಬಂಧನ'ದಲ್ಲಿದ್ದೀನಿ. 'ರಕ್ಷಾಬಂಧನ'ದ ದಿನ ಅವಳನ್ನ ಯಾಕ್ರೀ ನೆನಪಿಸ್ತೀರಿ?
- **ಹೋಗ್ಲಿ ಬಿಡಿ, ಅಂದಹಾಗೆ, ಅಕ್ಕ ತಂಗಿಯರು ಕಟ್ಟಿದ ಈ ರಾಖಿ ಎಷ್ಟು ದಿನ ನಿಮ್ಮ ಕೈಯಲ್ಲಿರುತ್ತೆ?**
– ಅವರೇನೋ ಪ್ರೀತಿಯಿಂದ ಕಟ್ಟಿರ್ತಾರೆ. ಅದನ್ನ ಉಳಿಸಿಕೊಳ್ಳೋದೂ, ಬಿಡೋದೂ ನಮ್ಮ ಕೈಯಲ್ಲಿರುತ್ತೆ.
- **ಸರಿಯಾಗಿ ಹೇಳಿದ್ರಿ, ಹೋಗ್ಲಿ ಈ ರಾಖಿ ಕಟ್ಟಿದ ಮೇಲೆ ಎಲ್ಲ ಅಣ್ತಮ್ಮಗಳೂ ಸೋದರಿಯರ ಪಾಲಿಗೆ ರಕ್ಷಕ ಆಗ್ತಾರಾ?**
– ಈ ಪ್ರಶ್ನೆನಾ ದುಷ್ಟ ರಕ್ಷಕ, ಸಿಸ್ಟರ್ ರಕ್ಷಕ, 'ರಕ್ಷಕ್ ಬುಲೆಟ್' ಅವರನ್ನೇ ಕೇಳ್ಬೇಕು

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಕಾಲೇಜಲ್ಲಿ ಓದುವಾಗ ಒಂದು ದಿನ ಲೈಬ್ರೆರಿಗೆ ಅಂತ ಹೋದ. ಅಲ್ಲಿ ತುಂಬಾ ಜನ ಇದ್ರು. ಎಲ್ಲರೂ ಕಾಮ್ ಆಗಿ ಕೂತು ಓದ್ತಾ ಇದ್ರು. ಖೇಮು ಕೂತ್ಕೊಳ್ಳೋಕೆ ಜಾಗ ಹುಡುಕ್ತಾ ಇದ್ದ. ಆದ್ರೆ ಎಲ್ಲೂ ಜಾಗ ಇರಲಿಲ್ಲ. ತುಂಬಾ ಹುಡುಕಿದ ಮೇಲೆ ಅಲ್ಲಿ ಒಂದು ಕಡೆ ಒಂದು ಸುಂದರವಾದ ಹುಡುಗಿ ಕೂತಿದ್ದು ಕಾಣಿಸಿತು. ಅವಳ ಪಕ್ಕದಲ್ಲಿ ಒಂದು ಜಾಗ ಖಾಲಿ ಇತ್ತು. ಆದರೆ ಖೇಮು ಸ್ವಲ್ಪ ನಾಚಿಕೆ ಸ್ವಭಾವದ ಹುಡುಗ. ಅವನಿಗೆ ಹುಡುಗಿಯ ಪಕ್ಕದಲ್ಲಿ ಹೋಗಿ ಕೂರೋದು ಮುಜುಗರ ಅನ್ನಿಸಿತು. ಆದರೆ ಬೇರೆ ದಾರಿ ಇರಲಿಲ್ಲ. ಸ್ವಲ್ಪ ಹೊತ್ತು ಯೋಚನೆ ಮಾಡಿ ನಂತರ ಧೈರ್ಯ ಮಾಡಿ ಆಕೆಯ ಬಳಿ ಹೋದ. ''ಎಕ್ಸ್‌ಕ್ಯೂಸ್ ಮೀ'' ಅಂತ ಆಕೆಯನ್ನು ಮಾತನಾಡಿಸಿ, ಮೆಲುದನಿಯಲ್ಲಿ, ''ಲೈಬ್ರರಿಯಲ್ಲಿ ಬೇರೆ ಎಲ್ಲೂ ಜಾಗ ಇಲ್ಲ. ಇಫ್ ಯೂ ಡೋಂಟ್ ಮೈಂಡ್, ನಾನು ನಿಮ್ಮ ಪಕ್ಕದಲ್ಲಿ ಕೂತ್ಕೋ ಬಹುದಾ?'' ಅಂತ ಕೇಳಿದ. ಅವಳು ಒಂದು ಕ್ಷಣ ಇವನ ಮುಖ ನೋಡಿ, ನಂತರ ಲೈಬ್ರರಿಯಲ್ಲಿರುವ ಎಲ್ಲರನ್ನೂ ಒಮ್ಮೆ ನೋಡಿ ಎದ್ದು ನಿಂತು ಎಲ್ಲರಿಗೂ ಕೇಳಿಸುವಂತೆ ಹೇಳಿದಳು– ''ಎಷ್ಟು ಧೈರ್ಯ ನಿಂಗೆ, ನಿನ್ ಜತೆ ಒಂದ್ ನೈಟ್ ಮಲಗಬೇಕು ಅಂತ ಎಲ್ಲರ ಮುಂದೆ ಕೇಳ್ತೀಯಾ?''. ಖೇಮುಗೆ ಶಾಕ್ ಆಯ್ತು, ಗಾಬರಿಯಾದ. ಲೈಬ್ರರಿಯ ಲ್ಲಿದ್ದ ಎಲ್ಲರೂ ಇವನನ್ನೇ ಅಸಹ್ಯವಾಗಿ ನೋಡೋಕೆ ಶುರುಮಾಡಿದ್ರು. ಖೇಮುಗೆ ನಾಚಿಕೆ ಆಗಿ, ಒಂದು ಬುಕ್ ಸ್ಟ್ಯಾಂಡ್ ಬಳಿ ಹೋಗಿ ಒಂದು ಪುಸ್ತಕ ತೆಗೆದು ಮುಖ ಮುಚ್ಚಿಕೊಂಡ. ಸ್ವಲ್ಪ ಹೊತ್ತಾದ ಮೇಲೆ ಆ ಹುಡುಗಿ ಖೇಮು ಹತ್ರ ಬಂದು, ''ಸಾರಿ, ನಾನೊಬ್ಬ ಸೈಕಾಲಜಿ ಸ್ಟೂಡೆಂಟ್. ಈ ಥರ ಸಂದರ್ಭದಲ್ಲಿ ಗಂಡಸರು ಹೇಗೆ ವರ್ತಿಸ್ತಾರೆ ಅಂತ ನೋಡಬೇಕಿತ್ತು. ಅದಕ್ಕೆ ಹಾಗೆ ಮಾಡಿದೆ'' ಅಂದಳು. ಅದಕ್ಕೆ ಖೇಮು ಅಲ್ಲಿದ್ದ ಎಲ್ಲರಿಗೂ ಕೇಳುವಂತೆ ಜೋರಾಗಿ ಹೇಳಿದ– ''ಏನು? ಒಂದ್ ನೈಟಿಗೆ 10,000 ರುಪಾಯಿನಾ? ನೀನೇನು ತ್ರಿಪುರ ಸುಂದರಿ ಅಂತ ತಿಳ್ಕೊಂಡಿದ್ದೀಯಾ?''. ಮತ್ತೆ ಅಲ್ಲಿದ್ದ ಎಲ್ಲರೂ ಇನ್ನಷ್ಟು ಆಶ್ಚರ್ಯದಿಂದ ಆ ಹುಡುಗಿಯನ್ನು ನೋಡಿದರು. ಹುಡುಗಿ ಗಾಬರಿಯಾಗಿ ನಿಂತಿದ್ದು ನೋಡಿ ಖೇಮು ಹೇಳಿದ, ''ನಾನು ಲಾ ಸ್ಟೂಡೆಂಟ್, ಒಬ್ಬರು ಹಾಕಿದ ಕೇಸನ್ನ ಅವರಿಗೆ ಉಲ್ಟಾ ತಿರುಗಿಸೋದು ಹೆಂಗೆ ಅಂತ ನನಗೆ ಗೊತ್ತು''.

ಲೈನ್‌ಮ್ಯಾನ್

- **ಐಫೋನ್ ಪ್ರಿಯರ ಪ್ರಕಾರ**
– 'ಎ' ಫಾರ್ ಆ್ಯಪಲ್ ಅಲ್ಲ, 'ಐ' ಫಾರ್ ಆ್ಯಪಲ್
- **ಇನ್ನು ಮುಂದೆ ವಾಹನಗಳಿಗೆ ತಬಲಾ, ಪಿಟೀಲು, ಕೊಳಲು ಸೌಂಡ್ ಬರೋ ಹಾರ್ನ್**
– ಇನ್ಮೇಲೆ ಎಲ್ರೂ 'ಕಚೇರಿ'ಗೆ ಹೋಗೋವಾಗ್ಲೇ 'ಕಛೇರಿ' ನೋಡ್ಕಂಡ್ ಹೋಗಬಹುದು.
- **ಬಿಜೆಪಿ ನಾಯಕರು ಜ್ಯೋತಿಷ್ಯ ಕೇಳೋಕ್ ಹೋಗಲ್ಲ**
– ಯಾಕಂದ್ರೆ ಜ್ಯೋತಿಷಿಗಳು 'ಕೈ' ನೋಡಿ ಭವಿಷ್ಯ ಹೇಳ್ತಾರೆ
- **ಗಾಂಧಿನಗರ talks**
'ಸರ್, ಏನ್ ಕೆಲ್ಸ ಮಾಡ್ತಿದ್ದೀರಾ ನೀವು?'
'ನಾನೊಬ್ಬ ಡಿಟೆಕ್ಟಿವ್'
'ಮತ್ತೆ, ಗಾಂಧಿನಗರದಲ್ಲಿ ಏನ್ ಮಾಡ್ತಾ ಇದ್ದೀರಾ?'
'ಸಿನಿಮಾ ಮಾಡೋಕೆ ಕಥೆ ಹುಡುಕ್ತಾ ಇದ್ದೀನಿ, ಅದಾದ್ಮೇಲೆ ಪ್ರೊಡ್ಯೂಸರ್ ಹುಡುಕ್ತೀನಿ'
- **ಕ್ರಿಕೆಟ್ ಟೀಮ್ ಸೆಲೆಕ್ಷನ್**
– 'ಅವ್ನ ಲಾಸ್ಟ್ ಮ್ಯಾಚ್ ಚೆನ್ನಾಗೇ ಆಡಿದ್ನಲ್ಲ, ಅವನನ್ನ ಯಾಕ್ ಬಿಟ್ರು?'
'ಅವ್ನಿಗೆ ಪೈಲ್ಸ್ ಆಗಿದೆಯಂತೆ, ಅದಕ್ಕೇ ಕೂರ್ಸಿದಾರೆ'
'ಪೈಲ್ಸ್ ಆದ್ರೆ ಕೂರ್ಸಂಗಿಲ್ಲ, ಆಡಿಸ್ಬೇಕು ತಾನೇ?'
- **ಪ್ರೀತಿ ಮಾಡೋರಿಗೂ ಎಂಜಿನಿಯರ್‌ಗಳಿಗೂ ಇರೋ ಹೋಲಿಕೆ**
– ಇವರು ಯಾರನ್ನೋ ಪ್ರೀತಿ ಮಾಡಿ ಇನ್ಯಾರನ್ನೋ ಮದ್ವೆ ಆಗ್ತಾರೆ, ಅವ್ರು ಎಂಜಿನಿಯರಿಂಗ್ ಓದಿ ಇನ್ನೇನೋ ಕೆಲಸ ಮಾಡ್ತಾರೆ.
- **'ಕ್ಲೀನ್ ಹ್ಯಾಂಡ್' ಪೊಲಿಟಿಷಿಯನ್ ಅಂದ್ರೆ ಯಾರು?**
– ದೇಶದ ಆಸ್ತಿಯನ್ನೆಲ್ಲಾ ಮಾರಿ 'ಕೈ ತೊಳ್ಕೊಂಡವನು'
- **ಪ್ರಪಂಚದ ಅತಿ ದೊಡ್ಡ ಕುಡುಕ ಯಾರು?**
– ಬಾರಿಗೂ ಕುಡ್ಕೊಂಡೇ ಹೋಗುವವನು
- **ಸೋಡಾ ಕುಡಿಯೋಕೆ ಕಂಪನಿ ಕೊಡೋ ಗೆಳೆಯ**
– ಸೋಡಾ buddy
- **ಕೆಲವರು ಸ್ವಿಮ್ಮಿಂಗ್ ಪೂಲ್‌ನಲ್ಲಿ ರಬ್ಬರ್ ಟ್ಯೂಬ್‌ನಲ್ಲಿ ಕುಳಿತು ಕುಡಿಯೋದು ಯಾಕೆ?**
– ತೇಲುತ್ತಾ ತೇಲೋಕೆ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 208

ಸಮಾಚಾರ ಸಣ್ಣದಲ್ಲ

ತರಬೇತಿ ವಿಮಾನ ಪತನ: ಪೈಲಟ್ ಪಾರು

ಪುಣೆ: ಇಲ್ಲಿನ ಬಾರಾಮತಿ ವಿಮಾನ ನಿಲ್ದಾಣದ ಬಳಿ ಶನಿವಾರ ತರಬೇತಿ ವಿಮಾನವೊಂದು ಅಪಘಾತಕ್ಕೀಡಾಗಿದ್ದು, ಯಾರಿಗೂ ಗಾಯಗಳಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ರೆಡ್‌ಬರ್ಡ್ ಫ್ಲೈಟ್ ಟ್ರೈನಿಂಗ್ ಸೆಂಟರ್ ಒಡೆತನದ ವಿಮಾನವು ತರಬೇತಿ ಹಾರಾಟ ಮುಗಿಸಿ ಇಳಿಯುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಈ ಸಂಬಂಧ ಮಾಹಿತಿ ನೀಡಿರುವ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, ವಿಮಾನವನ್ನು ಹಾರಿಸುವಾಗ, ಪೈಲಟ್ ಒಂದು ಟೈರ್ ಹಾನಿಗೊಳಗಾಗಿರುವುದನ್ನು ಗಮನಿಸಿ ಬೆಳಗ್ಗೆ 8 ಗಂಟೆ ಸುಮಾರಿಗೆ ತುರ್ತು ಭೂಸ್ಪರ್ಶಕ್ಕೆ ಪ್ರಯತ್ನಿಸಿದರು. ವಿಮಾನದ ಮುಂಭಾಗದ ಚಕ್ರವು ವಿಮಾನವನ್ನು ಸ್ಪರ್ಶಿಸಿದ ನಂತರ ಕಳಚಿಕೊಂಡಿತು. ವಿಮಾನವು ಟ್ಯಾಕ್ಸಿ ವೇಯಿಂದ ದಾರಿ ತಪ್ಪಿ ವಿಮಾನ ನಿಲ್ದಾಣದ ಇನ್ನೊಂದು ಬದಿಗೆ ಪ್ರವೇಶಿಸಿತು ಎಂದು ತಿಳಿಸಿದ್ದಾರೆ. ಅಪಘಾತದಲ್ಲಿ ಯಾರಿಗೂ ಗಾಯಗಳಾಗಿಲ್ಲ, ಪೈಲಟ್ ಸುರಕ್ಷಿತವಾಗಿದ್ದಾರೆ ಎಂದು ಅವರು ಹೇಳಿದರು.

ರಕ್ಷಣಾ ವಲಯಕ್ಕೆ 1.5 ಲಕ್ಷ ಕೋಟಿ ರು.

ದೆಹಲಿ: ಭಾರತದ ರಕ್ಷಣಾ ವಲಯದ ಉತ್ಪಾದನೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, 2024-25ನೇ ಸಾಲಿನಲ್ಲಿ 1.50 ಕೋಟಿಗೆ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಶನಿವಾರ ತಿಳಿಸಿದ್ದಾರೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇಕಡ 18ರಷ್ಟು ಪ್ರಗತಿ ಕಂಡಿದೆ. ಕಳೆದ ವರ್ಷ 1.27 ಲಕ್ಷ ಕೋಟಿಯಷ್ಟು ಮೌಲ್ಯದ ಉತ್ಪಾದನೆ ಆಗಿತ್ತು. 2019-20ರ ಸಾಲಿಗೆ ಹೋಲಿಸಿದರೆ ಶೇಕಡ 90ರಷ್ಟು ವೃದ್ಧಿ ಕಂಡಿದೆ. ಆಗ 79,071 ಕೋಟಿಯಷ್ಟು ಉತ್ಪಾದನೆಯಾಗಿತ್ತು ಎಂದು ಅವರು ಎಕ್ಸ್‌ನಲ್ಲಿ ತಿಳಿಸಿದ್ದಾರೆ. ರಕ್ಷಣಾ ಇಲಾಖೆಯ ಉತ್ಪಾದನಾ ವಿಭಾಗ, ಎಲ್ಲ ಪಾಲುದಾರರು, ರಕ್ಷಣಾ ಕ್ಷೇತ್ರದ ಸಾರ್ವಜನಿಕ ಉದ್ದಿಮೆ ವಲಯ, ಖಾಸಗಿ ಕೈಗಾರಿಕೆಗಳ ಸಂಘಟಿತ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಭಾರತದ ರಕ್ಷಣಾ ವಲಯದ ಕೈಗಾರಿಕೆಗಳ ಉತ್ಪಾದನಾ ಸಾಮರ್ಥ್ಯ ಬಲಗೊಳ್ಳುತ್ತಿದೆ ಎನ್ನುವುದರ ಸ್ಪಷ್ಟ ಮುನ್ಸೂಚನೆ ಇದು ಎಂದು ರಾಜನಾಥ ಸಿಂಗ್ ಹೇಳಿದ್ದಾರೆ.



ಸೇನಾ ಸ್ವಾವಲಂಬನೆಯ ಪ್ರತೀಕ: ಸಮೀರ್ ಕಾಮತ್

ಪುಣೆ : ಆಪರೇಷನ್ ಸಿಂಧೂರವು ಭಾರತೀಯ ಸೇನೆಯ ಸ್ವಾವಲಂಬನೆ, ದೂರದೃಷ್ಟಿಯ ಕಾರ್ಯತಂತ್ರ ಮತ್ತು ದೇಶಿಯ ತಾಂತ್ರಿಕ ಬಲದ ಪ್ರತೀಕ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ(ಡಿಆರ್‌ಡಿಒ) ಮುಖ್ಯಸ್ಥ ಸಮೀರ್ ಕಾಮತ್ ಅವರು ಶನಿವಾರ ಹೇಳಿದರು. ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಪಶ್ಚಿಮದ ಗಡಿಯಲ್ಲಿ ನಡೆದ ಕಾರ್ಯಾಚರಣೆಯು ನಮ್ಮ ಯೋಧರ ಸಾಮರ್ಥ್ಯ ಮಾತ್ರವಲ್ಲದೇ ತಾಂತ್ರಿಕ ಶಕ್ತಿಯನ್ನು ತೋರಿಸಿದೆ. ಸ್ವದೇಶಿ ತಂತ್ರಜ್ಞಾನದ ಮೂಲಕ ಭಾರತ ತನ್ನ ಗಡಿಯನ್ನು ರಕ್ಷಿಸಿಕೊಳ್ಳುವಲ್ಲಿ ಸಮರ್ಥವಾಗಿದೆ ಎನ್ನುವುದಕ್ಕೆ ಆಪರೇಷನ್ ಸಿಂಧೂರ ನಿದರ್ಶನವಾಗಿದೆ ಎಂದು ಹೇಳಿದರು. ಆಪರೇಷನ್ ಸಿಂಧೂರದಲ್ಲಿ ಬಳಕೆಯಾದ ಆಕಾಶ್, ಬ್ರಹ್ಮೋಸ್ ಕ್ಷಿಪಣಿ, ಡಿ4 ಡ್ರೋನ್ ನಿಗ್ರಹ ವ್ಯವಸ್ಥೆ, ಆಕಾಶ್‌ತೀರ್ ವಾಯು ರಕ್ಷಣಾ ವ್ಯವಸ್ಥೆ ಸೇರಿದಂತೆ ಹಲವು ರಕ್ಷಣಾ ಪರಿಕರಗಳನ್ನು ಡಿಆರ್‌ಡಿಒ ತಯಾರಿಸಿದೆ ಎಂದು ಹೇಳಿದರು.

ನೆಟ್‌ವರ್ಕ್ ಸ್ಥಗಿತ: ವಿಮಾನ ಹಾರಾಟ ವ್ಯತ್ಯಯ

ಮುಂಬೈ: ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಡೇಟಾ ನೆಟ್‌ವರ್ಕ್ ಸ್ಥಗಿತಗೊಂಡಿದ್ದರಿಂದ ಚೆಕ್ ಇನ್ ವ್ಯವಸ್ಥೆಯಲ್ಲಿ ತೊಂದರೆ ಕಾಣಿಸಿಕೊಂಡು, ಹಲವು ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾ ಯಿತು. ತಾಂತ್ರಿಕ ಸಮಸ್ಯೆ ಉಂಟಾಗಿರು ವುದನ್ನು ವಿಮಾನ ನಿಲ್ದಾಣ ಹಾಗೂ ಏರ್‌ಲೈನ್ಸ್ ನ ಅಧಿಕಾರಿಗಳು ಖಚಿತಪಡಿಸಿದ್ದಾರೆ. ನಾವು ಈಗ ಇಡೀ ವಿಮಾನ ನಿಲ್ದಾಣದಲ್ಲಿ ನೆಟ್‌ವರ್ಕ್ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದು, ಸಮಸ್ಯೆ ಬಗೆಹರಿಸಲು ತಂಡವು ನಿರಂತರ ಪ್ರಯತ್ನಿಸುತ್ತಿದೆ. ಆದರೂ, ಅಡಚಣೆಯನ್ನು ಕಡಿಮೆ ಮಾಡಲು ಮ್ಯಾನುವಲ್ ಕಾರ್ಯಾಚರಣೆ ವ್ಯವಸ್ಥೆ ಅಳವಡಿಸಿಕೊಂಡಿದ್ದು, ಪ್ರಯಾಣಿಕರು ತಾಳ್ಮೆ ವಹಿಸಬೇಕು ಎಂದು ನಿಲ್ದಾಣವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

47 ಬಲೂಚಿಗಳ ಹತ್ಯೆ: ಪಾಕ್ ಸೇನೆ ವರದಿ

ಬಲೂಚಿಸ್ತಾನ: ಅಫ್ಘಾನಿಸ್ತಾನ ಹಾಗೂ ಬಲೂಚಿಸ್ತಾನ ಗಡಿ ಭಾಗದಲ್ಲಿ 47 ಪ್ರತ್ಯೇಕತಾವಾದಿಗಳನ್ನು ಹತ್ಯೆ ಮಾಡಿದ್ದಾಗಿ ಪಾಕಿಸ್ತಾನ ಸೇನಾ ಮೂಲಗಳು ತಿಳಿಸಿವೆ. ಕಳೆದ ಎರಡು ದಿನಗಳಲ್ಲಿ ಅಫ್ಘಾನಿಸ್ತಾನ ಗಡಿಯ ಬಳಿಯ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಪಾಕ್ ಭದ್ರತಾ ಪಡೆಗಳು ದಾಳಿ ನಡೆಸಿದ್ದು, ಈ ದಾಳಿಯಲ್ಲಿ ಕನಿಷ್ಠ 47 ಮಂದಿಯ ಹತ್ಯೆ ಮಾಡ ಲಾಗಿದೆ ಅಂತ ಪಾಕಿಸ್ತಾನ ಸೇನೆಯ ಮಾಧ್ಯಮ ವಿಭಾಗ ತಿಳಿಸಿದೆ. ಆಗಸ್ಟ್ 7 ಹಾಗೂ 8ರ ಮಧ್ಯರಾತ್ರಿ ಯಲ್ಲಿ ಝೋಬ್ ಜಿಲ್ಲೆಯ ಸಂಬಾಜಾದಲ್ಲಿ ಭದ್ರತಾ ಪಡೆಗಳು ನೈರ್ಮಲ್ಯೀಕರಣ ಕಾರ್ಯಾ ಚರಣೆ ನಡೆಸಿ 33 ಪ್ರತ್ಯೇಕತಾವಾದಿಗಳನ್ನು ಕೊಂದಿವೆ ಎಂದು ಇಂಟರ್-ಸರ್ವಿಸಸ್ ಪಬ್ಲಿಕ್ ರಿಲೇಶನ್ಸ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಆಗಸ್ಟ್ 8 ಹಾಗೂ 9ರ ಮಧ್ಯ ರಾತ್ರಿ ಅಫ್ಘಾನಿಸ್ತಾನ ಗಡಿಯ ಲ್ಲಿರುವ ಸಾಂಬಾಜಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದ ಮತ್ತೊಂದು ಕಾರ್ಯಾಚರಣೆಯಲ್ಲಿ 14 ಎನ್‌ಕೌಂಟರ್ ಮಾಡಲಾಗಿದೆ ಎಂದು ಐಎಸ್‌ಪಿಆರ್ ತಿಳಿಸಿದೆ.

ಬಿಜೆಪಿಯದ್ದು ಕೆಲಸಕ್ಕಿಂತ ಪ್ರಚಾರ ಜಾಸ್ತಿ

ನಮ್ಮ ಮೆಟ್ರೋದಲ್ಲಿ ಕೇಂದ್ರಕ್ಕಿಂತ ರಾಜ್ಯದ ಪಾಲು ಹೆಚ್ಚಿದೆ | ಹಳದಿ ಮಾರ್ಗದ ಬೋಗಿಗಳು ತಡವಾಗಿ ಬರಲು ಕಾರಣರ್‍ಯಾರು: ಸಚಿವ ರಾಮಲಿಂಗಾರೆಡ್ಡಿ ಪ್ರಶ್ನೆ

ಬೆಂಗಳೂರು: ಬಿಜೆಪಿಯವರದ್ದು ಮೊದಲಿನಿಂದಲೂ ಕೆಲಸಕ್ಕಿಂತ ಪ್ರಚಾರ ಹುಚ್ಚು ಹೆಚ್ಚಿದೆ. ಅಭಿವೃದ್ಧಿಗೆ ಕೆಲಸ ಮಾಡದಿದ್ದರೂ ಪ್ರಚಾರ ಪಡೆಯುತ್ತಾರೆ. ಬೇರೆಯವರು ಮಾಡಿದ ಕೆಲಸವನ್ನು ನಾವು ಮಾಡಿದ್ದು ಎಂದು ಹೇಳುವುದು ಅವರ ಛಾಳಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾನುವಾರ ಮೆಟ್ರೋ ಹಳದಿ ಮಾರ್ಗ ಉದ್ಘಾಟನೆಯಾಗುತ್ತಿದೆ. ಆದರೆ, ಬಿಜೆಪಿ ನಾಯಕರಾದ ವಿಜಯೇಂದ್ರ, ತೇಜಸ್ವಿ ಸೂರ್ಯ ಸೇರಿದಂತೆ ಅನೇಕ ಸಂಸದರು ಇಡೀ ಮೆಟ್ರೋ ಯೋಜನೆಯನ್ನು ಬಿಜೆಪಿಯ ಕೇಂದ್ರ ಸರಕಾರವೇ ಮಾಡಿರುವಂತೆ ಪ್ರಚಾರ ಪಡೆಯುತ್ತಿದ್ದಾರೆ. ಜತೆಗೆ ರಾಜ್ಯ ಸರಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಇವರಿಗೆ ಮೆಟ್ರೋ ಆರಂಭವಾಗಿದ್ದು ಯಾವಾಗ ಎಂಬ ಇತಿಹಾಸವೇ ಗೊತ್ತಿಲ್ಲ ಎಂದು ಟೀಕಿಸಿದರು.

2006ರಲ್ಲಿ ಧರಂ ಸಿಂಗ್ ಅವರು ಸಿಎಂ ಆಗಿದ್ದಾಗ ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಶಂಕುಸ್ಥಾಪನೆ ಮಾಡಿದರು. ಮೆಟ್ರೋ ಸಂಸ್ಥೆ ಜನರ ಸಂಸ್ಥೆ, ಯಾವುದೇ ಪಕ್ಷದ ಸ್ವತ್ತಲ್ಲ. ಹಾಗೇ ನೋಡಿದರೆ, ಮೆಟ್ರೋ ಯೋಜನೆಯಲ್ಲಿ ರಾಜ್ಯ ಸರಕಾರವೇ ದೊಡ್ಡ ಪಾಲುದಾರ. ಮೆಟ್ರೋ ಮೊದಲ ಹಂತದಲ್ಲಿ ಕರ್ನಾಟಕ ಸರಕಾರ -ಶೇ.30 (ಜಮೀನು ಸೇರಿ), ಕೇಂದ್ರ ಶೇ.25ರಷ್ಟು ಹಾಗೂ ಉಳಿದ ಶೇ.45ರಷ್ಟು ಸಾಲದ ರೂಪದಲ್ಲಿ ಮೆಟ್ರೋ ಸಂಸ್ಥೆ ಪಡೆಯಲಾಗಿತ್ತು. ಎರಡನೇ ಹಂತದಲ್ಲಿ ಕರ್ನಾಟಕ ಶೇ.30ರಷ್ಟು ಹಾಗೂ ಜಮೀನು ಮತ್ತು ಮಿತಿಮೀರಿದ ವೆಚ್ಚದ ಬಹುತೇಕ ಭಾಗ ರಾಜ್ಯ ಸರಕಾರದ್ದಾಗಿದೆ. ಇಲ್ಲಿ ಕೇಂದ್ರದ ಪಾಲು ಕೇವಲ ಶೇ 20 ಮಾತ್ರ. ಉಳಿದ ಶೇ 50 ಮೊತ್ತವನ್ನು ಮೆಟ್ರೋ ಸಂಸ್ಥೆ ಸಾಲ ಪಡೆದಿದೆ. ಇನ್ನು ಮೂರನೇ ಹಂತದಲ್ಲಿ ಕರ್ನಾಟಕ ಶೇ 20 ಅನುದಾನ ಹಾಗೂ ಸಂಪೂರ್ಣ ಜಮೀನು ಮತ್ತು ಪುನರ್ವಸತಿ ವೆಚ್ಚ, ಕೇಂದ್ರ ಸರಕಾರ ಶೇ 20 ಹಾಗೂ ಉಳಿದ ಶೇ 60 ಅನುದಾನವನ್ನು ಸಂಸ್ಥೆ ಸಾಲವಾಗಿ ಪಡೆದಿದೆ. ಮೆಟ್ರೋ ಸಂಸ್ಥೆ ಪಡೆದಿರುವ ಸಾಲಕ್ಕೆ ಗ್ಯಾರಂಟಿ ಹಾಕಿರುವುದು ರಾಜ್ಯ ಸರಕಾರ. ಮೆಟ್ರೋ ಸಂಸ್ಥೆ ಇದನ್ನು ಪಾವತಿಸದಿದ್ದರೆ ರಾಜ್ಯ ಸರಕಾರ ಭರಿಸಬೇಕಾಗುತ್ತದೆ ಎಂದು ತಿಳಿಸಿದರು.

ವಿಳಂಬಕ್ಕೆ ಕೇಂದ್ರ ಕಾರಣ

ರಾಜ್ಯ ಸರಕಾರದಿಂದ ವಿಳಂಬ ಎಂದು ಆರೋಪ ಮಾಡುವ ಬಿಜೆಪಿ ನಾಯಕರು ಎಂದಾದರೂ ಯಾವ ಕಾರಣಕ್ಕೆ ವಿಳಂಬವಾಗುತ್ತಿದೆ ಎಂದು ವಿಚಾರಿಸಿದ್ದಾರಾ?. ಸಭೆ ಮಾಡಿದ್ದಾರಾ, ಚರ್ಚೆ ಮಾಡಿದ್ದಾರಾ?. ಇನ್ನು 15ನೇ ಹಣಕಾಸು ಆಯೋಗ ಫೆರಿಫೆರಲ್ ರಿಂಗ್ ರೋಡ್ ಅಭಿವೃದ್ಧಿ, ಕೆರೆಗಳ ಅಭಿವೃದ್ಧಿ ಹಾಗೂ ಇತರೆ ವಿಶೇಷ ಅನುದಾನಕ್ಕೆ ಮೀಸಲಿರಿಸಿದ್ದ 11,495 ಕೋಟಿ ಹಣವನ್ನು ರಾಜ್ಯಕ್ಕೆ ನೀಡದೆ ಮೋಸ ಮಾಡಲಾಗಿದೆ. ಇದರ ಬಗ್ಗೆ ರಾಜ್ಯದ ಸಂಸದರು ಸಂಸತ್ತಿನಲ್ಲಿ ಮಾತನಾಡುವುದಿಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾದ ಪಾಲು ಕೊಡಿ ಎಂದು ಹೇಳಲು ಇವರಿಗೆ ಬಾಯಿ ಬರುವುದಿಲ್ಲ. ಇಲ್ಲಿ ಬಂದು ರಾಜ್ಯ ಸರಕಾರದ ವಿರುದ್ಧ ಮಾತನಾಡುತ್ತಾರೆ ಎಂದು ಕಿಡಿ ಕಾರಿದರು. ಬೋಗಿಗಳು ಬರುವುದು ತಡವಾಗಿರುವುದು ಯಾರಿಂದ? ಪರಿಸರ ಇಲಾಖೆ ಅನುಮತಿ ನೀಡುವವರು ಯಾರು? ಕೇಂದ್ರ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದ ನಂತರ ಈ ಅನುಮತಿಗಳನ್ನು ಪಡೆಯಬೇಕು. ಇನ್ನು ಮಾರ್ಗ ಸುರಕ್ಷತೆ ಪ್ರಮಾಣ ಪತ್ರ ನೀಡುವವರು ಕೇಂದ್ರ ಸರಕಾರ. ಹೀಗಾಗಿ ಈ ವಿಳಂಬಕ್ಕೆ ಕಾರಣ ಕೇಂದ್ರ ಸರಕಾರ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇರುವ ಕಾರಣ ಬೇಕಂತಲೇ ತಡ ಮಾಡಿ ನಮ್ಮ ಮೇಲೆ ಆರೋಪ ಮಾಡುತ್ತಾರೆ. ಇವರು ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕಿ ಅನುಮತಿ ಕೊಡಿಸಬೇಕಿತ್ತು. ನಮ್ಮ ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಚಿವರಿಗೆ ಒತ್ತಡ ಹಾಕಿದ್ದಾರೆ ಎಂದು ತಿಳಿಸಿದರು.

ಭೂಸ್ವಾಧೀನ ಪ್ರಕ್ರಿಯೆಗೂ ಅವರಿಗೂ ಏನು ಸಂಬಂಧ? ಇದು ರಾಜ್ಯ ಸರಕಾರದ ಕೆಲಸ. ಕೇಂದ್ರ ಸರಕಾರ ಅಥವಾ ರಕ್ಷಣಾ ಇಲಾಖೆ ಜಾಗ ಇದ್ದರೆ ಅದನ್ನು ಬಿಟ್ಟುಕೊಡುತ್ತಾರೆ. ಇದರ ಹೊರತಾಗಿ ಭೂಸ್ವಾಧೀನ ಪ್ರಕ್ರಿಯೆ ರಾಜ್ಯ ಸರಕಾರದ ಕೆಲಸ. ರೈಲ್ವೆ ಇಲಾಖೆಯ ಎಲ್ಲಾ ಯೋಜನೆಗಳಲ್ಲಿ ರಾಜ್ಯ ಸರಕಾರದ ಜಮೀನು ಹಾಗೂ ವೆಚ್ಚದ ಶೇ 50 ಪಾಲು ಇರುತ್ತದೆ. ಆದರೆ ಬಾವುಟ ಹಾರಿಸಲು ದೆಹಲಿಯಿಂದ ಬರುತ್ತಾರೆ. ರಾಜ್ಯ ಸರಕಾರಕ್ಕೆ ಆಹ್ವಾನವಿರುವುದಿಲ್ಲ.

- ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ನಮ್ಮವರೇ ಅಪಪ್ರಚಾರ ಮಾಡುವುದು ಸರಿಯಲ್ಲ

ಪ್ರತಿ ಹಂತದಲ್ಲೂ ಕರ್ನಾಟಕ ಸರಕಾರ ಜಮೀನಿಗಾಗಿ ದೊಡ್ಡ ಮೊತ್ತ ಹಾಕುತ್ತದೆ ಮತ್ತು ಯೋಜನೆಗಳನ್ನು ಮುನ್ನಡೆಸಲು ನಿರಂತರವಾಗಿ ಹಣ ನೀಡುತ್ತದೆ. ಅನೇಕ ಬಾರಿ ಕೇಂದ್ರದಷ್ಟು ಅಥವಾ ಅದಕ್ಕಿಂತ ಹೆಚ್ಚು. ಈ ವಿಚಾರದಲ್ಲಿ ಬೇರೆ ರಾಜ್ಯದವರು ಅಪಪ್ರಚಾರ ಮಾಡಿದರೆ ಒಂದು ಲೆಕ್ಕ. ಆದರೆ ನಮ್ಮದೇ ರಾಜ್ಯದ ನಾಯಕರು ಈ ರೀತಿ ಮಾತನಾಡುತ್ತಿದ್ದಾರೆ. ಈ ಯೋಜನೆಯಲ್ಲಿ ರಾಜ್ಯದ ಪಾಲು ಇಲ್ಲವೇ?. ಇತ್ತೀಚೆಗೆ ತೇಜಸ್ವಿ ಸೂರ್ಯ ಅವರು ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಕೇವಲ 6 ಕಿ.ಮೀ ಮಾತ್ರ ಮೆಟ್ರೋ ಆಗಿತ್ತು. ಮೊದಲ ಹಂತದ ಯೋಜನೆಯಲ್ಲಿ ಕಾಂಗ್ರೆಸ್ ಸರಕಾರ 42 ಕಿ.ಮೀ ಯೋಜನೆ ಮಾಡಲಾಯಿತು. ಆರಂಭದಲ್ಲಿ 6,395 ಕೋಟಿ ಅಂದಾಜು ಮಾಡಲಾಗಿತ್ತಾದರೂ ನಂತರ ಅದು 14,405 ಕೋಟಿಗೆ ಏರಿಕೆಯಾಯಿತು. ಮೆಟ್ರೋ ಒಟ್ಟಾರೆ ಕಾಮಗಾರಿಯಲ್ಲಿ ರಾಜ್ಯ ಸರ್ಕಾರ 24,064.30 ಕೋಟಿ ನೀಡಿದರೆ, ಕೇಂದ್ರ ನೀಡಿರುವುದು 17,803.85 ಕೋಟಿ, 4,35,498.53 ಕೋಟಿ ಸಾಲ ಮಾಡಲಾಗಿದೆ ಎಂದು ವಿವರಿಸಿದರು.

ಕಾಂತಾರದ ಅಪ್ಪು ಕೋಣ ಸಾವು

ಬೆಂಗಳೂರು: 2022ರಲ್ಲಿ ಬಿಡುಗಡೆಯಾದ ಕಾಂತಾರ ಸಿನಿಮಾವು ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲದೇ, ಭಾರತದಾದ್ಯಂತ ಮತ್ತು ವಿಶ್ವದ ಹಲವು ಭಾಗಗಳಲ್ಲಿ ಸಂಚಲನ ಸೃಷ್ಟಿಸಿತು. ಈ ಚಿತ್ರವು ಕರಾವಳಿ ಕರ್ನಾಟಕದ ಸಂಸ್ಕೃತಿ, ಸಂಪ್ರದಾಯ ಮತ್ತು ಕಂಬಳದಂತಹ ಜನಪ್ರಿಯ ಕ್ರೀಡೆಯನ್ನು ಅತ್ಯಂತ ಆಕರ್ಷಕವಾಗಿ ತೋರಿಸಿತು. ಈ ಚಿತ್ರದ ಕಂಬಳ ದೃಶ್ಯಗಳು ವಿಶೇಷವಾಗಿ ಗಮನ ಸೆಳೆದವು. ಈ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದ ಕೋಣ ಅಪ್ಪು ಮೃತಪಟ್ಟಿದೆ.



ಅದು ಚಿತ್ರದ ಕಂಬಳ ದೃಶ್ಯಗಳಲ್ಲಿ ತನ್ನ ಶಕ್ತಿ, ವೇಗದಿಂದ ಪ್ರೇಕ್ಷಕರ ಮನಗೆದ್ದಿತು. ಆ ದೃಶ್ಯಗಳು ಚಿತ್ರದ ಯಶಸ್ಸಿನಲ್ಲಿ ಮಹತ್ವದ ಪಾತ್ರವಹಿಸಿದವು. ಅಪ್ಪು ಕೋಣ ಮೃತಪಟ್ಟ ಹಿನ್ನೆಲೆಯಲ್ಲಿ ಕಂಬಳ ಪ್ರಿಯರಿಗೆ ಇದೀಗ ಬೇಸರ ಮೂಡಿದೆ. ಅದು ಕೇವಲ ಚಿತ್ರದಲ್ಲಿ ಮಾತ್ರವಲ್ಲ, ನಿಜ ಜೀವನದಲ್ಲೂ ಕಂಬಳದ ಕಣದಲ್ಲಿ ಚಾಂಪಿಯನ್ ಆಗಿತ್ತು. ಬೈಂದೂರು ಬೋಳಂಬಳ್ಳಿಯ ಕಂಬಳ ಪ್ರೇಮಿ ಪರಮೇಶ್ವರ ಭಟ್ ಅವರು ಅಪ್ಪು ಮತ್ತು ಕಾಲಾ ಎಂಬ ಎರಡು ಕೋಣಗಳನ್ನು ಬಹಳ ಪ್ರೀತಿಯಿಂದ ಸಾಕಿದ್ದರು. ಪರಮೇಶ್ವರ ಭಟ್‌ರ ಮಗಳಾದ ಚೈತ್ರಾ, ಪರಮೇಶ್ವರ ಭಟ್ ಅವರು ಈ ಕೋಣಗಳು ಆರೈಕೆಯ ಜವಾಬ್ದಾರಿಯನ್ನು ನಿರ್ವಹಿಸಿದ್ದರು.

ಅಪ್ಪು ಕೋಣವು ನೇಗಿಲು ಜೂನಿಯರ್ ವಿಭಾಗದಲ್ಲಿ ಎರಡು ಬಾರಿ ಸರಣಿಶ್ರೇಷ್ಠ ಪ್ರಶಸ್ತಿಯನ್ನು ಗಳಿಸಿತ್ತು. ಕುಂದಾಪುರ ಭಾಗದಲ್ಲಿ ನಡೆಯುವ ಕಂಬಳ ಸ್ಪರ್ಧೆಗಳಲ್ಲಿ ಸತತ ಐದು ವರ್ಷಗಳ ಚಾಂಪಿಯನ್ ಆಗಿತ್ತು. ಬೆಂಗಳೂರು ಕಂಬಳದಲ್ಲೂ ಕನೆಹಲಗೆ ವಿಭಾಗದಲ್ಲಿ ಪ್ರಥಮ ಪ್ರಶಸ್ತಿಯನ್ನು ಪಡೆದಿತ್ತು. ಕರಾವಳಿಯ ಬಹುತೇಕ ಕಂಬಳ ಸ್ಪರ್ಧೆಗಳಲ್ಲಿ ಕೀರ್ತಿ ಮತ್ತು ಬಹುಮಾನಗಳನ್ನು ಸಂಪಾದಿಸಿದ್ದ ಅಪ್ಪು ಕೋಣವು ಕಂಬಳ ಪ್ರೇಮಿಗಳ ಹೃದಯದಲ್ಲಿ ವಿಶೇಷ ಸ್ಥಾನವನ್ನು ಗಳಿಸಿತ್ತು.

ಟ್ರಂಪ್ ವಿರುದ್ಧ ತಿರುಗಿ ಬಿದ್ದ ಮಾಜಿ ಅಧಿಕಾರಿ

ವಾಷಿಂಗ್ಟನ್ ಡಿ.ಸಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ವಿಧಿಸಿರುವ 50%ಕ್ಕೂ ಹೆಚ್ಚಿನ ಭಾರೀ ಸುಂಕವನ್ನು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಬೋಲ್ಟನ್ ತೀವ್ರವಾಗಿ ಖಂಡಿಸಿದ್ದಾರೆ. ಈ ಕ್ರಮವು ಭಾರತವನ್ನು ರಷ್ಯಾ ಮತ್ತು ಚೀನಾಕ್ಕೆ ಹತ್ತಿರ ತರಬಹುದು ಎಂದು ಎಚ್ಚರಿಸಿರುವ ಅವರು, ಇದು ದಶಕಗಳಿಂದ ಅಮೆರಿಕ ನಡೆಸಿದ ಭಾರತವನ್ನು ರಷ್ಯಾ ಮತ್ತು ಚೀನಾದಿಂದ ದೂರವಿಡುವ ಕಾರ್ಯತಂತ್ರದ ಪ್ರಯತ್ನಗಳಿಗೆ ಧಕ್ಕೆ ತರುತ್ತದೆ ಎಂದು ಆರೋಪಿಸಿದ್ದಾರೆ.

ಬೋಲ್ಟನ್, ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ, ಟ್ರಂಪ್‌ರ ಚೀನಾದ ಮೇಲಿನ ಮೃದುತ್ವ ಮತ್ತು ಭಾರತದ ಮೇಲಿನ ಕಠಿಣ ಸುಂಕ ನೀತಿಯು ಅಮೆರಿಕಕ್ಕೆ ಕೆಟ್ಟ ಪರಿಣಾಮ ತಂದಿದೆ. ಇದು ಭಾರತವನ್ನು ರಷ್ಯಾ ಮತ್ತು ಚೀನಾದೊಂದಿಗೆ ಒಗ್ಗಟ್ಟಿನಿಂದ ಅಮೆರಿಕದ ವಿರುದ್ಧ ಮಾತುಕತೆಗೆ ತಳ್ಳಬಹುದು ಎಂದು ಹೇಳಿದ್ದಾರೆ. ಟ್ರಂಪ್ ಏಪ್ರಿಲ್‌ನಲ್ಲಿ ಚೀನಾದೊಂದಿಗೆ ವ್ಯಾಪಾರ ಘರ್ಷಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರೆ, ಭಾರತದ ಮೇಲೆ 25% ದ್ವಿತೀಯ ಸುಂಕ ಸೇರಿದಂತೆ 50%ಕ್ಕಿಂತಲೂ ಹೆಚ್ಚಿನ ಸುಂಕವನ್ನು ವಿಧಿಸಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

ಸುಂಕ ಹೆಚ್ಚಳದಿಂದ ಭಾರತ ಚೀನಾ ರಷ್ಯಾ ಒಗ್ಗಟ್ಟು, ಅಮೆರಿಕಕ್ಕೆ ಕೆಟ್ಟ ಪರಿಣಾಮ

ಅಮೆರಿಕದ ಮಾಜಿ ವಿದೇಶಾಂಗ ನೀತಿ ತಜ್ಞ ಕ್ರಿಸ್ಟೋಫರ್ ಪಡಿಲ್ಲಾ ಕೂಡ ಈ ಸುಂಕಗಳು ಭಾರತ-ಅಮೆರಿಕ ಸಂಬಂಧಗಳಿಗೆ ದೀರ್ಘಕಾಲೀನ ಹಾನಿಯನ್ನುಂಟು ಮಾಡಬಹುದು ಎಂದು ಎಚ್ಚರಿಸಿದ್ದಾರೆ. ಈ ಸುಂಕಗಳು ಭಾರತದಲ್ಲಿ ಅಮೆರಿಕದ ವಿಶ್ವಾಸಾರ್ಹತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಬಹುದು ಎಂದು ಅವರು ಹೇಳಿದ್ದಾರೆ. ಭಾರತವು ಈ ಸುಂಕಗಳನ್ನು ಅನ್ಯಾಯಯುತ ಮತ್ತು ಅಪ್ರಾಯೋಗಿಕ ಎಂದು ಕರೆದು, ರಷ್ಯಾದ ತೈಲ ಆಮದುಗಳನ್ನು ಸಮರ್ಥಿಸಿಕೊಂಡಿದೆ. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕೂಡ ಅಮೆರಿಕದ ಕ್ರಮವನ್ನು ಅಕ್ರಮ ವ್ಯಾಪಾರದ ಒತ್ತಡ ಎಂದು ಖಂಡಿಸಿ, ಭಾರತಕ್ಕೆ ಬೆಂಬಲ ಸೂಚಿಸಿದ್ದಾರೆ. ಟ್ರಂಪ್ ಶೀಘ್ರದಲ್ಲಿನ ಪುಟಿನ್ ಭೇಟಿಯಲ್ಲಿ ಈ ವಿಷಯವನ್ನು ರಷ್ಯಾ ತನ್ನ ಕಾರ್ಯತಂತ್ರಕ್ಕೆ ಬಳಸಿಕೊಳ್ಳಬಹುದು ಎಂದು ಬೋಲ್ಟನ್ ಎಚ್ಚರಿಕೆ ನೀಡಿದ್ದಾರೆ.

ಮುಂದಿನ ಕೆಲ ದಿನ ಮಳೆ ಸಾಧ್ಯತೆ | ಹಲವೆಡೆ ಆರೆಂಜ್ ಅಲರ್ಟ್

ಹಿ.ಪ್ರ.ದಲ್ಲೂ ಮೇಘಸ್ಫೋಟ, ಆತಂಕ

ಶಿಮ್ಲಾ: ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯಲ್ಲಿ ಶುಕ್ರವಾರ ಸಂಜೆ ಮತ್ತು ಶನಿವಾರ ಬೆಳಿಗ್ಗೆ ಮೇಘಸ್ಫೋಟ ಉಂಟಾಗಿದೆ.ಯಾವುದೇ ಜೀವಹಾನಿ ಸಂಭವಿಸಿರುವ ಬಗ್ಗೆ ವರದಿ ಬಂದಿಲ್ಲ. ಶುಕ್ರವಾರ ಸಂಜೆ 5.35ರ ಸುಮಾರಿಗೆ ಸಬ್ ತಹಸಿಲ್ ಜಾರಿಯ ಶರೋದ್ ನಲ್ಲಾದಲ್ಲಿ ಮೇಘಸ್ಫೋಟ ಉಂಟಾಗಿತ್ತು. ಇದರಿಂದ ಶರೋದ್ ನಲಾದ ಪಕ್ಕದಲ್ಲಿರುವ ಬರೋಗಿ ನಲಾದ ನೀರಿನ ಮಟ್ಟ ಹೆಚ್ಚಾಗಿದೆ ಎಂದು ಕುಲ್ಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಜಾರಿ ಅಗ್ನಿಶಾಮಕ ಠಾಣೆ ಸಹಾಯಕ ಎಂಜಿನಿಯರ್ ಹೇಮರಾಜ್, ಲೋಕೋಪಯೋಗಿ ಇಲಾಖೆಯ ಮಣಿಕರಣ್ ಮತ್ತು ಕುಲ್ಲು ಡಿಪಿಸಿಆರ್ ಅವರಿಂದ ಸಿಕ್ಕಿರುವ ಮಾಹಿತಿಯ ಪ್ರಕಾರ ಶರೋದ್ ನಾಲಾದ ಪಕ್ಕದಲ್ಲಿರುವ ಬರೋಗಿ ನಾಲಾದಲ್ಲಿ ಮಳೆಯಿಂದಾಗಿ ನೀರಿನ ಮಟ್ಟ ಹೆಚ್ಚಾಗಿದೆ. ಪರಿಸ್ಥಿತಿ ಪ್ರಸ್ತುತ ಸಾಮಾನ್ಯವಾಗಿದೆ ಎಂದು ಆಯೋಗ ಹೇಳಿದೆ.

ಹಿಮಾಚಲ ಪ್ರದೇಶದ ಹಲವು ಭಾಗಗಳಲ್ಲಿ ಈಗಾಗಲೇ 357 ರಸ್ತೆಗಳು ಮುಚ್ಚಿಹೋಗಿದ್ದು, 599 ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿವೆ. ಬೆಟ್ಟದ ಪ್ರದೇಶಗಳ 177 ನೀರು ಸರಬರಾಜು ಯೋಜನೆಗಳಿಗೆ ಅಡ್ಡಿಯಾಗಿದೆ.

ಈ ವರೆಗೆ ಮಳೆ ಸಂಬಂಧಿತ ಅನಾಹುತಗಳಿಂದ ಹಿಮಾಚಲ ಪ್ರದೇಶದಲ್ಲಿ 208 ಮಂದಿ ಸಾವನ್ನಪ್ಪಿದ್ದು, ಇದರಲ್ಲಿ 112 ಮಂದಿ ಭೂಕುಸಿತ, ಪ್ರವಾಹ ಮತ್ತು ಮನೆ ಕುಸಿತದಂತಹ ಘಟನೆಗಳಿಂದ ಮೃತಪಟ್ಟಿದ್ದಾರೆ. 90ಕ್ಕೂ ಹೆಚ್ಚು ಜನರು ಬೆಟ್ಟದ ಭಾಗಗಳಲ್ಲಿ ರಸ್ತೆ ಅಪಘಾತಗಳಿಂದ ಮೃತಪಟ್ಟಿದ್ದಾರೆ.

ಹಿಮಾಚಲ ಪ್ರದೇಶದ ಮೂರು ಜಿಲ್ಲೆಗಳಲ್ಲಿ ಆಗಸ್ಟ್ 11 ಮತ್ತು 12ರಂದು ಅರೆಂಜ್ ಅಲರ್ಟ್ ಇತರ ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂದಿನ ಕೆಲವು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ.

ಬೊಮ್ಮಸಂದ್ರದ ಸೂರ್ಯ ಸಿಟಿಯಲ್ಲಿ 1,650 ಕೋಟಿ ರು. ವೆಚ್ಚದ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ | ಚಿನ್ನಸ್ವಾಮಿ ಸ್ಟೇಡಿಯಂ ಅಸುರಕ್ಷಿತ ಎಂಬ ವರದಿಯ ಬೆನ್ನಲ್ಲೇ ಈ ನಿರ್ಧಾರ

ರಾಜಧಾನಿಯಲ್ಲಿ ಎರಡನೇ ದೊಡ್ಡ ಸ್ಟೇಡಿಯಂ

ಬೆಂಗಳೂರು: ಗಾರ್ಡನ್ ಸಿಟಿ ಕ್ರಿಕೆಟ್ ಪ್ರೇಮಿಗಳ ನಗರ ಎಂದೇ ಹೆಸರುವಾಸಿಯಾಗಿದ್ದು, ಹಲವು ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಿದ್ದು, ಇದೀಗ ಬೃಹತ್ ಕ್ರಿಕೆಟ್ ಕ್ರೀಡಾಂಗಣವೊಂದು ತಲೆ ಎತ್ತಲಿದೆ.

ಬೊಮ್ಮಸಂದ್ರದ ಸೂರ್ಯ ಸಿಟಿಯಲ್ಲಿ 1,650 ಕೋಟಿ ರು. ವೆಚ್ಚದಲ್ಲಿ ಮೆಗಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಸಿ.ಎಂ ಸಿದ್ದರಾಮಯ್ಯ ಅನುಮೋದನೆ ನೀಡಿದ್ದಾರೆ. ಈ ಕ್ರೀಡಾ ಸಂಕೀರ್ಣದಲ್ಲಿ 80,000 ಆಸನ ಸಾಮರ್ಥ್ಯದ ಬೃಹತ್ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗಲಿದೆ. ಇದು ಪೂರ್ಣಗೊಂಡ ನಂತರ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದ ನಂತರ ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ ಎನಿಸಿಕೊಳ್ಳಲಿದೆ.

ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟಿದ್ದರು. ಕೇವಲ 17 ಎಕರೆ ವಿಸ್ತೀರ್ಣದಲ್ಲಿರುವ ಈ ಕ್ರೀಡಾಂಗಣ ಕೇವಲ 32,000 ಆಸನ ಸಾಮರ್ಥ್ಯವನ್ನು ಮಾತ್ರ ಹೊಂದಿದೆ.

ಕಾಲ್ತುಳಿತ ಘಟನೆ ಸಂಬಂಧ ತನಿಖೆಗೆ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ಆಯೋಗವನ್ನು ನೇಮಕ ಮಾಡಲಾಗಿತ್ತು. ಆಯೋಗವು ಈ ಕ್ರೀಡಾಂಗಣವು ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸಲು ಅಸುರಕ್ಷಿತ ಎಂದು ವರದಿಯಲ್ಲಿ ಉಲ್ಲೇಖಿಸಿತ್ತು. ಅಷ್ಟೇ ಅಲ್ಲದೆ, ಹೆಚ್ಚು ಜನ ಸೇರುವ ಪಂದ್ಯಗಳನ್ನು ಸಾಕಷ್ಟು ಪಾರ್ಕಿಂಗ್ ಮತ್ತು ಜನಸಂದಣಿ ನಿರ್ವಹಣಾ ಸೌಲಭ್ಯಗಳಿರುವ ದೊಡ್ಡ ಮತ್ತು ಸುಸಜ್ಜಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಶಿಫಾರಸನ್ನೂ ಮಾಡಿತ್ತು.

ಈ ಘಟನೆಯ ನಂತರ ಪೊಲೀಸರು ಮಹಾರಾಜ ಟ್ರೋಫಿ-2025ಕ್ಕೆ ಅನುಮತಿ ನಿರಾಕರಿಸಿದ್ದರು, ಹೀಗಾಗಿ ಅದನ್ನು ಮೈಸೂರಿಗೆ ಸ್ಥಳಾಂತರಿಸಲಾಗಿದೆ. ಈ ವರ್ಷಾಂತ್ಯದಲ್ಲಿ ನಡೆಯಲಿರುವ ಐದು ಮಹಿಳಾ ವಿಶ್ವಕಪ್ ಪಂದ್ಯಗಳು ಹಾಗೂ 2026ರ ಐಪಿಎಲ್ ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಯೋಜಿಸುವ ಬಗ್ಗೆಯೂ ಅನುಮಾನಗಳು ಮೂಡಿವೆ.

ಮಹತ್ವಾಕಾಂಕ್ಷಿಯ ಯೋಜನೆ

ಬೆಂಗಳೂರಿನ ದಕ್ಷಿಣ ಹೊರವಲಯದಲ್ಲಿ 100 ಎಕರೆ ಪ್ರದೇಶದಲ್ಲಿ ಕ್ರೀಡಾ ಹಬ್ ನಿರ್ಮಿಸುವ ಕರ್ನಾಟಕ ಗೃಹ ಮಂಡಳಿಯ (ಕೆಎಚ್‌ಬಿ) ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದ್ದು, ಇದಕ್ಕೆ ರಾಜ್ಯ ಸರಕಾರ ಅನುಮೋದನೆ ನೀಡಿದೆ. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಗೃಹ ಮಂಡಳಿಯೇ ಭರಿಸಲಿದೆ. ಇಲ್ಲಿ ಕ್ರಿಕೆಟ್ ಮಾತ್ರವಲ್ಲ, ಎಂಟು ಒಳಾಂಗಣ ಮತ್ತು ಎಂಟು ಹೊರಾಂಗಣ ಕ್ರೀಡಾಂಗಣಗಳು, ಅತ್ಯಾಧುನಿಕ ಜಿಮ್ ಮತ್ತು ತರಬೇತಿ ಸೌಲಭ್ಯಗಳು, ಒಲಿಂಪಿಕ್ ಗಾತ್ರದ ಈಜುಕೊಳಗಳು, ಅತಿಥಿ ಗೃಹಗಳು, ಹಾಸ್ಟೆಲ್‌ಗಳು, ಹೋಟೆಲ್‌ಗಳು ಮತ್ತು ಅಂತಾರಾಷ್ಟ್ರೀಯ ಕಾರ್ಯಕ್ರಮಗಳಿಗಾಗಿ ಕನ್ವೆನ್ಷನ್ ಹಾಲ್ ಅನ್ನು ಒಳಗೊಂಡಿರಲಿದೆ.

ಬೆಂಗಳೂರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಉತ್ಕೃಷ್ಟತಾ ಕೇಂದ್ರಕ್ಕೂ ನೆಲೆಯಾಗಿದೆ. ಹೊಸ ಕ್ರೀಡಾಂಗಣದಿಂದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು, ಐಪಿಎಲ್ ಮತ್ತು ಇತರ ಪ್ರಮುಖ ಕಾರ್ಯಕ್ರಮಗಳನ್ನು ಆಯೋಜಿಸಬಹುದಾಗಿದೆ.

ಗಾಜಾ ಮೇಲೆ ನಿಯಂತ್ರಣ: ಹಲವು ದೇಶಗಳ ವಿರೋಧ

ಕೈರೊ/ಬರ್ಲಿನ್: ಗಾಜಾ ನಗರವನ್ನು ಸಂಪೂರ್ಣವಾಗಿ ಸೇನೆಯ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಇಸ್ರೇಲ್‌ನ ನಿರ್ಧಾರವನ್ನು ಅರಬ್ ಮತ್ತು ಮುಸ್ಲಿಂ ದೇಶಗಳು ಒಳಗೊಂಡಂತೆ ಹಲವು ದೇಶಗಳು ಖಂಡಿಸಿವೆ.

ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಟರ್ಕಿ ಸೇರಿದಂತೆ ಸುಮಾರು 20 ದೇಶಗಳು ಈ ಯೋಜನೆಯು ಅಂತಾರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಶನಿವಾರ ಹೇಳಿವೆ. ಗಾಜಾ ನಗರವನ್ನು ಸೇನೆಯ ವಶಕ್ಕೆ ತೆಗೆದುಕೊಳ್ಳುವ ಪ್ರಸ್ತಾವಕ್ಕೆ ಇಸ್ರೇಲ್‌ನ ಭದ್ರತಾ ಸಂಪುಟ ಶುಕ್ರವಾರ ಅನುಮೋದನೆ ನೀಡಿತ್ತು, ಆಸ್ಟ್ರೇಲಿಯಾ, ಜರ್ಮನಿ, ಇಟಲಿ, ನ್ಯೂಜಿಲೆಂಡ್ ಮತ್ತು ಬ್ರಿಟನ್‌ನ ವಿದೇಶಾಂಗ ಸಚಿವರು ಈ ನಿರ್ಧಾರವನ್ನು ಟೀಕಿಸಿದ್ದಾರೆ. ಇಸ್ರೇಲ್ ಸರಕಾರ ಘೋಷಿಸಿರುವ ಯೋಜನೆಗಳು ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವ ಅಪಾಯ ಹೊಂದಿವೆ ಎಂದು ಸಚಿವರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಗಾಜಾದಲ್ಲಿ ಬಳಸಲು ಸಾಧ್ಯತೆಯಿರುವ ಯಾವುದೇ ಮಿಲಿಟರಿ ಉಪಕರಣಗಳ ರಫ್ತಿಗೆ ಜರ್ಮನಿ ಅನುಮತಿ ನೀಡುವುದಿಲ್ಲ. ಮುಂದಿನ ಸೂಚನೆ ಬರುವವರೆಗೂ ಈ ನಿಲುವು ಜಾರಿಯಲ್ಲಿರಲಿದೆ ಎಂದು ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಶುಕ್ರವಾರ ಹೇಳಿದ್ದಾರೆ.

ಇಸ್ರೇಲ್ ಯೋಜನೆಯ ವಿರುದ್ಧ ಮುಸ್ಲಿಂ ರಾಷ್ಟ್ರಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಮತ್ತು ಅಂತಾರಾಷ್ಟ್ರೀಯ ಸಮುದಾಯದ ಬೆಂಬಲ ಗಳಿಸಬೇಕು ಎಂದು ಟರ್ಕಿ ವಿದೇಶಾಂಗ ಸಚಿವ ಹಕನ್ ಫಿದಾನ್ ಶನಿವಾರ ಕರೆ ನೀಡಿದ್ದಾರೆ.

ಸ್ವಾತಂತ್ರ್ಯೋತ್ಸವಕ್ಕೆ ಸಿದ್ದಾಪುರದ ದಂಪತಿ

ಉತ್ತರ ಕನ್ನಡ: ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆಯಲಿರುವ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ದಂಪತಿಗೆ ಅವಕಾಶ ಸಿಕ್ಕಿದೆ.

ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮನೆಮನೆ ಸಂಜೀವಿನಿ ಒಕ್ಕೂಟದ ಹಸವಂತೆ ಗ್ರಾಮದ ಪ್ರಗತಿ ಸ್ತ್ರೀ ಶಕ್ತಿ ಸಂಘದ ಸರಸ್ವತಿ ಈಶ್ವರ ನಾಯ್ಕ ದಂಪತಿಗಳು ಆಯ್ಕೆಯಾಗಿದ್ದಾರೆ. ಈ ಕುರಿತಾಗಿ ದಂಪತಿಗೆ ಅಧಿಕಾರಿಗಳು ಆಮಂತ್ರಣ ಪತ್ರಿಕೆಯನ್ನು ನೀಡಿದ್ದಾರೆ. ಸಂಜೀವಿನಿ ಯೋಜನೆಯಡಿಯಲ್ಲಿ ನಡೆಯುವ ಸರಸ್ ಮೇಳಗಳಲ್ಲಿ ಭಾಗವಹಿಸಿದ್ದ ಈ ದಂಪತಿ ತಮ್ಮ ಚಿತ್ತಾರ ಕಲೆಯನ್ನು ಪರಿಚಯ ಮಾಡಿಸಿರು ವುದಕ್ಕೆ ಈ ಅವಕಾಶ ದೊರಕಿದೆ ಎಂದು ರಾಷ್ಟ್ರೀಯ ಜೀವನೋಪಾಯ ಇಲಾಖೆಯ ಅಭಿಯಾನ ನಿರ್ದೇಶಕರಾದ ಪಿ.ಐ. ಶ್ರೀವಿದ್ಯಾ ತಿಳಿಸಿದ್ದಾರೆ. ಸರಸ್ವತಿ ಅವರ ಪತಿ ಹಸೆ ಚಿತ್ತಾರ ಕಲಾವಿದ ಈಶ್ವರ ನಾಯ್ಕ ಹಸುವಂತೆ ಅವರಿಗೆ ಪ್ರಸಕ್ತ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿತ್ತು.

ದೆಹಲಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ, ಸ್ವಸಹಾಯ ಸಂಘದ ಸದಸ್ಯರಾದ ಉತ್ತರ ಕನ್ನಡ ಜಿಲ್ಲೆಯ ಚಿತ್ತಾರ ಕಲೆಯ ಕುಶಲಕರ್ಮಿಗಳನ್ನು ಪ್ರತಿನಿಧಿಸುವ ಸರಸ್ವತಿ ಅವರನ್ನು ದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಹೆಮ್ಮೆಯ ವಿಷಯವಾಗಿದೆ ಎಂದು ಶ್ರೀವಿದ್ಯಾ ತಿಳಿಸಿದ್ದಾರೆ. ಪ್ರತಿಷ್ಠಿತ ಕಾರ್ಯಕ್ರಮದ ಭಾಗವಾಗಿ, ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡುವ ಅವಕಾಶ ನೀಡಲಾಗಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

2022ರಲ್ಲಿ 240 ಮಿಲಿಯನ್ ಡಾಲರ್ ಹೂಡಿಕೆ | ಡಂಝೊದಲ್ಲಿದ್ದ 26% ರಿಲಯನ್ಸ್ ಪಾಲು

ಡಂಝೋ: ಅಂಬಾನಿಗೆ 2100 ಕೋಟಿ ನಷ್ಟ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಸಂಸ್ಥೆಯು ಬೆಂಗಳೂರು ಮೂಲದ ಹೈಪರ್‌ಲೋಕಲ್ ಡೆಲಿವರಿ ಪ್ಲಾಟ್‌ಫಾರ್ಮ್ ಡಂಝೊದಲ್ಲಿ ಮಾಡಿದ್ದ ತನ್ನ 200 ಡಾಲರ್ ಮಿಲಿಯನ್ (ರು.1754 ಕೋಟಿ) ಹೂಡಿಕೆ ಕೈ ಬಿಡಲು ನಿರ್ಧಾರ ಮಾಡಿದೆ ಎಂದು ಕಂಪನಿಯು ತನ್ನ ವಾರ್ಷಿಕ ವರದಿಯಲ್ಲಿ ತಿಳಿಸಿದೆ. ರಿಲಯನ್ಸ್ ರಿಟೇಲ್ ಜನವರಿ 2022ರಲ್ಲಿ 240 ಮಿಲಿಯನ್ ಡಾಲರ್ (ರು.2100 ಕೋಟಿ) ಫಂಡಿಂಗ್ ಮಾಡುವ ಮೂಲಕ ಡುಂಝೊವನ್ನು ಮುನ್ನಡೆಸಿತು. ಭಾರತದ ವೇಗವಾಗಿ ಬೆಳೆಯುತ್ತಿರುವ ತ್ವರಿತ ವಾಣಿಜ್ಯ ವಲಯಕ್ಕೆ ವಿಸ್ತರಿಸುವ ತನ್ನ ಕಾರ್ಯತಂತ್ರದ ಭಾಗವಾಗಿ ಡಂಝೊದಲ್ಲಿ 26% ಪಾಲನ್ನು ಪಡೆದುಕೊಂಡಿತ್ತು.



2024 ರ ಹಣಕಾಸು ವರ್ಷದ ವಾರ್ಷಿಕ ವರದಿಯಲ್ಲಿ, ರಿಲಯನ್ಸ್ ತನ್ನ ಪಾಲನ್ನು 1,645 ಕೋಟಿಗಳಿಗೆ ಮೌಲ್ಯಮಾಪನ ಮಾಡಿತ್ತು. ಈ ಹೂಡಿಕೆಯು ಡಂಝೊ ತನ್ನ ಕಾರ್ಯಾಚರಣೆಗಳನ್ನು ಹೆಚ್ಚಿಸಲು ಮತ್ತು ಸ್ವಿಗ್ಗಿಯ ಇನ್‌ಸ್ಟಾಮಾರ್ಟ್, ಝೊಮ್ಯಾಟೊ ಒಡೆತನದ ಬ್ಲಿಂಕಿಟ್ ಮತ್ತು ಝೆಪ್ಟೋದಂತಹ ಪ್ರತಿಸ್ಪರ್ಧಿಗಳೊಂದಿಗೆ ಸ್ಪರ್ಧಿಸಲು ಸಹಾಯ ಮಾಡುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ರಿಲಯನ್ಸ್ ನಿಧಿ ಹೂಡಿಕೆಯು ಸೇರಿದಂತೆ ಒಟ್ಟು ನಿಧಿಯಲ್ಲಿ 450 ಮಿಲಿಯನ್ ಡಾಲರ್‌ಗಿಂತ (ರು. 3900 ಕೋಟಿ) ಹೆಚ್ಚು ಸಂಗ್ರಹಿಸಿದರೂ, ಡಂಝೊದ ಮಹತ್ವಾಕಾಂಕ್ಷೆಯ ವಿಸ್ತರಣೆ ಪ್ರಯತ್ನಗಳು ದೊಡ್ಡ ಮಟ್ಟದಲ್ಲಿ ಫಲಕೊಡಲಿಲ್ಲ.

ಡುಂಜೋ ಡೈಲಿಯಿಂದಾಗಿ ಕಂಪನಿಯ ಮಾಸಿಕ ವೆಚ್ಚ 100 ಕೋಟಿಯನ್ನೂ ಮೀರಿತು. ಅದರೊಂದಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಪ್ರಾಯೋಜಕತ್ವದಂತಹ ದುಬಾರಿ ಮಾರ್ಕೆಟಿಂಗ್ ಕ್ರಮಗಳು ಬ್ರ್ಯಾಂಡ್‌ನ ಗೋಚರತೆ ಹೆಚ್ಚಿಸಲು ಕಾರಣವಾಯಿತಾದರೂ, ಕಂಪನಿಯ ಆರ್ಥಿಕತೆಯ ಮೇಲೆ ಭಾರೀ ಪರಿಣಾಮ ಬೀರಿತು.

'ಡಂಝೋ' ಕುಸಿತಕ್ಕೆ ಕಾರಣ ಏನು?

2023ರ ಅಂತ್ಯ ಮತ್ತು 2024ರ ನಡುವೆ ಡಂಝೊ ಸಂಸ್ಥೆಯ ನಾಯಕತ್ವ ತಂಡವು ಸಾಮೂಹಿಕ ನಿರ್ಗಮನವನ್ನು ಕಂಡಿತು. ಸೆಪ್ಟೆಂಬರ್-ಅಕ್ಟೋಬರ್ 2023ರಲ್ಲಿ ಐದು ಮಂಡಳಿಯ ಸದಸ್ಯರು ರಾಜೀನಾಮೆ ನೀಡಿದರು. ಡಂಝೊ ಮರ್ಚೆಂಟ್ ಸರ್ವೀಸಸ್‌ನ ಮುಖ್ಯಸ್ಥರಾಗಿದ್ದ ಸಹ-ಸಂಸ್ಥಾಪಕ ದಲ್ವೀರ್ ಸೂರಿ ಅದೇ ವರ್ಷ ತೊರೆದರು, ನಂತರ ಸಹ-ಸಂಸ್ಥಾಪಕರಾದ ಮುಕುಂದ್ ಝಾ ಮತ್ತು ಅಂಕುರ್ ಅಗರ್ವಾಲ್ ಕೂಡ ನಿರ್ಗಮಿಸಿದರು. ವಾಲ್ಮಾರ್ಟ್ ಬೆಂಬಲಿತ ಫ್ಲಿಪ್‌ಕಾರ್ಟ್‌ನ ತ್ವರಿತ ವಾಣಿಜ್ಯ ವಿಭಾಗವಾದ ಫ್ಲಿಪ್‌ಕಾರ್ಟ್ ಮಿನಿಟ್ಸ್ ಅನ್ನು ಮುನ್ನಡೆಸಲು ಸಿಇಒ ಮತ್ತು ಸಹ-ಸಂಸ್ಥಾಪಕ ಕಬೀರ್ ಬಿಸ್ವಾಸ್ ರಾಜೀನಾಮೆ ನೀಡಿದ ಕೂಡಲೇ ಅದರ ಅಪ್ಲಿಕೇಶನ್ ಮತ್ತು ವೆಬ್‌ಸೈಟ್ ಆಫ್‌ಲೈನ್‌ಗೆ ಹೋದಾಗ ಕಂಪನಿಯ ಕುಸಿತ 2025ರ ಆರಂಭದಲ್ಲಿ ಉತ್ತುಂಗಕ್ಕೇರಿತು. ಗೂಗಲ್ ಕೂಡ ಇದೇ ಕಂಪನಿಯಲ್ಲಿ ಶೇ.20ರಷ್ಟು ಪಾಲನ್ನು ಹೊಂದಿತ್ತು. ರಿಲಯನ್ಸ್‌ನ ನಷ್ಟವು ತ್ವರಿತ ವಾಣಿಜ್ಯ ಮಾರುಕಟ್ಟೆಯಲ್ಲಿನ ಹೆಚ್ಚಿನ ಅಪಾಯಗಳನ್ನು ಒತ್ತಿ ಹೇಳಿದೆ.

ಕೊರಿಯರ್ ಸೇವೆಯಾಗಿ ತನ್ನ ಆರಂಭಿಕ ಗುರುತಿನಿಂದ ಕ್ವಿಕ್ ಕಾಮರ್ಸ್‌ನಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಕಂಪನಿ ದೊಡ್ಡ ಮಟ್ಟದಲ್ಲಿ ಹೆಣಗಾಡಿತು. 2024ರ ಹೊತ್ತಿಗೆ, ಡಂಝೊ ಕ್ವಿಕ್ ಕಾಮರ್ಸ್ ಮತ್ತು ಕೊರಿಯರ್ ಸೇವೆಗಳಲ್ಲಿ ತನ್ನ ಹೆಜ್ಜೆಗುರುತನ್ನು ಗಮನಾರ್ಹವಾಗಿ ಕಡಿಮೆ ಮಾಡಿತು, ಅನೇಕ ನೌಕರರನ್ನೂ ವಜಾ ಮಾಡಿತು. 2023ರಲ್ಲಿ ಭಾರತದ ಸ್ಟಾರ್ಟ್‌ಅಪ್ ನಿಧಿ ಪರಿಸರದಲ್ಲಿನ ವ್ಯಾಪಕ ನಿಧಾನಗತಿಯು ಹೊಸ ಬಂಡವಾಳವನ್ನು ಸಂಗ್ರಹಿಸುವ ಅದರ ಸಾಮರ್ಥ್ಯವನ್ನು ಮತ್ತಷ್ಟು ಕುಂಠಿತಗೊಳಿಸಿತು.

ದೆಹಲಿ ಜಲಾವೃತ, ಗೋಡೆ ಕುಸಿದು 8 ಸಾವು | ಆಸ್ಪತ್ರೆಯಲ್ಲಿ ಅಗ್ನಿ ಅವಘಡ: 1 ಸಾವು, 10 ಜನಕ್ಕೆ ಗಾಯ | 182 ವಿಮಾನ ಹಾರಾಟ ವ್ಯತ್ಯಯ

ದೆಹಲಿ ಸರಣಿ ಅವಘಡ: ಮಳೆ-ಬೆಂಕಿಗೆ 9 ಬಲಿ

ದೆಹಲಿ: ರಾಷ್ಟ್ರದ ರಾಜಧಾನಿ ನಗರ ದೆಹಲಿಯಲ್ಲಿ ಶುಕ್ರವಾರ ರಾತ್ರಿಯಿಂದಲೂ ಧಾರಾಕಾರ ಮಳೆಯಾಗುತ್ತಿದ್ದ, ಶನಿವಾರ ಮುಂಜಾನೆ ವೇಳೆಗೆ ಪ್ರವಾಹದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಒಂದೆಡೆ ಹಳೆಯ ಕಟ್ಟಡದ ಗೋಡೆ ಕುಸಿತ, ಅಗ್ನಿ ದುರಂತ ಸೇರಿದಂತೆ ಸರಣಿ ಅವಘಡಗಳು ದೆಹಲಿಯಲ್ಲಿ ಶನಿವಾರ ವರದಿಯಾಗಿದೆ.

ಒಂದೆಡೆ ಹಳೆಯ ಕಟ್ಟಡದ ಗೋಡೆ ಕುಸಿದು 8 ಜೀವಗಳು ಬಲಿಯಾದರೆ, ಮತ್ತೊಂದೆಡೆ ಖಾಸಗಿ ಆಸ್ಪತ್ರೆಯೊಂದರಲ್ಲಿ ಅಗ್ನಿ ಅವಘಡವಾಗಿ ಒಬ್ಬರು ಸಾವಿಗೀಡಾಗಿ, 10 ಮಂದಿ ಗಾಯಗೊಂಡಿದ್ದಾರೆ. ಭಾರೀ ಮಳೆಯಿಂದಾಗಿ ರಸ್ತೆಗಳೆಲ್ಲಾ ನದಿಗಳಂತಾಗಿ ವಾಹನ ಸಂಚಾರವೇ ಕಷ್ಟವಾಗಿತ್ತು. ವಿಮಾನ ನಿಲ್ದಾಣ ಪ್ರದೇಶದಲ್ಲಿಯೂ ಧಾರಾಕಾರ ಮಳೆಯಾಗುತ್ತಿರುವ ಕಾರಣ ನೂರಾರು ವಿಮಾನಗಳ ಸಂಚಾರದಲ್ಲಿ ಭಾರೀ ವ್ಯತ್ಯಯವಾಗಿದೆ. ಶುಕ್ರವಾರ ರಾತ್ರಿ ಶುರುವಾದ ಮಳೆ ಶನಿವಾರ ಹಗಲಿನಲ್ಲೂ ಮುಂದುವರಿಯಿತು. ಹಗಲು-ರಾತ್ರಿ ನಿರಂತರ ಮಳೆ ಸುರಿದ ಪರಿಣಾಮ, ರಾಜಧಾನಿ ನಗರದ ಹಲವು ಪ್ರದೇಶಗಳು ಜಲಾವೃತಗೊಂಡಿವೆ. ರಸ್ತೆಗಳಲ್ಲಿ ಅಡಿಗಳಷ್ಟು ಎತ್ತರ ನೀರು ನದಿಯಂತೆ ಹರಿದಿದೆ. ಪಂಚಕುಯಾನ್ ಮಾರ್ಗ, ಮಥುರಾ ರಸ್ತೆ ಮತ್ತು ಭಾರತ್ ಮಂಟಪ ಪ್ರದೇಶ ಸೇರಿದಂತೆ ಹಲವು ಪ್ರದೇಶಗಳಲ್ಲಿನ ಪ್ರಮುಖ ರಸ್ತೆಗಳೆಲ್ಲಾ ಅಕ್ಷರಶಃ ಉಕ್ಕಿ ಹರಿಯುವ ನದಿಯಂತಾಗಿದ್ದವು. ಹವಾಮಾನ ಪರಿಸ್ಥಿತಿ ತೀರಾ ಗಂಭೀರವಾಗಿರುವುದರಿಂದ ದೆಹಲಿ ವಿಮಾನ ನಿಲ್ದಾಣದ ಆಡಳಿತವು ಪ್ರಯಾಣಿಕರಿಗೆ ತುರ್ತು ಇಲ್ಲದಿದ್ದರೆ ಪ್ರಯಾಣದಲ್ಲಿ ಬದಲಾವಣೆ ಮಾಡಿಕೊಳ್ಳುವುದೂ ಸೇರಿದಂತೆ ಹಲವು ಸಲಹೆಗಳನ್ನು ನೀಡಿದೆ.

ದೆಹಲಿ ವಿಮಾನ ನಿಲ್ದಾಣದ ಬಳಿ ಮತ್ತು ಸಂಪರ್ಕ ರಸ್ತೆಗಳಲ್ಲಿ ಭಾರೀ ಪ್ರಮಾಣದಲ್ಲಿ ನೀರು ಹರಿಯುತ್ತಿರುವುದರಿಂದ ಕಾರು, ಬಸ್‌ಗಳ ಸಂಚಾರವೂ ಕಷ್ಟವಾಗಿದೆ. ಹಾಗಾಗಿ ಪ್ರಯಾಣಿಕರು ಮೆಟ್ರೊ, ಸೇರಿದಂತೆ ಪರ್ಯಾಯ ಸಾರಿಗೆ ವ್ಯವಸ್ಥೆಗಳಲ್ಲಿ ಮನೆಗೆ ತೆರಳಲು ವಿಮಾನ ನಿಲ್ದಾಣದ ಆಡಳಿತ ಸಲಹೆ ನೀಡಿದೆ.

ವಿಮಾನ ಹಾರಾಟ ರದ್ದು, ಪ್ರಯಾಣ ವೇಳೆ ಬದಲು ಕುರಿತು ಪ್ರಯಾಣಿಕರು ವಿಮಾನಯಾನ ಸಂಸ್ಥೆಗಳನ್ನೇ ನೇರ ಸಂಪರ್ಕಿಸುವಂತೆಯೂ ಸೂಚಿಸಲಾಗಿದೆ ಎಂದು ದೆಹಲಿ ವಿಮಾನ ನಿಲ್ದಾಣದ ಅಧಿಕೃತ 'ಎಕ್ಸ್' ಖಾತೆಯಲ್ಲಿ ತಿಳಿಸಲಾಗಿದೆ.

100 ಮಿ.ಮೀ. ಮಳೆ: ಭಾರತೀಯ ಹವಾಮಾನ ಇಲಾಖೆ ಶನಿವಾರ ದೆಹಲಿಗೆ ರೆಡ್ ಅಲರ್ಟ್ ಘೋಷಿಸಿತ್ತು. ಶುಕ್ರವಾರ ರಾತ್ರಿಯಿಂದ ಶನಿವಾರ ಸಂಜೆಯರೆಗಿನ 24 ಗಂಟೆಗಳ ಅವಧಿಯಲ್ಲಿ ದೆಹಲಿಯ ಪ್ರಮುಖ ಸಫ್ದರ್‌ಜಂಗ್ ಹವಾಮಾನ ಕೇಂದ್ರದಲ್ಲಿ 78.7 ಮಿಮೀ ಮತ್ತು ಪ್ರಗತಿ ಮೈದಾನದಲ್ಲಿ 100 ಮಿಮೀ ಮಳೆಯಾಗಿದೆ ಎಂದು ಅಂಕಿ ಅಂಶ ದಾಖಲಾಗಿದೆ.

182 ವಿಮಾನ ಸಂಚಾರ ವ್ಯತ್ಯಯ

ಮೋಡಗಳು ದೆಹಲಿಯ ಆಗಸದಲ್ಲಿ ದಟ್ಟೈಸಿ ಧಾರಾಕಾರ ಮಳೆ ಸುರಿಯುತ್ತಿದೆ. ಪರಿಣಾಮ ವಿಮಾನಗಳ ಹಾರಾಟದಲ್ಲಿಯೂ ಭಾರಿ ವ್ಯತ್ಯಯವಾಗಿದೆ. ದೆಹಲಿ ವಿಮಾನ ನಿಲ್ದಾಣದ ದೇಶೀ-ವಿದೇಶಿ ಮಾರ್ಗ ಸಂಚಾರದ ಎರಡೂ ಟರ್ಮಿನಲ್‌ಗಳಿಂದ ಹೊರಡಬೇಕಿದ್ದ, ಆಗಮಿಸಬೇಕಿದ್ದ ಒಟ್ಟು 182 ವಿಮಾನಗಳ ಸಂಚಾರದಲ್ಲಿ ಭಾರೀ ವ್ಯತ್ಯಯವಾಗಿದೆ. ಮೊದಲೇ ಪ್ರಯಾಣ ನಿಗದಿಪಡಿಸಿಕೊಂಡಿದ್ದ ಸಾವಿರಾರು ಪ್ರಯಾಣಿಕರು ಸಂಚಾರವೇ ಅಸಾಧ್ಯವಾಗಿದ್ದರಿಂದ ಬಹಳ ಪರಿತಪಿಸಿದ್ದಾರೆ. ಹಲವು ವಿಮಾನಗಳ ಹಾರಾಟ ವಿಳಂಬವಾದರೆ, ಕೆಲವು ವಿಮಾನಗಳ ಸಂಚಾರವನ್ನೇ ರದ್ದುಗೊಳಿಸ ಲಾಗಿದೆ. ದೆಹಲಿಗೆ ಆಗಮಿಸಬೇಕಾಗಿದ್ದ 30 ವಿಮಾನಗಳ ಮಾರ್ಗ ಬದಲಿಸಿ ಸಮೀಪದ ವಿಮಾನ ನಿಲ್ದಾಣಗಳಲ್ಲಿ ಇಳಿಯುವಂತೆ ಮಾಡಲಾಗಿದೆ.

ಗೋಡೆ ಕುಸಿತಕ್ಕೆ 2 ಮಕ್ಕಳು ಸೇರಿ 8 ಸಾವು

ದೆಹಲಿ ನಗರದಲ್ಲಿ ಎಲ್ಲೆಲ್ಲೂ ನೀರೇ ಕಾಣುವಂತಾ ಗಿದೆ. ಜೈತ್ ಪುರದ ಹರಿ ನಗರ ಪ್ರದೇಶದಲ್ಲಿ ಹಳೆಯ ಕಟ್ಟಡವೊಂದರ ಗೋಡೆಯ ಒಂದು ಭಾಗ ಕುಸಿದಿದ್ದರಿಂದ 6 ಮತ್ತು 7 ವರ್ಷದ ಇಬ್ಬರು ಮಕ್ಕಳು ಸೇರಿದಂತೆ ಎಂಟು ಜನರು ಸಾವನ್ನಪ್ಪಿದ್ದಾರೆ. ಹಳೆಯ ದೇವಾಲಯವೊಂದರ ಪಕ್ಕದಲ್ಲೇ ತಾತ್ಕಾಲಿಕ ಮನೆಗಳನ್ನು ನಿರ್ಮಿಸಿ ಕೊಂಡು ವಾಸಿಸುತ್ತಿದ್ದ ಕುಟುಂಬಗಳ ಮೇಲೆ ದೊಡ್ಡ ಗೋಡೆ ಹಠಾತ್ತನೆ ಕುಸಿದಿದೆ. ಕುಸಿದ ಗೋಡೆಯಡಿ ಸಿಕ್ಕಿಹಾಕಿಕೊಂಡ 8 ಮಂದಿ ಸಾವನ್ನಪ್ಪಿದ್ದಾರೆ. ಸುದ್ದಿ ತಿಳಿದ ತಕ್ಷಣವೇ ರಕ್ಷಣಾ ತಂಡ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಶುರು ಮಾಡಿದೆ. ಅವಶೇಷಗಳಡಿ ಸಿಲುಕಿ ಗಾಯಗೊಂಡಿದ್ದ ವರನ್ನು ರಕ್ಷಿಸಿ ಸಫ್ದರ್‌ಜಂಗ್ ಆಸ್ಪತ್ರೆ ಮತ್ತು ಏಮ್ಸ್ ಆಸ್ಪತ್ರೆಗೆ ದಾಖಲಿಸಿದೆ. ಆದರೆ, ಗಾಯಾಳುಗಳಲ್ಲಿ ಗಂಭೀರ ಸ್ಥಿತಿಯಲ್ಲಿದ್ದ 8 ಮಂದಿ ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದರು. ಉಳಿದಂತೆ ತಾತ್ಕಾಲಿಕ ಶೆಲ್ಟರ್‌ಗಳಲ್ಲಿ ವಾಸವಿದ್ದ ಜನರನ್ನು ಅಧಿಕಾರಿಗಳು ಸ್ಥಳಾಂತರಿಸಿದ್ದಾರೆ.

ಅಗ್ನಿ ಅವಘಡ, ಒಬ್ಬ ಸಾವು, 10 ಜನಕ್ಕೆ ಗಾಯ

ಪೂರ್ವ ದೆಹಲಿಯ ಆನಂದ್ ವಿಹಾರ್ ಪ್ರದೇಶದಲ್ಲಿರುವ ಕಾಸ್ಮೋಸ್ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ ಬೆಂಕಿ ಹೊತ್ತಿಕೊಂಡು ಭಾರೀ ಅವಘಡವಾಗಿದೆ. ದುರ್ಘಟನೆಯಲ್ಲಿ ಒಬ್ಬರು ಸಾವನ್ನಪ್ಪಿ, 10 ಮಂದಿ ಗಾಯಗೊಂಡಿದ್ದಾರೆ. ಶನಿವಾರ ಮಧ್ಯಾಹ್ನ 12.12ರಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಬೆಂಕಿ ಹೊತ್ತಿಕೊಂಡು ಉರಿಯುತ್ತಿರುವ ಬಗ್ಗೆ ಕರೆ ಬಂದಿತು. 8 ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿವೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ರೋಗಿಗಳನ್ನು ಸಮೀಪದ ಪುಷ್ಪಾಂಜಲಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದರಿಂದ 11 ಜನರನ್ನು ರಕ್ಷಿಸಲು ಸಾಧ್ಯವಾಗಿದೆ. ಒಬ್ಬ ರೋಗಿ ಮೃತಪಟ್ಟರೆ, 10 ಮಂದಿ ಗಾಯಗೊಂಡಿದ್ದಾರೆ. ಆಸ್ಪತ್ರೆಯ ನೆಲ ಮಹಡಿಯಲ್ಲಿ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿದೆ. ಬೆಂಕಿ ಅನಾಹುತಕ್ಕೆ ಕಾರಣ ತಿಳಿದುಬಂದಿಲ್ಲ ಎಂದು ದೆಹಲಿ ಅಗ್ನಿಶಾಮಕ ಸೇವೆ ಅಧಿಕಾರಿ ಅಶೋಕ್ ಕುಮಾರ್ ಜೈಸ್ವಾಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವಕೀಲರ ಪರಿಷತ್‌ಗೆ ಸುಪ್ರೀಂ ನಿರ್ದೇಶನ

ದೆಹಲಿ: ಕರ್ನಾಟಕ ರಾಜ್ಯ ವಕೀಲರ ಪರಿಷತ್‌ಗೆ ಶುಲ್ಕ ಸಂಗ್ರಹ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನವೊಂದನ್ನು ನೀಡಿದೆ. ರಾಜ್ಯದ ಕಾನೂನು ಪದವೀಧರರು ವಕೀಲ ವೃತ್ತಿ ಆರಂಭಿಸಲು ಸನ್ನದು ನೋಂದಣಿಗೆ ಅರ್ಜಿ ಸಲ್ಲಿಸಿದಾಗ ಅವರಿಂದ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, 'ವಕೀಲರ ಕಾಯಿದೆ-1961'ರಡಿ ನಿಯಮಬದ್ಧವಾದ ಶುಲ್ಕವನ್ನಷ್ಟೇ ಸಂಗ್ರಹಿಸಬೇಕು. ಅದಕ್ಕೆ ಹೊರತಾಗಿ 'ಐಚ್ಛಿಕ ಶುಲ್ಕ'ದ ಹೆಸರಿನಲ್ಲಿ ಹಣ ಸಂಗ್ರಹಿಸಬಾರದು. ಪ್ರಸ್ತುತ ಸಂಗ್ರಹಿಸುತ್ತಿದ್ದರೆ ತಕ್ಷಣದಿಂದಲೇ ಸ್ಥಗಿತಗೊಳಿಸಬೇಕು ಎಂದು ನ್ಯಾ. ಜೆ.ಬಿ.ಪರದಿವಾಲಾ ಮತ್ತು ನ್ಯಾ. ಆರ್. ಮಹದೇವನ್ ಅವರ ದ್ವಿಸದಸ್ಯ ಪೀಠ ಸ್ಪಷ್ಟ ನಿರ್ದೇಶನ ನೀಡಿದೆ. ವಕೀಲರ ಸನ್ನದು ನೋಂದಣಿ ವೇಳೆ ಅತಿಯಾದ ಶುಲ್ಕ ಸಂಗ್ರಹಿಸಲಾಗುತ್ತಿದೆ. ನ್ಯಾಯಾಲಯದ ನಿರ್ದೇಶನ ಪಾಲನೆ ಆಗುತ್ತಿಲ್ಲ ಎಂದು ಕಿರಣ್ ಬಾಬು ಎಂಬವರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ವೇಳೆ ದ್ವಿಸದಸ್ಯ ಪೀಠ ಈ ನಿರ್ದೇಶನ ನೀಡಿದೆ ಎಂದು ವರದಿಯಾಗಿದೆ.

ಪುಟ್ಟ ವಿಮಾನ ಪತನ, ಪೈಲಟ್ ಪಾರು

ಪುಣೆ: ಮಹಾರಾಷ್ಟ್ರದ ಪುಣೆ ಜಿಲ್ಲೆಯ ಬಾರಾಮತಿ ವಿಮಾನ ನಿಲ್ದಾಣ ಬಳಿ ಪುಟ್ಟ ತರಬೇತಿ ವಿಮಾನ ಶನಿವಾರ ಬೆಳಗ್ಗೆ 8 ಗಂಟೆಗೆ ಪತನವಾಗಿದೆ. ಸುದೈವವಶಾತ್ ಯಾರಿಗೂ ಗಾಯವಾಗಿಲ್ಲ, ಪೈಲಟ್ ಸುರಕ್ಷಿತವಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ರೆಡ್‌ಬರ್ಡ್ ಫ್ಲೈಟ್ ತರಬೇತಿ ಕೇಂದ್ರದ ತರಬೇತಿ ವಿಮಾನ ಹಾರಾಟ ಮುಗಿಸಿ ಲ್ಯಾಂಡ್ ಆಗುತ್ತಿದ್ದಾಗ ಅಪಘಾತವಾಗಿದೆ. ವಿಮಾನ ಟಯರ್‌ಗೆ ಹಾನಿ ಆಗಿರುವುದನ್ನು ಗಮನಿಸಿದ ಪೈಲಟ್ ತುರ್ತು ಲ್ಯಾಂಡಿಂಗ್‌ಗೆ ಯತ್ನಿಸಿದಾಗ ವಿಮಾನ ಪತನವಾಗಿದೆ. ವಿಮಾನ ರನ್ ವೇ ಸ್ಪರ್ಶಿಸುತ್ತಲೇ ಮುಂಭಾಗದ ಚಕ್ರ ಕಳಚಿಕೊಂಡಿತು. ವಿಮಾನ ರನ್ ವೇ ಬಿಟ್ಟು ನಿಲ್ದಾಣದ ಇನ್ನೊಂದು ಬದಿಗೆ ನುಗ್ಗಿ ಅಪಘಾತಕ್ಕೀಡಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿ ವಿವರಿಸಿದ್ದಾರೆ.

ಅಪರಿಚಿತರ ಭವಿಷ್ಯ ನುಡಿ: ಶರದ್ ನೆನಪು

ಮುಂಬೈ: 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೂ ಮುನ್ನ ಇಬ್ಬರು ವ್ಯಕ್ತಿಗಳು ದೆಹಲಿಯಲ್ಲಿ ತಮ್ಮನ್ನು ಭೇಟಿಯಾಗಿದ್ದರು. ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳ ಪೈಕಿ 160 ಕ್ಷೇತ್ರಗಳಲ್ಲಿ ಕಾಂಗ್ರೆಸ್, ಎನ್‌ಸಿಪಿ (ಶರದ್ ಬಣ), ಶಿವಸೇನೆ (ಉದ್ಧವ್ ಬಣ) ಒಳಗೊಂಡ ಪ್ರತಿಪಕ್ಷಗಳ ಒಕ್ಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ ಫಲಿತಾಂಶವೇ ಬೇರೆಯಾಯಿತು ಎಂದು ಎನ್‌ಸಿಪಿ(ಶರದ್ ಬಣ) ಪಕ್ಷದ ಹಿರಿಯ ನಾಯಕ ಶರದ್ ಪವಾರ್ ಅಚ್ಚರಿ-ಆಘಾತ ವ್ಯಕ್ತಪಡಿಸಿದರು. ಬಿಜೆಪಿ ಮತ್ತು ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಮತ ಕಳವು' ಆರೋಪ ಮಾಡುತ್ತಿರುವ ವೇಳೆಯಲ್ಲೇ ಶರದ್ ಪವಾರ್ ಅವರ ಈ ಹೇಳಿಕೆ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ನಾಗಪುರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪವಾರ್, ಆ ಬಳಿಕ ನಾನು ಆ ಇಬ್ಬರೂ ವ್ಯಕ್ತಿಗಳನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಪರಿಚಯಿಸಿದೆ. ಆದರೆ ರಾಹುಲ್ ಇಬ್ಬರು ವ್ಯಕ್ತಿಗಳ ಹೇಳಿಕೆಗಳಿಗೆ ಪ್ರಾಮುಖ್ಯತೆ ನೀಡಲಿಲ್ಲ. ಇಬ್ಬರ ಹೆಸರು- ಸಂಪರ್ಕ ವಿವರ ತಮ್ಮ ಬಳಿ ಇಲ್ಲ ಎಂದಿದ್ದಾರೆ.



ರೈಲು ಮರು ಪಯಣ ಟಿಕೆಟ್‌ಗೆ ರಿಯಾಯಿತಿ

ದೆಹಲಿ: ಭಾರತೀಯ ರೈಲ್ವೆಯ ಪ್ರಯಾಣಿಕರು ಪ್ರಯಾಣ ಮತ್ತು ಮರು ಪ್ರಯಾಣದ ಟಿಕೆಟ್‌ಗಳನ್ನು ಒಂದೇ ಬಾರಿ ಖರೀದಿಸಿದರೆ ಮರು ಪಯಣದ ಟಿಕೆಟ್ ದರದಲ್ಲಿ ಶೇ. 20ರಷ್ಟು ರಿಯಾಯಿತಿ ಸಿಗಲಿದೆ. ರೈಲ್ವೆ ಸಚಿವಾಲಯ ಈ ಸಿಹಿ ಸುದ್ದಿ ನೀಡಿದೆ. ಈ 'ರೌಂಡ್-ಟ್ರಿಪ್ ಪ್ಯಾಕೇಜ್' ಯೋಜನೆಯನ್ನು ಭಾರತೀಯ ರೈಲ್ವೆಯಲ್ಲಿ ಮೊದಲ ಬಾರಿಗೆ ಪ್ರಕಟಿಸಲಾಗಿದೆ. ಯೋಜನೆ ಸದ್ಯ ಪ್ರಾಯೋಗಿಕವಾಗಿದ್ದರೂ, ಬಳಿಕ ಫಲಿತಾಂಶ ನೋಡಿಕೊಂಡು ದೀರ್ಘಾವಧಿಗೆ ವಿಸ್ತರಿಸುವ ಚಿಂತನೆ ಭಾರತೀಯ ರೈಲ್ವೆಯದಾಗಿದೆ.

'ಫ್ಲೆಕ್ಸಿ-ಫೇರ್' ವ್ಯವಸ್ಥೆಯಡಿ ಕಾರ್ಯನಿರ್ವಹಿಸುವ ರಾಜಧಾನಿ, ಡುರೊಂಟೊ ಮತ್ತು ಶತಾಬ್ದಿ ರೈಲುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಬಗೆಯ ಕಾಯ್ದಿರಿಸುವಿಕೆ ಸೌಲಭ್ಯವಿರುವ ರೈಲು ಗಾಡಿಗಳಲ್ಲಿ 'ಹೋಗುವ-ವಾಪಸ್ ಬರುವ' ಎರಡೂ ಟಿಕೆಟ್ ಒಟ್ಟಿಗೆ ಕಾಯ್ದಿರಿಸುವವರಿಗೆ ಮರು ಪಯಣದ ಟಿಕೆಟ್ ದರದಲ್ಲಿ ರಿಯಾಯಿತಿ ಸಿಗಲಿದೆ ಎಂಬ ವಾಣಿಜ್ಯ ಸುತ್ತೋಲೆಯನ್ನು ಶುಕ್ರವಾರ ಸಂಜೆ ಹೊರಡಿಸಲಾಗಿದೆ.

{ಕಪಿಲ್ ಸಿಬಲ್} ರಾಜ್ಯಸಭೆ ಸದಸ್ಯ

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಜು.21ರಂದು ರಾಜೀನಾಮೆ ನೀಡಿದ ಬಳಿಕ ಎಲ್ಲಿದ್ದಾರೆ ಎಂದೇ ತಿಳಿಯದಾಗಿದೆ. ಅವರು ಅಧಿಕೃತ ನಿವಾಸದಲ್ಲಿಲ್ಲ. ರಾಜಿನಾಮೆ ಮರುದಿನವೇ ಅವರನ್ನು ಸಂಪರ್ಕಿಸಲು ಯತ್ನಿಸಿದೆ. ಅವರ ಆಪ್ತ ಕಾರ್ಯದರ್ಶಿ ಕರೆ ಸ್ವೀಕರಿಸಿ, 'ಸರ್ ವಿಶ್ರಾಂತಿ ಪಡೆಯುತ್ತಿದ್ದಾರೆ' ಎಂದರು. ಆನಂತರ ಧನಕರ್ ನೋಡಲಾಗಲೀ, ಮಾತಿಗಾಗಲೀ ಸಿಕ್ಕಿಲ್ಲ.

ಕಾಶ್ಮೀರ ರಾಜ್ಯ ಸ್ಥಾನ: ಕೈ ನಿರಶನ

ಶ್ರೀನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರಕ್ಕೆ ಮರಳಿ ರಾಜ್ಯ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದಿಂದ ಶೀನಗರದಲ್ಲಿ ಶನಿವಾರ ನಿರಶನ ಪ್ರತಿಭಟನೆ ಆರಂಭವಾಗಿದೆ.

ಜಮ್ಮು-ಕಾಶ್ಮೀರ ಪ್ರದೇಶ ಕಾಂಗ್ರೆಸ್ ಸಮಿತಿ(ಜೆಕೆಪಿಸಿಸಿ) ಅಧ್ಯಕ್ಷ ತಾರಿಕ್ ಕರ್ರಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಗುಲಾಮ್ ಅಹ್ಮದ್ ಮಿರ್ ಮತ್ತು ಪಕ್ಷದ ಶಾಸಕರು, ಹಿರಿಯ ನಾಯಕರು ನಗರದ ಎಂಎ ರಸ್ತೆಯಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ ನಿರಶನ ಆರಂಭಿಸಿದ್ದಾರೆ. ಜಮ್ಮುವಿನಲ್ಲಿ ಭಾನುವಾರ ನಿರಶನ ಪ್ರತಿಭಟನೆ ನಡೆಯಲಿದೆ. ಅಂಧ, ಮಾತು ಬಾರದ, ಕಿವಿ ಕೇಳದ ಕೇಂದ್ರ ಸರಕಾರವನ್ನು ಜಾಗೃತಗೊಳಿಸಲು ಕಾಂಗ್ರೆಸ್ ಹೋರಾಟ ಪ್ರಾರಂಭಿಸಿದೆ. 'ಕ್ವಿಟ್ ಇಂಡಿಯ' ಚಳವಳಿ ಪ್ರಾರಂಭವಾದ ದಿನವಾದ ಆ.9ರಂದು ಪ್ರತಿಭಟನೆ ಆರಂಭಿಸಿದ್ದು, 21ರವರೆಗೂ ಜಮ್ಮು-ಕಾಶ್ಮೀರದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 6 ಕಡೆ ನಿರಶನ ನಡೆಸಲಾಗುವುದು ಎಂದು ತಾರಿಕ್ ಹೇಳಿದ್ದಾರೆ. 2019ರ ಆ.5ರಂದು ಕೇಂದ್ರ ಸರಕಾರ ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಗೊಳಿಸಿ, ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದೆ.

1064 ಕೋಟಿ ರು. ಅಡಿಕೆ ಆಮದು!

ದೆಹಲಿ: ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ಒಟ್ಟು 1064 ಕೋಟಿ ರು.ಗಳಷ್ಟು ಮೌಲ್ಯದ ಅಡಿಕೆ ಆಮದು ಮಾಡಿಕೊಳ್ಳಲಾಗಿದೆ. ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಳಿದ ಪ್ರಶ್ನೆಗೆ ಕೇಂದ್ರದ ವಾಣಿಜ್ಯ ಖಾತೆ ಸಹಾಯಕ ಸಚಿವ ಜಿತಿನ್ ಪ್ರಸಾದ್ ಲೋಕಸಭೆಯಲ್ಲಿ ಈ ಉತ್ತರ ನೀಡಿದ್ದಾರೆ.

ಕಳೆದ 3 ಹಣಕಾಸು ವರ್ಷಗಳಿಂದಲೂ ಥಾಯ್ಲೆಂಡ್, ನೇಪಾಳ, ಮಲೇಷ್ಯಾ, ಶ್ರೀಲಂಕಾ, ಮ್ಯಾನ್ಮಾರ್, ಇಂಡೋನೇಷ್ಯಾ, ಬಾಂಗ್ಲಾದೇಶ, ಯುನೈಟೆಡ್ ಅರಬ್ ಎಮಿರೇಟ್ಸ್, ಒಮಾನ್, ಸಿಂಗಪುರ ದೇಶಗಳಿಂದ ಅಡಿಕೆ ಆಮದಾಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ಆಮದಾಗುತ್ತದೆ. ಹಾಗಿದ್ದರೂ ದೇಶೀಯ ಅಡಿಕೆ ಮಾರಾಟದಲ್ಲಾಗಲೀ, ಧಾರಣೆಯ ಮೇಲಾಗಲೀ ನಕಾರಾತ್ಮಕ ಪರಿಣಾಮವೇನೂ ಆಗಿಲ್ಲ. 2024ರ ಜನವರ-ಜೂನ್ ಅವಧಿಯಲ್ಲಿ ಕ್ವಿಂಟಲ್ ಅಡಿಕೆಗೆ 36,316 ರು. ಇತ್ತು. ಈ ವರ್ಷ ಅದೇ ಅವಧಿಯಲ್ಲಿ 37,856 ರು.ಗಳಿಗೆ ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ಎಎಐ 81 ವಿ.ನಿಲ್ದಾಣಗಳಿಗೆ 10,853 ಕೋಟಿ ರು. ನಷ್ಟ!

ದೆಹಲಿ: ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ನಿರ್ವಹಣೆಯಲ್ಲಿರುವ ದೇಶದ ವಿವಿಧೆಡೆಯ 81 ವಿಮಾನ ನಿಲ್ದಾಣಗಳು 2015-25ರ ನಡುವಿನ 10 ಹಣಕಾಸು ವರ್ಷಗಳಲ್ಲಿ ಒಟ್ಟಾರೆ 10,853 ಕೋಟಿ ರು. ನಷ್ಟ ಅನುಭವಿಸಿವೆ. ಪರಿಣಾಮವಾಗಿ ಇವುಗಳಲ್ಲಿ 22 ವಿಮಾನ ನಿಲ್ದಾಣಗಳು ಸದ್ಯ ಕಾರ್ಯನಿರ್ವಹಿಸುತ್ತಿಲ್ಲ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ.

ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣ 673.91 ಕೋಟಿ ರು. ನಷ್ಟ ಅನುಭವಿಸುವುದರೊಂದಿಗೆ 81 ವಿಮಾನ ನಿಲ್ದಾಣಗಳಲ್ಲಿಯೇ ಅತ್ಯಧಿಕ ನಷ್ಟ ಅನುಭವಿಸಿದ ನಿಲ್ದಾಣ ಎಂಬ ಅಪಖ್ಯಾತಿಗೆ ಒಳಗಾಗಿದೆ. ಅಗರ್ತಲಾ ವಿಮಾನ ನಿಲ್ದಾಣ(605.23 ಕೋಟಿ ರು. ನಷ್ಟ) ಎರಡನೇ ಸ್ಥಾನದಲ್ಲಿದೆ. ಹೈದರಾಬಾದ್ ವಿಮಾನ ನಿಲ್ದಾಣ 564.97 ಕೋಟಿ ರು., ಡೆಹರಾಡೂನ್ ವಿಮಾನ ನಿಲ್ದಾಣ 488 ಕೋಟಿ ರು. ಮತ್ತು ವಿಜಯವಾಡ ವಿಮಾನ ನಿಲ್ದಾಣ 483.69 ಕೋಟಿ ರು. ನಷ್ಟ ಕಂಡಿವೆ. ಭೋಪಾಲ್-480.43 ಕೋಟಿ ರು., ಔರಂಗಾಬಾದ್-447.83 ಕೋಟಿ ರು., ತಿರುಪತಿ-363.71 ಕೋಟಿ ರು., ಖಜುರಾಹೊ -355.53 ಕೋಟಿ ರು., ಇಂಫಾಲ್-355.19 ಕೋಟಿ ರು. ನಷ್ಟದಲ್ಲಿರುವ ಇತರ ಪ್ರಮುಖ ವಿಮಾನ ನಿಲ್ದಾಣಗಳಾಗಿವೆ.

ನಾಗರಿಕ ವಿಮಾನಯಾನ ಸಹಾಯಕ ಸಚಿವ ಮುರಳೀಧರ್ ಮೊಹೋಲ್ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸಂಸದ ಜೆ.ಬಿ.ಮಾಥರ್ ಹಿಸಮ್ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

ವಿವಿಐಪಿಗಳಿಗಾಗಿ!

ಸಫ್ದರ್‌ಜಂಗ್ ನಿಲ್ದಾಣ ದೆಹಲಿಯ ಪ್ರಮುಖ ವಿಮಾನ ನಿಲ್ದಾಣವೇ ಆಗಿದ್ದರೂ ಈಗ ಪೂರ್ಣ ಬಳಕೆ ಆಗುತ್ತಿಲ್ಲ. ಕೇವಲ ಅತಿ ಗಣ್ಯರನ್ನು(ವಿವಿಐಪಿ) ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರೆದೊಯ್ಯಲು ಸೇವೆ ಒದಗಿಸುತ್ತಿದೆ ಎಂದು ವಿಮಾನಯಾನ ಸಚಿವಾಲಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜು.31ಕ್ಕೆ ಶುರುವಾದ ಆಪರೇಷನ್ ಅಖಲ್: ಶನಿವಾರಕ್ಕೆ 9ನೇ ದಿನ

ಕುಲ್ಗಾಂ: ಇಬ್ಬರು ಸೈನಿಕರು ಹುತಾತ್ಮ



ಶ್ರೀನಗರ: ಜಮ್ಮು- ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿನ ಅಖಲ್ ದಟ್ಟ ಅರಣ್ಯದಲ್ಲಿ ನಡೆಯುತ್ತಿರುವ ಭಯೋತ್ಪಾದಕರ ಧಮನ ಕಾರ್ಯಾಚರಣೆ 'ಆಪರೇಷನ್ ಅಖಲ್'ನಲ್ಲಿ ಶನಿವಾರ ನಡೆದ ಗುಂಡಿನ ಚಕಮಕಿಯಲ್ಲಿ ಲ್ಯಾನ್ಸ್ ನಾಯಕ ಸೇರಿದಂತೆ ಇಬ್ಬರು ಯೋಧರು ವೀರಮರಣವನ್ನಪ್ಪಿದ್ದಾರೆ. ಹುತಾತ್ಮ ಸೈನಿಕರನ್ನು ಲ್ಯಾನ್ಸ್ ನಾಯಕ್ ಪ್ರೀತ್‌ಪಾಲ್ ಸಿಂಗ್ ಮತ್ತು ಸಿಪಾಯಿ ಹರ್ಮಿಂದರ್ ಸಿಂಗ್ ಎಂದು ಗುರುತಿಸಲಾಗಿದೆ.

ಸ್ಥಳೀಯ ನಿವಾಸಿ ಮತ್ತು ವಿದೇಶಿ ಉಗ್ರರು ಸೇರಿ ದಂತೆ 7 ಮಂದಿ ಭಾರೀ ಶಸ್ತ್ರಾಸ್ತ್ರಗಳನ್ನು ಹೊಂದಿರುವ ತರಬೇತಾಗಿರುವ ಭಯೋತ್ಪಾದಕ ಗುಂಪು ಅರಣ್ಯ ಪ್ರದೇಶದಲ್ಲಿ ಅಡಗಿ ರುವ ಶಂಕೆ ಇದೆ ಎಂದು ಭದ್ರತಾ ಪಡೆಗಳು ತಿಳಿಸಿರುವುದಾಗಿ ವರದಿಯಾಗಿದೆ. ಅಖಲ್ ಅರಣ್ಯ ಪ್ರದೇಶದಲ್ಲಿ ಉಗ್ರಗಾಮಿಗಳ ಗುಂಪಾಗಿ ಅಡಗಿಕೊಂಡಿರುವ ಬಗ್ಗೆ ಗುಪ್ತಚರ ಇಲಾಖೆಯಿಂದ ಮಾಹಿತಿ ಬಂದ ನಂತರ ಭಾರತೀಯ ಸೇನೆ ಮತ್ತು ಸಿಆರ್‌ಪಿಎಫ್ ಹಾಗೂ ಜಮ್ಮು-ಕಾಶ್ಮೀರ ಪೊಲೀ ಸರನ್ನೊಳಗೊಂಡ ಜಂಟಿ ತಂಡ 'ಆಪರೇಷನ್ ಅಖಲ್' ಕಾರ್ಯಾಚರಣೆಯನ್ನು ಜು.31ರಂದು ಪ್ರಾರಂಭಿ ಸಿತು. ಶುಕ್ರವಾರ ರಾತ್ರಿಯೂ ಅರಣ್ಯ ಪ್ರದೇಶದಿಂದ ಜೋರು ಸ್ಫೋಟ ಮತ್ತು ಗುಂಡಿನ ಸದ್ದು ಕೇಳಿಬಂದಿತ್ತು. ಹಲವು ಭಯೋತ್ಪಾದಕರು ಅಖಲ್ ಅರಣ್ಯದೊಳಗೆ ಅಡಗಿದ್ದು, ಶನಿವಾರವೂ ಕಾರ್ಯಾಚರಣೆ ಮುಂದುವರಿದಿದೆ.

ಸಂತಾಪ: ಹುತಾತ್ಮ ಯೋಧರಿಬ್ಬರೂ ಆಪರೇಷನ್ ಅಖಲ್ ಕಾರ್ಯಾಚರಣೆಯಲ್ಲಿ ತೋರಿಸಿದ ಧೈರ್ಯ ಮತ್ತು ಸಮರ್ಪಣೆ ಉಳಿದೆಲ್ಲಾ ಯೋಧರಿಗೂ ಶಾಶ್ವತ ಸ್ಫೂರ್ತಿ ನೀಡುತ್ತದೆ. ಭಾರತೀಯ ಸೇನೆ ಹುತಾತ್ಮರ ಅಗಲಿಕೆಗೆ ಸಂತಾಪ ವ್ಯಕ್ತಪಡಿಸುತ್ತದೆ ಎಂದು ಶ್ರೀನಗರದ '15 ಕಾರ್ಪ್ಸ್' ಎಕ್ಸ್ ಖಾತೆಯಲ್ಲಿ ಬರೆಯಲಾಗಿದೆ.

ಕಾರ್ಯಾಚರಣೆಗೆ ಡ್ರೋನ್, ಯುಎವಿ

ಅಖಲ್ ಅರಣ್ಯದೊಳಗೆ ನೈಸರ್ಗಿಕ ರಚನೆಯಾದ ಗುಹೆಗಳು ಇರುವುದರಿಂದ ಉಗ್ರರಿಗೆ ಅಡಗಿಕೊಳ್ಳಲು ಸುರಕ್ಷಿತ ತಾಣವೆನಿಸಿದೆ. ದಟ್ಟವಾದ ಕಾಡಿನಲ್ಲಿ ಅಡಗಿರುವ ಉಗ್ರಗಾಮಿಗಳ ಚಲನವಲನ ಪತ್ತೆಹಚ್ಚುವುದೇ ಸವಾಲಿನ ಕೆಲಸವಾಗಿರುವುದರಿಂದ ಜಂಟಿ ಭದ್ರತಾ ಪಡೆಗಳು ಹೈ ಡೆಫೆನಿಷನ್ ಕ್ಯಾಮೆರಾ ಜೋಡಿಸಿದ ಡ್ರೋನ್, ಯುಎವಿಗಳನ್ನು ಹಾರಿಬಿಟ್ಟಿವೆ. ಜತೆಗೆ ಕಾರ್ಯಾಚರ ಣೆಗೆ ಸೇನಾ ಹೆಲಿಕಾಪ್ಟರ್‌ಗಳನ್ನೂ ಬಳಸಿಕೊಳ್ಳಲಾಗುತ್ತಿದೆ. ಅತ್ಯಾ ಧುನಿಕ ಕಣ್ಗಾವಲು ಸಾಧನಗಳನ್ನು ಬಳಸಲಾಗುತ್ತಿದೆ. ಉಗ್ರಗಾಮಿ ಅಡಗಿರುವ ಶಂಕೆಯ ಮೇರೆಗೆ ಕೆಲವೆಡೆ ಭದ್ರತಾ ಪಡೆಗಳು ಸ್ಫೋಟಕಗಳನ್ನು ಸಿಡಿಸಿವೆ. ಆಧುನಿಕ ಗ್ಯಾಜೆಡ್‌ಗಳನ್ನು ಹೊಂದಿರುವ ಎಲೈಟ್ ಪ್ಯಾರಾ ಕಮಾಂಡೋಗಳೂ ಈಗ ಉಗ್ರರ ಧಮನ ಕಾರ್ಯಾಚರಣೆಗೆ ಸೇರ್ಪಡೆಯಾಗಿದ್ದಾರೆ. 9 ದಿನಗಳಿಂದ ನಡೆಯುತ್ತಿರುವ ಸುದೀರ್ಘ ಕಾರ್ಯಾಚರಣೆಯಲ್ಲಿ ಈವರೆಗೆ ಇಬ್ಬರು ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. 15 ಕಾರ್ಪ್ಸ್ ಜಿಒಸಿ, ಲೆಫ್ಟಿನೆಂಟ್ ಜನರಲ್ ಪ್ರಶಾಂತ್ ಶ್ರೀವಾಸ್ತವ ಮತ್ತು ಜಮ್ಮು-ಕಾಶ್ಮೀರ ಪೊಲೀಸ್ ಮಹಾನಿ ರ್ದೇಶಕ(ಡಿಜಿಪಿ) ನಳಿನ್ ಪ್ರಭಾತ್ ಜಂಟಿ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದ್ದಾರೆ.

ಉಗ್ರರ ಮನೆಗಳ ಶೋಧ

ಇನ್ನೊಂದೆಡೆ ಕಿಶ್ತ್ವಾರ್ ಜಿಲ್ಲೆಯಲ್ಲಿ ಶನಿವಾರ ಜಮ್ಮು- ಕಾಶ್ಮೀರ ಪೊಲೀಸರು ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕ ಮೊಹಮ್ಮದ್ ಅಮೀನ್ ಭಟ್ ಅಲಿಯಾಸ್ 'ಜೆಹಾಂಗೀರ್ ಸರೂರಿ' ಕುಟುಂಬದವರ ಮನೆ ಸೇರಿದಂತೆ 26 ಮನೆಗಳ ಮೇಲೆ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದ್ದಾರೆ. ಮತ್ತೊಂದೆಡೆ, ದೋಡಾ ಜಿಲ್ಲೆಯಲ್ಲಿಯೂ 15 ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ಗಡಿಯಾಚೆಯಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಕಳ್ಳಸಾಗಣೆಯಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಶೋಧ ಕಾರ್ಯ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೊಹಮ್ಮದ್ ಅಮೀನ್ ಭಟ್ 1990ರ ದಶಕದಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆ ಸೇರಿದ.

ಆಪರೇಷನ್ ಅಖಲ್ 9ನೇ ದಿನಕ್ಕೆ!

ಆಪರೇಷನ್ ಅಖಲ್ ಶನಿವಾರಕ್ಕೆ 9ನೇ ದಿನಕ್ಕೆ ಕಾಲಿ ಟ್ಟಿದೆ. 2023ರ ಸೆಪ್ಟೆಂಬರ್ ನಂತರದಲ್ಲಿ ಕಾಶ್ಮೀರ ದಲ್ಲಿ ನಡೆಯುತ್ತಿರುವ ಸುದೀರ್ಘ ಭಯೋತ್ಪಾದಕ ಧಮನ ಕಾರ್ಯಾಚರಣೆ ಇದಾಗಿದೆ. 2023ರ ಸೆಪ್ಟೆಂಬರ್‌ನಲ್ಲಿ ದಕ್ಷಿಣ ಕಾಶ್ಮೀರದ ಕೊಕರ್‌ನಾಗ್‌ನ ದಟ್ಟ ಅರಣ್ಯದಲ್ಲಿ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ 7 ದಿನಗಳ ಕಾಲ ಗುಂಡಿನ ಚಕಮಕಿ ನಡೆದಿತ್ತು. ಲಷ್ಕರ್ ಎ ತಯ್ಯಬಾ ಉಗ್ರರನ್ನು ಹೊಡೆದುರುಳಿಸಲಾಗಿತ್ತು. 19 ರಾಷ್ಟ್ರೀಯ ರೈಫಲ್ಸ್‌ನ ಕಮಾಂಡಿಂಗ್ ಆಫೀಸರ್, ಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಸೇರಿದಂತೆ ನಾಲ್ವರು ಭದ್ರತಾ ಸಿಬ್ಬಂದಿ ಹುತಾತ್ಮರಾದರು.

ವರಿಷ್ಠರ ನಡೆಗೆ ಟೀಕೆ: ಬಿಜೆಪಿ ವಕ್ತಾರ ಹೊರಕ್ಕೆ

ದೆಹಲಿ: ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರನ್ನು ಪಕ್ಷ ನಡೆಸಿಕೊಂಡ ರೀತಿಗೆ ಆಕ್ರೋಶ ವ್ಯಕ್ತಪಡಿಸಿದ್ದ ಬಿಜೆಪಿ ರಾಜಸ್ಥಾನ ಘಟಕದ ವಕ್ತಾರ ಕೃಷ್ಣ ಕುಮಾರ್ ಜಾನು ಅವರನ್ನು ಪಕ್ಷದಿಂದ 6 ವರ್ಷ ಕಾಲ ಉಚ್ಚಾಟಿಸಲಾಗಿದೆ.

ಜುಂಝುನ್ ಜಿಲ್ಲೆ ಬಿಜೆಪಿ ಘಟಕದ ಅಧ್ಯಕ್ಷೆ ಹರ್ಷಿನಿ ಕುಲ್ಹಾರಿ ನೇಮಕವನ್ನು ಜಾನು ಪ್ರಶ್ನಿಸಿದ್ದರು. ಬಳಿಕ, ಸೆಲ್ಫಿ ವಿಡಿಯೊ ಮಾಡಿ ಸತ್ಯಪಾಲ್ ಮಲಿಕ್ ಅವರ ಅಂತ್ಯಕ್ರಿಯೆ ಮತ್ತು ಉಪಾಧ್ಯಕ್ಷ ಜಗದೀಪ್ ಧನಕರ್ ಅವರಿಗೆ ಗೌರವಯುತ ವಿದಾಯಕ್ಕೆ ಸರಕಾರ ಮನಸ್ಸು ಮಾಡದೇ ಇರುವ ಬಗೆಗೆ ಪ್ರಶ್ನೆಮಾಡಿದ್ದಾರೆ. ಜನಪ್ರಿಯ ನಾಯಕರಿಗೆ ಅನ್ಯಾಯವಾಗಿದೆ. ಬಿಜೆಪಿಯಲ್ಲಿನ ಜಾಟ್ ನಾಯಕರು ಇದರ' ವಿರುದ್ಧ ಧ್ವನಿ ಎತ್ತಬೇಕು ಎಂದು ಒತ್ತಾಯಿಸಿದ್ದರು. ಜಾನು ಅಶಿಸ್ತು ತೋರಿಸಿ ದ್ದಾರೆ. ಪಕ್ಷದ ಶೋಕಾಸ್ ನೋಟಿಸ್‌ಗೆ ಉತ್ತರಿ ಸಿಲ್ಲ ಎಂದಿರುವ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಅಂಕುರ್ ಸಿಂಗ್ ಲಖವತ್ ಉಚ್ಚಾಟನೆ ಆದೇಶ ಹೊರಡಿಸಿದ್ದಾರೆ.

ಐಸಿಐಸಿಐ ಕನಿಷ್ಠ ಶಿಲ್ಕು 50,000 ರು.ಗೆ ಏರಿಕೆ!

ಮುಂಬೈ: ದೇಶದ ಖಾಸಗಿ ವಲಯದಲ್ಲಿನ 2ನೇ ಅತಿದೊಡ್ಡ ಬ್ಯಾಂಕ್ ಎನಿಸಿಕೊಂಡಿರುವ 'ಐಸಿಐಸಿಐ ಬ್ಯಾಂಕ್' ಗ್ರಾಹಕರ ಮೇಲೆ ಹೊಸದೊಂದು ಹೊರೆ ಹಾಕಿದೆ. ಉಳಿತಾಯ ಖಾತೆಯಲ್ಲಿ(ಎಸ್‌ಬಿ) ಮಾಸಿಕ ಸರಾಸರಿ ಕನಿಷ್ಠ ಬ್ಯಾಲೆನ್ಸ್(ಶಿಲ್ಕು) ಕಡ್ಡಾಯವಾಗಿ ಉಳಿಸಬೇಕಾದ ಮೊತ್ತವನ್ನು 5 ಪಟ್ಟು ಹೆಚ್ಚಳ ಮಾಡಿದೆ. ಆದರೆ, ಆಗಸ್ಟ್‌ನಲ್ಲಿ ವೇತನದಾರ ಅಲ್ಲದವರು ತೆರೆಯುವ ಹೊಸ ಉಳಿತಾಯ ಖಾತೆಗಳಿಗೆ ಮಾತ್ರ ಈ ನಿಯಮ ಅನ್ವಯ ಎಂದು ಹೇಳಿದೆ.

ಮಹಾನಗರಗಳ ಶಾಖೆಗಳಲ್ಲಿ 10,000 ರು.ಗಳಷ್ಟಿದ್ದ ಕನಿಷ್ಠ ಶಿಲ್ಕು ಮೊತ್ತವನ್ನು ಆಗಸ್ಟ್‌ನಿಂದ ಅನ್ವಯವಾಗುವಂತೆ ಏರಿಕೆ ಮಾಡಲಾಗಿದೆ. ಇತರೆ ನಗರಗಳಲ್ಲಿದ್ದ 5,000 ರು. ಕನಿಷ್ಠ ಶಿಲ್ಕು ಪ್ರಮಾಣವನ್ನು 25,000 ರು.ಗಳಿಗೆ, ಗ್ರಾಮೀಣ ಶಾಖೆಗಳಲ್ಲಿ ಹೊಸ ಉಳಿತಾಯ ಖಾತೆಗೆ 2,500 ರು. ಕನಿಷ್ಠ ಶಿಲ್ಕು ಮೊತ್ತವನ್ನು 10 ಸಾವಿರ ರು.ಗೆ ಏರಿಸಲಾಗಿದೆ.

ತಿಂಗಳಲ್ಲಿ ಕನಿಷ್ಠ ಸರಾಸರಿ ಶಿಲ್ಕು ನಿರ್ವಹಣೆ ಮಾಡದೇ ಇದ್ದರೆ ಕೊರತೆ ಮೊತ್ತಕ್ಕೆ ಶೇ.6 ಅಥವಾ 500 ರು.(ಯಾವುದು ಕಡಿಮೆಯೋ ಅದು) ದಂಡ ವಿಧಿಸಲಾಗುತ್ತದೆ ಎಂದೂ ಬ್ಯಾಂಕ್ ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆ.

ರಾಜೀನಾಮೆ ನೀಡಿ: ರಾಹುಲ್‌ಗೆ ಸವಾಲು

ದೆಹಲಿ: ಭಾರತದ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಹಲವು ದೇಶಗಳೇ ಶ್ಲಾಘಿಸಿವೆ. ಅಂತಹ ಆಯೋಗದ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿನಾಕಾರಣ ಆರೋಪ ಹೊರಿಸು ತ್ತಿದ್ದಾರೆ. ಒಂದೊಮ್ಮೆ ಅವರಿಗೆ ಚುನಾವಣಾ ಆಯೋಗದ ಕ್ರಮ ಗಳ ಮೇಲೆ ನಂಬಿಕೆ ಇಲ್ಲದೇ ಇದ್ದರೆ, ಅದೇ ಚುನಾವಣಾ ಆಯೋಗ ನಡೆಸಿದ ಚುನಾ ವಣೆಯಲ್ಲಿಯೇ ಆಯ್ಕೆಯಾಗಿರುವ ಲೋಕಸಭಾ ಸ್ಥಾನಕ್ಕೆ ರಾಹುಲ್ ಗಾಂಧಿ ರಾಜೀನಾಮೆ ನೀಡಲಿ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯ ಶನಿವಾರ ಸವಾಲೆಸೆದಿದ್ದಾರೆ.ಸುಮ್ಮನೇ ಆರೋಪ ಮಾಡುವ ಬದಲು ಚುನಾವಣಾ ಆಯೋಗ ಹೇಳುವಂತೆ ಸಾಕ್ಷ್ಯಗಳನ್ನು ಸಲ್ಲಿಸಲಿ. ಎಲ್ಲೆಲ್ಲಿ ಅಕ್ರಮವಾಗಿದೆ, ಎಲ್ಲಿ ಮತ ಕಳವು ನಡೆ ದಿದೆ ಎಂದು ಆಯೋಗಕ್ಕೆ ಲಿಖಿತ ದೂರು ನೀಡಲಿ. ಇಲ್ಲವೇ, ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲಿ. ಅದೆಲ್ಲವನ್ನೂ ಮಾಡು ವುದಕ್ಕೆ ಬದಲಾಗಿ ಸುಮ್ಮನೇ ಸುದ್ದಿ ಗೋಷ್ಠಿಗಳಲ್ಲಿ, ಸಾರ್ವ ಜನಿಕ ಸಭೆಗಳಲ್ಲಿ ಆರೋಪ ಮಾಡುತ್ತಾ ಹೋಗುವುದು ಸರಿಯಲ್ಲ ಎಂದು ರಾಹುಲ್‌ಗೆ ಗೌರವ್ ಭಾಟಿಯ ಮಾತಿನಲ್ಲೆ ತಿವಿದಿದ್ದಾರೆ.

'ಎಂ' ಫಾರ್ ಮಸ್ಜಿದ್, ಕೆ ಫಾರ್ ಕಾಬಾ: ಪಾಠ

ಭೋಪಾಲ್: ಮಧ್ಯಪ್ರದೇಶದ ರೈಸನ್ ಜಿಲ್ಲೆಯ ಕಾನ್ವೆಂಟ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲೆಂದು ಇಸ್ಲಾಂ ಧರ್ಮದ ಪದಗಳ ಉಲ್ಲೇಖದ ವರ್ಣಮಾಲೆ ಚಾರ್ಟ್ ವಿತರಿಸಿರುವ ಆರೋಪ ಕೇಳಿಬಂದಿದೆ.

ಶಾಲೆಯ ಮುಖ್ಯೋಪಾಧ್ಯಾಯ ಐಎ ಖುರೇಷಿ, ಈ ಹಿಂದಿ ವರ್ಣಮಾಲೆ ಚಾರ್ಟ್‌ಗಳನ್ನು ಶಾಲೆಯಲ್ಲಿ ವಿತರಿಸಿ ದ್ದಾರೆ. ಚಾರ್ಟ್‌ನಲ್ಲಿ 'ಕೆ' ವರ್ಣಮಾಲೆಗೆ 'ಕಾಬಾ' ಎಂಬ ಪದವನ್ನೂ 'ಎಂ' ಅಕ್ಷರಕ್ಕೆ 'ಮಸೀದಿ' ಮತ್ತು 'ಎನ್'ಗೆ 'ನಮಾಜ್' ಎಂಬ ಪದಗಳನ್ನು ಚಿತ್ರ ಸಮೇತ ಬಳಸಲಾಗಿದೆ. ಈ ವಿಚಾರ ಬಹಿರಂಗಗೊಂಡು ವಿವಾದ ಭುಗಿಲೇಳುತ್ತಿದ್ದಂತೆಯೇ ರಾಜ್ಯ ಶಿಕ್ಷಣ ಇಲಾಖೆ ತನಿಖೆ ಆರಂಭಿಸಿದೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸದಸ್ಯರು ಶಾಲೆ ಎದುರು ಪ್ರತಿಭಟನೆ ನಡೆಸಿ ಖುರೇಷಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರಾಂಶುಪಾಲ ಖುರೇಷಿ ತಪ್ಪೊಪ್ಪಿಕೊಂಡಿದ್ದಾರೆ. ವರ್ಣಮಾಲೆ ಚಾರ್ಟ್‌ಗಳನ್ನು ಭೋಪಾಲ್‌ನಿಂದ ತರಿಸಲಾಗಿದೆ. ಮಾರಾಟಗಾರರ ತಪ್ಪಿನಿಂದ ಹೀಗಾಗಿದೆ ಎಂದು ಸಮಜಾಯಿಸಿ ನೀಡಿದ್ದಾರೆ. ಶಿಕ್ಷಣ ಇಲಾಖೆಯ ಮಾರ್ಗಸೂಚಿ ಪ್ರಕಾರ ಧಾರ್ಮಿಕ ಚಿಹ್ನೆಗಳಿರುವ ಅಧ್ಯಯನ ಸಾಮಗ್ರಿಗಳನ್ನು ಶಾಲೆಗಳಲ್ಲಿ ಬಳಸುವಂತಿಲ್ಲ. ಈಗ ಕೇಳಿಬಂದಿರುವ ಆರೋಪ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಡಿಇಒ ಡಿ.ಡಿ.ರಜಾಕ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸ್ಪರ್ಧೆಯಿಂದ ಹಿಂದೆ ಸರಿದ ಪೌಲಾ ಬಡೋಸಾ

ನ್ಯೂಯಾರ್ಕ್: ಮಾಜಿ ನಂ.2 ಆಟಗಾರ್ತಿ, ಸ್ಪೇನ್‌ನ ಪೌಲಾ ಬಡೋಸಾ ಬೆನ್ನುನೋವಿನಿಂದ ಚೇತರಿಸಿಕೊಳ್ಳದ ಕಾರಣ ವರ್ಷಾಂತ್ಯದ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಪಂದ್ಯಾವಳಿ ಹಿಂದೆ ಸರಿಯಲು ನಿರ್ಧರಿಸಿದ್ದಾರೆ. ಬಡೋಸಾ ಹಿಂದೆ ಸರಿದ ಕಾರಣ ಸ್ವಿಟ್ಜರ್ಲೆಂಡ್‌ನ ಜಿಲ್ ಟೀಚ್‌ಮನ್ ಆಗಸ್ಟ್ 24ರಂದು ಪ್ರಾರಂಭವಾಗುವ ಯುಎಸ್ ಓಪನ್‌ನ ಮುಖ್ಯ ಸುತ್ತಿಗೆ ಪ್ರವೇಶಿಸಲಿದ್ದಾರೆ. ಕಳೆದ ಕೆಲವು ತಿಂಗಳಿನಿಂದ ಬೆನ್ನು ನೋವಿನಿಂದ ಬಳಲುತ್ತಿರುವ ಬಡೋಸಾ ಕೊನೆಯ ಬಾರಿಗೆ ವಿಂಬಲ್ಡನ್‌ನಲ್ಲಿ ಆಡಿದ್ದರು. ಅಲ್ಲಿ ಅವರು ಮೊದಲ ಸುತ್ತಿನ ಸೋಲನ್ನು ಅನುಭವಿಸಿದರು. ಬಡೋಸಾ ಬ್ರಿಟನ್‌ನ ಜ್ಯಾಕ್ ಡ್ರೇಪರ್ ಅವರೊಂದಿಗೆ ಟೂರ್ನಮೆಂಟ್‌ನ ಮಿಶ್ರ ಡಬಲ್ಸ್ ಸ್ಪರ್ಧೆಯಿಂದಲೂ ಹಿಂದೆ ಸರಿಯಬೇಕಾಯಿತು. ವಿಶ್ವದ ಅಗ್ರಮಾನ್ಯ ಟೆನಿಸಿಗರ ಅಖಾಡವಾಗಿರುವ ಯುಎಸ್ ಓಪನ್ ಯುಎಸ್ ಓಪನ್ ಆಗಸ್ಟ್ 24ರಂದು ನ್ಯೂಯಾರ್ಕ್‌ನಲ್ಲಿ ಆರಂಭವಾಗಲಿದೆ. ವಿಶ್ವ ನಂ.1 ಟೆನಿಸ್ ಆಟಗಾರ ಜಾನಿಕ್ ಸಿನ್ನರ್, ಕಾರ್ಲೊಸ್ ಅಲ್ಕರಾಜ್, ಸಬಲೆಂಕಾ, ಜೋಕೊ, ಸ್ವಿಯಾಟೆಕ್ ಮತ್ತು ಕೊಕೊ ಗಾಫ್ ಈ ಬಾರಿಯ ನೆಚ್ಚಿನ ಆಟಗಾರರಾಗಿ ಕಾಣಿಸಿಕೊಂಡಿದ್ದಾರೆ.

ಮತ್ತೆ ಅಭ್ಯಾಸಕ್ಕಿಳಿದ ಸೂರ್ಯಕುಮಾರ್

ಬೆಂಗಳೂರು: ಜೂನ್‌ನಲ್ಲಿ ಕ್ರೀಡಾ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ಇದೇ ಮೊದಲ ಬಾರಿಗೆ ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಸಂಪೂರ್ಣವಾಗಿ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸವನ್ನು ನಡೆಸಿದ್ದಾರೆ. ಇದು ಏಷ್ಯಾ ಕಪ್ ಆರಂಭಕ್ಕೂ ಮುನ್ನ ಭಾರತ ತಂಡ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿದೆ. ಬೆಂಗಳೂರಿನ ಎನ್‌ಸಿಎಯಲ್ಲಿ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿರುವ ವೀಡಿಯೊವನ್ನು ಸೂರ್ಯಕುಮಾರ್ ಹಂಚಿಕೊಂಡಿದ್ದಾರೆ. ನಾನು ಇಷ್ಟಪಡುವದನ್ನು ಮಾಡಲು ಹಿಂತಿರುಗಲು ಕಾಯಲು ಸಾಧ್ಯವಿಲ್ಲ ಎಂದು ಅವರು ವೀಡಿಯೊಗೆ ಶೀರ್ಷಿಕೆ ನೀಡಿದ್ದಾರೆ. ಜೂನ್ 25ರಂದು ಗಾಯಗೊಂಡಿದ್ದ ಸೂರ್ಯಕುಮಾರ್ ಆ ಬಳಿಕ ಜರ್ಮನಿಯ ಮ್ಯೂನಿಚ್‌ಗೆ ಹೋಗಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಬಳಿಕ ಪುನರ್ವಸತಿ ಮತ್ತು ಫಿಟ್ನೆಸ್ ಮೌಲ್ಯಮಾಪನಕ್ಕಾಗಿ ಎನ್‌ಸಿಎಯಲ್ಲಿದ್ದರು. ಇದೀಗ ಮೈದಾನಕ್ಕಿಳಿದು ಬ್ಯಾಟಿಂಗ್ ಅಭ್ಯಾಸ ಆರಂಭಿಸಿದ್ದಾರೆ. ಏಷ್ಯಾ ಕಪ್ ಸೆಪ್ಟೆಂಬರ್ 9ರಿಂದ ಯುಎಇಯಲ್ಲಿ ನಡೆಯಲಿದ್ದು, ಆರಂಭಿಕ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡವು ಹಾಂಗ್ ಕಾಂಗ್ ವಿರುದ್ಧ ಸೆಣಸಲಿದೆ. ಭಾರತ ಸೆಪ್ಟೆಂಬರ್ 10ರಂದು ಯುಎಇ ವಿರುದ್ಧ ತನ್ನ ಅಭಿಯಾನವನ್ನು ಆರಂಭಿಸಲಿದೆ. ಭಾರತ ತಂಡವನ್ನು ಸೂರ್ಯಕುಮಾರ್ ಮುನ್ನಡೆಸಲಿದ್ದಾರೆ.

ದುಲೀಪ್ ಟ್ರೋಫಿ: ಆಗಸ್ಟ್-28ರಿಂದ ದೇಶೀಯ ಟೂರ್ನಿ ಆರಂಭ

ವಲಯ ತಂಡಗಳು ಸಜ್ಜು

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನ ಹೊಸ ದೇಶೀಯ ಋತುವನ್ನು ಆಗಸ್ಟ್- 28ರಿಂದ ಆರಂಭವಾಗಲಿರುವ ದುಲೀಪ್ ಟ್ರೋಫಿಯೊಂದಿಗೆ ಆರಂಭಿಸಲು ಸಜ್ಜಾಗಿದ್ದು, ಟೂರ್ನಿಯು ಮತ್ತೆ ಅಂತರ ವಲಯ ತಂಡಗಳ ಮಾದರಿಯಲ್ಲಿ ಈ ಬಾರಿ ನಡೆಯಲಿದೆ. ಇದರೊಂದಿಗೆ ತನ್ನ ಹಳೆಯ ಸಾಂಪ್ರದಾಯಿಕ ಮಾದರಿಗೆ ದುಲೀಪ್ ಟ್ರೋಫಿ ಟೂರ್ನಿಯು ಮರಳಲಿದ್ದು, ಒಟ್ಟು 6 ವಲಯ ತಂಡಗಳು ಈ ಋತುವಿನಲ್ಲಿ ಮೈದಾನಕ್ಕಿಳಿಯಲಿವೆ.

ಕಳೆದ ವರ್ಷ ದುಲೀಪ್ ಟ್ರೋಫಿಯನ್ನು ಚಾಲೆಂಜರ್ ಟ್ರೋಫಿ ಮಾದರಿಯಲ್ಲಿ ನಡೆಸಲಾಗಿತ್ತು. ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರನ್ನು ಆಯ್ಕೆ ಮಾಡಿ ಎ, ಬಿ, ಸಿ ಮತ್ತು ಡಿ ತಂಡಗಳನ್ನಾಗಿ ವರ್ಗೀಕರಿಸಲಾಗಿತ್ತು. ಆದರೆ ಈ ವರ್ಷ ಮತ್ತೆ ಹಳೆಯ ಫಾರ್ಮೆಟ್‌ಗೆ ಟೂರ್ನಿಯು ಮರಳಿರುವ ಕಾರಣ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಕೇಂದ್ರ ಮತ್ತು ಈಶಾನ್ಯ ವಲಯ ತಂಡಗಳು ಈ ಸಲದ ಪಂದ್ಯಾವಳಿಯಲ್ಲಿ ಮೈದಾನಕ್ಕಿಳಿಯಲಿವೆ. 1961-62ರಿಂದ 2014-15ರ ವರೆಗಿನ ಅವಧಿಯಲ್ಲಿ ದುಲೀಪ್ ಟ್ರೋಫಿ ಟೂರ್ನಿಯು ಅಂತರ ವಲಯ ಟೂರ್ನಿ ಮಾದರಿಯಲ್ಲಿ ನಡೆದಿತ್ತು. ಎಲ್ಲಾ ರಾಜ್ಯದವರಿಗೂ ಪ್ರಾತಿನಿಧ್ಯ ಸಿಗಬೇಕು ಎಂಬ ಉದ್ದೇಶದಿಂದ ವಲಯವಾರು ತಂಡಗಳ ಮಾದರಿಗೆ ಮರಳಲು ಬಿಸಿಸಿಐ ನಿರ್ಧರಿಸಿದೆ.

ಈ ಸಲದ ಟೂರ್ನಿಯ ಮಾದರಿ: ಈ ಬಾರಿ ನಾಕೌಟ್‌ಗಳ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ. ಹಿಂದಿನ ವಲಯ ಆವೃತ್ತಿಯ (2023) ಫೈನಲಿಸ್ಟ್‌ಗಳಾದ ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ ನೇರವಾಗಿ ಸೆಮಿಫೈನಲ್ ಪಂದ್ಯವನ್ನು ಆಡಲಿವೆ. ಇತರ ನಾಲ್ಕು ತಂಡಗಳಾದ ಮಧ್ಯ ವಲಯ, ಪೂರ್ವ, ಉತ್ತರ ಮತ್ತು ಈಶಾನ್ಯ ತಂಡಗಳು ಈ ಬಾರಿಯ ದುಲೀಪ್ ಟ್ರೋಫಿ ಕ್ವಾರ್ಟರ್ ಫೈನಲ್ ಸುತ್ತಿನಲ್ಲಿ ಆಡಲಿವೆ.

ಆವೃತ್ತಿಯ ನಾಯಕರು: ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಈ ಸಲ ಉತ್ತರ ವಲಯವನ್ನು ಶುಭಮನ್ ಗಿಲ್ ನಾಯಕರಾಗಿ ಮುನ್ನಡೆಸಲಿದ್ದಾರೆ. ಪಶ್ಚಿಮ ವಲಯಕ್ಕೆ ಶಾರ್ದೂಲ್ ಠಾಕೂರ್ ನಾಯಕರಾಗಿದ್ದಾರೆ. ದಕ್ಷಿಣ ವಲಯದ ಸಾರಥ್ಯವನ್ನು ತಿಲಕ್ ವರ್ಮಾ ವಹಿಸಿಕೊಳ್ಳಲಿದ್ದಾರೆ. ಪೂರ್ವ ವಲಯವನ್ನು ಇಶಾನ್ ಕಿಶನ್ ಮುನ್ನಡೆಸಲಿದ್ದು, ಕೇಂದ್ರ ವಲಯದ ನಾಯಕರಾಗಿ ಧ್ರುವ ಜುರೇಲ್ ಆಯ್ಕೆಯಾಗಿದ್ದಾರೆ.

ದುಲೀಪ್ ಟ್ರೋಫಿ ವೇಳಾಪಟ್ಟಿ

- **ಕ್ವಾರ್ಟರ್ ಫೈನಲ್-1: ಆಗಸ್ಟ್ 28-31**
  ಉತ್ತರ ವಲಯ-ಪೂರ್ವ ವಲಯ
- **ಕ್ವಾರ್ಟರ್ ಫೈನಲ್-2: ಆಗಸ್ಟ್ 28-31**
  ಮಧ್ಯ ವಲಯ -ಈಶಾನ್ಯ ವಲಯ
- **ಸೆಮಿ ಫೈನಲ್-1: ಸೆಪ್ಟೆಂಬರ್ 4-7**
  ದಕ್ಷಿಣ ವಲಯ-ಕ್ವಾ.ಫೈನಲ್ ವಿಜೇತರು-1
- **ಸೆಮಿ ಫೈನಲ್-2: ಸೆಪ್ಟೆಂಬರ್: 4-7**
  ಉತ್ತರ ವಲಯ-ಕ್ವಾ. ಫೈನಲ್ ವಿಜೇತರು-2
- **ಫೈನಲ್ ಪಂದ್ಯ: ಸೆಪ್ಟೆಂಬರ್ 11-15**
  ಸೆಮಿ ಫೈನಲ್ ವಿಜೇತರು: 1-ಸೆಮಿ ಫೈನಲ್ ವಿಜೇತರು: 2

ನ್ಯೂಜಿಲೆಂಡ್‌ಗೆ ಸರಣಿ ಜಯ

ಲವಾಯೊ: ಇಲ್ಲಿನ ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಆತಿಥೇಯ ಜಿಂಬಾಬ್ವೆ ಹಾಗೂ ನ್ಯೂಜಿಲೆಂಡ್ ನಡುವಿನ ಎರಡು ಪಂದ್ಯಗಳ ಎರಡನೇ ಟೆಸ್ಟ್ ಪಂದ್ಯವನ್ನು ಕಿವೀಸ್ ಪಡೆ ಕೇವಲ ಮೂರೇ ದಿನಗಳಲ್ಲಿ ಗೆದ್ದುಕೊಂಡಿದೆ. ಇದರೊಂದಿಗೆ ಸರಣಿಯನ್ನು 2-0 ಅಂತರದಿಂದ ವಶಪಡಿಸಿಕೊಂಡಿದೆ.

ನ್ಯೂಜಿಲೆಂಡ್ ಪರ ಚೊಚ್ಚಲ ಟೆಸ್ಟ್ ಪಂದ್ಯವನ್ನಾಡಿದ ಯುವ ವೇಗಿ ಜಕಾರಿ ಫಾಕ್ಸ್ ದಾಳಿಗೆ ನಲುಗಿದ ಜಿಂಬಾಬ್ವೆ ತನ್ನ 2ನೇ ಇನ್ನಿಂಗ್ಸ್‌ನಲ್ಲಿ ಕೇವಲ 117 ರನ್‌ಗಳಿಗೆ ಆಲೌಟ್ ಆಯಿತು, ಆ ಮೂಲಕ ಕಿವೀಸ್ ಎರಡನೇ ಟೆಸ್ಟ್ ಪಂದ್ಯವನ್ನು ಇನ್ನಿಂಗ್ಸ್ ಮತ್ತು 359 ರನ್‌ಗಳ ಭಾರೀ ಅಂತರದಿಂದ ಗೆದ್ದುಕೊಂಡಿತು. ಇದು ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಇನ್ನಿಂಗ್ಸ್ ಮತ್ತು ರನ್ ಅಂತರದ ಮೂರನೇ ಅತೀ ದೊಡ್ಡ ಗೆಲುವಾಗಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ತಂಡವು ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 125 ರನ್‌ಗಳಿಗೆ ಆಲೌಟ್ ಆಯಿತು. ಬಳಿಕ ನ್ಯೂಜಿಲೆಂಡ್ ಮೊದಲ ಇನ್ನಿಂಗ್ಸ್‌ನಲ್ಲಿ 601 ರನ್‌ಗಳಿಗೆ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಕಿವೀಸ್ ಪರ ಡೆವೊನ್ ಕಾನ್ವೇ, ಹೆನ್ರಿ ನಿಕೋಲ್ಸ್ ಹಾಗೂ ರಚಿನ್ ರವೀಂದ್ರ, ಶತಕದ ಇನ್ನಿಂಗ್ಸ್ ಆಡಿದರು. ಜಕಾರಿ ಫಾಕ್ಸ್ 5 ವಿಕೆಟ್ ಪಡೆದ ಅದ್ಭುತ ಬೌಲಿಂಗ್ ಪ್ರದರ್ಶನದಿಂದಾಗಿ ನ್ಯೂಜಿಲೆಂಡ್ ಸುಲಭ ಜಯ ದಾಖಲಿಸಿತು. ಸರಣಿಯ ಮೊದಲ ಪಂದ್ಯವನ್ನೂ ನ್ಯೂಜಿಲೆಂಡ್ ಗೆದ್ದುಕೊಂಡಿರುವ ಕಾರಣ ಈ ಸರಣಿಯನ್ನು 2-0 ಅಂತರದಿಂದ ಗೆದ್ದಂತಾಯಿತು.

ಮಹಾರಾಜ ಟ್ರೋಫಿಗೆ ಮೈಸೂರು ತಂಡ ಪ್ರಕಟ

ಕರುಣ್‌ಗೆ ಮತ್ತೆ ನಾಯಕ ಪಟ್ಟ

ಮೈಸೂರು: ಭಾರತದ ಪ್ರಮುಖ ಅಗರಬತ್ತಿ ತಯಾರಿಕ ಸಂಸ್ಥೆಯಾದ ಎನ್.ಆರ್. ಗ್ರೂಪ್ ಮಾಲಿಕತ್ವದ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡವು ಮಹಾರಾಜ ಟ್ರೋಫಿ-2025 ಕೆಎಸ್‌ಸಿಎ ಟಿ20 ಟೂರ್ನಿಗೆ ತನ್ನ ತಂಡವನ್ನು ಪ್ರಕಟಿಸಿದೆ. ಭಾರತ ತಂಡದ ಬ್ಯಾಟ್ಸ್‌ಮನ್ ಕರುಣ್ ನಾಯರ್ ಅವರನ್ನು ನಾಯಕನನ್ನಾಗಿ ನೇಮಿಸಲಾಗಿದೆ. ಕರುಣ್ ನಾಯರ್ ಗಾಯದಿಂದ ಬಳಲುತ್ತಿರುವುದರಿಂದ ಅವರು ಆರಂಭಿಕ ಕೆಲ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ, ಆ ಹಿನ್ನೆಲೆಯಲ್ಲಿ ಭಾರತೀಯ ಕ್ರಿಕೆಟ್‌ನ ಹಿರಿಯ ಬ್ಯಾಟ್ಸ್‌ಮನ್ ಮನೀಷ್ ಪಾಂಡೆ ಆರಂಭಿಕ ಕೆಲ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ.

ಅಂತಾರಾಷ್ಟ್ರೀಯ ಮತ್ತು ದೇಶಿ ಕ್ರಿಕೆಟ್ ಆಟಗಾರ ಕರುಣ್ ನಾಯರ್ ಮೈಸೂರು ವಾರಿಯರ್ಸ್ ತಂಡವನ್ನು ಈ ಬಾರಿಯೂ ಚಾಂಪಿಯನ್ ಪಟ್ಟದತ್ತ ಕರೆದೊಯ್ಯುವರೆಂಬ ನಿರೀಕ್ಷೆ ಹೊಂದಲಾಗಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಮತ್ತು ಟಿ20 ಪಂದ್ಯಗಳಲ್ಲಿ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿರುವ ಕರುಣ್, ತಂಡವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಲಿದ್ದಾರೆ ಎಂಬ ಭರವಸೆ ತಂಡದ ಅಭಿಮಾನಿಗಳದ್ದಾಗಿದೆ.

ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರವಾಗಿ ಖ್ಯಾತ ಕ್ರಿಕೆಟಿಗರಾದ ಪ್ರಸಿದ್ಧ್ ಕೃಷ್ಣ, ಮನೀಷ್ ಪಾಂಡೆ ಮತ್ತು ಕೆ. ಗೌತಮ್ ಮುಂತಾದವರು ಆಡಲಿದ್ದಾರೆ. ಮಹಾರಾಜ ಟ್ರೋಫಿ ಟೂರ್ನಿಯು ಆಗಸ್ಟ್ 11ರಿಂದ 27ರ ವರೆಗೆ ಮೈಸೂರಿನ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೈದಾನದಲ್ಲಿ ನಡೆಯಲಿದೆ. ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರ್ಯಾಗನ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಈ ಸಲ ಪ್ರಶಸ್ತಿಗಾಗಿ ಕಾದಾಟ ನಡೆಸಲಿವೆ.

ಮೈಸೂರು ವಾರಿಯರ್ಸ್ ತಂಡ: ಕರುಣ್ ನಾಯರ್ (ನಾಯಕ), ಕಾರ್ತಿಕ್ ಸಿ.ಎ, ಪ್ರಸಿದ್ಧ್ ಕೃಷ್ಣ, ಕಾರ್ತಿಕ್ ಎಸ್.ಯು, ಮನೀಶ್ ಪಾಂಡೆ, ಗೌತಮ್. ಕೆ, ಯಶೋವರ್ಧನ್ ಪ್ರತಾಪ್, ವೆಂಕಟೇಶ್. ಎಂ, ಹರ್ಷಿಲ್ ಧರ್ಮನಿ, ಲಂಕೇಶ್ ಕೆ.ಎಸ್, ಕುಮಾರ್ ಎಲ್.ಆರ್, ಗೌತಮ್ ಮಿಶ್ರಾ, ಶಿಖರ್ ಶೆಟ್ಟಿ, ಸುಮಿತ್ ಕುಮಾರ್, ಧನುಷ್ ಗೌಡ, ಕುಶಾಲ್. ಎಂ ವಾಧ್ವನಿ, ಶರತ್ ಶ್ರೀನಿವಾಸ್, ಶಮಂತ್ ಎಸ್. ಎಂ

ಕರುಣ್ ಸಂತಸ

ಮೈಸೂರು ವಾರಿಯರ್ಸ್ ತಂಡದ ನಾಯಕರಾಗಿ ಆಯ್ಕೆಯಾದ ಕರುಣ್ ನಾಯರ್, 'ತಂಡವನ್ನು ಮುನ್ನಡೆಸುವ ಅವಕಾಶ ಮತ್ತೊಮ್ಮೆ ಸಿಕ್ಕಿರುವುದಕ್ಕೆ ಆಭಾರಿಯಾಗಿದ್ದೇನೆ. ನಮ್ಮ ತಂಡವು ಹೊಸ ಪ್ರತಿಭೆಗಳು ಮತ್ತು ಅನುಭವಿ ಆಟಗಾರರ ಬಲವನ್ನು ಹೊಂದಿದೆ. ಅಭಿಮಾನಿಗಳ ಎದುರು ಅತ್ಯುತ್ತಮ ಪ್ರದರ್ಶನವನ್ನು ನೀಡುವ ವಿಶ್ವಾಸ ನನಗಿದೆ' ಎಂದಿದ್ದಾರೆ.

114 ರನ್‌ಗಳಿಂದ ಸೋತ ಟೀಂ ಇಂಡಿಯಾ

3 ಪಂದ್ಯಗಳ ಸರಣಿ | ಭಾರತ ಮಹಿಳಾ-ಎ ತಂಡಕ್ಕೆ 114 ರನ್‌ಗಳ ಹೀನಾಯ ಸೋಲು

ಸಿಡ್ನಿ: ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತ ಮಹಿಳಾ-ಎ ತಂಡದ ಕಳಪೆ ಪ್ರದರ್ಶನ ಮುಂದುವರೆದಿದೆ. ಸತತ ಎರಡನೇ ಪಂದ್ಯದಲ್ಲೂ ರಾಧಾ ಯಾದವ್ ನೇತೃತ್ವದ ಭಾರತ ತಂಡ ಸೋಲನ್ನು ಎದುರಿಸಿತ್ತಲ್ಲದೆ ಸರಣಿಯನ್ನೂ ಕಳೆದುಕೊಂಡಿದೆ.

ಆಸ್ಟ್ರೇಲಿಯಾ ವಿರುದ್ಧ ನಡೆದ ಎರಡನೇ ಅನಧಿಕೃತ ಟಿ20 ಪಂದ್ಯದಲ್ಲಿ ಟೀಂ ಇಂಡಿಯಾದ 9 ಬ್ಯಾಟರ್‌ಗಳು ಒಟ್ಟಾಗಿ ಕೇವಲ 24 ರನ್‌ಗಳನ್ನು ಮಾತ್ರ ಗಳಿಸಿದರು. ಆ ಕಳಪೆ ಬ್ಯಾಟಿಂಗ್‌ನಿಂದಾಗಿ ಭಾರತ 114 ರನ್‌ಗಳ ಹೀನಾಯ ಸೋಲನ್ನು ಎದುರಿಸಬೇಕಾಯಿತು. ಇದಕ್ಕೂ ಮೊದಲು ನಡೆದಿದ್ದ ಮೊದಲ ಟಿ20 ಪಂದ್ಯದಲ್ಲಿ ಭಾರತ-ಎ ಮಹಿಳಾ ತಂಡವು 13 ರನ್‌ಗಳಿಂದ ಸೋಲನ್ನು ಎದುರಿಸಬೇಕಾಯಿತು. ಇದರೊಂದಿಗೆ, ಆಸ್ಟ್ರೇಲಿಯಾ ಮೂರು ಪಂದ್ಯಗಳ ಟಿ20ಐ ಸರಣಿಯಲ್ಲಿ 2-0 ಅಂತರದಿಂದ ಮುನ್ನಡೆ ಸಾಧಿಸಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ-ಎ ಮಹಿಳಾ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 187 ರನ್ ಗಳಿಸಿತು. ಅದಕ್ಕೆ ಉತ್ತರವಾಗಿ, ಇಡೀ ಭಾರತ ತಂಡವು 15.1 ಓವರ್‌ಗಳಲ್ಲಿ 73 ರನ್‌ಗಳಿಗೆ ಆಲೌಟ್ ಆಯಿತು. ಕನ್ನಡತಿ ವೃಂದಾ ದಿನೇಶ್ ತಂಡದ ಪರ ಅತಿ ಹೆಚ್ಚು 21 ರನ್‌ಗಳನ್ನು ಗಳಿಸಿದರು. ಅವರ ಹೊರತಾಗಿ, ಮಿನ್ನು ಮಣಿ 20 ರನ್‌ಗಳ ಇನ್ನಿಂಗ್ಸ್ ಆಡಿದರು, ಆದರೆ ಇನ್ನುಳಿದ ಯಾವುದೇ ಬ್ಯಾಟರ್‌ಗೆ ಎರಡಂಕಿಯನ್ನು ತಲುಪಲು ಸಾಧ್ಯವಾಗಲಿಲ್ಲ. ಆಸ್ಟ್ರೇಲಿಯಾ ಪರ ಕಿಮ್ ಗ್ರಾತ್ 3 ಓವರ್‌ಗಳಲ್ಲಿ ಕೇವಲ 7 ರನ್‌ಗಳನ್ನು ನೀಡಿ 4 ವಿಕೆಟ್ ಗಳಿಸಿದರೆ, ಆಮಿ ಅಗರ್ ಮತ್ತು ಟೆಸ್ ಫ್ಲಿಂಟಾಫ್ ತಲಾ ಎರಡು ವಿಕೆಟ್‌ಗಳನ್ನು ಪಡೆದರು.

ವಿಟಾಕೀಸ್

ಟೀಸರ್‌ನಲ್ಲೇ ಗಮನಸೆಳೆದ ಸೂರಿ ಅಣ್ಣ

ಚಂದನವನದಲ್ಲಿ ಸಲಗ ಸಖತ್ ಸದ್ದು ಮಾಡಿತ್ತು. ಈ ಚಿತ್ರದಲ್ಲಿ ಸೂರಿ ಅಣ್ಣ ಪ್ರಮುಖ ಪಾತ್ರವಾಗಿತ್ತು. ಈಗ ಸೂರಿ ಅಣ್ಣ ಶೀರ್ಷಿಕೆಯಲ್ಲಿಯೇ ಸಿನಿಮಾ ಸೆಟ್ಟೇರಿದ್ದು, ಸೂರಿ ಅಣ್ಣ ಅಂತಲೇ ಖ್ಯಾತಿ ಪಡೆದಿರುವ ದಿನೇಶ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದು, ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸದ್ಯ ಸೂರಿ ಅಣ್ಣನ ಟೀಸರ್ ಬಿಡುಗಡೆಯಾಗಿದ್ದು ಸಿನಿಪ್ರಿಯರನ್ನು ಸೆಳೆದಿದೆ. ನಿವೃತ್ತ ಪೊಲೀಸ್ ಅಧಿಕಾರಿ ಉಮೇಶ್, ಲಹರಿ ವೇಲು ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸೂರಿ ಅಣ್ಣ ಮಾಸ್ ಆಗಿ ಮೂಡಿಬಂದಿದ್ದು, ಲವ್ ಸೆಂಟಿಮೆಂಟ್, ಆ್ಯಕ್ಷನ್ ಕೂಡ ಬೆರೆತಿದೆ.

ಸಂಭ್ರಮಶ್ರೀ ನಾಯಕಿಯಾಗಿ ಬಣ್ಣಹಚ್ಚಿದ್ದು, ರವಿ ಕಾಳೆ, ಹರೀಶ್ ರಾಯ್, ಕಾಕ್ರೋಜ್ ಸುಧಿ, ಪ್ರಕಾಶ್ ತುಮಿನಾಡು, ಎಸ್.ಕೆ.ಉಮೇಶ್, ಬೆನಕ ನಂಜಪ್ಪ, ಯಶಸ್ವಿನಿ ಗೌಡ, ಬೇಬಿ ಮರಿಶಾ, ಪ್ರವೀಣ್ ರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಎಂ.ಬಿ.ಅಳಿಕಟ್ಟಿ ಛಾಯಾಗ್ರಹಣ, ಎನ್.ಎಂ.ವಿಶ್ವ ಸಂಕಲನ, ಎನ್.ರಾಜ್ ನೃತ್ಯ ನಿರ್ದೇಶನ, ವಿಶ್ವ ಕಲಾ ನಿರ್ದೇಶನ ಹಾಗೂ ಜಾಗ್ವಾರ್ ಸಣ್ಣಪ್ಪ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಕೆ.ಎಂ.ಇಂದ್ರ ಸಂಗೀತ ಸಂಯೋಜಿಸಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಸೂರಿ ಅಣ್ಣ ಅಕ್ಟೋಬರ್‌ನಲ್ಲಿ ತೆರೆಗೆ ಬರಲಿದೆ.

ಈ ಹಿಂದೆ ರೌಡಿಸಂ ಕಥೆ ಆಧರಿಸಿದ ಓಂ ಚಿತ್ರ ಭರ್ಜರಿ ಯಶಸ್ಸು ಕಂಡಿತ್ತು. ಸೂರಿ ಅಣ್ಣ ಕೂಡ ರೌಡಿಸಂ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಆದರೆ ಯಾರು ರೌಡಿಸಂ ಮಾಡಬೇಡಿ, ಎಲ್ಲರಿಗೂ ಕುಟುಂಬ ಇರುತ್ತದೆ. ಕುಟುಂಬವೇ ಎಲ್ಲದಕ್ಕಿಂತ ಮುಖ್ಯ ಎಂಬ ಉತ್ತಮ ಸಂದೇಶವನ್ನು ಚಿತ್ರದಲ್ಲಿ ಹೇಳಲಾಗಿದೆ. ಸಲಗ ಚಿತ್ರದ ನಂತರ ನನ್ನನ್ನು ಸೂರಿ ಅಣ್ಣ ಎಂದೇ ಗುರುತಿಸುತ್ತಾರೆ. ನಾನೇ ಈ ಚಿತ್ರವನ್ನು ನಿರ್ದೇಶಿಸಿ, ನಿರ್ಮಾಣ ಮಾಡಿದ್ದೇನೆ, ನಾನೇ ನಾಯಕನಾಗಿ ನಟಿಸಿದ್ದೇನೆ.

-ದಿನೇಶ್ ನಿರ್ದೇಶಕ

ನಿರ್ಮಾಣದತ್ತ ಕಮಲ್ ರಾಜ್

ದಿ ಸೂಟ್ ಚಿತ್ರದಲ್ಲಿ ನಟಿಸಿದ್ದ ಕಮಲ್ ರಾಜ್ ಈಗ ಸಿನಿಮಾ ನಿರ್ಮಾಣದತ್ತಲೂ ಒಲವು ತಾಳಿದ್ದು, ಒಟ್ಟಿಗೆ ಮೂರು ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಮೂರು ಸಿನಿಮಾಗಳ ಟೈಟಲ್ ಪೋಸ್ಟರ್ ರಿಲೀಸ್ ಆಗಿವೆ. ಮೊಹಬ್ಬತ್ ಜಿಂದಾಬಾದ್, ಟಾಸ್ಕ್ ಹಾಗೂ ನಾಳೆ ನಮ್ಮ ಭರವಸೆ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರಲಿವೆ. ಕಮಲ್ ಈ ಚಿತ್ರಗಳನ್ನು ನಿರ್ಮಾಣ ಮಾಡುವ ಜತೆಗೆ ನಾಯಕನಾಗಿಯೂ ಅಭಿನಯಿಸುತ್ತಿದ್ದಾರೆ. ಈ ಹಿಂದೆ ದಿ ಸೂಟ್ ಚಿತ್ರದಲ್ಲಿ ನಟಿಸಿದ್ದೆ. ಈಗ ನಾನೇ ಮೂರು ಚಿತ್ರಗಳನ್ನು ನಿರ್ಮಾಣ ಮಾಡುತ್ತಿದ್ದೇನೆ. ನಾಳೆ ನಮ್ಮ ಭರವಸೆ ಚಿತ್ರದಲ್ಲಿ ಐವತ್ತು ಪಾತ್ರಗಳನ್ನು ಮಾಡುತ್ತಿದ್ದೇನೆ. ಈ ಚಿತ್ರವನ್ನು ಹತ್ತು ಜನ ನಿರ್ದೇಶಕರು ನಿರ್ದೇಶಿಸಲಿದ್ದಾರೆ. ಇನ್ನು ಮೊಹಬ್ಬತ್ ಜಿಂದಾಬಾದ್ ಚಿತ್ರದಲ್ಲಿ ಹದಿನಾಲ್ಕು ಹಾಡುಗಳಿದ್ದು, ಬಾಲಿವುಡ್ ಸೇರಿದಂತೆ ಹಲವಾರು ಕಲಾವಿದರು ನಟಿಸುತ್ತಿದ್ದಾರೆ. ಕನ್ನಡ, ಹಿಂದಿ ಸೇರಿದಂತೆ ಹಲವು ಭಾಷೆಯಲ್ಲಿ ಈ ಚಿತ್ರ ತಯಾರಾಗಲಿದೆ. ಈಗಾಗಲೇ ಮೂರು ಸಿನಿಮಾಗಳ ಶೂಟಿಂಗ್ ನಡೆಯುತ್ತಿದ್ದು, ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡುವ ಯೋಜನೆಯಿದೆ. ಈ ಚಿತ್ರಗಳಲ್ಲಿ ನಾನು ಲವರ್ ಬಾಯ್, ಡಿಟೆಕ್ಟಿವ್ ಮುಂತಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಟಾಸ್ಕ್ ಚಿತ್ರದಲ್ಲಿ ಐದು ಕಥೆಗಳಿದ್ದು, ಐದು ಜನ ನಿರ್ದೇಶನ ಮಾಡಲಿದ್ದಾರೆ. ಆಪೈಕಿ ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಒಂದು ಕಥೆಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂದು ಕಮಲ್ ರಾಜ್ ತಿಳಿಸಿದರು. ನಟಿ ಪ್ರಿಯಾಂಕಾ ಉಪೇಂದ್ರ, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಚಿತ್ರ ಸಾಹಿತಿ ವಿ.ನಾಗೇಂದ್ರ ಪ್ರಸಾದ್ ಮುಂತಾದವರು ಹೊಸ ಚಿತ್ರಗಳಿಗೆ ಶುಭಕೋರಿದರು.

ಮಹೇಶ್ ಬಾಬು ಬರ್ತ್ ಡೇಗೆ ಪೋಸ್ಟರ್ ಉಡುಗೊರೆ

ತೆಲುಗಿನ ಖ್ಯಾತ ನಟ ಮಹೇಶ್ ಬಾಬು ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಬರ್ತ್ ಡೇ ದಿನದಂದೇ ಮಹೇಶ್ ಬಾಬು ಅಭಿಮಾನಿಗಳಿಗೆ ಭರ್ಜರಿ ಉಡುಗೊರೆಯೂ ಸಿಕ್ಕಿದೆ. ಮಹೇಶ್ ಬಾಬು ಅಭಿನಯದ ಹೊಸ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ಆರ್ ಆರ್ ಆರ್ ಬಳಿಕ ಖ್ಯಾತ ನಿರ್ದೇಶಕ ಎಸ್ ಎಸ್ ರಾಜಮೌಳಿ , ಮಹೇಶ್ ಬಾಬು ಅವರಿಗಾಗಿ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ಕೂಡ ಹೈವೋಲ್ಟೇಜ್ ಸಿನಿಮಾ ಎನ್ನುವುದು ರಿಲೀಸ್ ಆಗಿರುವ ಪೋಸ್ಟರ್ ನಲ್ಲಿ ತಿಳಿಯುತ್ತದೆ. ಮಹೇಶ್ ಬಾಬು ಅವರ ಮುಖವನ್ನು ರಿವಿಲ್ ಮಾಡಿಲ್ಲ, ಬದಲಾಗಿ ಅವರು ಧರಿಸಿರುವ ಡಾಲರ್ ಕಂಗೊಳಿಸುತ್ತಿದೆ, ತ್ರಿಶೂಲ ಅದರ ಜತೆಗೆ ನಂದಿಯೂ ಇದೆ. ಇದನ್ನು ಗಮನಿಸದರೆ ನಾಯಕ ಶಿವನ ಭಕ್ತನಾಗಿರುವುದು ಖಚಿತವಾಗುತ್ತದೆ. ಅದರ ಜತೆಗೆ ಎದೆಯಲ್ಲಿ ರಕ್ತದ ಹನಿಯೂ ಇದ್ದು ಅದನ್ನು ನೋಡಿದರೆ ಜಕ್ಕಣ್ಣ ಈ ಬಾರಿಯೂ ಭರ್ಜರಿ ಸಾಹಸಮಯ ಸಿನಿಮಾವನ್ನೇ ತೆರೆಗೆ ತರುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಹೊಸ ಚಿತ್ರದ ಟೈಟಲ್ ಇನ್ನೂ ರಿವಿಲ್ ಆಗಿಲ್ಲ.



ಮಹೇಶ್ ಬಾಬು ಅವರ ಅಭಿಮಾನಿಗಳ ಕಾತರತೆ ನನಗೆ ತಿಳಿಯುತ್ತದೆ. ಚಿತ್ರದ ಶೀರ್ಷಿಕೆ ಇನ್ನೂ ರಿವಿಲ್ ಮಾಡಿಲ್ಲ ನವೆಂಬರ್ ನಲ್ಲಿ ಚಿತ್ರದ ಬಗ್ಗೆ ಅಪ್ಡೇಟ್ ನೀಡವುದಾಗಿ ನಿರ್ದೇಶಕ ರಾಜಮೌಳಿ ಸೋಷಿಯಲ್ ಮಿಡಿಯಾದಲ್ಲಿ ಬರೆದುಕೊಂಡಿದ್ದಾರೆ. ಒಟ್ಟಾರೆ ಜಕ್ಕಣ್ಣ ಹಾಗೂ ಮಹೇಶ್ ಬಾಬು ಕಾಂಬಿನೇಷನ್ ನಲ್ಲಿ ಮೂಡಿಬರುತ್ತಿರುವ ಸಿನಿಮಾ ಬಲು ಕುತೂಹಲ ಕೆರಳಿಸಿದೆ.

ಚೌಕಿದಾರನ ಜಾಲಿ ಸಾಂಗ್

ರಥಾವರ ಸಿನಿಮಾ ಖ್ಯಾತಿಯ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಈಗ ಚೌಕಿದಾರ್ ಕರೆತರುತ್ತಿದ್ದಾರೆ. ಈಗಾಗಲೇ ಚೌಕಿದಾರ್ ಟೀಸರ್ ಮತ್ತು ಹಾಡುಗಳ ಮೂಲಕವೇ ಸದ್ದು ಮಾಡುತ್ತಿದ್ದಾನೆ. ಇದೀಗ ಚೌಕಿದಾರನ ಮತ್ತೊಂದು ಗೀತೆ ಬಿಡುಗಡೆಯಾಗಿದೆ.

ಜಾಲಿ ಹಾಡಿನ ಮೂಲಕ ಚೌಕಿದಾರ ರಂಜಿಸುತ್ತಿದ್ದಾನೆ. ನಾಯಕ ಓ ಮೈ ಬ್ರೋ.. ಎಂದು ಕುಣಿಯುವ ಹಾಡು ಇದಾಗಿದ್ದು ತಂದೆ ಮಗನ ಬಾಂಧವ್ಯವನ್ನು ಸಾರುತ್ತಿದೆ. ಪೃಥ್ವಿ ಅಂಬರ್ ಜತೆಗೆ ತಂದೆ ಪಾತ್ರ ನಿರ್ವಹಿಸಿರುವ ಸಾಯಿ ಕುಮಾರ್ ಹಾಡಿನಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿರುವುದು ವಿಶೇಷ. ಮುರುಳಿ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದಾರೆ.

ಚಿತ್ರರಂಗದಲ್ಲಿ ಐವತ್ತು ವರ್ಷ ಪೂರೈಸಿರುವ ಹಿರಿಯ ನಟ ಸಾಯಿ ಕುಮಾರ್ ಅವರು ಚೌಕಿದಾರ್ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ಹಾಡಿನಲ್ಲಿ ಅವರ ಮುಗ್ದತೆ ಪ್ರೇಕ್ಷಕರನ್ನು ಸೆಳೆಯುತ್ತಿದೆ.

ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿರುವ ಓ ಮೈ ಬ್ರೋ.. ಪ್ಯಾಥೋ ಗೀತೆಗೆ ಗಾಯಕ ಕೈಲಾಸ್ ಖೇರ್ ದನಿಯಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಹಾಡಿನ ಕಿಕ್ ಹೆಚ್ಚಿಸಿದೆ. ಚಿತ್ರದಲ್ಲಿ ದೊಡ್ಮನೆಯ ಮೊಮ್ಮಗಳು ಧನ್ಯಾ ರಾಮ್‌ಕುಮಾರ್ ನಾಯಕಿಯಾಗಿ ಅಭಿನಯಿಸಿದ್ದು, ಸುಧಾರಾಣಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಚೌಕಿದಾರ್ ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದು, ಸಚಿನ್ ಬಸ್ರೂರು ಸಂಗೀತ, ಸಿದ್ದು ಕಂಚನಹಳ್ಳಿ ಛಾಯಾಗ್ರಹಣವಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಪಂಚ ಭಾಷೆಗಳಲ್ಲಿ ಮೂಡಿಬರಲಿದೆ.

ಓದುವ ಲೋಕಕ್ಕೆ ಒದುವ ನಿಲ್ದಾಣ
ವಿಶ್ವವಾಣಿ 10.08.2025 ಭಾನುವಾರ

ವಿರಾಮ

ಹಲವು ಚಲನಚಿತ್ರಗಳು!

'ಅನ್ನಾ ಕರೆನಿನಾ' ಕಾದಂಬರಿಯನ್ನು ಆಧರಿಸಿ, ಮೂವತ್ತಕ್ಕೂ ಅಧಿಕ ಚಲನಚಿತ್ರಗಳು ಮತ್ತು ಟೆಲಿವಿಷನ್ ಚಿತ್ರಗಳು ನಿರ್ಮಾಣಗೊಂಡಿವೆ! 1911 ಮೊದಲ ಚಲನ ಚಿತ್ರ ಪ್ರದರ್ಶನಗೊಂಡಿದ್ದು, ಕಳೆದ ದಶಕದ ತನಕವೂ ಹೊಸ ಹೊಸ ಚಲನಚಿತ್ರಗಳೂ ಈ ಕಾದಂಬರಿಯ ಕಥನವನ್ನು ಹೇಳಿವೆ. ಮುಂದಿನ ವರ್ಷಗಳಲ್ಲಿ ಇನ್ನಷ್ಟು ಚಲನಚಿತ್ರಗಳಿಗೆ ಸ್ಫೂರ್ತಿ ನೀಡಬಲ್ಲ ಕಸುವು ಈ ಕಾದಂಬರಿಯಲ್ಲಿದೆ! 'ಅನ್ನಾ ಕರೆನಿನಾ' ಚಲನಚಿತ್ರದ ಸ್ಥಿರಚಿತ್ರವನ್ನು ಈ ಪುಟದಲ್ಲಿ ಬಳಸಲಾಗಿದೆ.



'ಅನ್ನಾ ಕರೆನಿನಾ' ಜಗತ್ತಿನ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಎಂಬ ಹಿರಿಮೆಯನ್ನು ಕಳೆದ ಸುಮಾರು ನೂರೈವತ್ತು ವರ್ಷಗಳಲ್ಲಿ ಕಳೆದುಕೊಂಡದ್ದೇ ಇಲ್ಲ. ಯಾವುದೇ ಭಾಷೆಯ ಕಾದಂಬರಿ ಪ್ರಿಯರು ಓದಲೇಬೇಕಾದ ಕಾದಂಬರಿ 'ಅನ್ನಾ ಕರೆನಿನಾ'. ಆಧುನಿಕ ಮನುಷ್ಯ, ಕುಟುಂಬ, ಸಮಾಜ ಮತ್ತು ವ್ಯವಸ್ಥೆ ಎದುರಿಸುತ್ತಿರುವ ಪ್ರಶ್ನೆಗಳನ್ನು ಹೊಸ ಬೆಳಕಿನಲ್ಲಿ ನೋಡುವಂತೆ ಮಾಡುವ ಕಾದಂಬರಿ ಇದು. ಇದೀಗ ಕನ್ನಡಕ್ಕೆ ಮತ್ತೊಮ್ಮೆ 'ಅನ್ನಾ ಕರೆನಿನಾ' ಬಂದಿದ್ದಾಳೆ! ಸುಲಭ ಓದಿಗೆ ದಕ್ಕುವಂತಹ ಅನುವಾದದ ಮೂಲಕ, ಸಮಗ್ರ ಸಂಪುಟದಲ್ಲಿ ಪ್ರಕಟಗೊಂಡಿರುವ 'ಅನ್ನಾ ಕರೆನಿನಾ', ಕನ್ನಡದ ಪ್ರಸ್ತುತ ಮತ್ತು ಭವಿಷ್ಯದ ಓದುಗರ ಮೆಚ್ಚುಗೆ ಗಳಿಸುವುದರಲ್ಲಿ ಸಂಶಯವಿಲ್ಲ.

ಕನ್ನಡಕ್ಕೆ ಒಲಿದು ಬಂದ ಮಹಾ ಕಾದಂಬರಿ!

» ಪ್ರೊ.ಜಿ.ಎನ್.ಉಪಾಧ್ಯ, ಮುಂಬೈ

ಕೌಂಟ್ ಲಿಯೋ ಟಾಲ್‌ಸ್ಟಾಯ್ (1828–1910) ವಿರಚಿತ ಅನ್ನಾ ಕರೆನಿನಾ (1878) ಜಗತ್ತಿನ ಶ್ರೇಷ್ಠ ಕಾದಂಬರಿಗಳಲ್ಲೊಂದು. ಈ ಮಹಾಕೃತಿಯನ್ನು ಕನ್ನಡಕ್ಕೆ, ಮತ್ತೆ ಆಕರ್ಷಕವಾಗಿ ಅನುವಾದಿಸಿಕೊಟ್ಟ ಕೀರ್ತಿ ಓ.ಎಲ್. ನಾಗಭೂಷಣ ಸ್ವಾಮಿ ಅವರಿಗೆ ಸಲ್ಲುತ್ತದೆ. ಲಿಯೋ ಟಾಲ್‌ಸ್ಟಾಯ್ ವಿಶ್ವಸಾಹಿತ್ಯಕ್ಕೆ ಅಮೋಘವಾದ ಕಾಣಿಕೆಯನ್ನಿತ್ತ ಮಹಾನ್ ಲೇಖಕ. ಆತ ಒಬ್ಬ ಆಧುನಿಕ ಮಹರ್ಷಿ, ಮಹಾ ಮೇಧಾವಿ, ಮಾನವತಾವಾದಿ ಚಿಂತಕ, ಜಗದ್ವಂದ್ಯ.

ಟಾಲ್‌ಸ್ಟಾಯ್, ಯುದ್ಧ ಮತ್ತು ಶಾಂತಿ, ಅನ್ನಾ ಕರೆನಿನಾ, ರಿಸರೆಕ್ಷನ್ ಎಂಬ ಮೂರು ಬೃಹತ್ಕಾದಂಬರಿಗಳನ್ನು ಬರೆದ ದೈತ್ಯ ಪ್ರತಿಭೆ. 1991ರಲ್ಲಿ ದೇ.ಜವರೇಗೌಡ ಅವರು ಅನ್ನಾ ಕರೆನಿನಾ ಮಹಾ ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದ್ದರು (1068 ಪುಟಗಳ ಕೃತಿ. 2006ರಲ್ಲಿ ಪುನರ್ ಮುದ್ರಣ). ಸಂಗ್ರಹಿತ ರೂಪದಲ್ಲಿ ಅನ್ನಾ ಕರೆನಿನಾದ ಅನುವಾದದ ಪ್ರಯತ್ನಗಳೂ ನಡೆದಿದ್ದವು. ಇದೀಗ ಮತ್ತೆ ಓ. ಎಲ್. ನಾಗಭೂಷಣ ಸ್ವಾಮಿ ಅವರು ಅನ್ನಾಳನ್ನು ಆಪ್ತವಾಗಿ ಕನ್ನಡಕ್ಕೆ ಕರೆತಂದಿದ್ದಾರೆ.

'ಅನ್ನಾ ಕರೆನಿನಾ' ಒಂದು ಮಹಾ ಕಾದಂಬರಿ. ನೂರಾರು ವ್ಯಕ್ತಿಗಳ ವಿಚಾರಗಳ ಘಟನೆಗಳ ಕಥೆ ಇಲ್ಲಿ ಸರಳವಾಗಿ ಸುಂದರವಾಗಿ ಪರಿಣಾಮಕಾರಿಯಾಗಿ ಪಡಿಮೂಡಿದೆ. ವಿಮರ್ಶಕ ಆರ್ನಾಲ್ಡ್ 'ಟಾಲ್‌ಸ್ಟಾಯ್ ಅವರ ಕಾದಂಬರಿ ಕಲಾಕೃತಿಯಲ್ಲ: ಆದರೆ ಅದು ಜೀವನದ ಒಂದು ಭಾಗ' ಎಂದು ಹೇಳಿದ್ದರಲ್ಲಿ ಉತ್ಪ್ರೇಕ್ಷೆಯಿಲ್ಲ. ಲೇಖಕ, ಚಿಂತಕ ಐಸಾಕ್ ಬಾಬೆಲ್ 'ಜಗತ್ತು ಸ್ವತಃ ಬರೆಯಲು ಸಾಧ್ಯವಾದರೆ, ಅದು ಟಾಲ್‌ಸ್ಟಾಯ್ ರೀತಿ ಬರೆಯುತ್ತದೆ' ಎಂದು ನುಡಿದದ್ದು ಸಹ ಆತನ ಸಾಟಿಯಿಲ್ಲದ ಪ್ರತಿಭೆಗೆ ಸಂದ ಗೌರವ.

ವಾಸ್ತವವಾದಿ ಕಾದಂಬರಿ

ಈ ಕಾದಂಬರಿಯನ್ನು ಎಂಟು ಭಾಗಗಳಾಗಿ ಮತ್ತು 239 ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಇದು ಜೀವನಕ್ಕೆ ತೀರ ಹತ್ತಿರದಲ್ಲಿ ನಿಂತು ನೋಡಿ ಅನುಭವಿಸಿ ಬರೆದ ವಾಸ್ತವವಾದಿ ಕೃತಿ. 'ಎಲ್ಲ ಸುಖ ಸಂಸಾರಗಳ ಸುಖವೂ ಒಂದೇ ರೀತಿಯದು, ದುಃಖ ಪಡುವ ಪ್ರತಿ ಸಂಸಾರದ ದುಃಖವೂ ಬೇರೆಬೇರೆ ರೀತಿಯದು' ಎಂಬ ಬೀಜ ವಾಕ್ಯದೊಂದಿಗೆ ಈ ಕಾದಂಬರಿ ಆರಂಭವಾಗುತ್ತದೆ.

ಈ ಕೃತಿಯ ಮುಮ್ಮಾತಿನಲ್ಲಿ ಓ.ಎಲ್. ನಾಗಭೂಷಣ ಸ್ವಾಮಿ ಅವರು ಹೇಳಿರುವ ಅಭಿಪ್ರಾಯ ಅವಲೋಕನೀಯವಾಗಿದೆ. ಕಾಲ, ದೇಶ, ಭಾಷೆಗಳ ಅಂತರವನ್ನು ಮೀರಿ ಜನಪ್ರೀತಿಯನ್ನು ಗಳಿಸಿರುವ ಮನುಷ್ಯರು ಕಟ್ಟಿಕೊಂಡಿರುವ ಸಂಸಾರದ ಕಥನ – ಅನ್ನಾ ಕರೆನಿನಾ. ಇದು ಪ್ರೀತಿ ಪ್ರೇಮಗಳ ಪರಮಾಪ್ತ ಕಥೆ. ನಮ್ಮ ಪ್ರವೃತ್ತಿಗಳು ತಂದೊಡ್ಡುವ ನೈತಿಕ, ಮಾನಸಿಕ, ಸಾಮಾಜಿಕ ಪ್ರಶ್ನೆಗಳನ್ನು ಆಪ್ತವಾಗಿ ಪರಿಶೀಲಿಸುವ ಕಥೆ – ಅನ್ನಾ ಕರೆನಿನಾ. ಕೊಳೆತ ಜೀವನದ ವಿರುದ್ಧ ದಂಗೆ ಎದ್ದ ಮಹಿಳೆಯ ಕಥೆ. ಮನುಷ್ಯ ಬದುಕಿಗೆ ಅರ್ಥ, ಗತಿ, ವಿನ್ಯಾಸವನ್ನು ಒದಗಿಸುವ ಶಕ್ತಿಯೊಂದು ಇದೆಯೇ ಎಂಬ ಗಹನವಾದ ಪ್ರಶ್ನೆಯನ್ನು ಸರಳವಾದ ಕಥೆಯ ಮೂಲಕ ಮನಸಿನಲ್ಲಿ ಮೂಡಿಸುವ ಕಥೆ ಅನ್ನಾ ಕರೆನಿನಾ ಕನ್ನಡದ್ದೇ ಕೃತಿ ಎಂಬಂತೆ ಅನುವಾದ ಮಾಡುವಲ್ಲಿ ಅವರು ಸಫಲರಾಗಿದ್ದಾರೆ. ಅವರ ಸೃಜನಶೀಲ ಪ್ರತಿಭೆ, ಪರಿಶ್ರಮ ಇಲ್ಲಿ ಮಿಂಚಿರುವುದು ಒಡೆದು ಕಾಣುವ ಅಂಶ. ಈ ಕಾದಂಬರಿಯ ನಾಯಕಿ ಅನ್ನಾ ಕರೆನಿನಾ. ಕೃತಿ ಪ್ರಾರಂಭವಾಗುವುದು ಅನ್ನಾ ಕರೆನಿನಾ ಸೈಂಟ್ ಪೀಟರ್ಸ್ ಬರ್ಗಿನಿಂದ ಮಾಸ್ಕೋಗೆ, ತನ್ನ ಅಣ್ಣ ಸ್ಟೆಪಾನ್ ಮತ್ತು ಅತ್ತಿಗೆ ಡಾಲಿಯವರ ಸಂಸಾರದ ನೊಗವನ್ನು ಸರಿಪಡಿಸಲು ಆಗಮಿಸುವುದರೊಂದಿಗೆ. ತನ್ನ ಗಂಡ ತನ್ನ ಮಕ್ಕಳ ಶಿಕ್ಷಕಿಯ ಜತೆಗೆ ಹೊಂದಿದ್ದ ಅಕ್ರಮ ಸಂಬಂಧವನ್ನು ಡಾಲಿ ಕಂಡು ಬಿಟ್ಟಿರುವುದೇ ಅವರ ಎಲ್ಲ ಬಗೆಯ ರಾದ್ಧಾಂತಕ್ಕೆ ಕಾರಣ. ಅನ್ನಾಳಿಗೆ ರೈಲ್ವೇ ನಿಲ್ದಾಣದಲ್ಲಿ ಕೌಂಟ್ ವ್ರಾನ್‌ಸ್ಕಿ ಎಂಬ ಯುವಕನನ್ನು ಅನ್ನಾಳ ಅಣ್ಣ ಪರಿಚಯ ಮಾಡಿಕೊಡುತ್ತಾನೆ. ವ್ರಾನ್‌ಸ್ಕಿ ಅನ್ನಾಳ ಪ್ರೀತಿಗೆ ಬಿದ್ದು ಹುಚ್ಚನಾಗುತ್ತಾನೆ. ಅವಳನ್ನು ಹಿಂಬಾಲಿಸುತ್ತ ಕೊನೆಗೂ ಅವಳ ಮನಸ್ಸನ್ನು ಒಲಿಸಿಕೊಂಡು ತನ್ನ ಜತೆ ಬರುವಂತೆ ಮಾಡಲು ಯಶಸ್ವಿಯಾಗುತ್ತಾನೆ. ಅನ್ನಾಳ ಗಂಡ ರಸಿಕನಲ್ಲ, ಆದರೆ ಒಳ್ಳೆಯವನು. ಅವನು ತನ್ನ ಪತ್ನಿ ಪರಪುರುಷನಿಂದ ಗರ್ಭಿಣಿಯಾಗಿದ್ದಾಳೆ ಅನ್ನುವುದನ್ನು ತಿಳಿದಾಗ ಅವಳು ಕುಟುಂಬದ ಗೌರವದ ಸಲುವಾಗಿ ತನ್ನ ಮನೆಯಲ್ಲೇ ಉಳಿಯಲಿ ಎಂದು ಬಯಸುತ್ತಾನೆ. ಪ್ರಿಯಕರನ ಜತೆಗೆ ಹೋದ ಅನ್ನಾ ಕರೆನಿನಾ ಸುಖವಾಗಿರುವುದಿಲ್ಲ. ಆದರೆ ಓದುಗರು ಅವಳ ಬಗ್ಗೆ ಸಹಾನುಭೂತಿ ತೋರಿಸುವಂತೆ ಟಾಲ್‌ಸ್ಟಾಯ್ ಅವಳ ಪಾತ್ರ ಚಿತ್ರಣವನ್ನು ಅಮೋಘವಾಗಿ ಮಾಡಿದ್ದಾನೆ. ಈ ಕಾದಂಬರಿಯ ಇನ್ನೊಂದು ಆಯಾಮ, ಹಳ್ಳಿಯ ಸರಳ ಸಜ್ಜನ ಯುವಕ ಲೆವಿನ್ ಮತ್ತು ಕಿಟಿಯವರ ದಾಂಪತ್ಯದ್ದು. ಕಿಟಿ ಮೊದಲು ಆಕರ್ಷಕ ವ್ಯಕ್ತಿತ್ವದ ವ್ರೋನ್‌ಸ್ಕಿಗೆ ಮಾರುಹೋಗಿ ಲೆವಿನ್‌ನನ್ನು ತಿರಸ್ಕರಿಸುತ್ತಾಳೆ. ಆದರೆ ಕೊನೆಗೆ ಅವನ ನಿಷ್ಕಲ್ಮಶ ಹೃದಯಕ್ಕೆ ಮಾರುಹೋಗಿ ಅವನನ್ನು ಮದುವೆಯಾಗುತ್ತಾಳೆ. ಈ ಕೃತಿಯ ಕಥೆಯು, ಸೈನ್ಯದ ಅಧಿಕಾರಿಯೊಬ್ಬನನ್ನು ಮದುವೆಯಾದ ಹೆಣ್ಣು ಪ್ರೀತಿಸಿದ ಕಥೆ ಎಂದು ಟಾಲ್‌ಸ್ಟಾಯ್ ಹೇಳಿದ್ದಾನೆ. ಆದರೆ ಈ ಕೃತಿ ಅದನ್ನು ಮೀರಿ ಭವ್ಯವಾಗಿ ಬೆಳೆದು ನಿಂತಿದೆ.

ಕುಸುಮಬಾಲೆಯ ಅಜ್ಜಿ?

» ನ. ರವಿಕುಮಾರ

ಟಾಲ್‌ಸ್ಟಾಯ್ ಹೆಸರು ನನ್ನ ಮನೋಲೋಕಕ್ಕೆ ಯಾವಾಗ ಪ್ರವೇಶವಾಯಿತೆಂದು ತಿಳಿಯದು. ಆದರೆ, ಅವರ 'ಅನ್ನ ಕರೆನಿನಾ' ಪರಿಚಯವಾದದ್ದು ರಾಮು ಅವರು 'ಪುಸ್ತಕ ಪ್ರಪಂಚ' ಪತ್ರಿಕೆಯ ಸಂಚಿಕೆಗಳ ಕಟ್ಟೊಂದನ್ನು ಕೈಗಿಟ್ಟಾಗ. ಆ ಸಂಚಿಕೆಯಲ್ಲಿ ಟಾಲ್‌ಸ್ಟಾಯ್ ಬಗೆಗೆ ಬಹುಶಃ ರಾಮೂ ಅವರೇ ಬರೆದ ಲೇಖನ ಇರಬೇಕೆಂಬ ನೆನಪು. ಆ ಕಾದಂಬರಿಯ ಮೊದಲ ಸಾಲು ಹೀಗಿದೆ: 'ಎಲ್ಲ ಸುಖ ಸಂಸಾರಗಳ ಸುಖವೂ ಒಂದೇ ರೀತಿಯದು, ದುಃಖಪಡುವ ಪ್ರತಿ ಸಂಸಾರದ ದುಃಖವೂ ಬೇರೆ ಬೇರೆ ರೀತಿಯದು.' ಬಹುಶಃ ಈ ಒಂದು ವಾಕ್ಯದ ಮೇಲೆ ಎಷ್ಟೆಲ್ಲಾ ವ್ಯಾಖ್ಯಾನ ಸಾಧ್ಯವಿದೆ, ಸಂಶೋಧನೆ, ವಿಚಾರ ವಿಮರ್ಶೆ, ಚಿಂತನ ಮಂಥನ ಸಾಧ್ಯವಿದೆ. ಈ ಸಾಲುಗಳನ್ನು ಓದುವಾಗಲೆಲ್ಲ ನನಗೆ ಬದುಕಿನ ಬಗ್ಗೆ ಭರವಸೆ, ಆತ್ಮವಿಶ್ವಾಸ, ನಂಬಿಕೆ ಹುಟ್ಟುತ್ತದೆ. ಸಾಹಿತ್ಯದ ಉದ್ದೇಶ ಕೂಡ ಇದೇ ಅಲ್ಲವೇ?

ದೇವನೂರು ಮಹಾದೇವ ಅವರಿಗೆ 'ಪೆರಿಯಾರ್ ಪ್ರಶಸ್ತಿ' ಬಂದಾಗ ಅಭಿನಂದಿಸಲು ಫೋನ್ ಮಾಡಿದೆ. ಅವರು ಕಾರಿನಲ್ಲಿ ಕೇರಳ ಗಡಿಯಲ್ಲಿದ್ದರು. 'ಈಚೆಗೆ ನಿಮ್ಮ ಕುಸುಮಬಾಲೆ ಕಾದಂಬರಿ ಓದುವವರು ಹೆಚ್ಚಾಗಿದ್ದಾರೆ ಸರ್!' ಎಂದೆ. ಅದಕ್ಕವರು 'ಯಾಕಿರಬಹುದು?' ಎಂದು ಕೇಳಿದರು. 'ಬಹುಶಃ ನಮ್ಮ ಬದುಕು ಸಂಕೀರ್ಣವಾಗುತ್ತಿರುವ ಕಾರಣಕ್ಕೆ ಇರಬೇಕು' ಎಂದೆ. 'ಅದು ಪಾಸಿಟೀವಾ ಅಥವಾ ನೆಗೆಟೀವಾ?' ಎಂದು ನಕ್ಕರು. ನಾನು ಹೇಳಿದೆ: 'ಇಲ್ಲ ಸರ್. ನನಗೆ ಜನರ ಆಯ್ಕೆಗಳ ಬಗೆಗೆ ನಂಬಿಕೆ ಇದೆ. ಇಲ್ಲದಿದ್ದರೆ ಯಾಕೆ 'ಮಲೆಗಳಲ್ಲಿ ಮದುಮಗಳು', 'ಅನ್ನ ಕರೆನಿನಾ' ಪುಸ್ತಕಗಳನ್ನು ಈ ಹೊತ್ತು ಜನ ಮುಗಿಬಿದ್ದು ಓದುತ್ತಾರೆ? ಅದು ಖಂಡಿತಾ ಪಾಸಿಟೀವ್ ನಡೆ' ಎಂದೆ.

'ಅದು ಸರಿ...ಸರಿ' ಎಂದು ನವ್ಯಕಾಲಘಟ್ಟದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಗೆಗೆ ನಡೆದ ಚರ್ಚೆಗಳನ್ನು ನೆನಪಿಸಿಕೊಂಡರು. ''ಎಲ್. ಬಸವರಾಜು ಅವರ ಹೇಳಿಕೆಯಂತೆ 'ಕುಸುಮ ಬಾಲೆ'ಯು, ಮಲೆಗಳಲ್ಲಿ ಮದುಮಗಳ ಮಗಳು'' ಎಂದರು. 'ಹಾಗಾದರೆ 'ಅನ್ನಾ ಕರೆನಿನಾ' ಕುಸುಮ ಬಾಲೆಯ ಅಜ್ಜಿ ಇರಬಹುದಾ?' ಎಂದು ಕೇಳಿದೆ.

ಅಷ್ಟರಲ್ಲಿ ಸಿಗ್ನಲ್ ಸಿಗದೆ ಫೋನ್ ಕಟ್ಟಾಯಿತು. ಬಹುಶಃ ಇದನ್ನು ದೇವನೂರರು ಒಪ್ಪುವರೋ ಬಿಡುವರೋ ಗೊತ್ತಿಲ್ಲ. ನಮ್ಮ ಕಾಲದ ಸಂಕೀರ್ಣತೆಗೆ ಮುಖಾಮುಖಿಯಾಗಲು, ಸ್ಪಂದಿಸಲು, ಒಳಗೊಳ್ಳಲು, ಅನುವಾಗಲು ಈ ಮೂರೂ ಕಾದಂಬರಿಗಳು ನನ್ನ ಮೊದಲ ಆಯ್ಕೆ. (ಇವಲ್ಲದೆ ಇತರ ಹಲವು ಕಾದಂಬರಿಗಳೂ ಇರಬಹುದು.)

ಅನ್ನಾ ಕರೆನಿನಾ

ಲೇ: ಲಿಯೋ ಟಾಲ್‌ಸ್ಟಾಯ್
ಕನ್ನಡಕ್ಕೆ : ಓ.ಎಲ್. ನಾಗಭೂಷಣ ಸ್ವಾಮಿ
ಪ್ರ: ಅಭಿನವ, ಬೆಂಗಳೂರು
ಸಂಪರ್ಕ:9448804905
ಬೆಲೆ ರು.1200/-

ಆತ್ಮಕಥೆಯ ಅಂಶಗಳೂ ಇವೆ

ಕಾದಂಬರಿ ಪ್ರಕಾರದ ಎಲ್ಲ ಶಕ್ತಿ, ಸಾಮರ್ಥ್ಯ, ಅವಕಾಶಗಳನ್ನು ಬಳಸಿಕೊಂಡು, ಆತ್ಮಕಥೆಯ ಅಂಶ ಗಳನ್ನೂ ಒಳಗೊಂಡು ಕಲ್ಪನೆಯ ಸಾಮರ್ಥ್ಯದ ಮೂಲ ಕವೇ ಜೀವನ ದರ್ಶನವನ್ನು ಭಾಷೆಯಲ್ಲಿ ಕಟ್ಟಿಕೊಡುವ ಅಪೇಕ್ಷೆ ಈ ಕಾದಂಬರಿಯನ್ನು ರೂಪಿಸಿದೆ.

» ಮೂರನೇ ಪುಟಕ್ಕೆ

ಕಲ್ಪನೆಯ ಸಾಮರ್ಥ್ಯದ ಮೂಲಕ ಜೀವನ ದರ್ಶನ

» ಓ. ಎಲ್. ನಾಗಭೂಷಣ ಸ್ವಾಮಿ

ಟಾಲ್‌ಸ್ಟಾಯ್ 'ಅನ್ನಾ ಕರೆನಿನಾ' ಬರವಣಿಗೆಯನ್ನು ಆರಂಭಿಸಿದ್ದು ಮಾರ್ಚ್ 1873ರಲ್ಲಿ. ಆ ಹೊತ್ತಿಗೆ ಅವನು 'ಯುದ್ಧ ಮತ್ತು ಶಾಂತಿ'ಯನ್ನು ಬರೆದು ನಾಲ್ಕು ವರ್ಷ ಕಳೆದಿದ್ದವು. ರಶಿಯದ ಚರಿತ್ರೆಯ ಅರ್ಥವೇನು? ಎಂಬ ವಿವೇಚನೆಯನ್ನು ಮುಂದುವರೆಸಲು ಅಂಥದೇ ಇನ್ನೊಂದು ಕಾದಂಬರಿ 'ಪೀಟರ್ ದಿ ಗ್ರೇಟ್' ಬರೆಯ ಬೇಕೆಂದು ಆಸೆ ಅವನಿಗಿತ್ತು. 'ದೇವರು ಸತ್ಯವನ್ನು ಕಂಡರೂ ಕಾಯುತ್ತಾನೆ' ಥರದ ನೀತಿ ಕತೆಗಳನ್ನು ಬರೆಯುತ್ತಾ ರೈತರ ಮಕ್ಕಳ ಸಲುವಾಗಿ ಪಠ್ಯಪುಸ್ತಕವನ್ನು ರೂಪಿಸುತ್ತಾ, ಬರವಣಿಗೆಯ ಎರಡು ಧ್ರುವಗಳ ನಡುವೆ ಅವನು ಹೊಯ್ದಾಡುತ್ತಿರುವಾಗ ಸಮಕಾಲೀನ ಸಮಾಜದ ಕತೆಯನ್ನು ಹೇಳುವ ಪ್ರೇರಣೆ ಮೂಡಿತ್ತು.

ಆ ಸಮಯದಲ್ಲಿ ಅವನು ಪುಷ್ಕಿನ್ ಬರೆದ ಕಥೆಯನ್ನು ಓದುತ್ತಿದ್ದ. ಅದರ ಆರಂಭವನ್ನು ಮೆಚ್ಚಿದ್ದ. ಅದು ಚಂಚಲ ಸ್ವಭಾವದ ಅಪ್ರಾಮಾಣಿಕ ಹೆಂಗಸೊಬ್ಬಳು ಗಂಡನ ಬಗ್ಗೆ ಅಸಹ್ಯಪಟ್ಟು, ಪ್ರಿಯಕರನ ಸಂಗ ಬಯಸುವ ಕಥೆ. ಆ ಸುಮಾರಿನಲ್ಲೇ ಅವನ ನೆರೆಹೊರೆಯ ಜಮೀನ್ದಾರನೊಬ್ಬ ಕೈಬಿಟ್ಟು ದೂರ ತಳ್ಳಿದ್ದ ಅನ್ನಾ ಪ್ರಿರೊಗೋವಾ ಎಂಬಾಕೆ ರೈಲು ಹಳಿಯ ಮೇಲೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆಯ ವಿಚಾರಣೆ ನಡೆಯುತ್ತಿತ್ತು.

ಟಾಲ್‌ಸ್ಟಾಯ್ 1873ರಲ್ಲಿ ಗೆಳೆಯನಿಗೆ ಬರೆದ ಪತ್ರದಲ್ಲಿ 'ಅನ್ನಾ ಕರೆನಿನಾ' ತನ್ನ ಮೊದಲ ಕಾದಂಬರಿ ಎಂದಿದ್ದಾನೆ. 'ಯುದ್ಧ ಮತ್ತು ಶಾಂತಿ' ಕಾದಂಬರಿಯಲ್ಲ, 'ಪಾಶ್ಚಾತ್ಯರು ಯಾವ ಅರ್ಥದಲ್ಲಿ ಕಾದಂಬರಿಗಳನ್ನು ಸೃಷ್ಟಿಸಿದ್ದಾರೋ ಅಂಥ ಕಾದಂಬರಿಯನ್ನು ನಾವು, ರಶಿಯನ್ನರು ಸೃಷ್ಟಿಸಲಾರೆವು'; ಕಾದಂಬರಿಯೆಂದರೆ ಕಥಾ ಸಂಯೋಜನೆ, ಸಂಕೀರ್ಣವಾದ ಬೆಳವಣಿಗೆ, ತರ್ಕಬದ್ಧವೆನಿಸುವಂಥ ಮುಕ್ತಾಯಗಳು ಇರುವ ಕೃತಿ ಎಂದು ಯೂರೋಪಿನ ಲೇಖಕರು, ಓದುಗರು ನಂಬಿದ್ದಾರೆ, ಅಂಥದೊಂದು ಬರವಣಿಗೆಯನ್ನು ಮಾಡುವ ಆಸೆ ಇದೆ; 'ಪೀಟರ್ ದಿ ಗ್ರೇಟ್'ನಿಗೆ ಸಂಬಂಧವೇ ಇರದ ಕಾದಂಬರಿ ಬರೆಯುತ್ತಿದ್ದೇನೆ.. ಕಳೆದ ಒಂದು ತಿಂಗಳಿನಲ್ಲಿ ಕಾದಂಬರಿಯ ಕರಡು ಸಿದ್ಧಮಾಡಿ ದ್ದೇನೆ, ನನ್ನ ಮನಸಿಗೆ ಆಪ್ತವಾದದ್ದು, ಈಗ ಪೂರ್ತಿಯಾಗಿ ಅದರಲ್ಲೇ ಮುಳುಗಿದ್ದೇನೆ' ಎಂದು ಹೇಳಿದ್ದಾನೆ.

ಕಾದಂಬರಿ ಪ್ರಕಾರದ ಎಲ್ಲ ಶಕ್ತಿ, ಸಾಮರ್ಥ್ಯ, ಅವಕಾಶಗಳನ್ನು ಬಳಸಿಕೊಂಡು, ಆತ್ಮಕಥೆಯ ಅಂಶಗಳನ್ನೂ ಒಳಗೊಂಡು ಕಲ್ಪನೆಯ ಸಾಮರ್ಥ್ಯದ ಮೂಲಕವೇ ಜೀವನ ದರ್ಶನವನ್ನು ಭಾಷೆಯಲ್ಲಿ ಕಟ್ಟಿಕೊಡುವ ಅಪೇಕ್ಷೆ ಈ ಕಾದಂಬರಿಯನ್ನು ರೂಪಿಸಿದೆ. ಫ್ರೆಂಚ್ ಮತ್ತು ಇಂಗ್ಲಿಶ್ ಕಾದಂಬರಿಕಾರರಾದ ಬಾಲ್ಜಾಕ್, ಚಾರ್ಲ್ಸ್ ಡಿಕಿನ್ಸ್, ಜಾರ್ಜ್ ಎಲಿಯಟ್ ಇಂಥ ಲೇಖಕರು ಸಿದ್ಧಗೊಳಿಸಿದ ಮಾದರಿಯನ್ನು ಅನುಸರಿಸುತ್ತ ಅವೆಲ್ಲವನ್ನು ಮೀರುವ ಕೃತಿಯಾಗಿ 'ಅನ್ನಾ ಕರೆನಿನಾ' ಬೆಳೆದಿದೆ.

ತೊಡಕು ಬಿದ್ದ ಸಂಬಂಧ, ಸಾಹಸ ಪ್ರಸಂಗ, ಕಥೆಯಲ್ಲಿ ಅನಿರೀಕ್ಷಿತ ತಿರುವುಗಳನ್ನು ಅವಲಂಬಿಸಿದ ಯೂರೋಪಿಯನ್ ಕಾದಂಬರಿಗೆ ಮನರಂಜನೆಯೇ ಮುಖ್ಯ ಎನ್ನುವಂತಾಗಿತ್ತು. ಅನ್ನಾ ರೈಲಿನಲ್ಲಿ ಪ್ರಯಾಣ ಮಾಡುತ್ತಾ ಇಂಗ್ಲಿಶ್ ಕಾದಂಬರಿ ಓದುವ ವರ್ಣನೆ ಬರುತ್ತದೆ. ಕಾದಂಬರಿಯ ಕಟ್ಟುಕಥೆ ಓದುತ್ತಾ ಅನ್ನಾ ತನ್ನ ಭಾವನೆ ಮತ್ತು ಮನೋ ವ್ಯಾಪಾರಗಳನ್ನು ಕುರಿತು ಯೋಚಿಸುತ್ತಾಳೆ (ಭಾಗ 1, ಅ 29). ಓದುಗರನ್ನು ಆವರಿಸಿಕೊಳ್ಳುತ್ತಾ ಯೋಚಿಸುವ ಹಾಗೂ ಮಾಡುವ ಕಾದಂಬರಿಯ ಶಕ್ತಿಯನ್ನು ಬಳಸಿಕೊಂಡು ಎಲ್ಲ ಕಾಲ–ದೇಶಗಳ ಮನುಷ್ಯರು ಬದುಕಿ ನಲ್ಲಿ ಎದುರಿಸುವ ಮುಖ್ಯ ಪ್ರಶ್ನೆಗಳನ್ನು ಪರಿಶೀಲಿಸಬೇಕು ಎಂದು ಟಾಲ್‌ಸ್ಟಾಯ್ ಬಯಸಿದ.

ಮನುಷ್ಯಾನುಭವದ ಸಂಕೀರ್ಣತೆ

ಇದು 'ಕಾದಂಬರಿ' ಎಂದು ಒತ್ತಿ ಹೇಳುವಾಗ ಈ ಕೃತಿಯಲ್ಲಿ ಮನುಷ್ಯಾನುಭವದ ಸಂಕೀರ್ಣತೆಯ ಸಮೃದ್ಧಿ ಇದೆ ಎಂಬುದನ್ನೇ ಟಾಲ್‌ಸ್ಟಾಯ್ ಸೂಚಿಸುತ್ತಿದ್ದ. ಮುಖ್ಯ ಕಥೆ, ಉಪ ಕಥೆಗಳ ರೇಖೆಗಳು ಒಂದನ್ನೊಂದು ಅಡ್ಡ ಹಾಯುತ್ತಾ ಕಥೆಯ ಗತಿ ಬದಲಾಗುತ್ತ ನಿಜ ಬದುಕಿನಲ್ಲಿ ನಡೆಯುವುದೂ ಹೀಗೆಯೇ, ಎಂಬ ಭಾವನೆ ಮೂಡುತ್ತದೆ. ಹೀಗಾಗುವುದಕ್ಕೆ ಯೂರೋಪಿನ ಕಾದಂಬರಿ ಮಾದರಿಗಳಿಂದ ಟಾಲ್‌ಸ್ಟಾಯ್ ಕಲಿತ ರಚನಾ ವಿಧಾನ ಒದಗಿ ಬಂದಿದೆ.

ರಶಿಯನ್ ಹೆರಾಲ್ಡ್ ಪತ್ರಿಕೆಯಲ್ಲಿ 'ಅನ್ನಾ ಕರೆನಿನಾ' ಧಾರಾವಾಹಿ ರೂಪದಲ್ಲಿ ಓದುಗರಿಗೆ ದೊರೆಯುತ್ತಿತ್ತು. ಪತ್ರಿಕೆಯಲ್ಲಿರುವ ಆ ಅವಧಿಯ ಇತರ ಲೇಖನಗಳನ್ನು ನೋಡಿ ಸಮಕಾಲೀನ ಸಮಾಜದ ಎಷ್ಟೊಂದು ಸಂಗತಿಗಳನ್ನು ಒಳಗೊಂಡಿದೆ ಎಂಬುದನ್ನು ವಿಮರ್ಶಕರು ಗಮನಿಸಿದ್ದಾರೆ. ಕಾದಂಬರಿಯಲ್ಲಿರುವ ಎರಡು ಕತೆಗಳ ಸಮತೋಲವನ್ನು ವೈರುಧ್ಯಗಳ ಮೂಲಕ ನಿರ್ವಹಿಸುವುದು

ಹೇಗೆಂಬ ಸೂಚನೆ ಜಾರ್ಜ್ ಎಲಿಯೆಟ್‌ಳಂಥ ಲೇಖಕರಿಂದ ಟಾಲ್‌ಸ್ಟಾಯ್‌ಗೆ ಸಿಕ್ಕಿರಬಹುದು. ನಗರ–ಗ್ರಾಮ, ಕೃತಕತೆ–ಸಹಜತೆ, ವೈವಾಹಿಕ ಇಜ್ಜೋಡು–ಪೂರ್ಣ ನಿಷ್ಠೆ, ಅನ್ನಾ–ವ್ರಾನ್‌ಸ್ಕಿ ಮತ್ತು ಲೆವಿನ್–ಕಿಟಿಯರ ವಿರಹ ಹಾಗೂ ಈ ಎರಡೂ ಜೋಡಿಗಳು ಒಂದಾಗುವ ರೀತಿ ಆನಂತರ ಮುಖ್ಯ ಪಾತ್ರ ಗಳು ಅನುಭವಿಸುವ ಹತಾಶೆಗಳ ವೈರುಧ್ಯ ಸರಣಿಯನ್ನೇ ಟಾಲ್‌ಸ್ಟಾಯ್ ಈ ಕಾದಂಬರಿಯಲ್ಲಿ ನಿರ್ಮಿಸಿದ. ಆಧುನಿಕ ಮನುಷ್ಯ ಎದುರಿಸುವ ನೀತಿ ಸಂಘರ್ಷವನ್ನು ನಿತ್ಯವೂ ನಡೆಯುವ ಕ್ಷುಲ್ಲಕವೆನಿಸುವ ಘಟನೆಗಳಲ್ಲೂ ಟಾಲ್‌ಟಾಯ್ ಹಿಡಿದಿಟ್ಟಿದ್ದಾನೆ. ಹಾಗಾಗಿ 'ನಮ್ಮ ಕಾಲದ ನಾಗರಿ ಕತೆಯನ್ನು ಹಿಡಿದಿಟ್ಟಿರುವ ಮಹಾನ್ ಯೂರೋಪಿಯನ್ ಕೃತಿ' ಎಂದು ಎಫ್. ಆರ್. ಲೀವಿಸ್ ಈ ಕಾದಂಬರಿಯನ್ನು ವರ್ಣಿಸಿದ.

ಚೆಕಾವ್ ಒಮ್ಮೆ ಹೇಳಿದಂತೆ, 'ಪ್ರಶ್ನೆಯನ್ನು ಸರಿಯಾದ ರೀತಿಯಲ್ಲಿ ಮಂಡಿಸುವುದು ಕಲಾವಿದನ ಕರ್ತವ್ಯ.' 'ಅನ್ನಾ ಕರೆನಿನಾ' ಯಾವ ಸಮಸ್ಯೆಗೂ ಪರಿಹಾರ ನೀಡುವುದಿಲ್ಲ. ಆದರೆ ಬದುಕಿನ ಮುಖ್ಯ ಪ್ರಶ್ನೆಗಳನ್ನು ಸರಿಯಾದ ರೀತಿಯಲ್ಲಿ, ಸ್ಪಷ್ಟವಾಗಿ ಕೇಳುತ್ತದೆ. 'ಪ್ರಶ್ನೆಗಳನ್ನು ಸರಿಯಾಗಿ ಮಂಡಿಸುವುದು ನ್ಯಾಯಾಲಯದ ಕರ್ತವ್ಯ, ತೀರ್ಮಾನ ಹೇಳುವುದು ಜ್ಯೂರಿಯ ಸದಸ್ಯರ ಅಭಿರುಚಿ ಮತ್ತು ತಿಳಿವಳಿಕೆಗೆ ಬಿಟ್ಟದ್ದು' ಎಂದು ಚೆಕೋವ್ ಹೇಳುತ್ತಾನೆ. ತೀರ್ಮಾನ ಓದುಗರದ್ದು. **(ಅನ್ನಾ ಕರೆನಿನಾ ಕಾದಂಬರಿಯನ್ನು ಅನುವಾದಿಸಿದ ಓ.ಎಲ್.ನಾಗಭೂಷಣ ಸ್ವಾಮಿಯವರು ಬರೆದ ದೀರ್ಘ ಪ್ರಸ್ತಾವನೆಯ ಆಯ್ದ ಭಾಗ ಇದು.)**

ರಾಯಚೂರಿನಲ್ಲಿ ಕ್ಲಿಕ್ ಕ್ಲಿಕ್!

ಒಣ ಪ್ರದೇಶ ರಾಯಚೂರಿನ ಹೊರವಲಯದಲ್ಲಿರುವ ಹಕ್ಕಿಗಳು, ಕೀಟಗಳು ಕ್ಯಾಮೆರಾದಲ್ಲಿ ಸೆರೆಯಾದ ಕ್ಷಣಗಳಿವು!

» ಈರಣ್ಣ ಬೆಂಗಾಲಿ ರಾಯಚೂರು

'ಕ್ಯಾಮರಾಕ್ಕೆ ಮಾತ್ರ ಓಡುವ ಕಾಲವನ್ನು ತಡೆದು ನಿಲ್ಲಿಸುವ ಶಕ್ತಿ ಇದೆ' ಎಂದು ಎಲ್ಲೋ ಓದಿದ ನೆನಪು ಮನದಲ್ಲಿ ಸುಳಿದಾಡುತಲಿದೆ. ಒಂದು ಛಾಯಾಚಿತ್ರವು ಕೇವಲ ಛಾಯಾಚಿತ್ರವಾಗಿರದೇ ಅದು ಕಾಲವನ್ನು ತಡೆದು ಅಂದಿನ ಅನೇಕ ಭಾವನೆಗಳನ್ನು, ಅಂದಿನ ದಿನಮಾನಗಳ ಸವಿನೆನಪುಗಳನ್ನು, ಸಾಮಾಜಿಕ ಸ್ಥಿತಿಗತಿ, ಸಂಸ್ಕೃತಿ–ಸಂಪ್ರದಾಯವನ್ನು ತನ್ನ ಒಡಲಲ್ಲಿ ಇಟ್ಟುಕೊಂಡು, ನೋಡುಗರಿಗೆ ಅದರ ಮಧುರಾನುಭವವನ್ನು ನೀಡುತ್ತದೆ. ಪುನಃ ಅಂದಿನ ಕಾಲಮಾನಕ್ಕೆ ನಮ್ಮನ್ನು ಕರೆದ್ಯೊಯ್ಯುತ್ತದೆ.

ಈ ಫೋಟೋ ತೆಗೆಯುವ ಆಸಕ್ತಿ ಮನದಲ್ಲಿ ಹುದುಗಿತ್ತು. ಹಣ ಜಮಾ ಮಾಡಿಕೊಂಡು ಮನದಲ್ಲಿನ ಆಸೆ ಯನ್ನು ಈಡೇರಿಸಿ ಕೊಂಡೆ. ಕ್ಯಾಮರಾಗಳ ಬಗ್ಗೆ ಜ್ಞಾನ ಹೊಂದಿದವರಲ್ಲಿ ವಿಚಾರಿಸಿ, ಐದು ವರ್ಷಗಳ ಹಿಂದೆ ಡಿ.ಎಸ್.ಎಲ್.ಆರ್ ಕ್ಯಾಮರಾವನ್ನು ಖರೀದಿಸಿ ಕಣ್ಣು ನೋಡುವ ಅಚ್ಚರಿ, ವಿಸ್ಮಯ, ಅಂದ–ಚೆಂದದ, ಸೊಬಗಿನ ದೃಶ್ಯ, ಸನ್ನಿವೇಶಗಳನ್ನು ಕ್ಯಾಮರಾ ಕಣ್ಣಿನಲ್ಲಿ ಸೆರೆ ಹಿಡಿಯುತ್ತಾ ಹೋದೆ. ಕ್ಯಾಮರಾ ಬಳಸುವ ಮತ್ತು ಅತ್ಯುತ್ತಮ ಫೋಟೋ ತೆಗೆಯುವ ತಾಂತ್ರಿಕತೆಯನ್ನು ಕಲಿಯುತ್ತಾ ಹೋದೆ. ಕ್ಯಾಮರ ಹೊಂದಿದ ಸ್ನೇಹಿತ ಬಳಗವನ್ನು ಸಂಪರ್ಕಿಸಿದೆ. ಅಪ್ಯಾಚರ್, ಶಟರ್ ಸ್ಪೀಡ್, ಐಎಒ, ಫ್ರೇಮ್ ರೇಟ್, ವೈಟ್ ಬ್ಯಾಲೆನ್ಸ್ ಇವುಗಳನ್ನು ಒಳಗೊಂಡಂತೆ ಕ್ಯಾಮರಾಗೆ ಸಂಬಂಧಿ ಸಿದ ತಾಂತ್ರಿಕ ಅಂಶಗಳನ್ನು ಕಲಿತುಕೊಂಡೆ. ಇನ್ನೂ ಕಲಿಯು ತ್ತಿರುವೆ. ಫೋಟೋ ತೆಗೆಯುವುವಾಗ ಬೆಳಕು ನಮ್ಮ ಬೆನ್ನ ಹಿಂದೆ ಇರಬೇಕು ಇಂತಹ ಪ್ರಮುಖವಾದ ವಿಚಾರವನ್ನು ಅರಿತುಕೊಂಡೆ.

ನಂತರ ನಗರದಿಂದ ದೂರದ ಕಾಡು ಪ್ರದೇಶಕ್ಕೆ ಹೋಗಿ ಅಲ್ಲಿ ಕಾಣಸಿಗುವದನ್ನೆಲ್ಲಾ ಕ್ಯಾಮರಾದಲ್ಲಿ ಸೇರಿಸುತ್ತಾ ಹೋದೆ. ಪ್ರಕೃತಿ, ವನ್ಯಜೀವಿಗಳ ಫೋಟೋಗಳನ್ನು ತೆಗೆಯುವಲ್ಲಿ ಮುಂದಾದೆ. ಪಕ್ಷಿಗಳ ಫೋಟೋಗಳನ್ನು ತೆಗೆಯುವಲ್ಲಿ ಹೆಚ್ಚು ಒಲವು ಬೆಳೆಯಿತು. ವಿವಿಧ ಜಾತಿಯ ಪಕ್ಷಿಗಳ ಹಾವಭಾವ, ಹಾರಾಟ, ಅವುಗಳ ಚಟುವಟಿಕೆಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿದೆ. ನನ್ನ ಊರು ರಾಯಚೂರು ನಗರದಲ್ಲಿ ಕಂಡುಬರುವ

ವಿವಿಧ ಪಕ್ಷಿಗಳನ್ನು ಕ್ಯಾಮರಾದ ಮೂಲಕ ಶೂಟ್ ಮಾಡಿದೆ. ಈಗ ನೂರ ಐವತ್ತಕ್ಕೂ ಅಧಿಕ ಪಕ್ಷಿಗಳು ನನ್ನ ಕ್ಯಾಮರಾ ಒಳಗೆ ಸೇರಿವೆ. ರಾಯಚೂರು ಸುತ್ತಮುತ್ತ ಎಲ್ಲೇ ಹೋದರೂ ನವಿಲುಗಳು ದಂಡು, ದಂಡಾಗಿ ಇರುವುದನ್ನು ಕಂಡು ಬೆರಗಾದೆ. ನವಿಲುಧಾಮ ಮಾಡುವಷ್ಟು ನವಿಲುಗಳು ಇಲ್ಲಿವೆ. ಪಕ್ಷಿಗಳ ಫೋಟೋಗಳನ್ನು ಮಾತ್ರ ತೆಗೆಯುತ್ತಾ ಇರದೇ ಆಯಾ ಪಕ್ಷಿಗಳ ಕುರಿತಾಗಿ ತಿಳಿಯುತ್ತಾ ಹೋದೆ. ಪಕ್ಷಿಗಳ ಕುರಿತಾಗಿ ಬರೆದಿರುವ

ಪಕ್ಷಿಪ್ರೇಮಿ ಸಲೀಂ ಅಲಿ ಅವರು ಬರೆದ ಪುಸ್ತಕವನ್ನು ಒಳಗೊಂಡಂತೆ ಹತ್ತು ಹಲವಾರು ಪುಸ್ತಕಗಳನ್ನು ತಿರುವಿ ಹಾಕಿದೆ. ಟಿಟಿಬ್ಬ ಪಕ್ಷಿಯು ಬಯಲಲ್ಲಿ ಮೊಟ್ಟೆಯನ್ನು ಮರಿ ಮಾಡಲು ಕುಳಿತಾಗ ಶಾಖ ಹೆಚ್ಚಾದಾಗ ನೀರಿನಲ್ಲಿ ಮುಳುಗಿ ಬಂದು ಕುಳಿತುಕೊಳ್ಳುತ್ತದೆ, ಗರಿಬಿಚ್ಚಿ ಕುಣಿಯುವ ನವಿಲು ಗಂಡು ನವಿಲು, ಸಂಗಾತಿಯನ್ನು ಸೆಳೆಯಲು ಚೆಂದನೆಯ ಗಂಡು ಪಕ್ಷಿಗಳು ಮಾಡುವ ವಿವಿಧ ಚಟುವಟಿಕೆಗಳು ಅಚ್ಚರಿ ಹುಟ್ಟಿಸುತ್ತವೆ –

ಹೀಗೆ ಪಕ್ಷಿಗಳ ಕುರಿತಾದ ಇನ್ನೂ ಮುಂತಾದ ಅಂಶಗಳು ಗಮನಸೆಳೆಯುತ್ತವೆ. ರಾಯಚೂರು ನಗರದ ಹೊರವಲಯದಲ್ಲಿ ಕಣ್ಣಿಗೆ ಬಿದ್ದ ಜಿಂಕೆ, ನರಿ, ಮುಂಗುಸಿ, ಉಡ, ಹಾವು, ಚೇಳು, ಹುಳು–ಹುಪ್ಪಡಿಗಳ ಫೋಟೋ ತೆಗೆಯುತ್ತಾ ಹೋದೆ.

ಕ್ಯಾಮೆರಾದಲ್ಲಿ ಸೆರೆಯಾದ ಕೆಲವು ಫೋಟೋಗಳನ್ನು ನೋಡುತ್ತಾ ಕುಳಿತಾಗ, ಮನದಲ್ಲಿ ಆಪ್ತ ನೆನಪುಗಳು, ಪರಿಸರದೊಂದಿಗೆ ಕಳೆದ ಕ್ಷಣಗಳ ನೆನಪುಗಳು!

ಪುಸ್ತಕ ವಿಮಾನ

» ಎಂ.ಎಸ್.ಹೆಬ್ಬಾರ್

ಹೆಂಡತಿಯನ್ನು ಸಂಪೂರ್ಣ ಅರ್ಥ ಮಾಡಿಕೊಂಡ ಗಂಡ ಹುಟ್ಟಿಲ್ಲವಂತೆ. ಓದುಗರನ್ನು ಸಂಪೂರ್ಣ ಅರ್ಥ ಮಾಡಿಕೊಂಡ ಸಂಪಾದಕನೂ. ಮೊದಲ ಮಾತಿನ ಬಗ್ಗೆ ಯಾರದ್ದೂ ತಕರಾರು ಇರಲಿಕ್ಕಿಲ್ಲ. ಇನ್ನು ಎರಡನೇ ಮಾತು ಅಪ್ಪಟ ಸತ್ಯ ಎಂಬುದು, ಕಾಲು ಶತಮಾನದ ಕಾಲ ಕನ್ನಡದ ಪತ್ರಿಕೆಗಳಿಗೆ ಸಂಪಾದಕನಾಗಿ ಕೆಲಸ ಮಾಡಿದ ಅನುಭವದಿಂದ ನನಗಂತೂ ಮನವರಿಕೆ ಆಗಿದೆ. ಅದರಲ್ಲೂ 'ಆಸ್ಕ್ ದ ಎಡಿಟರ್' ಅಂಕಣ ಬರೆಯಲಾರಂಭಿಸಿದಂದಿನಿಂದ ಓದುಗರನ್ನು ಯಾವ ಸಂಪಾದಕನೂ ಅರ್ಥ ಮಾಡಿಕೊಳ್ಳಲಾರ ಎಂಬುದು ಸಾಬೀತಾಗಿ ಹೋಗಿದೆ. ಇದಕ್ಕೆ ಕಾರಣ ಈ ಅಂಕಣಕ್ಕೆ ಓದುಗರಿಂದ ಬರುವ ಪ್ರಶ್ನೆಗಳು. ಒಂದೊಂದು ಪ್ರಶ್ನೆಯೂ ಚಿತ್ರ-ವಿಚಿತ್ರ. ನನಗೆ ದಿನಕ್ಕೆ ಈ ಅಂಕಣಕ್ಕಾಗಿ ಕನಿಷ್ಠ ಇಪ್ಪತ್ತು ಪ್ರಶ್ನೆಗಳಾದರೂ ಬರುತ್ತವೆ. ಕೆಲವು ತೀರಾ ವೈಯಕ್ತಿಕವಾಗಿದ್ದರೆ, ಇನ್ನು ಕೆಲವು ಆಸ್ತಿಗೆ, ವೈವಾಹಿಕ ಜೀವನ, ಗಂಡ-ಹೆಂಡತಿ ಜಗಳ, ಮಕ್ಕಳ ರಾದ್ಧಾಂತ, ಅತ್ತೆ-ಸೊಸೆ ಕಾದಾಟಕ್ಕೆ ಸಂಬಂಧಿಸಿದವುಗಳು. ಮತ್ತೆ ಕೆಲವು ನನ್ನ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದ್ದು. ಯಾವ ಪ್ರಶ್ನೆಯೂ ತೀರಾ ನೀರಸ ಎನ್ನುವಂತೆ ಇರುವುದಿಲ್ಲ. ತನ್ನ ಹೆಸರು ಪತ್ರಿಕೆಯಲ್ಲಿ ಪ್ರಕಟವಾಗಬೇಕು ಎಂಬ ವಾಂಛೆಯಿಂದ ಕೇಳಿದ ಪ್ರಶ್ನೆಗಳಲ್ಲ. ನನ್ನ ಉತ್ತರ ಏನಿರುತ್ತದೆ, ನಾನು ಏನು ಹೇಳುತ್ತೇನೆ ಎಂದು ತಿಳಿದುಕೊಳ್ಳುವ ಗಂಭೀರ ಉದ್ದೇಶದಿಂದ ಕೇಳಿದವುಗಳು.'

ಇದು ವಿಶ್ವೇಶ್ವರ ಭಟ್ ಅವರ ಹೊಸ ಪುಸ್ತಕದಲ್ಲಿ, ಸ್ವತಃ ಲೇಖಕರೇ ಬರೆದುಕೊಂಡಿರುವ ಅರಿಕೆಯ ಸ್ವರೂಪದ 'ಆಶಯ ಸಾಂತ್ವನ, ಸಂತಸ'. ಈ ಹೊಸ ಪುಸ್ತಕದ ಹೆಸರು 'ಆಸ್ಕ್ ದ ಎಡಿಟರ್ ಭಾಗ – 3'. ಮೇಲಿನ ಸಾಲುಗಳ ಓಘವನ್ನು ಗಮನಿಸಿ : 'ಹೆಂಡತಿಯನ್ನು ಅರ್ಥ ಮಾಡಿಕೊಂಡ ಗಂಡ ಇನ್ನೂ ಜನಿಸಿಲ್ಲ!' ಈ ಸಾಲಿನ ಮೂಲಕ, ನೇರವಾಗಿ, ಲೇಖಕರು ಓದುಗನ ಚಿತ್ತವನ್ನೇ ಪ್ರವೇಶಿಸುವ ಪರಿ ನಿಜಕ್ಕೂ ವಿಸ್ಮಯ ಹುಟ್ಟಿಸುತ್ತದೆ! ಸುಮಾರು 230 ಪುಟಗಳ ಈ ಪುಸ್ತಕದ ಎಲ್ಲಾ ಬರಹಗಳೂ, ಅಂದರೆ ಪ್ರಶ್ನೋತ್ತರ ರೂಪದಲ್ಲಿರುವ ಬರಹಗಳು, ಇಂತಹದ್ದೇ ಜಾಯಮಾನ ಹೊಂದಿವೆ : ಅಂದರೆ, ಓದಿಸಿಕೊಂಡು ಹೋಗುವ ಗುಣ, ಚುರುಕಾದ ಶೈಲಿಯಿಂದ ಓದುಗರ ಮನ ಸೆಳೆಯುವ, ಮಾತ್ರವಲ್ಲ, ಮನಸ್ಸನ್ನೇ ಪ್ರವೇಶಿಸುವ ಧಾಟಿ, ಆ ಮೂಲಕ ಒಂದು ಉತ್ತಮ ಓದಿನ 'ಅನುಭವ ನೀಡುವ' ಪರಿ : ಇವೆಲ್ಲವೂ ಸೇರಿ, 'ಆಸ್ಕ್ ದ ಎಡಿಟರ್ – 3' ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.

ಹಾಗೆ ನೋಡಹೋದರೆ, ಇದೇ ಸರಣಿಯ ಎರಡು ಸಂಪುಟಗಳು ಈಗಾಗಲೇ ಹೊರಬಿದ್ದಿದ್ದು, ಅಪಾರ ಓದುಗರ ಮೆಚ್ಚುಗೆಯನ್ನು ಗಳಿಸಿವೆ; ಈಗ ಮೂರನೆಯ ಸಂಪುಟ ಹೊರಬಂದಿದೆ. ಪ್ರಶ್ನೋತ್ತರ ರೂಪದಲ್ಲಿರುವ ಬರಹಗಳನ್ನು ಹೊಂದಿರುವ ಹೊಸ ಹೊಸ ಸಂಪುಟಗಳು ಒಂದರ ಹಿಂದೆ ಒಂದರಂತೆ ಪ್ರಕಟಗೊಳ್ಳುತ್ತಿರುವುದು, ಇಂತಹ ಬರಹಗಳ ಜನಪ್ರಿಯತೆಯನ್ನು, ಉಪಯುಕ್ತತೆಯನ್ನು ತೋರಿಸುತ್ತವೆ.

ವಿಶ್ವೇಶ್ವರ ಭಟ್ ಅವರ 'ಆಸ್ಕ್ ದ ಎಡಿಟರ್' ಪುಸ್ತಕದಲ್ಲಿರುವ ಬರಹಗಳು ಉಪಯುಕ್ತ ಬರಹಗಳೂ ಹೌದು ಎಂಬುದಕ್ಕೆ ಪುರಾವೆಗಳಿವೆ. ಓದುಗರು ಕೆಲವು ಬಾರಿ ಕಚಗುಳಿ ಇಡುವಂತಹ ಪ್ರಶ್ನೆಗಳನ್ನು, ಕುಚೋದ್ಯದ ಪ್ರಶ್ನೆಗಳನ್ನು ಕೇಳಿದರೆ, ಹಲವು ಬಾರಿ, ತಮ್ಮ ಬದುಕಿನ ತಳಮಳಗಳನ್ನು ಪ್ರಶ್ನೆಗಳ ರೂಪದಲ್ಲಿ ಕೇಳಿ, ಉತ್ತರ ಬಯಸುತ್ತಾರೆ! ಅಂತಹ ಕಳಕಳಿಯ ಪ್ರಶ್ನೆಗಳನ್ನು ಗುರುತಿಸುವ ಲೇಖಕರು, ಅದಕ್ಕೆ ತಕ್ಕಂತೆ ಉತ್ತರ ನೀಡುತ್ತಾರೆ : ಇದು ಇಲ್ಲಿಗೇ ನಿಲ್ಲುವುದಿಲ್ಲ; ಇಂತಹ ಉತ್ತರವನ್ನು ಪಡೆದ ಓದುಗರು, ಆ ನಂತರ, ಪ್ರತ್ಯೇಕವಾಗಿ ವಿಶ್ವೇಶ್ವರ ಭಟ್ ಅವರನ್ನು ಸಂಪರ್ಕಿಸಿ, ಅವರು ನೀಡದ ಉತ್ತರದಿಂದಾಗಿ, ತಮ್ಮ ಬದುಕಿನ ತಳಮಳವು ಶಮನಗೊಂಡು, ತಮ್ಮ ಸಮಸ್ಯೆಗೆ ಪರಿಹಾರವೂ ದೊರಕಿದೆ ಎಂದು ಧನ್ಯವಾದ ಹೇಳಿದ್ದುಂಟು! ಇದರಿಂದ ಸ್ಪಷ್ಟವಾಗುವುದೆಂದರೆ, ಚುರುಕಾದ ಮತ್ತು ಹರಿತವಾದ ಶೈಲಿಯ,



ಆಸ್ಕ್ ದ ಎಡಿಟರ್ 3
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ ಬೆಂಗಳೂರು
8431007267
ಬೆಲೆ ರು.250/-

ನಿಮ್ಮ ಪ್ರಶ್ನೆಗೆ ಸಾಂತ್ವನದ ಉತ್ತರ!

ಕೆಲವು ಬಾರಿ ತುಂಟತನವೂ ಬೆರೆತಿರುವ ಇಲ್ಲಿನ ಉತ್ತರಗಳು, ಹಲವು ಓದುಗರ ಸವ ಸ್ಯೆಗಳಿಗೆ ಪರಿಹಾರವನ್ನೂ ಒದಗಿಸುತ್ತಿವೆ! ಒಬ್ಬ ಓದುಗರಂತೂ, 'ನಾನು ಹೆಂಡತಿಯಿಂದ ಹೈರಣಾಗಿ, ಪರಿತಪಿಸುತ್ತಿದ್ದರೆ, ನೀವು ಇಷ್ಟು ಸರಳವಾಗಿ ನನ್ನ ಸಮಸ್ಯೆಯನ್ನು ಬಗೆಹರಿಸಿಬಿಡುವುದಾ?' ಎಂದು ಕಿಚಾಯಿಸುವ ಧ್ವನಿಯಲ್ಲಿ, ಧನ್ಯವಾದ ಹೇಳಿದ್ದನ್ನು, ಲೇಖಕರ ವಿಶ್ವೇಶ್ವರ ಭಟ್ ಅವರು ಇಲ್ಲಿ ಉದಹರಿಸಿದ್ದಾರೆ.

ಈ ಪುಸ್ತಕದ ಹೂರಣವೇ, ಓದುಗರ ಪ್ರಶ್ನೆಗಳಿಗೆ ವಿಶ್ವೇಶ್ವರ ಭಟ್ ಅವರ ಉತ್ತರಗಳು: ಚುರುಕಾದ ಶೈಲಿ, ತುಂಟತನದ ಛಾಯೆ, ಅಗತ್ಯ ಎನಿಸಿದಾಗ ಕಳಕಳಿ ಮತ್ತು ಸಾಂತ್ವನ ಎಲ್ಲವನ್ನೂ ತುಂಬಿಕೊಂಡಿರುವ ಇಲ್ಲಿನ ಉತ್ತರಗಳು, ಈ ಪುಸ್ತಕವನ್ನು ಉತ್ತಮ ಪುಸ್ತಕಗಳ ಸಾಲಿಗೆ ಸೇರಿಸಿವೆ. ಈ ಸರಣಿಯಲ್ಲಿ ಈಗಾಗಲೇ ಮೂರು ಸಂಪುಟಗಳು ಹೊರಬಂದಿದ್ದು, ಮುಂದಿನ ಸಂಪುಟಗಳಿಗಾಗಿ ಓದುಗರು ಕಾಯುವಂತೆಯೂ ಮಾಡಿವೆ. ಮತ್ತೆ, ಇಲ್ಲಿನ ಬರಹಗಳಿಗೆ, ಸಾಂಕ್ರಾಮಿಕ ಗುಣವಿದೆ; ನಗೆಯು ಸಾಂಕ್ರಾಮಿಕ ಎನ್ನುತ್ತಾರೆ; ಹಾಗೆಯೇ, ಇಲ್ಲಿನ ಸಾಂತ್ವನದ ಉತ್ತರಗಳೂ, ಓದುಗರಲ್ಲಿ ಒಂದು ಸ್ಫೂರ್ತಿಯನ್ನು ಹುಟ್ಟುಹಾಕುತ್ತವೆ: ಅದೇನೆಂದರೆ, ನಾವೂ ಸಹ ಅದೇಕೆ ವಿಶ್ವೇಶ್ವರ ಭಟ್ ಅವರಿಗೆ ಒಂದು ಪ್ರಶ್ನೆಯನ್ನು ಕಳಿಸಬಾರದು ಮತ್ತು ಅವರಿಂದ ಉತ್ತರ ಪಡೆಯಬಾರದು ಎಂದು! ಇದಕ್ಕೆ ಉದಾಹರಣೆ ನಾನೇ! ಪುಸ್ತಕ ಓದಿದ ತಕ್ಷಣ, ಒಂದು ಪ್ರಶ್ನೆಯನ್ನು ಬರೆದು ಕಳಿಸಿ, ವಿಶ್ವೇಶ್ವರ ಭಟ್ ಅವರ ಉತ್ತರಕ್ಕಾಗಿ ಕಾಯುತ್ತಿದ್ದೇನೆ! ಈ ಪುಸ್ತಕವನ್ನು ನೀವು ಪೂರ್ತಿ ಓದಿದ್ದೇ ಆದರೆ, ನೀವೂ ಒಂದು ಪ್ರಶ್ನೆಯ ಬಾಣವನ್ನು ಅವರಿಗೆ ಎಸೆಯದಿದ್ದರೆ ಕೇಳಿ!

ಪ್ರಶಸ್ತಿ ಪುರಸ್ಕೃತ ಕಥಾಸಂಕಲನ

» ಶಶಿ

ಕನ್ನಡ ಕಥನ ಪರಂಪರೆಯ ಹೊಸ ಪೀಳಿಗೆಯ ವಾರಸುದಾರರಾಗಿ ಪ್ರಕಾಶ ಪುಟ್ಟಪ್ಪನವರು ತಮ್ಮ ಈ ಕಥೆಗಳ ಮೂಲಕ ಪ್ರಕಾಶಿಸುತ್ತಾರೆ ಎಂದರೆ ಅದು ಕೇವಲ ಅಲಂಕಾರಿಕವಲ್ಲ' – ಇದು ಈ ಕಥಾ ಸಂಕಲನದ ಕುರಿತು ಮುನ್ನುಡಿಯಲ್ಲಿ ಮಹೇಶ್ವರಿ ಯು. ಅವರು ಹೇಳಿದ ಮಾತುಗಳು. ಪ್ರಕಾಶ್ ಪುಟ್ಟಪ್ಪ ಅವರ 'ಗಾಂಧೀ ಜೋಡಿನ ಮಳಿಗೆ' ಕಥಾ ಸಂಕಲನದಲ್ಲಿ 14 ಕಥೆಗಳಿದ್ದು, ಇಲ್ಲಿ ಕವಿ ಮನಸಿನ ಕಥೆಗಾರನ ಕೌಶಲ ಎದ್ದು ಕಾಣಿಸುತ್ತದೆ. ಈಸೂರು ಎಂಬ ಪುಟ್ಟ ಹಳ್ಳಿಯಲ್ಲಿದ್ದ 'ಕ್ವೀನ್ ಎಲಿಜಬೆತ್ ಕಾಬ್ಲರ್ ಶಾಪ್' ಇದು, 'ಗಾಂಧಿ ಜೋಡಿನ ಮಳಿಗೆ' ಯಾಗುವ ಪರಿಯೇ ಕಥೆಗಾರನ ಕಥಾಕೌಶಲಕ್ಕೆ ಒಂದು ಉತ್ಕೃಷ್ಟ ಉದಾಹರಣೆ; ಆದರೆ, 1948 ಜನವರಿ 30ರಂದು ನಡೆದ ದುರ್ಘಟನೆಯಿಂದಾಗಿ, ಮುನಿಯನೆಂಬಾತನು ಗಾಂಧಿಗಾಗಿ ಹೊಲಿದಿಟ್ಟ ಜೋಡು, ಅವರಿಗೆ ತಲುಪಲೇ ಇಲ್ಲ! ಈ ಕಥಾ ಸಂಕಲನವು 2024ನೇ ಸಾಲಿ ರಾಘವೇಂದ್ರ ಪಾಟೀಲ ಕಥಾ ಪ್ರಶಸ್ತಿಯನ್ನು ಜಂಟಿಯಾಗಿ ಪಡೆದುಕೊಂಡಿದೆ.

''ಪೊನ್ನಾಚಿ, ಮಲೆಮಹದೇಶ್ವರ ಬೆಟ್ಟದ ಪಕ್ಕದಲ್ಲಿರುವ ಪುಟ್ಟ ಹಳ್ಳಿ ಸುತ್ತಲೂ ದಟ್ಟವಾದ ಕಾಡಿನಿಂದ ಆವರಿಸಿರುವ ಹಳ್ಳಿ. ಆ ಬಗ್ಗೆ ನಾವು ದೂರ ನಿಂತು ರೊಮ್ಯಾಂಟಿಕ್ ಆಗಿ ಮಾತನಾಡಬಹುದಾದರೂ ಅಲ್ಲಿಯ ಸುಖ ದುಃಖಗಳು ಅಲ್ಲಿ ವಾಸಮಾಡುವವರಿಗೇ ಗೊತ್ತು. ಈ ಪ್ರದೇಶದ ಮಣ್ಣಿನ ಗುಣವೋ ಗಾಳಿಯ ಗುಣವೋ ಗೊತ್ತಿಲ್ಲ, ಇಲ್ಲಿ ಅನೇಕ ಪ್ರತಿಭಾವಂತರೂ ಸೃಜನಶೀಲರೂ ಹುಟ್ಟಿದ್ದಾರೆ. ಪ್ರಕಾಶ್ ಪುಟ್ಟಪ್ಪ ಅಂತಹವರಲ್ಲಿ ಒಬ್ಬರು. ಅವರ ಮೂಲ ಹೆಸರು ಜಯಪ್ರಕಾಶ್, ಚಾಮರಾಜನಗರ ಸಮೀಪದ ಗ್ರಾಮವೊಂದರಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರು. ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಸಾಹಿತ್ಯವನ್ನು ಒಂದು ವಿಷಯವನ್ನಾಗಿ ಅಧ್ಯಯನ ಮಾಡಿದವರಲ್ಲ ಮತ್ತು ಬರವಣಿಗೆಗೂ ಮನಸ್ಸು ಕೊಟ್ಟಿರಲಿಲ್ಲ. ಮೊದಲು ಕವಿತೆಗಳ ಪುಸ್ತಕ 'ಮಣ್ಣಿಗೆ ಬಿದ್ದ ಮಳೆ' ಹೊರತಂದರು. ನಂತರ ಕತೆ ಬರೆಯಲು ಆರಂಭಿಸಿದರು. ಇದೀಗ ಹದಿನಾಲ್ಕು ಕತೆಗಳ ಸಂಕಲನ ಹೊರತರುತ್ತಿದ್ದಾರೆ. ಇಲ್ಲಿಯ ಅನೇಕ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡು ಓದುಗರನ್ನು ತಲುಪಿದೆ. ಕೆಲವು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಮತ್ತು ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆಯನ್ನೂ ಗಳಿಸಿದೆ. ಪ್ರಕಾಶ್ ಪುಟ್ಟಪ್ಪ ಕವಿ ಮನಸ್ಸಿನ ಕತೆಗಾರ. ಇವರಿಗೆ ಈಸೂರು ಹೋರಾಟ ಒಂದು ಕತೆಗೆ ಪ್ರೇರಣೆ ನೀಡಿರುವುದು ಮತ್ತು ಅದನ್ನು ವಿಭಿನ್ನವಾಗಿ ನಿರ್ವಹಿಸಿರುವುದು ಅಚ್ಚರಿಯನ್ನು ತರುತ್ತದೆ. ತಮ್ಮ ಭಾಗದ ಧರ್ಮ ಸಂಬಂಧಿಯಾದ ಆಚರಣೆಗಳನ್ನೂ ಆಧರಿಸಿದ ಕತೆಯೂ ಇದೆ. ಭಾಷೆ, ನಿರ್ವಹಣೆ ಮತ್ತು ವಸ್ತುವಿನ ದೃಷ್ಟಿಯಿಂದ ನವೀನವೂ ಲವಲವಿಕೆಯದ್ದೂ ಆಗಿದೆ.'' (ಬೆನ್ನುಡಿಯಲ್ಲಿ ಕೆ. ವೆಂಕಟರಾಜು).

ಗಾಂಧೀ ಜೋಡಿನ ಮಳಿಗೆ
ಕಥಾ ಸಂಕಲನ
ಲೇ: ಪ್ರಕಾಶ್ ಪುಟ್ಟಪ್ಪ
ಪ್ರ: ಅಮೂಲ್ಯ ಪುಸ್ತಕ ಬೆಂಗಳೂರು
9448676770
ಬೆಲೆ ರು.175/-

ಜುಂಜಪ್ಪನ ಮಹಿಮೆ

ಜುಂಜಪ್ಪನ ಪುರಾಣವು ನಮ್ಮ ರಾಜ್ಯದ ಪ್ರಮುಖ ಜನಪದ ಕಾವ್ಯಕಥನಗಳಲ್ಲಿ ಒಂದು. ಹಾಡಿನ ಶಿವಣ್ಣ ಎಂಬಾತ ಹೇಳಿದ ಕಾವ್ಯವು ಹಿಂದೆಯೇ ಅಕ್ಷರರೂಪದಲ್ಲಿ ಪ್ರಕಟವಾಗಿದ್ದು, ಅದನ್ನು ಗದ್ಯ ರೂಪಕ್ಕೆ ತಂದು, ಪುಸ್ತಕದ ಮೂಲಕ ಪ್ರಸ್ತುತಪಡಿಸಿದವರು ಡಾ. ಎನ್.ತಿರುಮಲೇಶ್ವರ ಭಟ್. ಈ ಪುಸ್ತಕದ ಎಲ್ಲಾ ಅಧ್ಯಾಯಗಳಿಗೂ ರೇಖಾ ಚಿತ್ರಗಳೂ ಇವೆಯಾಗಿದ್ದರಿಂದ, ಓದು ಅರ್ಥಪೂರ್ಣ ಆಗಬಲ್ಲದು. ಜತೆಗೆ, ಜುಂಜಪ್ಪನ ಕಾವ್ಯದ ಪರಿಚಯವನ್ನು ಹೊಸದಾಗಿ ಮಾಡಿಕೊಳ್ಳಲು ಬಯಸುವವರಿಗೂ ಇದು ಉಪಯುಕ್ತ.



ಜುಂಜಪ್ಪನ ಮಹಿಮೆ
ಲೇ: ಡಾ. ಎನ್. ತಿರುಮಲೇಶ್ವರ ಭಟ್
ಪ್ರ: ಶ್ರೀರಾಮ ಪ್ರಕಾಶನ ಮಂಡ್ಯ
9448930173
ಬೆಲೆ ರು. 200/-

» ಎನ್.ಎಸ್.ಶ್ರೀಧರ ಮೂರ್ತಿ

ಭಾರತೀಯ ಖಗೋಳ ಶಾಸ್ತ್ರಜ್ಞರು ಗುರುತಿಸಿದ ಗ್ರಹಣಗಳು

ಗ್ರಹಣಗಳು ಸಂಭವಿಸುವುದನ್ನು ಭಾರತೀಯ ಖಗೋಳಶಾಸ್ತ್ರಜ್ಞರು ನೂರಾರು ವರ್ಷಗಳ ಹಿಂದೆಯೇ ನಿಖರವಾಗಿ ಗುರುತಿಸಿ, ಮುಂಚಿತವಾಗಿ ಹೇಳುತ್ತಿದ್ದರು! ಇಂತಹ ಹಲವು ವಿಚಾರಪ್ರಚೋದಕ ಬರಹಗಳನ್ನು ಒಳಗೊಂಡ 'ಕ್ಯಾಲೆಂಡರ್ : ಇತಿಹಾಸ, ವರ್ತಮಾನ' ಕೃತಿಯು 17.8.2025 ರಂದು ಬಿಡುಗಡೆಯಾಗುತ್ತಿದೆ. ಆ ಕೃತಿಯ ಆಯ್ದ ಭಾಗ ಇಲ್ಲಿದೆ.

ಪ್ರಾಚೀನ ಭಾರತೀಯ ಪಂಚಾಂಗಶಾಸ್ತ್ರರನ್ನು ಖಗೋಳಶಾಸ್ತ್ರಜ್ಞರು ಎಂದೂ ಕೂಡ ಕರೆಯಬಹುದಾಗಿದೆ. ಇದಕ್ಕೆ ಬಹಳ ಮುಖ್ಯಕಾರಣವೆಂದರೆ ಅವರ ಲೆಕ್ಕಾಚಾರಗಳು ಅಷ್ಟು ವೈಜ್ಞಾನಿಕವಾಗಿದ್ದವು. ನಾವು ಇದನ್ನು ಸರಿಯಾಗಿ ಗ್ರಹಿಸಿಕೊಳ್ಳ ಬಹುದಾದ ನೆಲೆ ಎಂದರೆ ಗ್ರಹಣಗಳು. ಭಾರತೀಯ ಸಿದ್ಧಾಂತ ಗ್ರಂಥಗಳಲ್ಲಿ ಗ್ರಹಣಗಳ ಲೆಕ್ಕಾಚಾರದಲ್ಲಿ ಬಹಳ ಮಹತ್ವವನ್ನು ನೀಡಿದ್ದಾರೆ. ಕಾಲ ಬದಲಾವಣೆಗಳನ್ನು ಅನುಸರಿಸಿ ಅದಕ್ಕೆ 'ಸೂಕ್ತಸಂಸ್ಕಾರ'ಗಳನ್ನು ನೀಡುತ್ತಿದ್ದದ್ದೂ ಕೂಡ ಕಂಡು ಬರುತ್ತದೆ. ಋಗ್ವೇದದಷ್ಟು ಹಿಂದೆಯೇ ಗ್ರಹಣಗಳ ಉಲ್ಲೇಖವಿದೆ.

ಸ್ವಾರ್ಭಾನುರ್ಹವಾಅಸುರ: ಸೂರ್ಯಂತಮಸಾವಿವ್ಯಾಧ- ಅಂದರೆ ಅಸುರನಾದ ಸ್ವರ್ಭಾನುವೇ ತನ್ನ ತಮಸ್ಸಿನಿಂದ ಸೂರ್ಯನನ್ನು ಆಕ್ರಮಿಸಿದನು. ಇದು ಒಂದು ಉದಾಹರಣೆ ಮಾತ್ರ. ನಮ್ಮ ಪುರಾಣಗಳನ್ನು ನೋಡಿದರೆ ಸೂರ್ಯ ಮತ್ತು ಚಂದ್ರರನ್ನು ನುಂಗುವ ಹಲವು ರಾಕ್ಷಸರ ಕಥೆಗಳು ಬರುತ್ತದೆ. ಭಾಗವತದಲ್ಲಿ ದೇವ-ದಾನವರು ಹಾಲಕಡಲನ್ನು ಕಡೆದು ಅಮೃತವನ್ನು ಪಡೆದ ಕಥೆ ಬರುತ್ತದೆ. ಇಲ್ಲಿ ಅಮೃತವನ್ನು ಹಂಚಿಕೊಳ್ಳುವ ವಿಷಯದಲ್ಲಿ ಕದನ ಉಂಟಾದಾಗ ಮಹಾವಿಷ್ಣುವು ಮೋಹಿನಿ ರೂಪವನ್ನು ತಾಳಿ ಅಮೃತವನ್ನು ಹಂಚಿದನು, ಈ ಮೋಸವನ್ನು ಅರಿತ ಸ್ವರ್ಭಾನು ಎನ್ನುವ ರಾಕ್ಷಸ ಉಪಾಯವಾಗಿ ದೇವತೆಗಳ ಸಾಲಿನಲ್ಲಿ ಕುಳಿತನು. ಇದನ್ನು ಸೂರ್ಯ ಚಂದ್ರರು ಕಂಡರು. ಆಗ ವಿಷ್ಣುವು ತನ್ನ ಚಕ್ರದಿಂದ ಸ್ವರ್ಭಾನುವಿನ ತಲೆಯನ್ನು ಕತ್ತರಿಸಿದನು.

ಆದರೆ ಅಮೃತವನ್ನು ಕುಡಿದಿದ್ದರಿಂದ ಅವನಿಗೆ ಸಾವಿರಲಿಲ್ಲ. ಹೀಗಾಗಿ ಬ್ರಹ್ಮನು ತಲೆ ಮತ್ತು ದೇಹವನ್ನು ಗ್ರಹಗಳನ್ನಾಗಿ ಮಾಡಿದನು. ಅವೆರಡೇ ರಾಹು-ಕೇತುಗಳು. ಸೂರ್ಯ ಚಂದ್ರರು ತಮಗೆ ಮಾಡಿದ ಮೋಸವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರತಿ ಗ್ರಹಣದಲ್ಲಿಯೂ ಅವರನ್ನು ನುಂಗಲು ಬರುತ್ತವೆ.ಇದು ಬಹಳ ಜನಪ್ರಿಯವಾಗಿ ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿಯೂ ದೊರಕುವ ಕಥೆ. ಇಂತಹ ಕಥೆಗಳು ಇನ್ನೂ ಹತ್ತು ಹಲವಿದೆ. ಇದರ ಸ್ವಾರಾಂಶ ಇಷ್ಟೇ : ಆರಂಭದಿಂದಲೂ ಗ್ರಹಣದ ಕುರಿತು ಭಾರತೀಯರು ತಿಳಿಯಲು ಪ್ರಯತ್ನಿಸುತ್ತಿದ್ದರು.

ಮಹಾಭಾರತದಲ್ಲಿ

ಮಹಾಭಾರತದಲ್ಲಿ ಗ್ರಹಣಗಳಿಗೆ ಬಹಳ ಮಹತ್ವವನ್ನು ಕೊಟ್ಟು ಉಲ್ಲೇಖಿಸಲಾಗಿದೆ. ಇದರಲ್ಲಿ ಬಹಳ ಮುಖ್ಯವಾದದ್ದು ಮಹಾಭಾರತ ಆರಂಭವಾದ ಹದಿಮೂರನೆಯ ದಿನ ಸೂರ್ಯಾಸ್ತದ ಮೊದಲು ಜಯದ್ರಥನ ಶಿರಚ್ಛೇದನ ಮಾಡುವುದಾಗಿ ಅರ್ಜುನನು ಶಪಥ ಮಾಡುತ್ತಾನೆ. ಇದಕ್ಕೆ ಕಾರಣ ಜಯದ್ರಥನು ಚಕ್ರವ್ಯೂಹವನ್ನು ಪ್ರವೇಶಿಸಿದ ಅಭಿಮನ್ಯುವಿನ ಸಾವಿಗೆ ಶಿವನಿಂದ ವರವನ್ನು ಪಡೆದು ಕಾರಣನಾಗಿದ್ದು, ಆದರೆ ಭೀಷ್ಮರ ವ್ಯೂಹದಿಂದ ಅದು ಸಾಧ್ಯವಾಗದೆ ಅರ್ಜುನ ಅಗ್ನಿಪ್ರವೇಶಕ್ಕೆ ಸಿದ್ದನಾಗುತ್ತಾನೆ. ಆಗ ಶ್ರೀಕೃಷ್ಣನು ಅರ್ಜುನನ್ನು ಕಾಪಾಡಲು ತನ್ನ ಸುದರ್ಶನ ಚಕ್ರದಿಂದ ಮರೆಯನ್ನು ಮಾಡಿ ಇದ್ದಕಿದ್ದಂತೆ ಕತ್ತಲೆ ಉಂಟಾಗುವಂತೆ ಮಾಡುತ್ತಾನೆ. ಈ ಘಟನೆಯನ್ನು ಸೂರ್ಯಗ್ರಹಣವೆಂದು ಕರೆಯಬಹುದು ಎಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಚಂದ್ರಸೂರ್ಯಉಭೌಗ್ರಸ್ತೌಏಕಮಾಸೀಂತ್ರಯೋದಶೀಂ
ಚತುರ್ದಶೀಂಪಂಚದಶೀಂಭೂತಪೂರ್ವಾಂ ಚ ಷೋಡಶೀಂ
ಇಮಾಂತುನಾಭಿಜಾನೇಅಹಂಅಮಾವಾಸ್ಯಂತ್ರಯೋದಶಿಂ
–ಭೀಷ್ಮಪರ್ವ, 3,32

ಈ ಶ್ಲೋಕವು ಒಂದು ಕುತೂಹಲಕರ ಖಭೌತಿಕ ವಿದ್ಯಮಾನವನ್ನು ಗುರುತಿಸುತ್ತದೆ. ಹದಿಮೂರು ದಿನಗಳ ಅಂತರದಲ್ಲಿಯೇ ಸೂರ್ಯ ಮತ್ತು ಚಂದ್ರಗ್ರಹಣ ಎರಡೂ ಬಂದಿದೆ. ಪಕ್ಷಕ್ಕೆ ಹದಿನೈದು ದಿನಗಳು ಇರಬೇಕು, ಅಪರೂಪಕ್ಕೆ ಹದಿನಾರು ದಿನಗಳು ಇರಬಹುದು. ಆದರೆ ಹದಿಮೂರು ದಿನಗಳಿಗೆ ಅಮಾವಾಸ್ಯೆ ಬರುವುದನ್ನು ಕಂಡೂ ಇಲ್ಲ, ಕೇಳಿಯೂ ಇಲ್ಲ ಇದು ವಿಶಿಷ್ಟವಾದ ಖಭೌತಿಕ ವಿದ್ಯಮಾನ ಎನ್ನುವುದು ನಿಜವಾದರೂ ಅಸಾಧ್ಯವಲ್ಲ, ಹೀಗಾಗಲು ಎರಡೂ ಪಕ್ಷದಲ್ಲಿ ಕನಿಷ್ಟ ಎರಡು ತಿಥಿಗಳು ಉಪರಿ ಬಂದಿರಬೇಕು. ಅದು ಅಸಂಭವವಲ್ಲ. ಹುಣ್ಣಿಮೆ ಮತ್ತು ಅಮಾವಾಸ್ಯೆ ಎರಡರಲ್ಲಿಯೂ ಗ್ರಹಣಗಳು ಸಂಭವಿಸುವ ಗ್ರಹಣಗಳು ಒಂದೇ ಸ್ಥಳದಲ್ಲಿ ಕಾಣುವುದು ತೀರಾ ಅಪರೂಪ. ಆದರೆ ಹೀಗಾಗುವುದು ವೈಜ್ಞಾನಿಕವಾಗಿ ಸಾಧ್ಯವಿದೆ. ಇಂತಹ ಉದಾಹರಣೆಗಳೂ ಕೂಡ ಲಭ್ಯವಿದೆ. ಹೀಗಾಗಿ ಇದು ಕೇವಲ ಕವಿಯ ಕಲ್ಪನೆ ಆಗಿರದೆ ವಾಸ್ತವಿಕ ಘಟನೆ ಕೂಡ ಆಗುವುದು ಸಾಧ್ಯವಿದೆ.

ಕುರುಕ್ಷೇತ್ರದಲ್ಲಿ ಸಂಭವಿಸಿದ ಸೂರ್ಯಗ್ರಹಣಗಳಲ್ಲಿ ಇಂತಹ ಸಾಧ್ಯತೆಯನ್ನು ಹುಡುಕಿ ವಿದ್ವಾಂಸರು ಪಟ್ಟಿಯನ್ನು ಮಾಡಿದ್ದಾರೆ. ಕ್ರಿ.ಪೂ. 3138ರಲ್ಲಿ ಮಹಾಭಾರತ ಯುದ್ಧ ನಡೆಯಿತು ಎನ್ನುವ ವಾದವಿದೆ. ಇದನ್ನು ಪರಿಗಣಿಸಿದರೆ ಸೂರ್ಯ ಗ್ರಹಣವು ಕ್ರಿ.ಪೂ. 3134ರ ಆಗಸ್ಟ್ 16ರಂದು ಸಂಭವಿಸಿದೆ, ಇದು ಪಾರ್ಶ್ವ ಸೂರ್ಯಗ್ರಹಣ, ಆದರೆ ಇದರ ಹಿಂದೆ ಚಂದ್ರ ಗ್ರಹಣ ಬಂದಿಲ್ಲ. ಈ ಸಂಭವನೀಯತೆಗೆ ಇನ್ನೂ ಇಪ್ಪತ್ತು ವರ್ಷ ಹಿಂದೆ ಎಂದರೆ ಕ್ರಿ.ಪೂ. 3112ಕ್ಕೆ ಹೋಗಬೇಕು, ಇದಕ್ಕೆ ಬೇರೆ ಸಂಗತಿಗಳು ಹೊಂದುವುದಿಲ್ಲ. ಹಾಗೆ ಭೀಷ್ಮನು ಇಚ್ಛಾಮರಣಿಯಾಗಿದ್ದರಿಂದ ಉತ್ತರಾಯಣವನ್ನು ಕಾಯುತ್ತಿದ್ದರು ಎಂಬ ಉಲ್ಲೇಖವನ್ನು ಬಳಸಿ ಮಹಾಭಾರತದ ಕಾಲ ಕ್ರಿ.ಪೂ. 2050 ಎಂಬ ವಾದವೂ ಇದೆ. ಇದನ್ನು ಲೆಕ್ಕಕ್ಕೆ ಹಿಡಿದರೆ ಸೂರ್ಯಗ್ರಹಣ ಕ್ರಿ.ಪೂ 2047ಕ್ಕೆ ಸಿಗುತ್ತದೆ, ಅದು ಆರು ನಿಮಿಷಗಳಷ್ಟು ಗೋಚರವಾದ ಗ್ರಹಣವಾದ್ದರಿಂದ ಮಹಾಭಾರತದ ಕಥೆಗೂ ಹೊಂದುತ್ತದೆ. ಕ್ರಿ.ಶ 1162ರ ಜುಲೈ 8, ಕ್ರಿ.ಪೂ 1116ರ ಜುಲೈ 23 ಎರಡು ಕಂಕಣ ಗ್ರಹಣಗಳು. ಕ್ರಿ.ಪೂ 1116ರ ಜೂನ್ 28ರಂದು ಪೂರ್ಣಗ್ರಹಣ ಸಂಭವಿಸಿದೆ. ಅದರ ಮುಂಚೆ ಚಂದ್ರಗ್ರಹಣವೂ ಸಂಭವಿಸಿದೆ, ಇದು ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ಸಾಧ್ಯತೆಯನ್ನು ಕೆಲವು ವಿದ್ವಾಂಸರು ಹೇಳಿದ್ದಾರೆ. ಕ್ರಿ.ಪೂ. 954ರ ಅಕ್ಟೋಬರ್ 4ರ ಸೂರ್ಯಗ್ರಹಣ ಕುರುಕ್ಷೇತ್ರದಲ್ಲಿ ಕೆಲವೇ ನಿಮಿಷಗಳ ಕಾಲ ಗೋಚರಿಸಿದೆ. ಮಹಾಭಾರತದ ಕಥೆಯ ಉಲ್ಲೇಖವನ್ನು ಅನುಸರಿಸಿ ಇದೇ ಇರಬಹುದು ಎಂದೂ ಕೆಲವು ಇತಿಹಾಸಕಾರರು ಚರ್ಚಿಸಿದ್ದಾರೆ. ಇಂತಹ ಕೆಲವು ಖಭೌತಿಕ ವಿದ್ಯಮಾನಗಳನ್ನು ಖಚಿತವಾಗಿ ಗುರುತಿಸಲು ಸಾಧ್ಯವಾದರೆ ಮಹಾಭಾರತದ ಕಾಲವನ್ನು ನಿಖರವಾಗಿ ಹೇಳಬಹುದು ಎನ್ನುವುದಂತೂ ಸತ್ಯ!

ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳನ್ನು ಆರ್ಯಭಟನಿಗಿಂತಲೂ ಮೊದಲೇ ಭಾರತದಲ್ಲಿ ಅತ್ಯಂತ ವೈಜ್ಞಾನಿಕವಾಗಿ ಲೆಕ್ಕಹಾಕಲಾಗುತ್ತಿತ್ತು. ವಾಸಿಷ್ಟ ಸಿದ್ಧಾಂತದಲ್ಲಿ
ಸ್ವೇಭೂಚ್ಛಾಯಾಂಇಂದು: ಸ್ಪೃಶತಿಅತ: ಸ್ಪೃಶ್ಯತೇ ನ ಪಶ್ಚಾರ್ಧೇ
ಭಾನುಗ್ರಹೇಅರ್ಕಮಿಂದು: ಪ್ರಾಕ್ ಪ್ರಗಹಣಂರವೇ ನ ಅತ:

ಚಂದ್ರಗ್ರಹಣದಲ್ಲಿ ಚಂದ್ರನು ಪೂರ್ವ ದಿಕ್ಕಿನಲ್ಲಿ ಚಲಿಸುತ್ತಾ ಭೂಮಿಯ ಛಾಯೆಯನ್ನು ಪ್ರವೇಶಿಸುತ್ತಾನೆ. ಆದ್ದರಿಂದ ಸ್ಪರ್ಶವು ಚಂದ್ರನ ಪೂರ್ವಭಾಗದಲ್ಲಿ ಉಂಟಾಗುತ್ತದೆಯೇ ಹೊರತು ಪಶ್ಚಿಮಭಾಗದಲ್ಲಿ ಅಲ್ಲ. ಆದರೆ ಸೂರ್ಯಗ್ರಹಣದಲ್ಲಿ ಚಂದ್ರನು ಸೂರ್ಯನನ್ನು ಮರೆಮಾಚುವುದರಿಂದ ಸೂರ್ಯಗ್ರಹಣದ ಸ್ಪರ್ಶವು ಸೂರ್ಯನ ಪಶ್ಚಿಮ ಭಾಗದಲ್ಲಿ ಉಂಟಾಗುವುದೇ ಹೊರತು ಪೂರ್ವಭಾಗದಲ್ಲಿ ಅಲ್ಲ. ಆರ್ಯಭಟನು ಗ್ರಹಣದ ಸಂದರ್ಭದಲ್ಲಿ ಸೂರ್ಯ ಮತ್ತು ಚಂದ್ರರು ಬೇರೆ ಬೇರೆ ರೂಪ ತಾಳುವುದನ್ನೂ ಮತ್ತು ಅದಕ್ಕೆ ವೈಜ್ಞಾನಿಕ ಕಾರಣಗಳನ್ನೂ ವಿವರಿಸಿದ್ದಾನೆ. ವರಾಹಮಿಹರನು ಇದನ್ನು ತನ್ನ ಬೃಹತ್ ಸಂಹಿತೆಯಲ್ಲಿ ಇನ್ನಷ್ಟು ವಿಸ್ತಾರವಾಗಿ ವರ್ಣಿಸಿದ್ದಾನೆ. ಚಂದ್ರಗ್ರಹಣದಲ್ಲಿ ಚಂದ್ರನು ಭೂಮಿಯ ಛಾಯೆಯನ್ನು ಪ್ರವೇಶಿಸುತ್ತಾನೆ. ಸೂರ್ಯಗ್ರಹಣದಲ್ಲಿ ಚಂದ್ರನು ಸೂರ್ಯನ ಬಿಂಬವನ್ನು ಮರೆಮಾಚುತ್ತಾನೆ ಎಂದು ಅವನು ಈ ಖಗೋಳ ವಿದ್ಯಮಾನವನ್ನು ವರ್ಣಿಸಿದ್ದಾನೆ.

ಇಂದಿಗೂ ಜನಸಾಮಾನ್ಯರಲ್ಲಿ ರಾಹು-ಕೇತುಗಳು ಗ್ರಹಣದ ಸಂದರ್ಭದಲ್ಲಿಸೂರ್ಯ-ಚಂದ್ರರನ್ನು ನುಂಗುತ್ತವೆ ಎಂಬ ನಂಬಿಕೆ ಇದೆ. ಅದಕ್ಕೆ ರಂಗು-ರಂಗಿನ ಪುರಾಣದ ಕಥೆಗಳೂ ಇವೆ. ಇಂದಿನ ಸಾಮಾಜಿಕ ಮಾಧ್ಯಮಗಳ ದಿನಗಳಲ್ಲಿಯೂ ಇಂತಹ ಕಥೆಗಳು ಮತ್ತೆ ಮತ್ತೆ ಕೇಳಿ ಬರುತ್ತಿವೆ ಆದರೆ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ 'ಖಗೋಳಶಾಸ್ತ್ರ' ಕೃತಿಯಲ್ಲಿ ಈ ನಂಬಿಕೆಗಳನ್ನು ನಿರಾಕರಿಸಲಾಗಿದೆ.

ಏವಂಉಪರಾಗಕಾರಣಂಉಕ್ತಮಿದಂದಿವ್ಯದೃಗ್ಭಿ
ರಾಹುಕಾರಣಂಆಸ್ಮಿನ್ ನಿಯುಕ್ತ: ಶಾಸ್ತ್ರಸದ್ಭವ:

ರಾಹುಕೇತುಗಳು ಛಾಯಾಬಿಂದುಗಳು ಎನ್ನುವುದನ್ನು ನಮ್ಮ ಪ್ರಾಚೀನ ಪಂಚಾಂಗಕರ್ತರು ಸರಿಯಾಗಿಯೇ ಗುರುತಿಸಿದ್ದಾರೆ. ಹಾಗೆಯೇ ಗ್ರಹಣದ ವಿಷಯದಲ್ಲಿನ ಮೂಢನಂಬಿಕೆಗಳನ್ನೂ ಅವರು ನಿರಾಕರಿಸಿದ್ದಾರೆ.

ನ ಕಥಂಚಿದಪಿನಿಮಿತ್ತೈ: ಗ್ರಹಣಂವಿಜ್ಞಾಯತೇ
ನಿಮಿತ್ತಾನಿಅನ್ಯಸ್ಮಿನ್ನಪಿಕಾಏಭವಂತಿಅಥಉತ್ಪಾತರೂಪಿಣಿ
–ಬೃಹತ್ ಸಂಹಿತೆ 5–16

ಗ್ರಹಣಗಳು ಸಂಭವಿಸುವುದನ್ನು ಆಕಾಶಕಾಯಗಳ ಚಲನೆಯಿಂದ ತಿಳಿಯಬೇಕೆ ಹೊರತು ಶಕುನಗಳಿಂದಲ್ಲ. ಉಲ್ಕಾಪಾತ, ಭೂಕಂಪನಗಳು ಬೇರೆ ಸಂದರ್ಭಗಳಲ್ಲಿಯೂ ಕೂಡ ನಡೆಯುವುದನ್ನು ನಾವು ಗಮನಿಸಬಹುದು.

ಪಂಚಗ್ರಹಸಂಯೋಗಾತ್ರಖಿಲಗ್ರಹಣಸ್ಯಸಂಭೇಭವತಿ
ತೈಲಂಜಲೇಅಷ್ಟಮ್ಯಾಂ ನ ವಿಚಿಂತ್ಯಮಿದಂವಿಪಶ್ಚಿದ್ಭಿ:
ಬೃಹತ್ ಸಂಹಿತೆ–5–17

ಒಂದೇ ರಾಶಿಯಲ್ಲಿ ಐದು ಗ್ರಹ ಸೇರಿದಾಗ ಗ್ರಹಣಗಳು ಸಂಭವಿಸುತ್ತವೆ, ಗ್ರಹಣ ಸಂಭವಿಸುವ ಒಂದು ವಾರದ ಮೊದಲು ಎಂದರೆ ಅಷ್ಟಮಿಯಂದು ತೈಲಬಿಂದು ಹಾಕಿದರೆ ಗ್ರಹಣದ ಸ್ವಭಾವವನ್ನು ತಿಳಿಯಬಹುದು ಎನ್ನುವುದನ್ನು ವಿದ್ವಾಂಸರು ನಂಬಬಾರದು ಎಂದು ವರಾಹಮಿಹರ ಬಹಳ ಸ್ಪಷ್ಟವಾಗಿಯೇ ಹೇಳಿದ್ದಾನೆ. ಇನ್ನೊಂದು ಕುತೂಹಲಕರ ಸಂಗತಿ ಎಂದರೆ ಗ್ರಹಣದ ಸಂದರ್ಭದಲ್ಲಿ ಉಪವಾಸ ಇರಬೇಕು ಎಂದು ಯಾವ ಖಗೋಳಶಾಸ್ತ್ರಜ್ಞರೂ ಹೇಳಿಲ್ಲ. ಕ್ರಿ.ಶ 683ರಲ್ಲಿ ಬಂದ 'ಗ್ರಹನಿಬಂಧನ' ಕೃತಿಯಲ್ಲಿ ಹರಿದತ್ತನು 'ಆಕಾಶದಲ್ಲಿ ಒಂದು ಅದ್ಭುತ ಸಂಭವಿಸುತ್ತಿರುವಾಗ..ನಿತ್ಯವೂ ಮಾಡುವ ಭೋಜನ ಕುರಿತು ನಿಮಗೆ ಚಿಂತೆ ಏಕೆ?'ಎಂದು ಲಘುದಾಟಿಯಲ್ಲಿ ಹೇಳಿದ್ದಾನೆ. ಅಂದರೆ ನಮ್ಮ ಪ್ರಾಚೀನಶಾಸ್ತ್ರಜ್ಞರಿಗೆ ಗ್ರಹಣಗಳ ಲೆಕ್ಕಾಚಾರ ಖಚಿತವಾಗಿಯೇ ತಿಳಿದಿತ್ತು.

ರಾಹು ಮತ್ತು ಕೇತು

ಹಾಗಾದರೆ ರಾಹು ಮತ್ತು ಕೇತುಗಳು ಯಾರು ಎನ್ನುವುದನ್ನು ಭಾರತೀಯ ಖಗೋಳಜ್ಞರ ವಿಶ್ಲೇಷಣೆಯಲ್ಲಿಯೇ ನೋಡುವುದಾದರೆ ಭೂಮಿಯಿಂದ ನೋಡಿದಾಗ ಸೂರ್ಯನು ಸುತ್ತುವ ಪಥವನ್ನುಕ್ರಾಂತಿಪಥ ಎಂದು ಕರೆಯುತ್ತೇವೆ. ಹಾಗೆ ಚಂದ್ರ ಸುತ್ತುವ ಪಥವನ್ನು'ಚಂದ್ರಪಥ' ಎಂದು ಕರೆಯುತ್ತೇವೆ. ಎರಡೂ ಪಥಗಳು ಒಂದಕ್ಕೊಂದು ವಿಲೋಮವಾಗಿದ್ದು ಅವು ಸೇರುವ ಬಿಂದುಗಳೇ ರಾಹುಕೇತುಗಳು. ಗ್ರಹಣವನ್ನುಲೆಕ್ಕಮಾಡಲು ಈ ಬಿಂದುಗಳನ್ನು ತಿಳಿಯುವದು ಬಹಳ ಮುಖ್ಯ. ಹುಣ್ಣಿಮೆಯ ದಿವಸ ಸೂರ್ಯ ಮತ್ತು ಚಂದ್ರರು ಭೂಮಿಗೆ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಒಂದೇ ಸಾಲಿನಲ್ಲಿದ್ದರೆ 'ಚಂದ್ರಗ್ರಹಣ'ವು ಸಂಭವಿಸುತ್ತದೆ. ಇದೇ ರೀತಿಯಲ್ಲಿ ಅಮಾವಾಸ್ಯೆಯ ದಿನ ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ಸಾಲಿನಲ್ಲಿದ್ದರೆ ಸೂರ್ಯಗ್ರಹಣವು ಉಂಟಾಗುತ್ತದೆ. ಇಲ್ಲೊಂದು ಸಹಜವಾದ ಪ್ರಶ್ನೆ ಬರುತ್ತದೆ. ಪ್ರತಿಹುಣ್ಣಿಮೆ ಮತ್ತು ಪ್ರತಿ ಅಮಾವಾಸ್ಯೆಗೆ ಏಕೆ ಗ್ರಹಣಗಳು ಸಂಭವಿಸುವುದಿಲ್ಲ? ಇದಕ್ಕೆ ಮುಖ್ಯಕಾರಣವೆಂದರೆ ಕ್ರಾಂತಿಪಥ ಮತ್ತು ಚಂದ್ರಪಥ ಒಂದೇ ಸಮತಲದಲ್ಲಿ ಇಲ್ಲದೆ ಎರಡರ ನಡುವೆ 5 ಡಿಗ್ರಿ 8 ಸೆಕೆಂಡ್‌ಗಳಷ್ಟು ವ್ಯತ್ಯಾಸವಿರುವುದು.



ಕ್ಯಾಲೆಂಡರ್ : ಇತಿಹಾಸ, ವರ್ತಮಾನ
ಲೇ: ಎನ್.ಎಸ್.ಶ್ರೀಧರ ಮೂರ್ತಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.175/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ವಿದೇಶ ಕಾಲ
(ನೂರಕ್ಕೂ ಹೆಚ್ಚು ದೇಶಗಳಿಗೆ ಪ್ರವಾಸ ಕೈಗೊಂಡಿರುವ ವಿಶ್ವೇಶ್ವರ ಭಟ್ಟರು ಅಲ್ಲಿಯ ವಿಶಿಷ್ಟ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಇದು ಭಟ್ಟರ ನೂರನೇ ಪುಸ್ತಕವೂ ಹೌದು)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 500/-



2
ಸಂಗಮ
(ಕಳೆದು ಹೋಗಿದ್ದ ಕಥೆಗಾರ್ತಿ, ರಾಜಲಕ್ಷ್ಮಿ ಎನ್.ರಾವ್ ಅವರ ಏಕೈಕ ಪ್ರಕಟಿತ ಕಥಾ ಸಂಕಲನವಿದು. 91 ವರ್ಷದ, ಪ್ರಸಿದ್ಧ ಸಾಹಿತಿ ಬಿ.ಎಂ.ಶ್ರೀ. ಮೊಮ್ಮಗಳ ಪ್ರಸಿದ್ಧ ಕಥಾ ಸಂಕಲನ ಈಗ ಮರುಮುದ್ರಣವಾಗಿದೆ)
ಲೇ: ರಾಜಲಕ್ಷ್ಮಿ ಎನ್.ರಾವ್
ಪ್ರ: ಸಂಕಥನ, ಮಂಡ್ಯ
ಬೆಲೆ : ರೂ 320/-



3
ಚಿತ್ರಕಾರನ ಬೆರಳು
(ಚೆನ್ನೈನಲ್ಲಿ ನೆಲೆಸಿರುವ ವಿಶಿಷ್ಟ ಕಥೆಗಾರ್ತಿ ಇವರು. ಶಾಂತಿ ಅವರ ಇತ್ತೀಚಿನ ಕಥಾಸಂಕಲವಿದು.)
ಲೇ: ಶಾಂತಿ.ಕೆ ಅಪ್ಪಣ್ಣ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 175/-



4
ವಿದ್ಯಾಲಂಕಾರ
(ಅಪರೂಪದ ವಿದ್ವಾಂಸರಲ್ಲೊಬ್ಬರಾದ ಪ್ರೊ. ಸಾ.ಕೃ. ರಾಮಚಂದ್ರರಾಯರ ಜನ್ಮಶತಮಾನದ ವರ್ಷ ಪ್ರಕಟಗೊಂಡ ಪುಸ್ತಕ.)
ಸಂ : ಶತಾವಧಾನಿ ಆರ್. ಗಣೇಶ್
ಮಲ್ಲೇಪುರಂ ಜಿ. ವೆಂಕಟೇಶ
ಬಿ.ಎನ್. ಶಶಿಕಿರಣ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ : ರೂ 550/-



5
ಕೊಕೇನ್ ರಾಜರಹಸ್ಯ
(ತನ್ನ ಹೀನಾಯ ಮತ್ತು ಬೆಚ್ಚಿ ಬೀಳಿಸುವ ಅಪರಾಧಗಳ ಮೂಲಕ ಕುಖ್ಯಾತನಾಗಿರುವ ಪಾಬ್ಲೋ ಎಸ್ಕೋಬಾರ್‌ನ ರಕ್ತ ಚರಿತ್ರೆ)
ಲೇ: ಡಾ। ಡಿ.ವಿ. ಗುರುಪ್ರಸಾದ್
ಪ್ರ: ಸಪ್ನ ಬುಕ್‌ಹೌಸ್, ಬೆಂಗಳೂರು
ಬೆಲೆ : ರೂ 295/-



6
ಹತ್ತೇವು ವಿಜ್ಞಾನದ ಜೀಪ
(ಎಲ್ಲರಿಗೂ ಸುಲಭವಾಗಿ ವಿಜ್ಞಾನ ಅರ್ಥವಾಗುವಂತೆ ಈ ಪ್ರಬಂಧಗಳು ಮೂಡಿಬಂದಿವೆ.)
ಲೇ: ಶರತ್ ಭಟ್ ಸೇರಾಜೆ
ಪ್ರ: ಅಭಿಜ್ಞಾನ, ಬೆಂಗಳೂರು
ಬೆಲೆ : ರೂ 275/-



7
ಹ್ಯಾಷ್ ಟ್ಯಾಗ್
(ಛಂದ ಪುಸ್ತಕ ಬಹುಮಾನ ಪಡೆದ ಕೃತಿ. ವಿಭಿನ್ನ ಶೈಲಿಯ ಬರಹಗಾರ ಕುಲಕರ್ಣಿ ಅವರ ಮೊದಲ ಪ್ರಕಟಿತ ಕಥಾಸಂಕಲವಿದು.)
ಲೇ: ಗುರುರಾಜ ಕುಲಕರ್ಣಿ
ಪ್ರ: ಛಂದ ಪುಸ್ತಕ,ಬೆಂಗಳೂರು
ಬೆಲೆ : ರೂ 135/-



8
ಬಯಲು
(ಅಲ್ಲಮನ ಹೆಸರೇ ವಿಸ್ಮಯ. ಅವರ ಬದುಕನ್ನು ಕಾದಂಬರಿ ರೂಪದಲ್ಲಿ ಇಲ್ಲಿ ಹೆಣೆಯಲಾಗಿದೆ.)
ಲೇ: ಡಾ। ಶ್ರೀಧರ ಎಚ್.ಜಿ.
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು
ಬೆಲೆ : ರೂ 450/



9
ಕನ್ನಡ ಕಾದಂಬರಿ ಮಾಲೆ
(ಕನ್ನಡದ ಪ್ರಸಿದ್ಧ ನೂರು ಕಾದಂಬರಿಗಳನ್ನು ಕುರಿತು ಬರೆದಿದ್ದಾರೆ ಜನಾರ್ದನ ಭಟ್ ಅವರು.)
ಲೇ: ಡಾ। ಬಿ.ಜನಾರ್ದನ ಭಟ್
ಪ್ರ:ಶ್ರೀರಾಮ ಪ್ರಿಂಟರ್ಸ್ ಪಬ್ಲಿಷರ್ಸ್, ಮಂಡ್ಯ
ಬೆಲೆ : ರೂ 650/-



10
ಕುವೆಂಪು ವಿಚಾರ ಕ್ರಾಂತಿ
(ಕುವೆಂಪು ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣ, ಲೇಖನಗಳ ಸಂಕಲನ)
ಸಂ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ, ಬೆಂಗಳೂರು
ಬೆಲೆ: ರೂ 100/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ವಿರಾಮ

ಬೆಟ್ಟದಲ್ಲಿ ಮಳೆ ಹಾಡು!

» ಕಾರ್ತಿಕ್ ಕೃಷ್ಣ



ಎರಡೂವರೆ ವರುಷದ ಪುಟ್ಟ ಮಗಳನ್ನು ಕಟ್ಟಿಕೊಂಡು ಲಾಂಗ್ ಬೈಕ್ ರೈಡ್ ಹೋಗೋದು ಕೆಲ ಸಮಯಗಳಿಂದ ಅಸಾಧ್ಯವಾಗಿತ್ತು. ಅವಳು ಪುಟ್ಟ ಕಂದಮ್ಮ ಆಗಿದ್ದಾಗ ಚೆನ್ನಾಗಿತ್ತು. ಹಿಂದೆ ಅವಳಮ್ಮನ ಬೆಚ್ಚನೆಯ ಅಪ್ಪುಗೆಯ ಆಸರೆಯಲ್ಲಿ ಬೆಚ್ಚನೆ ಕೂತಿರುತ್ತಿದ್ದಾಗ ನಮ್ಮ ಬೈಕು ನಮ್ಮನ್ನು ಪಶ್ಚಿಮ ಘಟ್ಟದ ತಿರುವುಗಳಲ್ಲಿ - ಬಯಲು ಸೀಮೆಯ ನೆಟ್ಟನೆಯ ದಾರಿಯಲ್ಲಿ ಸುತ್ತಿಸುತ್ತಿತ್ತು. ಅವಳು ಬೆಳೆಯುತ್ತಿದ್ದಂತೆ ನಮ್ಮ ಬೈಕ್ ಸವಾರಿಯ ಅಂತರವೂ ಕುಗ್ಗಿ, ದಿನಕ್ಕೆ 50 ಕಿ.ಮೀ. ಸಾಗುವುದೂ ದುಸ್ತರವಾಗಿತ್ತು. ಟ್ಯಾಂಕು ಹಾಗು ಪಿಲಿಯನ್ ಸೀಟಿಗೆ ನಿಮಿಷಕ್ಕೊಮ್ಮೆ ಹಾರುವ ಅವಳನ್ನು ಕೂರಿಸಿಕೊಂಡು ಸವಾರಿ ಹೋಗುವುದಾದರೂ ಹೇಗೆ ಹೇಳಿ! ಈಗ ಹಾಗಿಲ್ಲ. ಕೊಂಚ ಮಾತು ಕೇಳುತ್ತಾಳೆ. ಮುಂದೆ ಕೂತು ಪಿಳಿ ಪಿಳಿ ಕಣ್ಣು ಬಿಡುತ್ತಾ ಊರು-ಕಾಡು-ಬೆಟ್ಟಗಳನ್ನು ಬೆರಗಿನಿಂದ ನೋಡುತ್ತಾಳೆ.

ಬೆಟ್ಟವೇರಿದಾಗ ಬೀಸಿದ ಗಾಳಿ, ಸುರಿದ ಸೋನೆ ಮಳೆ! ಆ ದೃಶ್ಯದ ಸೊಬಗು ಅಕ್ಷರದ ಬಣ್ಣನೆಗೆ ನಿಲುಕದ್ದು! ಚಂಚಲವಾದ ಹನಿ ಮಳೆಯಲ್ಲಿ ಕರಗಿ ಹೋದ ಬೆಟ್ಟ!

ಮೊನ್ನೆ ಯಾರದೋ ಇನ್ಸ್ಟಾಗ್ರಾಮ್ ರೀಲ್‌ನಲ್ಲಿ, ಕನಕಪುರ ಸಮೀಪದ 'ಉದಾರಹಳ್ಳಿ'ಯ ಸಿದ್ದೇಶ್ವರ ಸಿದ್ಧಪ್ಪಾಜಿ ಬೆಟ್ಟವನ್ನು ನೋಡಿದ ಮಡದಿ, ಅದರ ಸೊಬಗನ್ನು ಸವಿಯಲೋಸುಗ ವಾರಾಂತ್ಯದಲ್ಲಿ ಅಲ್ಲಿಗೆ ಹೋಗುವ ಯೋಜನೆಯನ್ನು ನನ್ನೊಂದಿಗೆ ಹಂಚಿಕೊಂಡಳು. ವಿಡಿಯೋ ಚೆನ್ನಾಗಿತ್ತು. ಅಲ್ಲಿಗೆ ಹೋಗಿಯೇ ಆ ಪ್ರಕೃತಿಯ ಸೊಬಗನ್ನು ಆರಾಧಿಸಬೇಕೆಂದು ನಿರ್ಧರಿಸಿದೆವು.

ಗೂಗಲ್ ತೋರಿಸಿದ ಕಿರಿದಾದ ಹಳ್ಳಿದಾರಿಯಲಿ ಸಾಗುತ್ತಿದ್ದಾಗ ಕೆಸರು ದಾರಿಯ ರೈಡ್! ಆಗ ತಾನೇ ಮಳೆ ನಿಂತು ರಸ್ತೆಯಲ್ಲಿ ನಿಂತ ಕೆಸರುಮಯ ನೀರು, ರಸ್ತೆಗೇ ಕಟ್ಟಿದ ಜಾನುವಾರುಗಳು, ಕಾಲಿಗೆ ಚಕ್ರ ಕಟ್ಟಿದಂತೆ ಓಡುತ್ತಿದ್ದ ಹುಡುಗರು, ತೊಟ್ಟಿ ಮನೆಯ ಜಗಲಿಯಲ್ಲಿ ಕೂತು ಚೆನ್ನೆಮಣೆ ಆಡುತ್ತಿದ್ದ ಹೆಂಗಳೆಯರು, ಮಧ್ಯಾಹ್ನದ ಜೋಂಪು ಹತ್ತಿ ಸಣ್ಣಗೆ ನಿದ್ದೆಗೆ ಜಾರಿದ ರೈತರು, ಗುಂಪು ಸೇರಿ ಹರಟೆಯಲ್ಲಿ ಕೂತಿದ್ದ ವಯಸ್ಕರು - ಹಳ್ಳಿಯ ಸೊಗಡೇ ಚಂದ!

ಬೆಟ್ಟವನ್ನು ಸುರುಳಿ ಸುತ್ತಿದ ತೆಳ್ಳನೆಯ ಕಾಂಕ್ರೀಟು ರಸ್ತೆಯನ್ನು ಏರಿ ನಮ್ಮ ಬುಲ್ಲೆಟ್ಟು ಬೈಕು ದೇವಸ್ಥಾನದ ಬಳಿ ಬಂದಾಗ, ಆಗಲೇ ಒಂದಷ್ಟು ಕಾರು - ಬೈಕುಗಳು ಬಂದು ನಿಂತಿದ್ದವು. ಬೈಕಿನಿಂದ ಇಳಿದು, ಸಾವರಿಸಿಕೊಂಡು ಸುತ್ತಲೂ ನೋಡಿದ ನಮಗೆ ಕಂಡದ್ದು ಪ್ರಕೃತಿ ಮಾತೆಯ ದಿವ್ಯ ದರ್ಶನ! ಒಂದಕ್ಕೊಂದು ಒತ್ತಿಕೊಂಡಂತೆ ನಿಂತಿದ್ದ ಹಲವು ಬೆಟ್ಟಗಳು ಎದುರಿಗೆ ಕಂಡು, ನಾವು ನಿಂತಿದ್ದ ಬೆಟ್ಟವನ್ನು ಆವರಿಸಿಕೊಂಡಂತೆ ಕಾಣುತ್ತಿತ್ತು. ಆ ಬೆಟ್ಟಗಳ ಒಂದು ಭಾಗವಂತೂ ನನಗೆ, ತಿರುಮಲದ ಬೆಟ್ಟದಂತೆಯೇ ಕಂಡಿತ್ತು. ನಾವು ಪ್ರಕೃತಿಯ ಆರಾಧನೆಯನ್ನು ನಿರತರಾಗಿದ್ದಾಗ ಅಲ್ಲೇ ಓಡಾಡಿಕೊಂಡಿದ್ದ ಮಗಳು, 'ಕಾತೀ... ಸೇಕು.. ಶಿವಾ..' ಎಂದು ಉದ್ಗರಿಸಿದಳು. ಹಾವು (ಸ್ನೇಕ್) ನೋಡಿ ಸೇಕು ಎನ್ನುವ ಮಗಳಿಗೆ ಇಲ್ಯಾವ ಹಾವು ಕಂಡಿತು ಎಂದು ಅತ್ತಿತ್ತ ಕಣ್ಣು ಹರಿಸಿದಾಗಲೇ ನಮಗೆ ಕಂಡದ್ದು ಆ ಬದಿಯಲ್ಲಿದ್ದ ಒಂದು ಕಾರಂಜಿ. ಶಿವ ಲಿಂಗದ ಮೇಲೆ ಹೆಡೆಯೆತ್ತಿ ನಿಂತ ಸರ್ಪದ ಹಣೆಯಿಂದ ನೀರು ಚಿಮ್ಮಿಸುವ ಆ ಕಾರಂಜಿ ನಿಜಕ್ಕೂ ಮನಮೋಹಕವಾಗಿತ್ತು. ಕಾರಂಜಿಯ ತೊಟ್ಟಿಯ ಅಂಚಿನಲ್ಲಿ ಮುತ್ತು ಪೋಣಿಸಿದಂತೆ ಸ್ಥಾಪಿಸಲ್ಪಟ್ಟ ಪುಟ್ಟ ಪುಟ್ಟ ಶಿವಲಿಂಗಗಳು, ದೊಡ್ಡ ಲಿಂಗದ ಎದುರಿದ್ದ ನಂದಿ! ಸುಂದರ ದೃಶ್ಯ.

ಅಲ್ಲಿಂದ ಹತ್ತು-ಹದಿನೈದು ಮೆಟ್ಟಿಲೇರಿ ಹೋದರೆ, ಸಿದ್ಧೇಶ್ವರ ದೇವಾಲಯ ಸಿಗುತ್ತದೆ. ಆವರಣ ಸುಂದರವಾಗಿದ್ದು, ಸುತ್ತಲಿನ ಪ್ರಕೃತಿ ಸೌಂದರ್ಯ ದೇವಳದ ಘನತೆಯನ್ನು ಹೆಚ್ಚಿಸುವಂತಿದೆ. ಪ್ರಾಂಗಣದಲ್ಲಿ ಒಂದಷ್ಟು ಹೊತ್ತು ಕಳೆದು, ಕೆಳಗಿಳಿದು, ಒಂದಷ್ಟು ಫೋಟೋ ತೆಗೆದು, ಸುರುಳಿ ಸುತ್ತಿದ ರಸ್ತೆಯನ್ನು ಇಳಿಯುವಾಗ ಹರಿಣಿಗೆ ಏನು ಕಂಡಿತೋ ಏನೋ, 'ಸೈಡಿಗೆ ಹಾಕಿ ಗಾಡಿಯನ್ನು..' ಎಂಬ ಆದೇಶವನ್ನು ಹೊರಡಿಸಿದಳು. ಕೇಳಲೇ ಬೇಕಲ್ಲಾ..ಬೈಕನ್ನು ಸೈಡಿಗೆ ಹಾಕಿದೆ. ಅವಳ ಮಾತನ್ನು ನಮ್ಮ ಬೈಕೂ ಕೇಳುತ್ತದೆ ಎಂದರೆ ಅದು ಅತಿಶಯೋಕ್ತಿಯಲ್ಲ!

ಮಾದಪ್ಪನ ಹಾಡು

ಅಲ್ಲಿ ಕಂಡದ್ದು ಹಸಿರು ಹಾಸಿನ ಏರುಹಾದಿಯ ಬೆಟ್ಟ. ಅಲ್ಲಲ್ಲಿ ಬಂಡೆ ಕಲ್ಲುಗಳನ್ನು ಹಾಗೆ ಸುಮ್ಮನೆ ಮನಸಿಗೆ ಬಂದಂತೆ ಯಾರೋ ಎಸೆದಂತಿತ್ತು. ತುದಿಯಲ್ಲಿ ಒಬ್ಬರು ವಯಸ್ಸಾದವರು ಕುರಿ ಮೇಯಿಸುತ್ತಿದ್ದರು. ಅವರ ಕುರಿಗಳ ಬಣ್ಣವೂ ಬಂಡೆ ಕಲ್ಲಿನಂತೆಯೇ ಇದ್ದು, ಕುರಿಗಳಾವುದು ಬಂಡೆಗಳಾವುದು ಎಂದು ಗುರುತಿಸುವುದು ದುಸ್ತರವಾಗಿತ್ತು. ಅವರ ಫೋನಿನಲ್ಲಿ ಮೊಳಗುತ್ತಿದ್ದ 'ಮಾದಪ್ಪ'ನ ಹಾಡು, ಆ ಬೆಟ್ಟ ಹಾಗೂ ಸುತ್ತಲಿನ ಪರಿಸರಕ್ಕೆ ಅಧ್ಯಾತ್ಮದ ಸ್ಪರ್ಶವನ್ನು ನೀಡಿತ್ತು.

ಮತ್ತೊಂದು ರೌಂಡು ಫೋಟೋ ಶೂಟು ಮುಗಿಸಿಕೊಂಡು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಶುರುವಾಗಿತ್ತು ನೋಡಿ ಸೋನೆ ಮಳೆ! ಬೆಟ್ಟದ ಆ ಏರುದಾರಿಯಲ್ಲಿ ಸಾಗುತ್ತಾ ಸಾಕಷ್ಟು ಮೇಲೆ ಬಂದಿದ್ದೆವು. ಛತ್ರಿಯೂ ಜೊತೆಗಿರಲಿಲ್ಲ. ಬೆಟ್ಟಗಳಲ್ಲಿ ಸುರಿಯುವ ಮಳೆಯನ್ನು ಗಾಳಿಯೇ ಕಂಟ್ರೋಲ್ ಮಾಡುವುದು. ಒಮ್ಮೆ ಅತ್ತ ವಾಲಿದರೆ, ಮರುಕ್ಷಣವೇ ದಿಕ್ಕು ಬದಲಾಯಿಸಿ ಇತ್ತ ವಾಲುತ್ತದೆ. ಮಗಳು ಒದ್ದೆಯಾಗದಂತೆ ನಾನು ಆದಷ್ಟು ಒದ್ದಾಡಿ ಮಳೆಗೆ ಒಪ್ಪಿಸಿಕೊಳ್ಳುವಷ್ಟರಲ್ಲಿ ಹರಿಣಿ ಚಿಗರೆಯಂತೆ ನೆಗೆಯುತ್ತಾ ಕೆಳಗಿಳಿದು ಛತ್ರಿಯನ್ನು ತಂದಿದ್ದಳು. ಮಳೆಯ ಪ್ರಮಾಣ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿದ್ದರಿಂದ, ಬೈಕಿನಲ್ಲಿ ಮೇಲೆ ಅಥವಾ ಕೆಳಗೆ ಹೋಗುವ ರಿಸ್ಕ್ ತೆಗೆದುಕೊಳ್ಳುವ ಮನಸಾಗಲಿಲ್ಲ. ಅಲ್ಲೇ ಒಂದು ಸ್ಟೂಲಿನಂತೆ ಕಾಣುತ್ತಿದ್ದ ಕಲ್ಲು ಬಂಡೆಯ ಮೇಲೆ ಮೂವರೂ ಛತ್ರಿ ಹಿಡಿದುಕೊಂಡು ಕೂತೆವು. ಆ ಬೆಟ್ಟದ ಭಾಗದಲ್ಲಿ ನಮ್ಮನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ನಮ್ಮೆದುರಿಗೆ ತಲೆಯೆತ್ತಿ ನಿಂತು, ಮುಂಗಾರು ಮಳೆಯಲ್ಲಿ ನೆನಯುತ್ತಿರುವ ಸಾಲು ಸಾಲು ಬೆಟ್ಟಗಳು..ನಿಧಾನಕ್ಕೆ ಮೇಲೇರುತ್ತಾ ಬೆಟ್ಟವನ್ನು ಆವರಿಸುತ್ತಿರುವ ಮಂಜು..ಆ ಕ್ಷಣ! ಆ ಸೊಬಗು! ಕುವೆಂಪು ಅವರ ಸಾಲುಗಳು ನೆನಪಾದವು 'ಪ್ರಕೃತಿಯ ಕಲೆಗಿಂ ಮಿಗಿಲೆ ನರಕೃತಿಯ ಕಲೆ?'

ಚಂಚಲ್ ಹವಾ!

ಮಳೆ ಅತ್ತ ವಾಲಿದಾಗ ಛತ್ರಿಯ ಆ ಬದಿ ಕೂತಿದ್ದ ಹರಿಣಿಯತ್ತ ಸರಿಯುತ್ತಿತ್ತು. ಇತ್ತ ವಾಲಿದಾಗ ನನ್ನತ್ತ ಸರಿಯುತ್ತಿತ್ತು. ಅಷ್ಟರಲ್ಲಿ ನನ್ನ ಪುಟ್ಟ ಮಗಳ ಹಾಡು ಶುರುವಾಯಿತು: ಆಕೆ ಹೊಸದಾಗಿ ಕಲಿತ ಹಾಡದು. 'ಯೇ ರಾತೇ..ಯೇ ಮೊಸಂ..ನದೀ ಕಾ ಕಿನಾರ.. ಏ ಚಂಚಲ್ ಹವಾ...' ಅವಳು ಅಷ್ಟು ಹೇಳಿದ್ದೇ ನನ್ನ ಮಡದಿಯೂ ಅವಳೊಂದಿಗೆ ದನಿಗೂಡಿಸಿದಳು. ಆಮೇಲಿನ ಇಪ್ಪತ್ತು ನಿಮಿಷ, ಆ ಮಳೆಯಲ್ಲಿ, ಆ ಬೆಟ್ಟದ ಮಂಜಿನ ಹನಿಗಳ ಮಧ್ಯ ನಮ್ಮದೇ ಸಂಗೀತ ಲೋಕ ಸೃಷ್ಟಿಯಾಗಿತ್ತು. ಮಡದಿ - ಮಗಳ ಸಂಗಡ ಕಳೆದ ಆ ಏಕಾಂತಕ್ಕೆ ಏನೆಂದು ಹೆಸರಿಡುವುದೋ ನಂಗೊತ್ತಿಲ್ಲ. ಆ ಕ್ಷಣಗಳನ್ನು ಮನದಲ್ಲಿ ಅಚ್ಚೊತ್ತಿರುವೆ. ನಾವು ಭರ್ತಿ ಒಂದು ಘಂಟೆ, ಹಾಗೆಯೇ ಆ ಬಂಡೆಯ ಮೇಲೆ ಕೂತಿದ್ದೆವು. ಹಾಡುತ್ತಾ, ಹನಿಗಳೊಂದಿಗೆ ಆಡುತ್ತಾ..ಮಳೆಯ ಆರ್ಭಟ ನಿಂತಾಗ, ನಿಧಾನವಾಗಿ ಬೆಟ್ಟವನ್ನು ಇಳಿದೆವು. ಬೈಕೇರಿ ಬೆಟ್ಟವನ್ನು ನೋಡಿದಾಗ, ಬೆಟ್ಟ ನಮ್ಮನ್ನು ಕೈಬೀಸಿ ಮತ್ತೆ ಕರೆದಂತೆ ಭಾಸವಾಯಿತು.

ನಗುವಿನಲ್ಲಿ ಎಷ್ಟೊಂದು ವೈವಿಧ್ಯ! ತಿಳಿ ನಗೆ, ಮಂದಹಾಸ, ಮುಗ್ಧ ನಗೆ, ಪಕ ಪಕ, ಕಿಲ ಕಿಲ ನಗೆ, ಮಾದಕ ನಗೆ, ಹೊಟ್ಟೆ ಹುಣ್ಣಾಗುವ ನಗೆಗಳು ಒಂದು ಬಗೆಯಾದರೆ, ಕೃತ್ರಿಮ, ಕೆಣಕುವ , ಕುಹಕ, ಕಪಟ, ಅಹಂಕಾರ, ಅಟ್ಟಹಾಸ, ದರ್ಪದ ನಗೆಗಳು ಇನ್ನೊಂದು ಬಗೆ!

ನಗುವಿನಲ್ಲಿದೆ ಆರೋಗ್ಯದ ಕೀಲಿಕೈ!

» ಲಕ್ಷ್ಮಣ್ ಗೊರ್ಲಕಟ್ಟೆ ಮೈಸೂರು



ನಗು ಮಾನವನಿಗೆ ದೇವರು ಇತ್ತ ಒಂದು ವರ. ನಗುವು ಮಾನವನನ್ನು ಇತರ ಪ್ರಾಣಿಗಳಿಗಿಂತ ವಿಭಿನ್ನ ಹಾಗೂ ಶ್ರೇಷ್ಠನನ್ನಾಗಿ ಮಾಡಿದೆ. ನಾಯಿಗಳು ಮುಂತಾದ ಕೆಲವೇ ಕೆಲವು ಮೂಕ ಪ್ರಾಣಿಗಳು ತಮ್ಮ ಸಂತೋಷವನ್ನು ಸ್ವಲ್ಪ ಮಟ್ಟಿಗೆ ಮುಖ ಚಹರೆ ಮತ್ತು ದೈಹಿಕ ಚಲನ ವಲನದಿಂದ ಪ್ರದರ್ಶಿಸಬಲ್ಲವು. ಆದರೆ ನಗುವುದು, ಮಾತನಾಡುವುದು, ಭಾವನೆಗಳನ್ನು ವ್ಯಕ್ತಪಡಿಸುವ ಅತಿಶಯ ಗುಣ ಮಾನವನಿಗಲ್ಲದೆ ಬೇರೆ ಯಾವ ಪ್ರಾಣಿಗಳಿಗೂ ಇಲ್ಲ. ನಗುವು ದೇಶ, ಭಾಷೆ, ಜನಾಂಗ, ಸಂಸ್ಕೃತಿ, ನಾಗರಿಕತೆ ಚೌಕಟ್ಟಿಗೆ ಮೀರಿದ ಒಂದು ವಿಶೇಷ ಕೌಶಲ. ನಗುವಿಗೆ ಯಾವುದೇ ಭಾಷೆಯ ಅಥವಾ ಲಿಪಿಯ ಅಗತ್ಯವಿಲ್ಲ. ನಗು ಎಲ್ಲರಿಗೂ ಅರ್ಥವಾಗುವ, ಇಷ್ಟವಾಗುವ ಜಾಗತಿಕ ಭಾಷೆ. ನಗು ಒಂದು ಅದ್ಭುತ ಭಾಷೆ.

ನಾವು ನಕ್ಕಾಗ ಎಂಡೋರ್ಫಿನ್ ಎಂಬ ಹಾರ್ಮೋನ್ (ಗ್ರಂಥಿ ರಸ) ಮಿದುಳಿನಲ್ಲಿ ದ್ರವಿಸಿ ನೋವನ್ನು ಉಪಶಮನಗೊಳಿಸಿ ಸಂತೋಷದ ಅನುಭವವನ್ನು ಉಂಟುಮಾಡುತ್ತದೆ ಎಂದು ವೈದ್ಯಕೀಯ ಸಂಶೋಧನೆ ಹೇಳಿದೆ. ಇದನ್ನು ಅರಿತು ಈಗ ಕೆಲವು ಆಸ್ಪತ್ರೆಗಳಲ್ಲಿ 'ನಗುವಿನ ಥೆರಪಿ'ಯನ್ನು ರೋಗಿಗಳ ಜೊತೆ ವೈದ್ಯರು, ದಾದಿಯರು ನಡೆಸುದುಂಟು! ಇದರಿಂದ ರೋಗಿಗಳಿಗೆ ಸಾಂತ್ವನ ಉಂಟಾಗಿ ರೋಗ ಉಪಶಮನವಾಗಲು ಸಹಾಯವಾಗುತ್ತಲಿದೆ.

ನಗುವಿನ ಪೈಕಿ, ಅತ್ಯಂತ ಶ್ರೇಷ್ಠ ನಗು ಯಾವುದು? ತನ್ನನ್ನು ಕುರಿತು ತಾನೇ ನಗುವುದು! ಹೌದು ತನ್ನ ಬಗ್ಗೆಯೇ ಒಬ್ಬನು ನಕ್ಕಾಗ ಎಲ್ಲರೂ ಆ ವ್ಯಕ್ತಿಯ ಜೊತೆ ಜೊತೆಗೇ ನಗುವರು. ಯಾರೂ ಆ ವ್ಯಕ್ತಿಯ ಬಗ್ಗೆ ಅಪಹಾಸ್ಯ ಮಾಡಿ ನಗುವುದಿಲ್ಲ. ಅಂತಹ ವ್ಯಕ್ತಿಯನ್ನು ಎಲ್ಲರೂ ಮೆಚ್ಚುತ್ತಾರೆ, ಇಷ್ಟ ಪಡುತ್ತಾರೆ. ಚಾರ್ಲಿ ಚಾಪ್ಲಿನ್ ತಮ್ಮ ಬಗ್ಗೆ ತಾವೇ ಹಾಸ್ಯ ಮಾಡಿಕೊಂಡು ಒಂದೂ ಮಾತನ್ನು ಆಡದೇ ಇಡೀ ಜಗತ್ತನ್ನೇ ನಗಿಸಿದ್ದರಲ್ಲವೇ? ಇತ್ತೀಚೆಗೆ ಮಿಸ್ಟರ್ ಬೀನ್ಸ್ ಎಂಬಾತನೂ, ಮಾತಿಲ್ಲದೆ, ದೇಹದ ಹಾವ ಭಾವಗಳಿಂದಲೇ ನೋಡುಗರನ್ನು ನಗಿಸುವುದರಲ್ಲಿ ವಿನೂತನ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾನೆ.

ಸಿನೆಮಾ ನಾಟಕಗಳಲ್ಲಿಯೂ ಗಂಭೀರ ಮತ್ತು ಏಕತಾನ ದೃಶ್ಯಗಳ ಮಧ್ಯೆ ವಿದೂಷಕ ಪಾತ್ರಗಳು, ಹಾಸ್ಯಮಯ ಸನ್ನಿವೇಶಗಳು ಅತ್ಯಗತ್ಯ. ಹಾಸ್ಯ ಸನ್ನಿವೇಶಗಳಿಂದ ನಾಟಕ ಸಿನಿಮಾಗಳು ಸಪ್ಪೆ ಎನಿಸದೆ, ಅವುಗಳ ಯಶಸ್ಸು ಹೆಚ್ಚುತ್ತದೆ. ದೃಶ್ಯ ಮಾಧ್ಯಮಗಳಲ್ಲಿ ನಗೆ ಹಬ್ಬಗಳು ಈಗ ಜನಪ್ರಿಯ! ನಗೆ ಹಬ್ಬ ನಡೆಸುವುದರಲ್ಲಿ ಗಂಗಾವತಿ ಪ್ರಾಣೇಶ್ ದೊಡ್ಡ ಹೆಸರನ್ನೇ ಮಾಡಿದ್ದಾರೆ.

ಹಿಂದೆ ರಾಜ ಮಹಾರಾಜರುಗಳು ತಮ್ಮ ಆಸ್ಥಾನದಲ್ಲಿ ವಿದೂಷಕರನ್ನು ನಿಯಮಿಸಿಕೊಳ್ಳುತ್ತಿದ್ದರು. ಕ್ಲಿಷ್ಟ ಸಮಸ್ಯೆಗಳು ಎದುರಾಗಿ ರಾಜರಿಗೆ ಮಾನಸಿಕ ಒತ್ತಡ ಉಂಟಾದಾಗ ವಿದೂಷಕರು ತಮ್ಮ ನಟನೆ ಮತ್ತು ಹಾಸ್ಯಭರಿತ ಮಾತುಗಳಿಂದ ರಾಜರನ್ನು ರಂಜಿಸಿ ಮಾನಸಿಕ ಒತ್ತಡವನ್ನು ದೂರ ಮಾಡುತ್ತಿದ್ದರು. ಅಕ್ಬರನ ಆಸ್ಥಾನದಲ್ಲಿ ಬೀರಬಲ್, ವಿಜಯನಗರ ಅರಸರ ಆಸ್ಥಾನದಲ್ಲಿ ತೆನಾಲಿ ರಾಮಕೃಷ್ಣ ಅವರಿಗೆ ಪ್ರಮುಖ ಸ್ಥಾನಮಾನ ಇತ್ತು.

ನಗುವಿನ ಯೋಗ!: ನಗುವಿನ ವಿಷಯ ಬಂದಾಗ ಮುಂಬಯಿಯ ವೈದ್ಯ ಡಾ. ಮದನ್ ಕಟಾರಿಯಾ ಅವರನ್ನು ನೆನೆಯಲೇ ಬೇಕು. 1995 ರಲ್ಲಿ ಕಟಾರಿಯಾ ಅವರು ತಮ್ಮ ಪತ್ನಿ ಮತ್ತು ಕೆಲವೇ ಕೆಲವು ಮಿತ್ರರೊಂದಿಗೆ ಮೊತ್ತ ಮೊದಲ 'ನಗೆ ಕೂಟ'ವನ್ನು ಮುಂಬಯಿ ನಗರದ ಪಾರ್ಕ್ ಒಂದರಲ್ಲಿ ಪ್ರಾರಂಭಿಸಿದರು. ಕಟಾರಿಯ ಅವರು ನಗುವುದರ ಜೊತೆಗೆ ಉಸಿರಾಡುವ ಪ್ರಕ್ರಿಯೆ ಮತ್ತು ಉಲ್ಲಾಸಕರ ದೈಹಿಕ ಚಟುವಟಿಕೆಗಳನ್ನು ಮಿಳಿತಗೊಳಿಸಿ ನಗುವುದನ್ನು ಒಂದು ಯೋಗಾಭ್ಯಾಸದ ಚಟುವಟಿಕೆ ಎಂದು ಪ್ರಚುರ ಪಡಿಸಿದರು. ಇದರಿಂದ ನಗೆ ಕೂಟಗಳು ದೇಶದ ಎಲ್ಲೆಡೆ ಬೆಳೆಯುತ್ತಾ ಹೋದವು. ನಗೆ ಕೂಟಗಳು ವಿದೇಶಗಳಲ್ಲೂ ಶುರುವಾದವು. ಇದೀಗ 120 ದೇಶಗಳಲ್ಲಿ ನಗೆ ಕೂಟಗಳು ಪ್ರಾರಂಭವಾಗಿವೆ ಎನ್ನುತ್ತಾರೆ ಡಾ. ಕಟಾರಿಯಾ. ಜಾಗತಿಕ ಮಟ್ಟದಲ್ಲಿ ನಗೆ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ 1998 ರಲ್ಲಿ ಮೊಟ್ಟಮೊದಲಿಗೆ ಮುಂಬೈ ನಗರದಲ್ಲಿ ಅಂತಾರಾಷ್ಟ್ರೀಯ ನಗೆಯ ದಿನವನ್ನು ಕಟಾರಿಯಾ ಅವರು ಪ್ರಾರಂಭಿಸಿದರು. ಅಂದು ವಿವಿಧ ದೇಶಗಳಿಂದ ಸಾವಿರಾರು ಪ್ರತಿನಿಧಿಗಳು ಭಾಗವಸಿದ್ದರ ಬಗ್ಗೆ ಕಟಾರಿಯಾ ಅವರು ಹೇಳಿಕೊಂಡಿದ್ದಾರೆ.

ನಗುವಿನ ಯೋಗ ಎಂದರೆ ಏನು, ಹೇಗೆ, ಅದರಿಂದ ಆಗುವ ಪ್ರಯೋಜನಗಳು ಯಾವುವು ಮತ್ತು ನಗುವಿನ ಯೋಗವನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಕಟಾರಿಯಾ ಅವರು ಇಂಗ್ಲಿಷ್ ಭಾಷೆಯಲ್ಲಿ 'Laughter Yoga ಎಂಬ ಪುಸ್ತಕವನ್ನೂ ಬರೆದಿದ್ದಾರೆ.

ನಗುವುದರಿಂದ ನಮ್ಮ ಮುಖದ ಅಂದ ಹೆಚ್ಚಾಗುವುದು ಎಂಬ ಮಾತು ಸತ್ಯ. ಅದಕ್ಕೇ ಅಲ್ಲವೇ ಫೋಟೋ ತೆಗೆಯುವ ಮುನ್ನ ನಗಲು ಹೇಳುವುದು? ಗಂಟು ಮುಖ ಯಾರಿಗೆ ತಾನೇ ಇಷ್ಟ? ಕಚೇರಿ, ಮನೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ಸದ್ಭಾವನೆಯಿಂದ ಕೂಡಿದ ಮುಗುಳ್ನಗು, ತಿಳಿ ಹಾಸ್ಯ ವಾತಾವರಣಕ್ಕೆ ಮೆರಗು ನೀಡಿ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಬಹುದು. ಅನೇಕ ಸಲ ನಗೆಯಿಂದಲೇ ವ್ಯಕ್ತಿಗಳ ಮಧ್ಯೆ ಭಿನ್ನಾಭಿಪ್ರಾಯ ದೂರ ಆಗಲೂ ಬಹುದು, ಬಿಗುವಿನ ಮನಸ್ಸುಗಳು ಹಗುರಾಗಿ ಸೃಜನಾತ್ಮಕ ಸನ್ನಿವೇಶ ನಿರ್ಮಾಣವಾಗಬಹುದು. ಅಂತಹ ಸಂದರ್ಭಗಳಲ್ಲಿ ಕಠಿಣ ಸಮಸ್ಯೆಗಳಿಗೂ ಪರಿಹಾರ ಸುಲಭವಾಗಲೂ ಬಹುದು. ನಗು ಮತ್ತು ಪ್ರಸನ್ನ ಮನಸ್ಥಿತಿಯಿಂದಾಗಿ, ಆರೋಗ್ಯವೂ ಸುಧಾರಿಸುವುದು ಎಂದಿದೆ ಸಂಶೋಧನೆ.

ಆದರೆ ನಗುವು ಎಲ್ಲಾ ಕಾಲದಲ್ಲಿಯೂ ಉಚಿತವಲ್ಲ, ಅದು ಸಂಧರ್ಭೋಚಿತವಾಗಿರಬೇಕು. ಗಂಭೀರ ಸನ್ನಿವೇಶಗಳನ್ನು ಗಮನದಲ್ಲಿ ಇಟ್ಟುಕೊಂಡು ಆ ಸಮಯಕ್ಕೆ ಉಚಿತವಾಗಿ ವರ್ತಿಸುವುದು ಸಭ್ಯತೆಯ ಲಕ್ಷಣ.

ಎಲ್ಲಾ ಕಾಲದಲ್ಲೂ ನಮಗೆ ಯಶಸ್ಸು ಲಭಿಸದು. ಆಗಾಗ ಕಷ್ಟ ಕಾರ್ಪಣ್ಯಗಳು ನಮ್ಮನ್ನು ಕಾಡುತ್ತವೆ. ಸೋಲು ಗೆಲುವು ನಷ್ಟ ಲಾಭ ಏನೇ ಬಂದರೂ ಸಮಾನ ಮನಸ್ಸಿನಿಂದ ಸ್ವೀಕರಿಸಿ, ಏನೇ ಬರಲಿ ಭಗವಂತನ ದಯೆ ಒಂದಿರಲಿ ಎಂಬ ಭಾವವನ್ನು ನಂಬಿ ನಗುವ,ನಗಿಸುವ, ನಗು ನಗುತಾ ಬಾಳುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಇದನ್ನೇ ವಿಲಿಯಂ ಜೇಮ್ಸ್ ಮಹಾಶಯ 'ನಾವು ಸಂತೋಷವಾಗಿರುವುದರಿಂದಾಗಿ ನಗುವುದಲ್ಲ, ಬದಲಾಗಿ, ನಾವು ನಕ್ಕಾಗ ಸಂತೋಷವಾಗಿರುತ್ತೇವೆ!'

ನಕ್ಕರೆ ಅದೇ ಸ್ವರ್ಗ ಅಲ್ಲವೇ!

» ಶ್ರೀಧರ ಬಾಣಾವರ

ನಮ್ಮದು ಬಯಲು ಸೀಮೆಯ ಊರು. ಆದರೂ ಪಕ್ಕದಲ್ಲೇ ಅಂಟಿಕೊಂಡಿದ್ದ ಮಲೆನಾಡಿನ ಊರುಗಳ ಅನೇಕ ರೀತಿ ರಿವಾಜುಗಳೂ, ವಿವಿಧ ಪ್ರದೇಶಗಳಿಂದ ಬಂದು ನೆಲೆಸಿರುವ ಕುಟುಂಬಗಳ ಸಾಂದ್ರತೆ ಹೆಚ್ಚಾಗಿದ್ದ ಊರುಗಳ ಸಂಪರ್ಕವೂ ಇದ್ದ ಕಾರಣ ನಮ್ಮ ಮನೆಯ ಅನೇಕ ಅಡುಗೆ ಕ್ರಮಗಳ ಮೇಲೆ ಈ ಎಲ್ಲ ವೈವಿಧ್ಯಗಳ ಪ್ರಭಾವ ಸಾಕಷ್ಟಿತ್ತು.

ಇಲ್ಲಿ ನಾನು ಹೇಳ ಹೊರಟಿರುವ ಒಂದು ಪ್ರಸಂಗ ಒಬ್ಬಟ್ಟಿನ ಸಾರು ಕುರಿತಾದ್ದು. ಬೇಳೆ ಒಬ್ಬಟ್ಟು, (ತೆಂಗಿನ)ಕಾಯಿ ಒಬ್ಬಟ್ಟು ಎಂಬ ಎರಡು ಪ್ರಕಾರಗಳು ನಮ್ಮಲ್ಲಿ ಹೆಚ್ಚು ಪ್ರಚಲಿತವಾಗಿದ್ದವು. ಈಗ ಬಿಡಿ , ಮಾಧ್ಯಮಗಳಲ್ಲಿ ಓಡಾಡುವ ರೆಸಿಪಿಗಳಲ್ಲಿ, ಹೋಳಿಗೆ ಮನೆ ದುಕಾನುಗಳಲ್ಲಿ ಅದೂ ಇದೂ ಹಾಳೂ ಮೂಳೂ ಪದಾರ್ಥಗಳ ಹೂರಣ ಹಾಕಿ ಮಾಡಿದ ಅಷ್ಟೋತ್ತರ ಮತ್ತು ಶತ ನಾಮಾವಳಿಗಳಷ್ಟು ನಮೂನೆಯ ಹೋಳಿಗೆಗಳು ಲಭ್ಯ. ಆದರೆ ಹಿಂದೆ ನಮಗೆ ಗೊತ್ತಿದ್ದ ಒಬ್ಬಟ್ಟುಗಳಿಗೆ ವೈವಿಧ್ಯಮಯ ಹೆಸರುಗಳು ಇರಲಿಲ್ಲ! ನಮ್ಮಲ್ಲಿ, ಮನೆಮಟ್ಟಿಗೆ ಸಾಧಾರಣವಾಗಿ ಯುಗಾದಿ, ದೇವರ ಸಮಾರಾಧನೆ ಮುಂತಾದ ಸಣ್ಣಪುಟ್ಟ ಕಾರ್ಯಕ್ರಮ ಗಳಲ್ಲಿ ಬೇಳೆ ಒಬ್ಬಟ್ಟು ಖಾಯಂ ಮೆನು; ದೀಪಾವಳಿ, ನವರಾತ್ರಿ, ಮದುವೆಯಲ್ಲಿ 'ಬೀಗರ ಮನೆ'ಗೆ ಇಡುವ ಸಂದರ್ಭದಲ್ಲಿ, ನಾಲ್ಕಾರು ದಿನ ಇಟ್ಟುಕೊಂಡು ತಿನ್ನಬೇಕಾದ ಸಂದರ್ಭದಲ್ಲಿ, ಕಾಯಿ ಒಬ್ಬಟ್ಟನ್ನು ಮಾಡುವ ಪದ್ಧತಿ ಒಂದು ಪ್ರೋಟೋಕಾಲ್‌ನಂತೆ ಅನುಸರಿಸಲ್ಪಡುತ್ತಿತ್ತು.

ಎರಡೂ ಒಬ್ಬಟ್ಟಿನ ತಯಾರಿಕಾ ವಿಧಾನದಲ್ಲಿ ಸಾಮ್ಯತೆ ಇದ್ದರೂ, ಹೂರಣಕ್ಕೆ ಬಳಸುವ ಪದಾರ್ಥಗಳಲ್ಲಿ ವ್ಯತ್ಯಾಸವಿರುವುದು, ತಿಳಿದಿರುವ ವಿಷಯವೇ! ಹೂರಣ ತಯಾರಿಸುವುದು, ಹೊರಕವಚದ ಕಣಕ, ಒತ್ತುವುದು, ಬೇಯಿಸುವುದು ಮುಂತಾದ ಕ್ರಮಗಳು ಸೇಮ್ ಟು ಸೇಮ್. ಬೇಳೆ ಒಬ್ಬಟ್ಟು ಮಾಡಿದ ದಿನ ಹಲವು ಮನೆಗಳಲ್ಲಿ ಸಾರಿಗಾಗಿ ಪ್ರತ್ಯೇಕವಾಗಿ ಬೇಳೆಬೇಯಿಸುವ ಬದಲು, ಹೂರಣಕ್ಕಾಗಿ ಬೇಯಿಸಿದ ಬೇಳೆಯ ಕಟ್ಟನ್ನು ಚೆಲ್ಲದೆ, ಅದಕ್ಕೆ ಸ್ವಲ್ಪ ಪ್ರಮಾಣದ ಬೆಂದ ಬೇಳೆಯನ್ನೂ ಸೇರಿಸಿ, ಸಾರು ಮಾಡುವ ಪದ್ಧತಿ ಇತ್ತು. ಇವರೇ ಒಬ್ಬಟ್ಟಿನ ಅಥವಾ ಹೂರಣಕಟ್ಟಿನ ಸಾರು ಎಂಬ ಕಥಾನಾಯಕ! ಒಬ್ಬಟ್ಟು ಮಾಡಿದ ಮರುದಿನ ಒಬ್ಬಟ್ಟಿನ ಸಾರಿನದ್ದೇ ಕಾರುಬಾರು!

ಇನ್ನು ಹೂರಣವನ್ನು ಒಬ್ಬಟ್ಟು ತಯಾರಿಸುವ ಮುಂಚೆ ತಿನ್ನುವುದು ಮಕ್ಕಳ ಬಹು ಮೆಚ್ಚಿನ ಆಸೆ. ಆದರೆ ನೈವೇದ್ಯಕ್ಕೆ ತಯಾರಿಸುವ ಒಬ್ಬಟ್ಟಾದರೆ ಈ ಅವಕಾಶಕ್ಕೆ ಸ್ವಲ್ಪ ಕಾಯಬೇಕು. ಒಬ್ಬಟ್ಟು ಮಾಡುವ ಸಾರಥ್ಯ ವಹಿಸಿದ ಅಕ್ಕ, ಅಮ್ಮ,ಅಜ್ಜಿ ಅನುಭವದ ಒಂದು ಅಂದಾಜಿನಲ್ಲಿ ಹೂರಣ ಮತ್ತು ಕಣಕವನ್ನು ಸಮಪ್ರಮಾಣದಲ್ಲಿ ತಯಾರಿಸಿ, ಕೊನೆಗೆ ಯಾವ ಪದಾರ್ಥವೂ ಸಹಪಾಟಿ ಇಲ್ಲದೇ ಒಂಟಿಯಾಗಿ ಉಳಿಯದಂತೆ ತಯಾರಿಸುತ್ತಿದ್ದ ರೀತಿ, ಅವರಿಗಷ್ಟೇ ಹಸ್ತಗತವಾಗಿರುತ್ತಿತ್ತು. ಅಕಸ್ಮಾತ್ ಎರಡರಲ್ಲೊಂದು ಉಳಿದರೆ, ಮನೆಯಲ್ಲಿ ಗರ್ಭಿಣಿ ಯಾರಾದರೂ ಇದ್ದರೆ, ಹುಟ್ಟಲಿರುವ ಮಗು ಹೆಣ್ಣೋ ಗಂಡೋ ಎಂಬುದು, ಯಾವು ಉಳಿದಿದೆ ಎಂಬುದರ ಮೇಲೆ ನಿರ್ಧಾರವಾಗುತ್ತಿತ್ತು! ಇದು ಮುಂಚಿತವಾಗಿ ಊಹಿಸುವ ಕಲೆ!

ಬಾಣಾವರದ ಬಿಲ್ಲೆ

ನಮ್ಮದು ತೆಂಗಿನ ಸೀಮೆಯಾಗಿದ್ದರಿಂದ, ಕಾಯೊಬ್ಬಟ್ಟು ಮೊದಲ ಆಯ್ಕೆ. ಸಾಮಾನ್ಯವಾಗಿ ಬೇಳೆ ಒಬ್ಬಟ್ಟು, ಸ್ವಲ್ಪ ಅಗಲವಾಗಿದ್ದು ಅರ್ಧಕ್ಕೆ ಮಡಿಚಿರುವ ಆಕಾರ ಇರುತ್ತದೆ; ಇದನ್ನು ನೋಡಿರುವವರಿಗೆ ನಮ್ಮೂರಲ್ಲಿ ಹಲವು ವರ್ಷಗಳ ಹಿಂದೆ ಮಾಡುತ್ತಿದ್ದ ಪೂರಿ, ಪುಲ್ಕಾ (ಅಂಗೈ ಅಗಲ ಅನ್ನಿ) ದಷ್ಟು ಅಗಲವಿರುತ್ತಿದ್ದ ಒಬ್ಬಟ್ಟಿಗೆ 'ಬಾಣಾವರದ ಬಿಲ್ಲೆ' ಎಂಬ ವಿಶೇಷವಾದ ಹೆಸರಿತ್ತೆಂದು, ಈಗಲೂ ನಮ್ಮೂರಿನ ಹಲವು ಹಳೆಯ ತಲೆಗಳ ಹೇಳಿಕೊಂಡು, ತಮ್ಮ ಬಚ್ಚಬಾಯಿ ಚಪ್ಪರಿಸುವುದುಂಟು.

ನಾನು ಮುಂದೆ ಹೇಳಲಿರುವ ಒಬ್ಬಟ್ಟಿನ ಸಾರಿನ ಪ್ರಸಂಗಕ್ಕೆ ಪೀಠಿಕೆಯಾಗಿ ಇನ್ನೊಂದೆರಡು ವಿಷಯಗಳನ್ನು ಹೇಳುವುದು ಅವಶ್ಯಕ. ನಮ್ಮ ಮನೆಯಲ್ಲಿ ಸಾರು, ಹುಳಿ, ಪಲ್ಯ ಗೊಜ್ಜು ಮುಂತಾದ ಖಾರ ಮೂಲದ ಪದಾರ್ಥಗಳಿಗೆ ಬೆಲ್ಲದ ಸಿಹಿ ಕೂಡಿಸುವ ಕ್ರಮವಿರಲಿಲ್ಲ. ಹುಳಿಯನ್ನದ ಗೊಜ್ಜು, ಹುಣಸೆ ಸಾರು ಮುಂತಾದವುಗಳು ಮಾತ್ರಾ, ಈ ನಿಯಮದಿಂದ ಹೊರಗೆ. ನನ್ನ ಮದುವೆಯಾದ ನಂತರ ನನ್ನ ಹೆಂಡತಿಯ ಮನೆಯಲ್ಲಿ ಇದರ ವಿರುದ್ಧದ ಅಚರಣೆ ಇದ್ದು, ಆರಂಭದಲ್ಲಿ ನಾನು ಹೊಂದಿಕೊಳ್ಳಲಾರದೇ ಕಷ್ಟಪಟ್ಟಿದ್ದಿದೆ. ಮದುವೆಯಾದ ಮೊದಮೊದಲ ದಿನಗಳಲ್ಲಿ, ಹೆಂಡತಿಯು ಸಾರು ಮಾಡಿದರೆ, ಅದಕ್ಕೇಕೆ ಬೆಲ್ಲ ಹಾಕುತ್ತಿದ್ದಳು ಎಂಬ ಅಚ್ಚರಿ ನನಗಾಗುತ್ತಿತ್ತು! ಆದರೆ, ಕ್ರಮೇಣ ನನ್ನ ಹೆಂಡತಿಯ ಅಡುಗೆಯ ಕ್ರಮದಲ್ಲಿ ಕಷ್ಟಪಟ್ಟು ಕೆಲವು ಬದಲಾವಣೆ ತಂದಿದ್ದೇನೆ ಎಂದು ನಂಬಿರುವ ನನಗೆ ಆಕೆ ಹಲವೊಮ್ಮೆ ಸರ್‌ಪ್ರೈಸ್ ನೀಡಿರುವುದಿದೆ. ನಲವತ್ತಕ್ಕೂ ಹೆಚ್ಚು ವರ್ಷಗಳ ದಾಂಪತ್ಯದ ನಂತರವೂ, ಒಮ್ಮೊಮ್ಮೆ ಆಕೆಗೆ ತನ್ನ ತವರಿನ, ಅಜ್ಜಿಯ ನೆನಪಾದಾಗ, ಅಂದು ಒಂದೆರಡು ಬೆಲ್ಲದ ಹಳುಕು ಯಾವುದೋ ಪದಾರ್ಥದಲ್ಲಿ ಮೋಕ್ಷ ಕಂಡಿರುತ್ತದೆ. ಒಟ್ಟಿನಲ್ಲಿ ನನಗೆ ಬೆಲ್ಲದ ಸಿಹಿ, ಸಾರು, ಹುಳಿ, ಪಲ್ಯ, ಗೊಜ್ಜುಗಳಲ್ಲಿ ಬೆಲ್ಲ ಬೆರೆಯುವುದು ಸೇರುವುದಿಲ್ಲ.

ಒಬ್ಬಟ್ಟು ಗೊತ್ತು, ತಿಳಿ ಸಾರು ಗೊತ್ತು; ಇದೇನು ಒಬ್ಬಟ್ಟಿನ ಸಾರು? ಅನ್ನೋ ಪ್ರಶ್ನೆ ಕೆಲವು ಜನಗಳ ಮನಸ್ಸಲ್ಲಾದರೂ ಬಂದಿರಬಹುದು. ಹಾಗೆಯೇ, ಖಾರವಾದ ಸಾರಿನ ಜತೆ ಸಿಹಿ ಸಿಹಿ ಒಬ್ಬಟ್ಟಿನ ಹೂರಣ ಬೆರೆಸಿ ತಿನ್ನುವ ಪರಿಪಾಠ ನಿಮಗೆ ಗೊತ್ತೇ? ಇಂತಹ ಭೋಜನ ವೈವಿಧ್ಯಗಳು, ವಿಶಿಷ್ಟ ರಿಸೆಪಿಗಳು ನಮ್ಮ ನಾಡಿನ ಹಲವೆಡೆ ಚಾಲ್ತಿಯಲ್ಲಿವೆ. ನಿಮ್ಮೂರಿನ ಊಟ ತಿನಿಸಿನ ಅನನ್ಯತೆಯ ಕುರಿತು ನೀವೂ ಬರೆಯಬಹುದು!

ಸಾರಿನ ಜತೆ ಒಬ್ಬಟ್ಟಿನ ಹೂರಣ!

ಅಂತಹದರಲ್ಲಿ ನಾನು ಒಂದು ಸಮಾರಂಭದಲ್ಲಿ ಕಂಡ ಘಟನೆ ಮರೆಯಲಾರೆ. ಈಗೀಗ ವಯೋಸಹಜವಾದ ಮರೆವು ಆವರಿಸುತ್ತಿರುವುದರಿಂದ ಈ ಅಪೂರ್ವ ಘಟನೆಯನ್ನು ಬರಹ ರೂಪದಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದೇನೆ.

ನನ್ನ ಮೊದಲ ನೌಕರಿ ತೊಡಗಿದ್ದು ಹಿರಿಯೂರಿನಲ್ಲಿ. ವಯಸ್ಸು ಇಪ್ಪತ್ತರ ಆಸುಪಾಸು. ನನ್ನ ಹಿರಿಯ ಸಹೋದ್ಯೋಗಿಯ ತಂಗಿಯ ಮನೆ ಆ ಊರಿನ ಒಂದು ಪ್ರಸಿದ್ಧ ಕೂಡು ಕುಟುಂಬ. ಅವರ ಮನೆಯಲ್ಲಿ ಯಾವುದೇ ಸಮಾರಂಭ ನಡೆದರೂ ನಮ್ಮ ಸಹೋದ್ಯೋಗಿಗಳೆಲ್ಲರಿಗೂ ಊಟಕ್ಕೆ ಆಹ್ವಾನವಿರುತ್ತಿತ್ತು. ನಾನು ಹೋದ ಹೊಸತರಲ್ಲಿ ಅವರ ಮನೆಯ ಒಂದು ಕಾರ್ಯಕ್ರಮದ ಸಲುವಾಗಿ ಮದ್ಯಾಹ್ನದ ಊಟಕ್ಕೆ ನಮ್ಮೆಲ್ಲರಿಗೂ ಆಹ್ವಾನ! ಕಚೇರಿಯ ಮದ್ಯಾಹ್ನದ ಊಟದ ಬಿಡುವಿನಲ್ಲಿ ನಾವೆಲ್ಲರೂ ಅವರ ಮನೆಯಲ್ಲಿ ಸೇರಿದ್ದೆವು. ಬ್ರಾಹ್ಮಣ ಸಂಪ್ರದಾಯಸ್ಥ ಕುಟುಂಬವಾದ್ದರಿಂದ, ವಿವಿಧ ವ್ಯಂಜನಗಳೆಲ್ಲವನ್ನೂ ಬಾಳೆ ಎಲೆಯ ಮೇಲೆ ಬಡಿಸಿಯಾದ ನಂತರ, ಮನೆಯ ಯಜಮಾನಿ ತುಪ್ಪ ಬಡಿಸಿದ ಮೇಲೆ ಯಜಮಾನರು ಊಟಮಾಡಲು ಕೋರಿಕೆಯ ರೂಪದಲ್ಲಿ ಅನುಮತಿ ನೀಡಿದ ಮೇಲೆ ಊಟ ಶುರುವಾಯಿತು. ಭೋಜನದ ಮದ್ಯೆ ಸಾರಿನ ಸರದಿ.

ಒಂದೆರಡು ತುತ್ತು ತಿಂದ ಮನೆಯ ಹಿರಿಯ ಸದಸ್ಯರೊಬ್ಬರು 'ಸಾರಿಗೆ ಹೂರಣ ಕಡಿಮೆಯಾಗಿದೆಯಲ್ಲಾ!' ಎಂದರು.

ಸಾರಿನ ಜತೆ ಹೂರಣ!

ಆಗ ನನಗೆ ಅಂದು ಬೇಳೆ ಒಬ್ಬಟ್ಟಿನ ಊಟ ಹಾಗೂ ಆ ಪ್ರಯುಕ್ತ ಅಂದಿನ ಸಾರು ಒಬ್ಬಟ್ಟಿನ ಸಾರು ಎಂದು ಅರಿವಾಯಿತು. ಆ ಹಿರಿಯರ ಉದ್ಗಾರವನ್ನು ಕೇಳಿದ ತಕ್ಷಣವೇ, ಆತಿಥೇಯ ಕುಟುಂಬದ ಹಿರಿಯ ಸೊಸೆ ಒಂದು ಸಣ್ಣ ಪರಾತದಲ್ಲಿ ಕಿತ್ತಳೆ ಹಣ್ಣಿನ ಗಾತ್ರದ ಹೂರಣದ ಉಂಡೆಗಳನ್ನು ತಂದು ಎಲ್ಲರ ಎಲೆಗೂ ಬಡಿಸತೊಡಗಿದರು. ಹಿಂದೆಯೇ ಸಾರಿನ ಪಾತ್ರೆಯೂ ಬಂತು. ನೋಡನೋಡುತ್ತಿದ್ದಂತೆ ಒಂದೆರಡು ಸೌಟು ಸಾರು, ಜೊತೆಗೆ ಶಕ್ತ್ಯಾನುಸಾರ, ಒಂದೋ ಎರಡೋ ಹೂರಣದ ಉಂಡೆಗಳು ಎಲೆಗೆ ಬಿದ್ದವು. ಈ ಸನ್ನಿವೇಶವನ್ನು ಮೊದಲೇ ಊಹಿಸಿದ್ದ, ಅಡುಗೆಗೆ ತೊಡಗಿಸಿಕೊಂಡಿದ್ದ ಮಹಿಳೆಯರು, ಸಾಕಷ್ಟು ಹೆಚ್ಚಿನ ಹೂರಣ ತಯಾರಿಸಿ, ಮುಂದೊದಗುವ ಕಾಳಗಕ್ಕೆಬೇಕಾದ ಮದ್ದು ಗುಂಡುಗಳನ್ನು ಹೊಂಚಿಟ್ಟಿದ್ದರು!

ಎಲೆಗೆ ಬಿದ್ದ ಹೂರಣದ ಉಂಡೆಗಳು ಒಳ್ಳೆಯ ಕೆಲಸ ಮಾಡಿದವು! ಊಟಕ್ಕೆ ಕುಳಿತಿದ್ದ ಹೆಚ್ಚಿನವರು ಈಗ ಸಂತೃಪ್ತಿಯಿಂದ, ಸಾರಿನೊಂದಿಗೆ ಯಥಾಶಕ್ತಿ ಹೂರಣದ ಉಂಡೆಗಳನ್ನು ವಿಲೀನಗೊಳಿಸುತ್ತಾ, ಒಬ್ಬಟ್ಟಿನ ಸಾರನ್ನವನ್ನು ನೆಕ್ಕಿನೆಕ್ಕಿ, ನಡುನಡುವೆ ಹಾಸ್ಯದ ಕುಶಲೋಪರಿಗಳನ್ನು ಉದ್ಗರಿಸುತ್ತಾ, ಭೋಜವನ್ನು ಸವಿಯತೊಡಗಿದರು. ಎಲೆಯ ಮೇಲಿದ್ದ ದ್ರಾವಣವು ಇನ್ನೂ ಸಾರಿನ ರೂಪವನ್ನು ಉಳಿಸಿಕೊಂಡಿತ್ತೋ ಅಥವಾ ಸಿಹಿ- ಖಾರದ ಪಾಯಸದ ರೂಪವನ್ನು ತಳೆದಿತ್ತೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ ನಾನು ಮಾತ್ರಾ ಈ ಸಾಹಸಕ್ಕೆ ಕೈ ಹಾಕುವ ಸ್ಥಿತಿಯಲ್ಲಿರಲಿಲ್ಲವಾಗಿ, ಹೇಗೋ ತಪ್ಪಿಸಿಕೊಂಡೆ. ಒಬ್ಬಟ್ಟಿನ ಸಾರಿನ ಈ ಬಾಹುಬಲಿ ರೂಪವನ್ನು ನಾನು ಅಂದು ಕಂಡಿದ್ದೆ. ಭೋಜನವು ಮುಂದುವರಿದು, ಒಬ್ಬಟ್ಟಿನ ಸರದಿ ಬಂದಾಗ ಅಕ್ಕ ಪಕ್ಕದವರು, ಬಡಿಸುತ್ತಿದ್ದವರು ಬಲವಂತವಾಗಿ ಎರಡೆರಡು, ಒಂದೂವರಡಿ ವ್ಯಾಸದ ಒಬ್ಬಟ್ಟನ್ನು ನನಗೆ ಬಡಿಸಿ, ತಿನ್ನಿಸುವುದರಲ್ಲಿ ಸಫಲರಾದರು. ಸಹ ಪಂಕ್ತಿಯಲ್ಲಿದ್ದ ಅನುಭವಿ ಆಟಗಾರರು ನಾಲ್ಕೈದು ಒಬ್ಬಟ್ಟುಗಳನ್ನು ಹಾಲು, ತುಪ್ಪಗಳ ಸಹಾಯದಿಂದ ಸಲೀಸಾಗಿ ಮಾಯ ಮಾಡಿದ್ದರು!

ಊಟ ಮುಗಿಸಿ, ಕಚೇರಿಗೆ ಮರಳಿದ ನನಗೆ ಕೆಲಸ ಮಾಡುವುದು ಸಾಧ್ಯವೇ ಇಲ್ಲವೆನ್ನುವ ಪರಿಸ್ಥಿತಿ. ಮನೆ ಸೇರಿ, ಚೆನ್ನಾಗಿ ನಿದ್ರೆ ಮಾಡಬೇಕೆನಿಸುವ ಅಭಿಲಾಷೆ! ಅನುಮತಿ ಕೇಳಿದ್ದಕ್ಕೆ ಬಾಸ್, ನಕ್ಕುಬಿಟ್ಟರು! ಅವರಿಗೇನು ಗೊತ್ತು ಒಬ್ಬಟ್ಟಿನ ಪ್ರಭಾವ! ಹಾಗೂ ಹೀಗೂ ಸುಧಾರಿಸಿಕೊಂಡು ಅಂದಿನ ಕೆಲಸ ಮುಗಿಸಿದ್ದಾಯಿತು. ಅದೇನೇ ಇದ್ದರೂ, ಅಂದಿನ ಭೋಜನದಲ್ಲಿ ಮೊದಲ ಬಾರಿ 'ಹೂರಣ ಮತ್ತು ಸಾರು' ಬೆರೆಸಿ ಊಟ ಮಾಡುವ ಪರಿಯನ್ನು ಕಂಡು, ಆದ ಅಚ್ಚರಿ ಅಷ್ಟಿಷ್ಟಲ್ಲ!

(ಪ್ರತಿಕ್ರಿಯಿಸಿ: viramapost@gmail.com)

ಕನ್ನಡಕ್ಕೆ ಒಲಿದು ಬಂದ ಮಹಾ ಕಾದಂಬರಿ!

◀◀ ಮೊದಲ ಪುಟದಿಂದ

ಫ್ರೆಂಚ್ ಮತ್ತು ಇಂಗ್ಲಿಷ್ ಕಾದಂಬರಿಕಾರರಾದ ಬಾಲ್ಜಾಕ್, ಚಾರ್ಲ್ಸ್ ಡಿಕೆನ್ಸ್, ಜಾರ್ಜ್ ಎಲಿಯಟ್ ಇಂಥ ಲೇಖಕರು ಸಿದ್ದಗೊಳಿಸಿದ ಮಾದರಿಯನ್ನು ಅನುಸರಿಸುತ್ತ ಅವೆಲ್ಲವನ್ನು ಮೀರುವ ಕೃತಿಯಾಗಿ 'ಅನ್ನಾ ಕರೆನಿನಾ' ಬೆಳೆದಿದೆ ಎಂಬ ಅನುವಾದಕರ ಮಾತಿನಲ್ಲಿ ತಥ್ಯವಿದೆ. ಈ ಕಾದಂಬರಿಯು ವಿಶ್ವಾಸ ದ್ರೋಹ, ನಂಬಿಕೆ, ಕುಟುಂಬ, ಮದುವೆ, ಸಾಮ್ರಾಜ್ಯಶಾಹಿ ರಷ್ಯಾದ ಸಮಾಜ, ಮನುಷ್ಯ ಸಹಜ ಬಯಕೆ, ಜತೆಗೆ ಗ್ರಾಮೀಣ ಮತ್ತು ನಗರ ಜೀವನದ ನಡುವಿನ ವ್ಯತ್ಯಾಸಗಳ ವಿಷಯಗಳನ್ನು ಭಿತ್ತಿಯಾಗಿರಿಸಿಕೊಂಡಿದೆ. ಮುಖ್ಯವಾಗಿ ಇಲ್ಲಿನ ಕಥೆಯು ಅನ್ನಾ ಮತ್ತು ಅಶ್ವದಳದ ಅಧಿಕಾರಿ ಕೌಂಟ್ ಅಲೆಕ್ಸಿಸ್ ಕಿರಿಲಿಚ್ ವ್ರಾನ್ಸ್ಕಿ ನಡುವಿನ ವಿವಾಹೇತರ ಸಂಬಂಧವನ್ನು ಕೇಂದ್ರೀಕರಿಸುತ್ತದೆ. ಇದು ಸೇಂಟ್ ಪೀಟರ್ಸ್‌ಬರ್ಗ್‌ನ ಸಾಮಾಜಿಕ ವಲಯಗಳನ್ನು ಗಲಿಬಿಲಿಗೊಳಿಸುತ್ತದೆ ಮತ್ತು ಯುವ ಪ್ರೇಮಿಗಳು ಸಂತೋ ಷದ ಅನ್ವೇಷಣೆಯಲ್ಲಿ ಇಟಲಿಗೆ ಪಲಾಯನ ಮಾಡಲು ಒತ್ತಾಯಿಸುತ್ತದೆ, ಆದರೆ ಅವರು ರಷ್ಯಾಕ್ಕೆ ಹಿಂದಿರುಗಿದ ನಂತರ, ಅವರ ಜೀವನವು ಮತ್ತಷ್ಟು ಬಿಚ್ಚಿಕೊಳ್ಳುತ್ತದೆ.

ರೈಲು ಒಂದು ಪ್ರತಿಮೆ: ಈ ಕಾದಂಬರಿಯ ಉದ್ದಕ್ಕೂ ರೈಲು ಒಂದು ವಿಶಿಷ್ಟ ಪ್ರತಿಮೆಯಾಗಿದ್ದು, ಹಲವಾರು ಪ್ರಮುಖ ಕಥಾವಸ್ತುವಿನ ಅಂಶಗಳು ಪ್ರಯಾಣಿಕ ರೈಲುಗಳಲ್ಲಿ ಅಥವಾ ಸೇಂಟ್ ಪೀಟರ್ಸ್‌ಬರ್ಗ್‌ನ ನಿಲ್ದಾಣಗಳಲ್ಲಿ ಅಥವಾ ರಷ್ಯಾದ ಇತರೆಡೆ ನಡೆಯುತ್ತವೆ. ಬದಲಾವಣೆ, ಆಧುನಿಕತೆ, ಯಾಂತ್ರಿಕ ಜಗತ್ತು ಇವುಗಳ ಮುಖಾಮುಖಿ ಸಂಘರ್ಷವೂ ಇಲ್ಲಿದೆ. ಸುಮಾರು ಎಂಟು ನೂರ 80 ಪುಟಗಳ 136 ಪಾತ್ರ ಪರಿಪೋಷಣೆಗಳಿರುವ ಈ ಬೃಹತ್ಕಾದಂಬರಿ ಸಾಮಾಜಿಕ ಬದುಕಿನ ವೈವಿಧ್ಯಮಯ ವಿಷಯಗಳನ್ನು ಪರಿಶೋಧಿಸುತ್ತದೆ. ಆ ಸಮಯದಲ್ಲಿ ರಷ್ಯಾದಲ್ಲಿ ಅಸ್ತಿತ್ವದಲ್ಲಿದ್ದ ಭೂಮಿ ಮತ್ತು ಕೃಷಿ ವ್ಯವಸ್ಥೆ, ಶೋಷಣೆ, ಜಮೀನ್ದಾರಿ ಪದ್ಧತಿ, ಅಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ಮಾತ್ರವಲ್ಲದೆ, ಕುಟುಂಬಗಳ ಮಟ್ಟದಲ್ಲಿ, ಧರ್ಮ, ನೈತಿಕತೆ, ಲಿಂಗ ವ್ಯವಸ್ಥೆಗಳ ವಿಶ್ಲೇಷಣೆ ಈ ಕಾದಂಬರಿಯಲ್ಲಿ ನೆಲೆ ಪಡೆದಿವೆ. ಕಾದಂಬರಿಯಲ್ಲಿ ಉಲ್ಲೇಖ ಗೊಂಡಿರುವ ಕನ್ನಡ ಓದುಗರಿಗೆ ಅಪರಿಚಿತವಾಗಿರುವ ಅನೇಕ ಮಹತ್ವದ ಸಂಗತಿಗಳನ್ನು ಅನುಬಂಧದಲ್ಲಿ ವಿಸ್ತಾರವಾಗಿ ವಿವರಿಸಿರುವುದು ಉಪಯುಕ್ತ ಉಪಕ್ರಮ.ಇದು ಇಡಿಯಾದ ರಷ್ಯನ್ ಸಮಾಜದ ಸಂಸ್ಕೃತಿಯ ದರ್ಶನವನ್ನು ಮಾಡಿಕೊಡುತ್ತದೆ. ಈ ಮೇರು ಕೃತಿಯ ಕನ್ನಡ ಅನುವಾದವನ್ನು ಪ್ರಕಟಿಸಿ, ಕನ್ನಡದ ಓದುಗರಿಗೆ 'ಅನ್ನಾ ಕರೆನಿನಾ'ವನ್ನು ಮತ್ತೊಮ್ಮೆ ಹೃದ್ಯವಾಗಿ ಪರಿಚಯಿಸಿದ ಹಿರಿಮೆ ಅಭಿನವ ಅವರದ್ದು.

(ಲೇಖಕರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರು)

10.08.2025 ಭಾನುವಾರ
ವಿಶ್ವವಾಣಿ

ಗಬ್ಬರ್ ಸಿಂಗ್ ನೆನಪುಗಳು

ಡಕಾಯತಿ ಹಿನ್ನೆಲೆಯ 'ಶೋಲೆ' ಚಿತ್ರ ಬಿಡುಗಡೆಯಾಗಿ (ಆಗಸ್ಟ್ 1975) ಐವತ್ತು ವರ್ಷ!

» ಗೊರೂರು ಶಿವೇಶ್

ನಮ್ಮೂರಿನ ಮುಂದೆ ಹರಿದು, ಕಾವೇರಿ ನದಿಯನ್ನು ಸೇರುತ್ತಿದ್ದ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟುತ್ತಿದ್ದ ಸಮಯ. ಅಣೆಕಟ್ಟಿನ ನಿರ್ಮಾಣಕ್ಕೆ ಬಂದು ಸೇರಿದ ಸಾವಿರಾರು ಜನ ಕಾರ್ಮಿಕರು, ಅಧಿಕಾರಿಗಳು, ಗುತ್ತಿಗೆದಾರರು ಬಂದು ಸೇರಿ, ನಮ್ಮ ಆ ಪುಟ್ಟ ಗ್ರಾಮವನ್ನು ವಾಣಿಜ್ಯ ಕೇಂದ್ರವಾಗಿಸಿದರು. ಅವರನ್ನು ಆಧರಿಸಿ ಊರ ಮುಖ್ಯರಸ್ತೆಯಗುಂಟ ಚಿಲ್ಲರೆ ಅಂಗಡಿಗಳು, ಹೋಟೆಲ್‌ಗಳು, ಬಾರುಗಳು ತೆರೆಯುತ್ತಾ ಹೋದಂತೆ, ಊರೊಳಗೆ ಖಾಲಿಯಿದ್ದ ರೂಂಗಳಿಗೆ ಬೇಡಿಕೆ ಬಂತು. ಇದೇ ರೀತಿ ವರಾಂಡದ ಬಲಬದಿಯಲ್ಲಿದ್ದ ನಮ್ಮ ಮನೆಯ ಖಾಲಿ ಕೊಠಡಿಗೆ ಬಂದು ಸೇರಿದವರೆ 'ಲೇಟೆಸ್ಟ್ ಟೈಲರ್' ಸಹೋದರರು. ಐದು ವರ್ಷದ ದಿನೇಶ್ ನಿಂದ ಹಿಡಿದು ಇಪ್ಪತ್ತೈದು ವರ್ಷದ ರಾಮಚಂದ್ರ; ನಡುವೆ ಮತ್ತೆ ಮೂವರು ಸೋದರರು. ಆ ಪಂಚ ಸೋದರರ ವಿವಿಧ ವಯೋಮಾನಕ್ಕೆ ತಕ್ಕಂತೆ ಸ್ನೇಹಿತರು. ಅಂಗಡಿಗೆ ಲಗ್ಗೆ ಇಡುತ್ತಿದ್ದ ಅವರೆಲ್ಲರೂ ಅಂಗಡಿಯನ್ನು ಪಡ್ಡೆಗಳ ಅಡ್ಡೆಯಾಗಿಸಿ ಹರಟೆಯ ತಾಣವನ್ನಾಗಿಸಿದ್ದ ಕಾರಣ ಅಂಗಡಿ ಸದಾ ಗಿಜಿಗುಡುತ್ತಿತ್ತು. ಆಗಾಗ್ಗೆ ಕುತೂಹಲದಿಂದ ಅಲ್ಲಿಗೆ ಇಣುಕು ಹಾಕುತ್ತಿದ್ದ ನನಗೆ ಅವರ ಸಂಭಾಷಣೆಯನ್ನು ಕೇಳುವ ಅವಕಾಶ.

ಈ ಸಹೋದರರಿಗೆ ಮೂವರು ಸಹೋದರಿಯರು. ಅವರಲ್ಲಿ ಒಬ್ಬಾಕೆ ಮದುವೆಯಾಗಿ ಹಾಸನದಲ್ಲಿ ನೆಲೆಸಿದರು. ಆ ಕುಟುಂಬದ ವಾಂಚಲ್ಯ ಹೇಗಿತ್ತಂದರೆ ವಿಶೇಷವಾದ ಯಾವುದೇ ಅಡುಗೆಯಾದರೂ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಅಡುಗೆಯನ್ನು ಹೊತ್ತಾಡುತ್ತಿದ್ದರು. ಐವರು ಸಹೋದರರಲ್ಲಿ ಒಬ್ಬರಲ್ಲ ಒಬ್ಬರು ಈ ಡ್ಯೂಟಿಗೆ ನಿಯೋಜಿತರಾಗುತ್ತಿದ್ದರು.

ಹೀಗಿರುತ್ತಿರಲಾಗಿ ಹಾಸನಕ್ಕೆ ಹೋಗಿಬಂದ ರಾಮಚಂದ್ರನು ಒಂದು ವಿಶೇಷ ಸುದ್ದಿಯನ್ನು ಹೊತ್ತುತಂದನು. ಅದುವೆ ಹಾಸನದ ಇಂಪೀರಿಯಲ್ ಟಾಕೀಸಿಗೆ ಶೋಲೆ ಎಂಬ ಹಿಂದಿ ಚಿತ್ರ ಬಂದ ಸುದ್ದಿ. ಅದೊಂದು ಅದ್ಭುತ ಚಿತ್ರವೆಂದು ಪರದೆಯು ನಮ್ಮೂರಿನ ಟೆಂಟ್ ಸಿನಿಮಾದ ಪರದೆಗಿಂತ ಸಿಕ್ಕಾಪಟ್ಟೆ ದೊಡ್ಡದೆಂದು, ಟ್ರೇನ್ ಹೋಗುತ್ತಿದ್ದರೆ ತಲೆಯ ಮೇಲೆ ಹೋದಂತೆ ಆಗುತ್ತದೆ ಎಂಬುದು ಆ ಸುದ್ದಿ. ಒಂದೆರಡು ದಿನಗಳ ನಂತರ ಬೆಂಗಳೂರಿಗೆ ಹೋಗಿಬಂದ ಎರಡನೇ ಸೋದರ ಪುಂಡಲಿಕನು ನಾನು ಬೆಂಗಳೂರಿನ ಸಂತೋಷ್ ಎಂಬ ಹೊಸ ಸಿನಿಮಾ ಮಂದಿರದಲ್ಲಿ ಆ ಚಿತ್ರವನ್ನು ನೋಡಿದೆನೆಂದು

ಅಲ್ಲಿ ಪರದೆ ಊರಗಲವಿದೆಯೆಂದು, ಕುದುರೆಗಳು ಓಡುತ್ತಿದ್ದರೆ ಎದೆಯ ಮೇಲೆ ಓಡಿದಂತೆ ಸೌಂಡ್ ಎಫೆಕ್ಟ್ ಇದೆಯೆಂದು ವಿವರಿಸಿದ.

ಅದಕ್ಕೆ ಪ್ರತಿಕ್ರಿಯಿಸಿದ ನಮ್ಮೂರಿನ ಕಾಲೋನಿಯಲ್ಲಿ ನೆಲೆಸಿದ್ದ ಇಂಗ್ಲೀಷಿನಲ್ಲಿ ಪರಿಣತಿ ಹೊಂದಿ ಕ್ರಿಕೆಟ್ ಕಾಮೆಂಟ್ರಿಯನ್ನು ಮಾಡಿ ಬಟ್ಲರ್ ಎಂದು ಖ್ಯಾತನಾಗಿದ್ದ ಶಿವಕುಮಾರನು 'ಅದು 70 ಎಂಎಂ ಸ್ಕ್ರೀನ್ ಹಾಗೂ ಸ್ಟಿರಿಯೊಫೋನಿಕ್ ಸೌಂಡ್, ಅದನ್ನು ಆನಂದಿಸಬೇಕಾದರೆ ಬೆಂಗಳೂರಿನ ಸಂತೋಷ ಚಿತ್ರಮಂದಿರದಲ್ಲೆ ನೋಡಬೇಕೆಂದು ಆ ಚಿತ್ರವು ಸವೆನ್ಸಮುರಾಯ್ ಎಂಬ ಜಪಾನಿ ಚಿತ್ರದ ಪ್ರೇರಣೆಯಿಂದ ತೆಗೆದ ಚಿತ್ರ,' ಎಂದು ತಿಳಿಸಿದ.

ರಾಮನಗರದಲ್ಲಿ ರಾಮ್‌ಘರ್

ಈ ಚಿತ್ರವು ಬೆಂಗಳೂರಿನ ಸಮೀಪದ ರಾಮನಗರದಲ್ಲಿ ಸುಮಾರು 2 ವರ್ಷಗಳ ಕಾಲ ಚಿತ್ರೀಕರಣ ನಡೆದಿದೆ ಎಂಬ ವಿವರಣೆ ಕೊಟ್ಟ. ಆಗ ಮತ್ತೊಬ್ಬ ಲೇಟೆಸ್ಟ್ ಸಹೋದರ ಜಯಪ್ರಕಾಶನು ಅದೇ ರೀತಿಯ ಕಥೆಯನ್ನು ಒಂದೆರಡು ವರ್ಷಗಳ 'ಕೊಟ್ಟೆಸಿಕ್ಕೆ' ಎಂಬ ಚಿತ್ರದಲ್ಲಿ ನೋಡಿರುವುದಾಗಿ, ಆದರೆ ಅದಕ್ಕಿಂತ ಇದು ತುಂಬಾ ಚೆನ್ನಾಗಿರುವುದಾಗಿ ತಿಳಿಸಿದ. ಜೊತೆಗೆ ಅಸ್ರಾಣಿ ಹಾಗೂ ಜಗದೀಪ್ ಅವರ ಜೈಲ್ ಕಾಮಿಡಿ ಚೆನ್ನಾಗಿದೆ ಎಂದು ಆ ಸನ್ನಿವೇಶಗಳನ್ನು ವಿವರಿಸುತ್ತ ಅಲ್ಲಿದ್ದವರನ್ನು ನಗಾಡುವಂತೆ ಮಾಡಿದ್ದ.

ಮುಂದೆ ನಮ್ಮೂರಿನ ಪಡ್ಡೆಗಳು ಆ ಸಿನಿಮಾಕ್ಕೆ ಒಬ್ಬೊಬ್ಬರಾಗಿ ಲಗ್ಗೆ ಇಟ್ಟು, ಅರೇ ಓ ಸಾಂಬ, ಹೇ ಕಿತನೆ ಆದ್ಮಿ ರೇ ಎಂದೋ ಬಸಂತಿ ಇನ್ ಕುತ್ತೆಕೋ ಸಾಮ್ನೆ ಮತ್ ನಾಚನಾ ಮುಂತಾಗಿ ಡೈಲಾಗ್ ಉದುರಿಸುತ್ತಿದ್ದರು. ಇನ್ನೂ ಕೆಲವರು ಹೇ ದೋಸ್ತು ತೀ ಹಮ್ ನಹೀ ಚೋಡೇಂಗೆ, ಇಲ್ಲವೆ ಮೆಹಬೂಬ ಮೆಹಬೂಬ ಹಾಡನ್ನು ಗುನುಗುನಿಸುತ್ತ ರೋಮಾಂಚನ ಅನುಭವಿಸುತ್ತಿದ್ದರು. ಹಾಸನದಲ್ಲಿ ಬಿ.ಎಸ್ಸಿ ಮಾಡುತ್ತಿದ್ದ ಜೊತೆಗೆ ನಮ್ಮೂರಿನಲ್ಲಿ ಪ್ರತಿ ರಾಷ್ಟ್ರೀಯ ಹಬ್ಬದ ದಿನಾಚರಣೆಯಲ್ಲಿ ಬೇಲೂರು ಕೃಷ್ಣಮೂರ್ತಿಯವರ ಕಂಬನಿ, ತ್ಯಾಗಿ, ಆಹುತಿ ಮುಂತಾದ ನಾಟಕಗಳಲ್ಲಿ ದುರಂತ ಪಾತ್ರಗಳನ್ನು ಅಭಿನಯಿಸಿ ತ್ಯಾಗಿ ಮಂಜು ಎಂದೇ ಪ್ರಸಿದ್ಧಿಯಾಗಿದ್ದ ಮಂಜಣ್ಣನು, ತನಗೆ ಆ ಚಿತ್ರದಲ್ಲಿ ಠಾಕೂರ್ ಪಾತ್ರದ ಸಂಜೀವ್ ಕುಮಾರನ ಪಾತ್ರವು ಇಷ್ಟವಾಯಿತೆಂದು ತಿಳಿಸಿದರೆ ಅದೇ ನಾಟಕಗಳಲ್ಲಿ ವಿಲನ್ ಪಾತ್ರ ಮಾಡುತ್ತಿದ್ದ ಪ್ರಕಾಶನು ಮಾಡಿದರೆ ಗಬ್ಬರ್ ಸಿಂಗ್ ರೀತಿ ವಿಲನ್ ರೋಲ್ ಮಾಡಬೇಕೆಂದು ಅದರ ಪಾತ್ರಧಾರಿ ಅಮ್ಜದ್ ಖಾನ್‌ನನ್ನು ಹೊಗಳುತ್ತಿದ್ದನು. ಗಂಭೀರವಾದ ದುರಂತ ಪಾತ್ರಗಳಿಗೆ ಹೆಸರಾಗಿದ್ದ ಸಂಜೀವಕುಮಾರನನ್ನು ಅಪಾರವಾಗಿ ಮೆಚ್ಚಿದ್ದ ಮಂಜಣ್ಣನು ಸಂಜೀವ್ ಕುಮಾರ್ ಹೇಮಾಮಾಲಿನಿಯನ್ನು ಮದುವೆಯಾಗಲು ಇಷ್ಟಪಟ್ಟಿದ್ದನೆಂದು ಆದರೆ ಹೇಮಾಮಾಲಿನಿ ನಿರಾಕರಿಸಿದ ಕಾರಣಕ್ಕಾಗಿ ಸಿನಿಮಾದಲ್ಲಿ ಇಬ್ಬರು ಒಟ್ಟಾಗಿ ಅಭಿನಯಿಸಿರುವ ದೃಶ್ಯಗಳೇ ಇಲ್ಲವೆಂದು, ಇದರ ಲಾಭ ಧರ್ಮೇಂದ್ರನಿಗಾಗಿ ಹೀರೋ ಆಗಿ ಮಿಂಚಿದ್ದನೆಂದು ತನ್ನ ಹೀರೋವಿನ ದುರಾದೃಷ್ಟಕ್ಕೆ ಮರುಗುತ್ತಿದ್ದನು.

ಇನ್ನು ಪ್ರಕಾಶನು ಗಬ್ಬರ್‌ಸಿಂಗ್ ಪಾತ್ರವನ್ನು ಡ್ಯಾನಿ ಮಾಡಬೇಕಾಗಿತ್ತೆಂದು, ಧರ್ಮಾತ್ಮ ಸಿನಿಮಾದಲ್ಲಿ ಅಭಿನಯಿಸುತ್ತಿದ್ದ ಕಾರಣಕ್ಕೆ ಈ ಚಿತ್ರದಲ್ಲಿ ಅಭಿನಯಿಸಲು ಸಾಧ್ಯವಾಗಲಿಲ್ಲವೆಂದು ಅದರ ಲಾಭ ಪಡೆದ ಅಮ್ಜದ್‌ಖಾನ್ ಶೋಲೇ ಚಿತ್ರದಲ್ಲಿ ಮಿಂಚಿದ್ದಾನೆಂದು ಅದೃಷ್ಟದ ಆಟವನ್ನು ಕೊಂಡಾಡುತ್ತಿದ್ದನು.

ಹೀಗೆ ಪ್ರತಿಯೊಬ್ಬರು ಸಿನಿಮಾವನ್ನು ಹಾಡಿ ಹೊಗಳುತ್ತಿರಲು ಸಿನಿಮಾವನ್ನು ನೋಡಲೇಬೇಕೆಂಬ ಆಸೆಯು ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ನಮ್ಮ ಮನೆಯಲ್ಲಿ ಕೇಳೋಣವೆಂದರೆ ಅವರು ನಮ್ಮೂರಿನ ಟೂರಿಂಗ್ ಟೆಂಟಿನಲ್ಲಿ ಬರುತ್ತಿದ್ದ ಕನ್ನಡ ಸಿನಿಮಾ ಹೊರತು ಬೇರೆ ಸಿನಿಮಾ ನೋಡರಿಯರು. ಹೀಗಾಗಿ ಹಾಸನಾಂಬ ಜಾತ್ರೆಗೆ ಹಾಸನಕ್ಕೆ ಹೊರಟು ಬಂದರೂ ಶೋಲೆ ನೋಡ ಬೇಕೆಂಬ ನನ್ನ ಮನವಿ ತಿರಸ್ಕರಿಸಿ ಅದೇ ಬಿಡುಗಡೆಯಾಗಿದ್ದ ಡಾ. ರಾಜಕುಮಾರ ರವರ ಐತಿಹಾಸಿಕ 'ಮಯೂರ' ಚಿತ್ರವನ್ನು ನೋಡಿ 'ಅಬ್ಬಾ ಸಿನಿಮಾವೆ' ಎಂದು ಹಾಡಿ ಹೊಗಳಿ ಚಪ್ಪರಿಸಿದರು.

'ಶೋಲೆ' ನೋಡುವ ನನ್ನ ಆಸೆ ಕ್ಷೀಣವಾಗುತ್ತಿದ್ದಂತೆ ನಾಲ್ಕನೇ ಲೇಟೆಸ್ಟ್ ಸಹೋದರನಾದ ನನ್ನ ವಾರಿಗೆಯ ಕೃಷ್ಣಮೂರ್ತಿ ಆ ಚಿತ್ರವೂ ಮೂರುವರೆ ಗಂಟೆಯ ದೀರ್ಘ ಚಿತ್ರವಾದ್ದರಿಂದ ಎರಡು ಇಂಟರ್ವೆಲ್ ಎಂದೂ ಅದಕ್ಕಾಗಿ ಬೇಗನೆ ಸಿನಿಮಾ ಪ್ರಾರಂಭವಾಗುತ್ತಿದೆಯೆಂದು ತಿಳಿಸಿ, ಹಾಸನದಲ್ಲಿ ಇನ್ನೊಂದು ವಾರದಲ್ಲಿ ಚಿತ್ರವನ್ನು ತೆಗೆದು ಹಾಕುತ್ತಾರೆಂದು ಸುದ್ದಿ ತಿಳಿಸಿದ. ಇನ್ನೂ ಕಾಯಲು ಆಗದು, ಏನಾದರೂ ಮಾಡಿ ನೋಡಲೇಬೇಕೆಂದು ನಿಶ್ಚಯಿಸಿದ ನಾನು ಭಂಡ ಧೈರ್ಯ ಮಾಡಿ, ನಾವು ಇಟ್ಟಿದ್ದ ಚಿಲ್ಲರೆ ಅಂಗಡಿಯಲ್ಲಿ ಹಣವನ್ನು ಕದ್ದವನಾಗಿ, ಬಸ್‌ಸ್ಟ್ಯಾಂಡಿಗೆ ಬಂದೆನು. ಆದರೆ ಅಂದೇ ಬಸ್ಸು ಬಾರದಿರಬೇಕೆ! ನಿರಾಶನಾಗಿ ವಾಪಸ್ ಹಿಂತಿರುಗಬೇಕೆನ್ನುವಷ್ಟರಲ್ಲಿ ಕೊನೆಗೂ ಬಸ್ ಬಂದು ನಿಂತಿತು. ಸಹಜವೇಗದಲ್ಲಿ ಚಲಿಸುತ್ತಿರುವ ಬಸ್ಸಾದರೂ ನನಗೆ ಆಮೆಯ ವೇಗದಲ್ಲಿ ಚಲಿಸುತ್ತಿರುವಂತೆ ಭಾಸವಾಗುತ್ತಿತ್ತು.

ರೈಲಿನ ದರೋಡೆ

ಹಾಸನದಲ್ಲಿ ಇಳಿದು, ನಾನು ಚಿತ್ರ ಮಂದಿರವನ್ನು ಅರಸಿ ತಲುಪುವಷ್ಟರಲ್ಲಿ ಟಾಕೀಸಿನ ಗೇಟ್ ಹಾಕಿತ್ತು. ಗೇಟ್‌ಕೀಪರ್ ಸಿನಿಮಾ ಪ್ರಾರಂಭವಾಗಿ ಮುಕ್ಕಾಲುಗಂಟೆ ಆಗಿದೆಯಂದು ತಿಳಿಸಿದರೂ ಬಿಡದೆ ಒಳಹೋಗಿ ಆಗಲೇ ಕ್ಯಾಶ್ ಕೌಂಟರಿನಲ್ಲಿ ಹಣ ಎಣಿಸುತ್ತಿದ್ದವನ ಬಳಿ ಟಿಕೇಟ್ ಪಡೆದು ಒಳಹೋಗುವಷ್ಟರಲ್ಲಿ ಈಗಾಗಲೇ ಚಿತ್ತಬಿತ್ತಿಯಲ್ಲಿ ಮೂಡಿದ್ದ ರೈಲಿನ ದರೋಡೆ, ಜೈಲಿನ ದೃಶ್ಯಗಳೆಲ್ಲ ಮುಗಿದು ಹೋಗಿದ್ದವು. ಸಿನಿಮಾವು ರಾಮ್‌ಘರ್ ಹಳ್ಳಿಯ ಕಥಾಸಂದರ್ಭವನ್ನು ಪ್ರವೇಶಿಸಿತ್ತು. ಪಕ್ಕದವರನ್ನು ಕೇಳಿದರೆ ಸಿನಿಮಾ ಆರಂಭವಾಗಿ ಒಂದು ಗಂಟೆಯಾಗಿದೆ ಎಂದು ತಿಳಿಸಿದರು. ನಿರಾಶೆಯಾದರೂ ಚಿತ್ರವನ್ನು ನೋಡುತ್ತಾ ತಲ್ಲೀನನಾಗಿ ಹೋದೆನು.

ರಾಮ್‌ಘರ್ ಎಂಬ ದರೋಡೆಕೋರರಿಂದ ಪೀಡಿತವಾದ ಹಳ್ಳಿಯ ರಕ್ಷಣೆಗೆ ನಿಲ್ಲುವ ಠಾಕೂರ್ (ಸಂಜೀವ್ ಕುಮಾರ್), ಅವರೆದುಗಿನ ಹೋರಾಟದಲ್ಲಿ ತಮ್ಮ ಕುಟುಂಬದ ಜೊತೆಗೆ ತನ್ನ ಕೈಗಳನ್ನು ಕಳೆದುಕೊಳ್ಳುತ್ತಾನೆ. ಮುಂದೆ ಆತ ಕರೆತರುವ ವೀರು (ಧರ್ಮೇಂದ್ರ) ಮತ್ತು ಜಯ್ (ಅಮಿತಾಬ್) ಊರವರ ವಿಶ್ವಾಸ ಗಳಿಸುವುದರ ಜೊತೆಗೆ ಡಕಾಯಿತ ಗಬ್ಬರ್ ಸಿಂಗ್‌ನನ್ನು (ಅಮ್ಜದ್‌ಖಾನ್) ಬಗ್ಗು ಬಡಿಯುವ ಕಥೆ 'ಶೋಲೆ' ಚಿತ್ರದ್ದು. ಡಕಾಯಿತಿ ಕಥೆಯನ್ನು ಹೊಂದಿರುವ ಅನೇಕ ಚಿತ್ರಗಳು ಬಂದಿದ್ದರೂ, ಈ ಚಿತ್ರ ಗೆದ್ದದ್ದು ಉಸಿರು ಬಿಗಿಹಿಡಿಯುವ ಹಾಗೂ ನವರಸವನ್ನು ಹದವಾಗಿ ಬೆರೆಸಿದ ಚಿತ್ರಕಥೆ (ಸಲೀಂ ಜಾವಿದ್) ಹಾಗೂ ಬಿಗಿಯಾದ ನಿರ್ದೇಶನದಿಂದ (ರಮೇಶ್ ಸಿಪ್ಪಿ).

ಚಿತ್ರ ಮುಗಿಸಿ ಬಂದಾಗ ನನ್ನ ಮನದಲ್ಲಿ ಸ್ಥಿರವಾಗಿ ನಿಂತದ್ದು ಅಮಿತಾಬ್ ಬಚ್ಚನ್ ಅವರ ಅಭಿನಯ, ಎರಡೂ ಬದಿಯಲ್ಲಿ ಹೆಡ್ ಮಾತ್ರ ಇರುವ ನಾಣ್ಯ ಪ್ರತಿಬಾರಿ ಆತನನ್ನು ಗೆಲ್ಲಿಸುವುದು ಮತ್ತು ಅಮಿತಾಬ್ ಮೌತ್ ಆರ್ಗನ್ ನುಡಿಸುವಾಗ ಜಯಬಾಧುರಿ ದೀಪವನ್ನು ನಂದಿಸುತ್ತಾ ಹೋಗುವ ದೃಶ್ಯಗಳು. 'ಶೋಲೆ' ಚಿತ್ರ ಬಿಡುಗಡೆಯಾಗಿ 50 ವರ್ಷಗಳು ಆಗುತ್ತಿದೆ. ಆ ಚಿತ್ರದ ನೆನಪಾದೊಡನೆ, ಅದರ ಹಳೆಯ ನೆನಪುಗಳು ಮತ್ತೆ ಮೂಡುತ್ತವೆ.

ಯುಟ್ಯೂಬ್ ಚಾನೆಲ್‌ನಲ್ಲಿ ವ್ಯೂಸ್ ಹೆಚ್ಚಿಸಲು ಸಲಹೆ ಕೊಡಿ ಸರ್!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಯೋಗೀಶ್, (ಇಮೇಲ್ ಮೂಲಕ)

• **ಸಂಪಾದಕರೇ, ನಾನು ಕಳೆದ ಒಂದೂವರೆ ವರ್ಷದಿಂದ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದೇನೆ. ಅದೇ ಇಲ್ಲಿ ತನಕ ಕೇವಲ ಮೂರು ಸಾವಿರ ಚಂದಾದಾರಾಗಿದ್ದಾರೆ. ಯೂಟ್ಯೂಬ್ ಚಾನೆಲಿಗೆ ಇಲ್ಲಿ ತನಕ ಹನ್ನೊಂದು ಲಕ್ಷಕ್ಕಿಂತ ಹೆಚ್ಚಿನ ಹಣವನ್ನು ತೊಡಗಿಸಿದ್ದೇನೆ. ಒಳ್ಳೆಯ ಕಾರ್ಯಕ್ರಮ ಮಾಡಿದರೂ views ಹೆಚ್ಚು ಬರುತ್ತಿಲ್ಲ. ನನ್ನ ಅನೇಕ ಸ್ನೇಹಿತರು ಲಕ್ಷ ಚಂದಾದಾರರನ್ನು ಹೊಂದಿದ್ದು ಹಣವನ್ನೂ ಸಂಪಾದಿಸುತ್ತಿದ್ದಾರೆ. ನಾನು ನನ್ನ ವೃತ್ತಿಯಲ್ಲಿ ಹೇಗೆ ಯಶಸ್ಸನ್ನು ಕಂಡುಕೊಳ್ಳುವುದು ಅನ್ನೋದನ್ನು ಹೇಳಿ.**

– ಯೋಗೀಶ್ ಅವರೇ, ಮೊದಲನೆಯದಾಗಿ, ನಿಮ್ಮ ಧೈರ್ಯಕ್ಕೆ ಒಂದು ದೊಡ್ಡ ಸಲಾಂ ಹೇಳಲೇಬೇಕು. ಹನ್ನೊಂದು ಲಕ್ಷ ರುಪಾಯಿಗಳನ್ನು ಯೂಟ್ಯೂಬ್‌ನಲ್ಲಿ ತೊಡಗಿಸಿದ್ದೀರೆಂದರೆ, ನೀವು ಚಾನೆಲ್ ನಡೆಸುತ್ತಿದ್ದೀರೋ ಅಥವಾ ಬೆಂಗಳೂರಿನಲ್ಲಿ ಹೊಸದಾಗಿ ಒಂದು ಸ್ಟಾರ್ಟ್‌ಅಪ್ ಆರಂಭಿಸಿದ್ದೀರೋ ಎಂಬ ಅನುಮಾನ ಕಾಡುತ್ತಿದೆ. ಹನ್ನೊಂದು ಲಕ್ಷಕ್ಕೆ ಮೂರು ಸಾವಿರ ಚಂದಾದಾರರು ಅಂದರೆ, ನೀವು ಪ್ರತಿ ಚಂದಾದಾರರಿಗೆ ಸರಿಸುಮಾರು 3,666 ರುಪಾಯಿ ಖರ್ಚು ಮಾಡಿದ ಹಾಗಾಯ್ತು.ಅಣ್ಣಾ, ಇಷ್ಟು ದುಡ್ಡಿನಲ್ಲಿ ನೀವು ಪ್ರತಿಯೊಬ್ಬರಿಗೂ ಒಂದು ಬ್ಲೂಟೂತ್ ಸ್ಪೀಕರ್ ಗಿಫ್ಟ್ ಕೊಟ್ಟಿದ್ದರೂ, ಅವರ ಮನೆಯವರೆಲ್ಲ ಸೇರಿ ನಿಮ್ಮ ಚಾನೆಲ್‌ಗೆ ಸಬ್‌ಸ್ಕ್ರೈಬ್ ಆಗುತ್ತಿದ್ದರು!

ಬನ್ನಿ, ನಿಮ್ಮ ಈ ಸಮಸ್ಯೆಗೆ ಪರಿಹಾರ ಹುಡುಕೋಣ. ನಿಮ್ಮ ಸ್ನೇಹಿತರು ಲಕ್ಷ ಲಕ್ಷ ಸಂಪಾದಿಸುತ್ತಿದ್ದಾರೆ, ನಿಮ್ಮ ಗಾಡಿ ಮಾತ್ರ ಸ್ಟಾರ್ಟ್ ಆಗುತ್ತಿಲ್ಲ ಎಂದರೆ, ಎಲ್ಲೋ ಸಣ್ಣ ವೈರಿಂಗ್ ಸಮಸ್ಯೆ ಇರಬೇಕು. ನೀವು ಬಹುಶಃ 'ಜಾಗತಿಕ ತಾಪಮಾನದಿಂದ ಹಿಮಾಲಯದ ಕರಗುವಿಕೆ' ಬಗ್ಗೆ ಸುದೀರ್ಘ, ಸಂಶೋಧನಾತ್ಮಕ ವಿಡಿಯೋ ಮಾಡುತ್ತಿರಬಹುದು. ಆದರೆ ನಿಮ್ಮ ಸ್ನೇಹಿತ, 'ಕೇವಲ ಐದು ನಿಮಿಷದಲ್ಲಿ ಮ್ಯಾಗಿ ಜೊತೆ ಆಮ್ಲೆಟ್ ಮಾಡುವುದು ಹೇಗೆ?' ಎಂಬ ವಿಡಿಯೋ ಮಾಡಿ ಲಕ್ಷಗಟ್ಟಲೆ ವ್ಯೂಸ್ ಗಳಿಸುತ್ತಿರಬಹುದು. ನೆನಪಿಡಿ, ಯೂಟ್ಯೂಬ್‌ನಲ್ಲಿ ಕೆಲವೊಮ್ಮೆ ಪಾಂಡಿತ್ಯಕ್ಕಿಂತ 'ಪ್ರಾಯೋಗಿಕತೆ' ಹೆಚ್ಚು ಕೆಲಸ ಮಾಡುತ್ತದೆ.

ಯೂಟ್ಯೂಬ್ ಅನ್ನೋದು ಒಂದು ವಿಚಿತ್ರ ದೇವರು. ಕೆಲವರಿಗೆ ಕೇಳದೇ ವರಗಳನ್ನು (ವೈರಲ್ ವಿಡಿಯೋ) ಕೊಡುತ್ತದೆ. ಇನ್ನು ಕೆಲವರು ಎಷ್ಟೇ ಪೂಜೆ, ಪುನಸ್ಕಾರ (ಒಳ್ಳೆಯ ಕಂಟೆಂಟ್) ಮಾಡಿದರೂ ಕರುಣೆ ತೋರುವುದಿಲ್ಲ. ಈ ದೇವರನ್ನು ಒಲಿಸಿಕೊಳ್ಳಲು 'ಅಲ್ಗಾರಿದಮ್' ಎಂಬ ಮಂತ್ರವನ್ನು ಪಠಿಸಬೇಕು!

ಹಾಗಾದ್ರೆ ಇನ್ನು ಮುಂದೆ ನೀವು ಏನು ಮಾಡಬೇಕು? ಮೊದಲನೆಯದಾಗಿ, ನಿಮ್ಮ ಜೇಬಿಗೆ ಹಾಕಿರುವ ಹನ್ನೊಂದು ಲಕ್ಷದ ತೂತಿಗೆ ಒಂದು ಹೊಲಿಗೆ ಹಾಕಿ. ಸದ್ಯಕ್ಕೆ ಹೊಸ ಕ್ಯಾಮೆರಾ, ಲೈಟಿಂಗ್, ಮೈಕ್ ಎಂದು ಹಣ ಸುರಿಯುವುದನ್ನು ನಿಲ್ಲಿಸಿ. ನಿಮ್ಮ ಮೊಬೈಲ್ ಕ್ಯಾಮರಾ ಸದ್ಯಕ್ಕೆ ನಿಮ್ಮ ಬ್ರಹ್ಮಾಸ್ತ್ರ. ನಿಮ್ಮ ಯಶಸ್ವಿ ಸ್ನೇಹಿತರ ಚಾನೆಲ್‌ಗಳಿಗೆ ಹೋಗಿ, 'ಸೂಪರ್ ವಿಡಿಯೋ ಬ್ರೋ!' ಅಂತ ಕಾಮೆಂಟ್ ಹಾಕುವುದನ್ನು ಬಿಟ್ಟು, ಅವರು ಏನು ಮಾಡುತ್ತಿದ್ದಾರೆಂದು ಗೂಢಚಾರಿಕೆ ಮಾಡಿ. ನಿಮ್ಮ ವಿಡಿಯೋ ಒಳಗಡೆ 'ಬಾಹುಬಲಿ' ಸಿನಿಮಾ ಇದ್ದರೂ, ಹೊರಗಿನ ಪೋಸ್ಟರ್ 'ದಂತವೈದ್ಯರ ಕ್ಲಿನಿಕ್ ಬೋರ್ಡ್' ತರಹ ಇದ್ದರೆ ಯಾರು ಬರುತ್ತಾರೆ? ಅವರ ಥಂಬ್‌ನೇಲ್‌ಗಳಲ್ಲಿ ಯಾವ ಬಣ್ಣ ಬಳಸುತ್ತಾರೆ? ಯಾವ ರೀತಿ ಫೋಟೋ ಹಾಕುತ್ತಾರೆ? ಈ ವಿಡಿಯೋ ನೋಡಿದರೆ ನೀವು ಬೆಳಗಾಗುವುದರಲ್ಲಿ... ಎಂಬಂಥ ಡ್ರಾಮಾ ಇದೆಯೇ? ಗಮನಿಸಿ.

ಈ ದಿನದ ಟ್ರೆಂಡ್ ಏನು ಎಂಬುದನ್ನು ಜಾಣತನದಿಂದ ಅರ್ಥ ಮಾಡಿಕೊಂಡು, ಆ ಪ್ರಕಾರ ಮುಂದೆ ಹೆಜ್ಜೆ ಇಡಿ. ಜನ ಯಾವ ವಿಷಯದ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆ? ಸದ್ಯಕ್ಕೆ ಜನ ಏನು ನೋಡಲು ಇಷ್ಟಪಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಿ. ನೀವು ಬಸ್ ಸ್ಟಾಪ್‌ನಲ್ಲಿದ್ದೀರಿ, ಆದರೆ ಜನರೆಲ್ಲ ಏರ್‌ಪೋರ್ಟ್‌ನತ್ತ ಹೋಗುತ್ತಿದ್ದರೆ, ನೀವೂ ನಿಮ್ಮ ದಾರಿ ಬದಲಿಸಬೇಕು. ಒಂಟಿ ಸಲಗ ಆಗಬೇಡಿ. ನಿಮ್ಮ ಲಕ್ಷ ಚಂದಾದಾರರಿರುವ ಸ್ನೇಹಿತನ ಚಾನೆಲ್‌ನಲ್ಲಿ ಒಂದು 'ಅತಿಥಿ ಪಾತ್ರ' ಮಾಡಿ. 'ಅವರ ಪ್ರಸಿದ್ಧಿಯ ಬೆಳಕಲ್ಲಿ, ನಮ್ಮ ಮುಖಾನೂ ಸ್ವಲ್ಪ ಕಾಣಿಸಲಿ' ಅನ್ನೋದು ಸರಳ ತಂತ್ರ. ಅವರ ಚಂದಾದಾರರಲ್ಲಿ ಕೆಲವರಾದರೂ 'ಅರೇ, ಈ ವ್ಯಕ್ತಿ ಚೆನ್ನಾಗಿದ್ದಾರಲ್ಲ' ಎಂದು ನಿಮ್ಮ ಚಾನೆಲ್‌ಗೆ ಬರಬಹುದು.

ಕಂಟೆಂಟ್‌ಗೆ ಸ್ವಲ್ಪ 'ಮಸಾಲೆ' ಸೇರಿಸಿ. ನೀವು ಉತ್ತಮ ಕಾರ್ಯಕ್ರಮ ಮಾಡುತ್ತಿದ್ದೀರಿ, ಒಪ್ಪಿಕೊಳ್ಳೋಣ. ಆದರೆ ಅದಕ್ಕೆ ಸ್ವಲ್ಪ ಮನರಂಜನೆಯ 'ಮಸಾಲೆ' ಸೇರಿಸಿ. ಮಾಹಿತಿ ಜತೆಗೆ ಹಾಸ್ಯ, ನಾಟಕೀಯತೆ ಅಥವಾ ಕುತೂಹಲವನ್ನು ಬೆರೆಸಿ. ಉದಾಹರಣೆಗೆ, 'ಶೇರು ಮಾರುಕಟ್ಟೆ' ಬಗ್ಗೆ ಹೇಳುವಾಗ, ಸುಮ್ಮನೆ ಗ್ರಾಫ್ ತೋರಿಸುವ ಬದಲು, 'ನಿಮ್ಮ ದುಡ್ಡನ್ನು ರಾಕೆಟ್ ಮಾಡುವ 5 ಟಿಪ್ಸ್!' ಎಂದು ಹೇಳಿ ನೋಡಿ.

ಯಾವತ್ತೂ ಟೆಸ್ಟ್ ಮ್ಯಾಚ್ ಆಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಯೂಟ್ಯೂಬ್ ಅನ್ನೋದು ಟಿ20 ಮ್ಯಾಚ್ ಅಲ್ಲ, ಇದೊಂದು ಟೆಸ್ಟ್ ಮ್ಯಾಚ್. ಒಂದೂವರೆ ವರ್ಷದಿಂದ ಕ್ರೀಸ್‌ನಲ್ಲಿದ್ದೀರಿ, ಈಗ 'ಹಿಟ್ ವಿಕೆಟ್' ಆಗಬೇಡಿ. ತಾಳ್ಮೆಯಿಂದ ಆಟದ ನಿಯಮಗಳನ್ನು ಕಲಿಯಿರಿ. ಖಂಡಿತ ಒಂದು ದಿನ ಸಿಕ್ಸರ್ ಹೊಡೆಯುತ್ತೀರಿ. ಕೊನೆಯದಾಗಿ, ನೀವು ಈಗಾಗಲೇ ಹನ್ನೊಂದು ಲಕ್ಷ ರುಪಾಯಿ ಕಳೆದುಕೊಂಡಿಲ್ಲ, ಬದಲಿಗೆ ಹನ್ನೊಂದು ಲಕ್ಷ ರುಪಾಯಿಗಳ ಅನುಭವವನ್ನು ಗಳಿಸಿದ್ದೀರಿ! ಈ ಅನುಭವವೇ ನಿಮ್ಮನ್ನು ಮುಂದೆ ಗೆಲ್ಲಿಸುತ್ತದೆ. ಧೈರ್ಯವಾಗಿರಿ, ನಿಮ್ಮ ಸಮಯ ಬಂದೇ ಬರುತ್ತದೆ!

ಚಂದ್ರಶೇಖರ ಹೂಗಾರ, ಬೆಂಗಳೂರು

• **ಭಟ್ರೇ, ನಾನು ಪತ್ರಕರ್ತನಾಗಬೇಕು ಎಂದು ಕನಸು ಕಂಡವನು. ಆದರೆ ನನ್ನ ತಂದೆಯವರು 'ಪತ್ರಕರ್ತರಾದರೆ ಸಂಸಾರ ಸಾಗಿಸುವುದು ಕಷ್ಟ ಅಂತಾರೆ.' ಇದು ನಿಜವೇ? ಪತ್ರಕರ್ತರಾದರೆ ಎಷ್ಟು ಸಂಬಳ ಸಿಗುತ್ತದೆ? ಸುಖ ಸಂಸಾರ ಸಾಗಿಸಬಹುದೇ? ತಿಳಿಸಿ.**

– ಚಂದ್ರಶೇಖರ ಅವರೇ, ನೀವು ಪತ್ರಕರ್ತರಾಗಬೇಕೆಂಬ ಕನಸು ಕಂಡಿರುವುದು ಒಳ್ಳೆಯದೇ. ಇದು ಸಮಾಜದಲ್ಲಿ ಮಹತ್ವದ ಬದಲಾವಣೆ ತರಬಲ್ಲ ಜವಾಬ್ದಾರಿಯುತ, ಉತ್ತಮ ಸ್ಥಾನಮಾನವುಳ್ಳ ವೃತ್ತಿ. ಆದರೆ, ನಿಮ್ಮ ತಂದೆಯವರ ಆತಂಕ ಕೂಡ ಸಹಜವಾದದ್ದೇ. 'ಪತ್ರಕರ್ತರಾದರೆ ಸಂಸಾರ ಸಾಗಿಸುವುದು ಕಷ್ಟ' ಎಂಬ ಮಾತು ಹಿಂದೆ ಚಾಲ್ತಿಯಲ್ಲಿತ್ತು, ಆದರೆ ಇಂದಿನ ದಿನಗಳಲ್ಲಿ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ದೃಶ್ಯ ಮಾಧ್ಯಮ (ಟೆಲಿವಿಷನ್), ಮುದ್ರಣ ಮಾಧ್ಯಮ (ಪತ್ರಿಕೆ), ಡಿಜಿಟಲ್ ಮಾಧ್ಯಮ (ಆನ್‌ಲೈನ್ ವೆಬ್‌ಸೈಟ್‌ಗಳು) ಮತ್ತು ರೇಡಿಯೋ – ಹೀಗೆ ಬೇರೆ ಬೇರೆ ಮಾಧ್ಯಮಗಳಲ್ಲಿ ಸಂಬಳದ ಪ್ರಮಾಣ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ, ದೊಡ್ಡ ಸುದ್ದಿವಾಹಿನಿಗಳಲ್ಲಿ ಸಂಬಳ ಹೆಚ್ಚಿರುತ್ತದೆ. ಯಾವುದೇ ವೃತ್ತಿಯಂತೆ, ಪತ್ರಿಕೋದ್ಯಮದಲ್ಲೂ ಅನುಭವಕ್ಕೆ ತಕ್ಕಂತೆ ಸಂಬಳ. ಆರಂಭಿಕ ಹಂತದಲ್ಲಿ ವರದಿಗಾರನಾಗಿ ಸೇರಿಕೊಂಡಾಗ ಸಂಬಳ ಕಡಿಮೆ ಇರಬಹುದು. ಆದರೆ, ಉಪ-ಸಂಪಾದಕ, ಹಿರಿಯ ವರದಿಗಾರ, ಮುಖ್ಯ ವರದಿಗಾರ, ಸಂಪಾದಕ ಹೀಗೆ ಹುದ್ದೆ ಏರಿದಂತೆ ಸಂಬಳವೂ ಹೆಚ್ಚಾಗುತ್ತಾ ಹೋಗುತ್ತದೆ. ದೊಡ್ಡ ಮತ್ತು ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳು ನೀಡುವ ಸಂಬಳ, ಸಣ್ಣ ಅಥವಾ ಸ್ಥಳೀಯ ಸಂಸ್ಥೆಗಳಿಗಿಂತ ಹೆಚ್ಚಿರುತ್ತದೆ. ಬೆಂಗಳೂರಿನಂಥ ಮಹಾನಗರಗಳಲ್ಲಿ ಸಿಗುವ ಸಂಬಳ, ಸಣ್ಣ ಪಟ್ಟಣಗಳಿಗೆ ಹೋಲಿಸಿದರೆ ಅಧಿಕವಾಗಿರುತ್ತದೆ.

ಆರಂಭಿಕ ಟ್ರೈನಿ/ವರದಿಗಾರರಿಗೆ ಕನಿಷ್ಠ ರು.15,000 ಮತ್ತು ಗರಿಷ್ಠ ರು.25,000 ಸಂಬಳವನ್ನು ನಿರೀಕ್ಷಿಸಬಹುದು. 3 ರಿಂದ 7 ವರ್ಷ ಅನುಭವ ಹೊಂದಿದ ಮಧ್ಯಮ ಹಂತದಲ್ಲಿ ಹಿರಿಯ ವರದಿಗಾರರಿಗೆ ರು.30,000 ರಿಂದ ರು.60,000 ನಿರೀಕ್ಷಿಸಬಹುದು. ಹತ್ತು ವರ್ಷ ಮತ್ತು ಅದಕ್ಕಿಂತ ಹೆಚ್ಚು ಅನುಭವ ಇರುವ ವಿಶೇಷ ವರದಿಗಾರ/ಸಹಾಯಕ ಸಂಪಾದಕರಿಗೆ ರು.70,000 ದಿಂದ ಲಕ್ಷಗಳವರೆಗೆ ಸಂಬಳವಿರುತ್ತದೆ. ಇದು ಕೇವಲ ಅಂದಾಜು. ನಿಮ್ಮ ಕೌಶಲ, ಭಾಷಾ ಪ್ರಾವೀಣ್ಯ, ವಿಷಯ ಪರಿಣತಿ, ಸಾಮರ್ಥ್ಯ ಮತ್ತು ನೆಟ್‌ವರ್ಕಿಂಗ್ ಮೇಲೆ ಸಂಬಳ ನಿರ್ಧಾರವಾಗುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ, ಸ್ವಂತ ಯೂಟ್ಯೂಬ್ ಚಾನೆಲ್, ಫ್ರೀಲ್ಯಾನ್ಸಿಂಗ್ ಅಥವಾ ಕಂಟೆಂಟ್ ಬರವಣಿಗೆಯಂಥ ಹೆಚ್ಚುವರಿ ಆದಾಯದ ಮೂಲಗಳೂ ಇವೆ.

ಖಂಡಿತವಾಗಿಯೂ ಪತ್ರಕರ್ತರಾಗಿ ಸುಖ ಸಂಸಾರ ನಡೆಸಲು ಸಾಧ್ಯ. ಆದರೆ, ಕೆಲವು ಸವಾಲುಗಳನ್ನು ಎದುರಿಸಲು ಸಿದ್ಧರಿರಬೇಕು.

ಪತ್ರಿಕೋದ್ಯಮ 9 ರಿಂದ 5 ರವರೆಗಿನ ಕೆಲಸವಲ್ಲ. ಬ್ರೇಕಿಂಗ್ ನ್ಯೂಸ್ ಅಥವಾ ವಿಶೇಷ ವರದಿಗಾರಿಕೆಗಾಗಿ ತಡರಾತ್ರಿ ಅಥವಾ ರಜಾ ದಿನಗಳಲ್ಲೂ ಕೆಲಸ ಮಾಡಬೇಕಾಗಬಹುದು. ಇದು ಕುಟುಂಬದೊಂದಿಗೆ ಕಳೆಯುವ ಸಮಯದ ಮೇಲೆ ಪರಿಣಾಮ ಬೀರಬಹುದು. ನಿಗದಿತ ಸಮಯದೊಳಗೆ ಸುದ್ದಿ ನೀಡುವುದು, ಸತ್ಯಾಸತ್ಯತೆ ಪರಿಶೀಲಿಸುವುದು ಮತ್ತು ಸದಾ ಜಾಗೃತರಾಗಿರುವುದು ಮಾನಸಿಕ ಒತ್ತಡವನ್ನು ಉಂಟುಮಾಡಬಹುದು. ಕೆಲವೊಮ್ಮೆ ಪ್ರಭಾವಿ ವ್ಯಕ್ತಿಗಳ ಅಥವಾ ವ್ಯವಸ್ಥೆಯ ವಿರುದ್ಧ ವರದಿ ಮಾಡಿದಾಗ ಬೆದರಿಕೆಗಳು ಬರಬಹುದು. ಇದು ಕುಟುಂಬದವರಲ್ಲಿ ಆತಂಕ ಮೂಡಿಸಬಹುದು.

ನಿಮ್ಮ ಕೆಲಸದ ಸ್ವರೂಪದ ಬಗ್ಗೆ ನಿಮ್ಮ ಸಂಗಾತಿ ಮತ್ತು ಕುಟುಂಬದೊಂದಿಗೆ ಮುಕ್ತವಾಗಿ ಮಾತನಾಡಿ. ಅವರ ಬೆಂಬಲ ಮತ್ತು ಸಹಕಾರ ಬಹಳ ಮುಖ್ಯ. ಆರಂಭಿಕ ದಿನಗಳಲ್ಲಿ ಸಂಬಳ ಕಡಿಮೆ ಇದ್ದಾಗ, ಉತ್ತಮ ಆರ್ಥಿಕ ಶಿಸ್ತನ್ನು ಪಾಲಿಸುವುದು ಜಾಣತನ. ಈ ಉದ್ಯೋಗ ಸಮಾಜಕ್ಕೆ ಏನಾದರೂ ಕೊಡುಗೆ ನೀಡಿದ ತೃಪ್ತಿ, ಸವಾಲುಗಳನ್ನು ಎದುರಿಸಲು ಶಕ್ತಿ ನೀಡುತ್ತದೆ. ಇಂದು ಮಾಧ್ಯಮ ಸಂಸ್ಥೆಗಳು ಕೂಡ ಉದ್ಯೋಗಿಗಳ ವೈಯಕ್ತಿಕ ಜೀವನಕ್ಕೆ ಮಹತ್ವ ನೀಡುತ್ತಿವೆ. ವರ್ಕ್-ಲೈಫ್ ಬ್ಯಾಲೆನ್ಸ್ ಬಗ್ಗೆ ಜಾಗೃತಿ ಹೆಚ್ಚುತ್ತಿದೆ.

ಮಾಧುರಿ ಭಾವೆ, ಬೆಂಗಳೂರು

• **ಭಟ್ರೇ, ಯಶಸ್ವಿ ವ್ಯಕ್ತಿಗಳ ಮಕ್ಕಳು ಮಬ್ಬು. ಆರಾಮಾಗಿ ಬೆಳೆದ ನಗರದ ಮಕ್ಕಳಿಗಿಂತ ಕಷ್ಟಪಟ್ಟು ಬೆಳೆದ ಹಳ್ಳಿ ಹುಡುಗರು ಹೆಚ್ಚು ಯಶಸ್ವಿ ಆಗ್ತಾರೆ. ಯಾಕೆ ?**

– ಮಾಧುರಿ ಅವರೇ, ಯಶಸ್ವಿ ವ್ಯಕ್ತಿಗಳ ಮಕ್ಕಳು 'ಮಬ್ಬು' ಆಗೋದು ಯಾಕೆ ಗೊತ್ತಾ? ಅಪ್ಪ-ಅಮ್ಮ ಕಷ್ಟಪಟ್ಟು ದುಡಿದು, ಮಕ್ಕಳಿಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಬಿಟ್ಟಿರುತ್ತಾರೆ. ಜೀವನದಲ್ಲಿ ಯಾವ 'ಕಷ್ಟ'ವೂ ಎದುರಾಗದ ಹಾಗೆ ನೋಡಿಕೊಂಡಿರುತ್ತಾರೆ. ಹೀಗಾಗಿ, ಆ ಮಕ್ಕಳಿಗೆ 'ಸಮಸ್ಯೆ' ಅನ್ನೋದು ಕೇವಲ ಗಣಿತದ ಪುಸ್ತಕದಲ್ಲಿ ಮಾತ್ರ ಕಾಣಸಿಗುವ ಒಂದು ಪದವಾಗಿರುತ್ತದೆ! ರಸ್ತೆಯಲ್ಲಿ ಗುಂಡಿ ಬಿದ್ರೆ, 'ಓಹ್, ಇದು ಯಾಕೆ ಹೀಗಿದೆ?' ಅಂತ ಯೋಚಿಸುವ ಬದಲು, 'ಡ್ರೈವರ್, ಈ ಗುಂಡಿ ಯಾಕೆ ಇದೆ?' ಅಂತ ಕೇಳುತ್ತಾರೆ. ಅವರ ಜೀವನದಲ್ಲಿ 'ಸವಾಲು' ಅನ್ನೋದು, ಯಾವ ರೆಸ್ಟೋರೆಂಟ್‌ನಲ್ಲಿ ಊಟ ಮಾಡಬೇಕು ಅನ್ನೋದೇ ಆಗಿರುತ್ತೆ!

ಇನ್ನು ಹಳ್ಳಿ ಹುಡುಗರು ಯಾಕೆ ಹೆಚ್ಚು 'ಯಶಸ್ವಿ' ಆಗ್ತಾರೆ ಅಂದ್ರೆ, ಅವರ ಜೀವನವೇ ಒಂದು 'ರಿಯಾಲಿಟಿ ಶೋ' ಇದ್ದ ಹಾಗೆ! ಪ್ರತಿದಿನವೂ ಹೊಸ ಸವಾಲು, ಹೊಸ ಕಷ್ಟ. ಬಿಸಿಲಲ್ಲಿ ದುಡಿಯೋದು, ಮಳೆಯಲ್ಲಿ ಓಡಾಡೋದು, ಎತ್ತುಗಳಿಗೆ ನೀರು ಕುಡಿಸೋದು, ಕಷ್ಟಪಟ್ಟು ಓದೋದು... ಇವೆಲ್ಲ ಅವರಿಗೆ 'ಜಿಮ್ ಟ್ರೈನಿಂಗ್' ಇದ್ದ ಹಾಗೆ. ಅವರ ಮಿದುಳು 'ಪ್ರಾಬ್ಲಮ್ ಸಾಲ್ವಿಂಗ್' ಮೋಡ್‌ನಲ್ಲಿಯೇ ಇರುತ್ತೆ. ಒಂದು ಸಮಸ್ಯೆ ಬಂದ್ರೆ, 'ಅಯ್ಯೋ, ಏನು ಮಾಡೋದು?' ಅಂತ ಕೂರುವ ಬದಲು, 'ಇದಕ್ಕೆ ಏನು ಪರಿಹಾರ?' ಅಂತ ತಕ್ಷಣ ಯೋಚಿಸಿಬಿಡ್ತಾರೆ. ಅವರ ಡಿಕ್ಷನರಿಯಲ್ಲಿ 'ಕಂಫರ್ಟ್ ಝೋನ್' ಅನ್ನೋ ಪದವೇ ಇರೋದಿಲ್ಲ, ಇರೋದೆಲ್ಲ 'ವರ್ಕ್ ಝೋನ್'!

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಗರದ ಮಕ್ಕಳು 'ಎಸಿ' ರೂಮ್‌ನಲ್ಲಿ ಬೆಳೆದರೆ, ಹಳ್ಳಿ ಹುಡುಗರೂ 'ಎಸಿ (All Challenges) ರೂಮ್' ನಲ್ಲಿಯೇ ಬೆಳೆಯುತ್ತಾರೆ. ಹಳ್ಳಿ ಹುಡುಗರು ಜೀವನದ 'ಹಾರ್ಡ್‌ವೇರ್' ಮತ್ತು 'ಸಾಫ್ಟ್‌ವೇರ್' ಎರಡನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿರುತ್ತಾರೆ. ಅದಕ್ಕೆ ಅವರು ಹೆಚ್ಚು ಯಶಸ್ವಿಯಾಗುತ್ತಾರೆ.

ನಿಮ್ಮ ತಂದೆಯವರ ಕಾಲಕ್ಕೆ ಹೋಲಿಸಿದರೆ ಇಂದು ಪತ್ರಿಕೋದ್ಯಮದ ಸ್ವರೂಪ ಮತ್ತು ಆರ್ಥಿಕ ಸ್ಥಿತಿ ಎರಡೂ ಉತ್ತಮಗೊಂಡಿದೆ. ಆರಂಭಿಕ ಹಂತದಲ್ಲಿ ಆರ್ಥಿಕವಾಗಿ ಸ್ವಲ್ಪ ಕಷ್ಟ ಎನಿಸಬಹುದು, ಆದರೆ ನಿಮ್ಮಲ್ಲಿ ಶ್ರದ್ಧೆ, ಕಠಿಣ ಪರಿಶ್ರಮ ಮತ್ತು ಕೌಶಲಗಳಿದ್ದರೆ, ಈ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಿ ಉತ್ತಮ ಸಂಬಳ ಪಡೆಯಬಹುದು. ಪತ್ರಕರ್ತನಾಗಿ ನೀವು ಸಮಾಜದಲ್ಲಿ ಗೌರವ, ಮನ್ನಣೆ ಗಳಿಸುವುದರ ಜತೆಗೆ ಆರ್ಥಿಕವಾಗಿ ಸದೃಢರಾಗಿ, ಸುಖ ಸಂಸಾರವನ್ನು ಖಂಡಿತವಾಗಿ ನಡೆಸಬಹುದು. ಮುಖ್ಯವಾಗಿ ಬೇಕಿರುವುದು ನಿಮ್ಮ ಕನಸಿನ ಮೇಲಿನ ನಂಬಿಕೆ ಮತ್ತು ಎದುರಾಗುವ ಸವಾಲುಗಳನ್ನು ನಿಭಾಯಿಸುವ ಮನೋಸ್ಥೈರ್ಯ.

ರಂಜಿತಾ, (ಇಮೇಲ್ ಮೂಲಕ)

• **ಸಂಪಾದಕರೇ, ಸಾಮಾಜಿಕ ಜಾಲತಾಣಗಳನ್ನು ತೆರೆದರೆ ಸಾಕು, ಬರೀ ದ್ವೇಷ, ಟೀಕೆ, ಮೂದಲಿಕೆ, ಆಕ್ರೋಶ. ಒಟ್ಟಾರೆ ನೆಗೆಟಿವ್ ಫೀಲಿಂಗ್ಸ್. ಇದರಿಂದ ಹೊರಬರುವುದು ಹೇಗೆ? ಹತ್ತು ನಿಮಿಷ ಸಾಮಾಜಿಕ ಜಾಲತಾಣಗಳಲ್ಲಿ ಇದ್ದರೆ ಮನಸ್ಸು ರೋಸಿ ಹೋಗುತ್ತದೆ. ಯಾಕೆ ಎಲ್ಲರೂ ಈ ಪರಿ ದ್ವೇಷ ಕಾರುತ್ತಾರೆ?**

– ರಂಜಿತಾ ಅವರೇ, ನೀವು ವ್ಯಕ್ತಪಡಿಸಿದ ಭಾವನೆ ಇಂದು ಲಕ್ಷಾಂತರ ಜನರ ಅನುಭವವೂ ಆಗಿದೆ. ಸಾಮಾಜಿಕ ಜಾಲತಾಣಗಳನ್ನು ತೆರೆದರೆ ಸಾಕು, ಮನಸ್ಸಿಗೆ ಮುದ ನೀಡುವ ಬದಲು ಆಕ್ರೋಶ, ದ್ವೇಷ ಮತ್ತು ನಕಾರಾತ್ಮಕತೆಯೇ ತುಂಬಿರುತ್ತದೆ, ನಿಜ. ಕೇವಲ ಹತ್ತು ನಿಮಿಷಗಳಲ್ಲೇ ಮನಸ್ಸು ಭಾರವಾಗುವುದು, ರೋಸಿ ಹೋಗುವುದು ಸಹಜ. ಈ ಪರಿಸ್ಥಿತಿಗೆ ಕಾರಣಗಳೇನು ಮತ್ತು ಇದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಸಾಮಾಜಿಕ ಜಾಲತಾಣಗಳಲ್ಲಿ ಯಾಕೆ ಇಷ್ಟೊಂದು ದ್ವೇಷ? ಇದೊಂದು ಸಂಕೀರ್ಣ ಪ್ರಶ್ನೆ; ಇದಕ್ಕೆ ಹಲವಾರು ಮಾನಸಿಕ, ಸಾಮಾಜಿಕ ಮತ್ತು ತಾಂತ್ರಿಕ ಕಾರಣಗಳಿವೆ. ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ತಮ್ಮ ನಿಜವಾದ ಗುರುತನ್ನು ಮರೆಮಾಚಿರುತ್ತಾರೆ. ಮುಖಾಮುಖಿ ಮಾತನಾಡಲು ಧೈರ್ಯವಿಲ್ಲದ ಮಾತುಗಳನ್ನು, ಟೀಕೆಗಳನ್ನು ಇಲ್ಲಿ ಸುಲಭವಾಗಿ ಮಾಡುತ್ತಾರೆ. ತಮ್ಮನ್ನು ಯಾರು ಕೇಳುತ್ತಾರೆ ಎಂಬ ಧೈರ್ಯವೇ ಅವರ ದ್ವೇಷದ ಮಾತುಗಳಿಗೆ ಕಾರಣವಾಗುತ್ತದೆ. ಕಂಪ್ಯೂಟರ್ ಅಥವಾ ಮೊಬೈಲ್ ಪರದೆಯ ಹಿಂದೆ ಕುಳಿತಾಗ, ನಮ್ಮ ಮಾತುಗಳಿಗೆ ತಕ್ಷಣದ ಪರಿಣಾಮ ಏನೂ ಆಗುವುದಿಲ್ಲ ಎಂಬ ಭಾವನೆ ಬರುತ್ತದೆ. ಎದುರಿನ ವ್ಯಕ್ತಿಯ ಭಾವನೆಗಳು, ನೋವು ನಮಗೆ ಕಾಣಿಸುವುದಿಲ್ಲ. ಇದರಿಂದಾಗಿ, ನಿಜ ಜೀವನದಲ್ಲಿ ಹೇಳಲು ಹಿಂಜರಿಯುವ ಕಠೋರ ಮಾತುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಸುಲಭವಾಗಿ ಹೇಳಿಬಿಡುತ್ತಾರೆ.

ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್‌ನಂಥ ಜಾಲತಾಣಗಳ ಅಲ್ಗಾರಿದಮ್‌ಗಳು ಬಳಕೆದಾರರನ್ನು ಹೆಚ್ಚು ಸಮಯ ಹಿಡಿದಿಟ್ಟುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯವಾಗಿ ವಿವಾದಾತ್ಮಕ, ಆಕ್ರೋಶಕಾರಿ ಮತ್ತು ದ್ವೇಷಪೂರಿತ ಪೋಸ್ಟ್‌ಗಳಿಗೆ ಹೆಚ್ಚು ಲೈಕ್ಸ್, ಕಾಮೆಂಟ್ಸ್ ಮತ್ತು ಶೇರ್‌ಗಳು ಬರುತ್ತವೆ. ಇಂಥ ಪೋಸ್ಟ್‌ಗಳಿಗೆ ಹೆಚ್ಚು 'ಎಂಗೇಜ್‌ಮೆಂಟ್' ಸಿಗುವುದರಿಂದ, ಅಲ್ಗಾರಿದಮ್‌ಗಳು ಅವನ್ನೇ ನಿಮ್ಮ ಮುಂದೆ ಪದೇ ಪದೆ ತಂದು ನಿಲ್ಲಿಸುತ್ತವೆ. ಇದರಿಂದಾಗಿ ಜಾಲತಾಣವೆಲ್ಲ ನಕಾರಾತ್ಮಕತೆಯಿಂದಲೇ ತುಂಬಿದೆ ಎನಿಸುತ್ತದೆ.

ಸಾಮಾಜಿಕ ಜಾಲತಾಣಗಳು ನಮ್ಮ ಆಸಕ್ತಿಗೆ ತಕ್ಕಂತೆ ಸಮಾನ ಮನಸ್ಕರನ್ನು ಒಂದೆಡೆ ಸೇರಿಸುತ್ತವೆ. ಇದು ಒಳ್ಳೆಯ ವಿಷಯಗಳಿಗೆ ಆದಾಗ ಅದ್ಭುತ ಎನಿಸುತ್ತದೆ. ಆದರೆ, ಒಂದು ನಿರ್ದಿಷ್ಟ ವಿಷಯದ ಬಗ್ಗೆ ದ್ವೇಷ ಅಥವಾ ತಪ್ಪು ಕಲ್ಪನೆ ಹೊಂದಿರುವವರು ಒಂದೆಡೆ ಸೇರಿದಾಗ, ಅವರ ನಂಬಿಕೆಗಳು ಇನ್ನಷ್ಟು ಗಟ್ಟಿಯಾಗುತ್ತವೆ. ತಮ್ಮ ಅಭಿಪ್ರಾಯವೇ ಸರಿ, ಉಳಿದವರೆಲ್ಲ ತಪ್ಪು ಎಂಬ ಭಾವನೆ ಬಲವಾಗಿ, ದ್ವೇಷದ ವಾತಾವರಣ ಸೃಷ್ಟಿಯಾಗುತ್ತದೆ. ನಿಜ ಜೀವನದಲ್ಲಿ ಹತಾಶೆ, ಅಸಮಾಧಾನ, ಅತೃಪ್ತಿ ಹೊಂದಿರುವ ಅನೇಕರು ತಮ್ಮ ಸಿಟ್ಟನ್ನು ಹೊರಹಾಕಲು ಸಾಮಾಜಿಕ ಜಾಲತಾಣಗಳನ್ನು ಒಂದು ವೇದಿಕೆಯಾಗಿ ಬಳಸಿಕೊಳ್ಳುತ್ತಾರೆ. ಬೇರೆಯವರನ್ನು ಟೀಕಿಸುವುದರಿಂದ ಅಥವಾ ಮೂದಲಿಸುವುದರಿಂದ ಅವರಿಗೆ ಒಂದು ರೀತಿಯ ಕ್ಷಣಿಕ ಸಂತೃಪ್ತಿ ಸಿಗುತ್ತದೆ.

ಈ ನಕಾರಾತ್ಮಕತೆಯಿಂದ ಹೊರಬರುವುದು ಹೇಗೆ? ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳಲು ಮತ್ತು ಈ ದ್ವೇಷದ ಸುಳಿಯಿಂದ ಹೊರಬರಲು ಕೆಲವು ಪ್ರಜ್ಞಾಪೂರ್ವಕ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ನಿಮ್ಮ ಫೀಡ್ ಅನ್ನು ನೀವೇ ನಿಯಂತ್ರಿಸಿ (Curate Your Feed). ನಿರಂತರವಾಗಿ ದ್ವೇಷ ಕಾರುವ, ನಕಾರಾತ್ಮಕ ಪೋಸ್ಟ್‌ಗಳನ್ನು ಹಾಕುವ ವ್ಯಕ್ತಿಗಳನ್ನು ಅಥವಾ ಪೇಜ್‌ಗಳನ್ನು ತಕ್ಷಣ ಅನ್‌ಫಾಲೋ (Unfollow) ಅಥವಾ ಮ್ಯೂಟ್ (Mute) ಮಾಡಿ. ನಿಮ್ಮ ಮನಸ್ಸಿಗೆ ನೋವು ಕೊಡುವ ವಿಷಯಗಳನ್ನು ನೋಡುವ ಅಗತ್ಯವಿಲ್ಲ. ಕಲೆ, ವಿಜ್ಞಾನ, ಪ್ರಕೃತಿ, ಪ್ರಾಣಿಗಳು, ಹಾಸ್ಯ, ಅಡುಗೆ, ಪುಸ್ತಕಗಳಂಥ ನಿಮಗೆ ಖುಷಿ ಕೊಡುವ ವಿಷಯಗಳ ಪೇಜ್‌ಗಳನ್ನು ಹೆಚ್ಚು ಫಾಲೋ ಮಾಡಿ. ನಿಮ್ಮ ಫೀಡ್ ಸಕಾರಾತ್ಮಕತೆಯಿಂದ ತುಂಬಿರಲಿ. ಸಾಮಾಜಿಕ ಜಾಲತಾಣ ಬಳಕೆಯ ಸಮಯವನ್ನು ಸೀಮಿತಗೊಳಿಸಿ. ದಿನಕ್ಕೆ ಅಥವಾ ವಾರಕ್ಕೆ ಇಂತಿಷ್ಟು ಸಮಯ ಮಾತ್ರ ಸಾಮಾಜಿಕ ಜಾಲತಾಣ ಬಳಸುತ್ತೇನೆ ಎಂದು ನಿಯಮ ಹಾಕಿಕೊಳ್ಳಿ. ಮಲಗುವ ಒಂದು ಗಂಟೆ ಮೊದಲು ಮತ್ತು ಬೆಳಗ್ಗೆ ಎದ್ದ ತಕ್ಷಣ ಮೊಬೈಲ್ ನೋಡುವುದನ್ನು ಕಡ್ಡಾಯವಾಗಿ ನಿಲ್ಲಿಸಿ. ಅನಗತ್ಯ ನೋಟಿಫಿಕೇಶನ್‌ಗಳು ನಿಮ್ಮನ್ನು ಪದೇ ಪದೆ ಆ್ಯಪ್ ತೆರೆಯುವಂತೆ ಪ್ರೇರೇಪಿಸುತ್ತವೆ. ಅವಶ್ಯಕವಲ್ಲದ ಆ್ಯಪ್‌ಗಳ ನೋಟಿಫಿಕೇಶನ್‌ಗಳನ್ನು ಆಫ್ ಮಾಡಿ.

ಎಲ್ಲದಕ್ಕೂ ಪ್ರತಿಕ್ರಿಯಿಸಬೇಡಿ. ದ್ವೇಷದ ಕಾಮೆಂಟ್‌ಗಳಿಗೆ ವಾದಕ್ಕಿಳಿಯಲು ಹೋಗಬೇಡಿ. ವಾದವು ಮತ್ತಷ್ಟು ದ್ವೇಷವನ್ನೇ ಹುಟ್ಟುಹಾಕುತ್ತದೆ. ನೆನಪಿಡಿ, ನಿಮ್ಮ ಮಾನಸಿಕ ಶಾಂತಿ ಎಲ್ಲಕ್ಕಿಂತ ಮುಖ್ಯ. ಅತಿಯಾದ ದ್ವೇಷ ಅಥವಾ ನಿಂದನಾತ್ಮಕ ಕಾಮೆಂಟ್‌ಗಳನ್ನು ಕಂಡರೆ, ಅದನ್ನು ಆಯಾ ಜಾಲತಾಣಕ್ಕೆ ವರದಿ (Report) ಮಾಡಿ ಮತ್ತು ಆ ವ್ಯಕ್ತಿಯನ್ನು ಬ್ಲಾಕ್ (Block) ಮಾಡಿ. ವಾಸ್ತವ ಜಗತ್ತಿನಲ್ಲಿ ಹೆಚ್ಚು ಸಮಯ ಕಳೆಯಿರಿ. ನಿಮ್ಮ ಕುಟುಂಬ, ಸ್ನೇಹಿತರೊಂದಿಗೆ ನೇರವಾಗಿ ಮಾತನಾಡಿ. ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಿ, ಪುಸ್ತಕಗಳನ್ನು ಓದಿ, ವ್ಯಾಯಾಮ ಮಾಡಿ, ಅಥವಾ ಪ್ರಕೃತಿಯಲ್ಲಿ ಸಮಯ ಕಳೆಯಿರಿ. ಆನ್‌ಲೈನ್ ಜಗತ್ತನ್ನು ಮೀರಿ ಒಂದು ಸುಂದರವಾದ ವಾಸ್ತವ ಜಗತ್ತು ಇದೆ ಎಂಬುದನ್ನು ಮರೆಯಬೇಡಿ.

ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟ ಧ್ವನಿಗಳು ಜೋರಾಗಿ ಕೇಳಿಸುತ್ತವೆಯಾದರೂ, ಮೌನವಾಗಿರುವ, ಸಕಾರಾತ್ಮಕವಾಗಿ ಯೋಚಿಸುವ ದೊಡ್ಡ ಸಮೂಹವೂ ಅಲ್ಲಿದೆ. ಕೆಟ್ಟದ್ದರ ಮೇಲೆ ಗಮನ ಹರಿಸುವ ಬದಲು, ಒಳ್ಳೆಯದನ್ನು ಹುಡುಕಲು ಪ್ರಯತ್ನಿಸಿ. ಕೊನೆಯದಾಗಿ, ಸಾಮಾಜಿಕ ಜಾಲತಾಣಗಳು ಕೇವಲ ಒಂದು ಸಾಧನ. ಅದನ್ನು ನಾವು ಹೇಗೆ ಬಳಸುತ್ತೇವೆ ಎನ್ನುವುದರ ಮೇಲೆ ಅದರ ಪರಿಣಾಮ ನಿಂತಿರುತ್ತದೆ. ಅದನ್ನು ನಿಮ್ಮ ಮನಸ್ಸಿನ ಮೇಲೆ ಸವಾರಿ ಮಾಡಲು ಬಿಡಬೇಡಿ. ನಿಮ್ಮ ಹಿಡಿತದಲ್ಲಿಟ್ಟುಕೊಂಡು, ನಿಮಗೆ ಬೇಕಾದ ಜ್ಞಾನ ಮತ್ತು ಮನರಂಜನೆಗೆ ಮಾತ್ರ ಬಳಸಿ.

ದೇವೇಂದ್ರ, ಹಿಂಡಗಿ, ಬೆಂಗಳೂರು

• **ಸಂಪಾದಕರೇ, ನನಗೆ ಇಪ್ಪತ್ತೆಂಟು ವರ್ಷ. ನಾನೊಬ್ಬಳನ್ನು ಪ್ರೀತಿಸುತ್ತಿದ್ದೇನೆ. ಅವಳ ಮನಸ್ಸು ಬಹಳ ಚಂಚಲ. ಈಗಿದ್ದ ಮನಸ್ಥಿತಿ ಇನ್ನು ಹತ್ತು ನಿಮಿಷದ ನಂತರ ಇರೊಲ್ಲ. ವಿಚಿತ್ರವಾಗಿ ವರ್ತಿಸುತ್ತಾಳೆ. ಕಳೆದ ಒಂದೂವರೆ ವರ್ಷದಿಂದ ಅವಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾನು ಅವಳನ್ನು ಮದುವೆಯಾದರೆ ಮುಂದೇನು ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಇದಕ್ಕೆ ಪರಿಹಾರವೇನು?**

– ದೇವೇಂದ್ರ ಅವರೇ, ನೀವು ಒಬ್ಬಳನ್ನು ಲವ್ ಮಾಡುತ್ತಿರುವುದು ಒಳ್ಳೇದು. ಆದರೆ ನೀವು ಪ್ರೀತಿಸುತ್ತಿರುವುದು ಹುಡುಗಿಯನ್ನಾ ಅಥವಾ ಬೆಂಗಳೂರಿನ ಹವಾಮಾನವನ್ನಾ ಅಂತ ಮೊದಲು ಖಚಿತಪಡಿಸಿಕೊಳ್ಳಿ. ಯಾಕೆಂದರೆ, ನೀವು ಹೇಳಿದ ವಿವರಣೆ ಎರಡಕ್ಕೂ ಸರಿಯಾಗಿ ಹೊಂದಿಕೆಯಾಗುತ್ತದೆ. ಈಗಿದ್ದ ಮನಸ್ಥಿತಿ ಇನ್ನು ಹತ್ತು ನಿಮಿಷದ ನಂತರ ಇರೊಲ್ಲ – ಇದು ಬೆಂಗಳೂರಿನ ಹವಾಮಾನದ ಅಧಿಕೃತ ಟ್ಯಾಗ್‌ಲೈನ್. ಬೆಳಗ್ಗೆ ಬಿಸಿಲು, ಹತ್ತು ನಿಮಿಷಕ್ಕೆ ಮೋಡ, ಮರುಕ್ಷಣವೇ ಮಳೆ, ಸಂಜೆಯಾಗುತ್ತಲೇ ಚಳಿ... ನಿಮ್ಮ ಪ್ರೇಯಸಿ ಬಹುಶಃ 'ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ'ದ ರಾಯಭಾರಿ ಇರಬೇಕು!

'ಕಳೆದ ಒಂದೂವರೆ ವರ್ಷದಿಂದ ಅವಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಅಂತ ಹೇಳ್ತೀರಿ. ಸ್ವಾಮಿ, ಒಂದೂವರೆ ವರ್ಷದಲ್ಲಿ ಮಂಗಳಯಾನವೇ ಯಶಸ್ವಿಯಾಗಿದೆ. ನೀವು ಇನ್ನೂ ನಿಮ್ಮ ಪ್ರೇಯಸಿಯ ಮನಸ್ಸಿನ 'ಸಿಗ್ನಲ್' ಗಾಗಿ ಕಾಯುತ್ತಿದ್ದೀರಿ ಎಂದರೆ ನಿಮ್ಮ ತಾಳ್ಮೆಗೆ ಹ್ಯಾಟ್ಸ್ ಆಫ್!

ಮದುವೆಯಾದರೆ ಮುಂದೇನು? ಒಂದು ಕಾಲ್ಪನಿಕ, ತಮಾಷೆಯ ನೋಟ ನನ್ನ ಕಣ್ಣ ಮುಂದೆ ಬರುತ್ತಿದೆ. ನಿಮ್ಮ ಜೀವನದಲ್ಲಿ ದಿನಕ್ಕೊಂದು ಟ್ವಿಸ್ಟ್ ಸಿಗಲಿದೆ. ನಿಮ್ಮ ದಾಂಪತ್ಯ ಜೀವನ 'ಡೈಲಿ ಸೀರಿಯಲ್'ಗಿಂತ ಹೆಚ್ಚು ರೋಚಕವಾಗಿರುತ್ತದೆ. ಇಂದಿನ ಸಂಚಿಕೆಗೂ ನಾಳಿನ ಪ್ರೋಮೋಗೂ ಸಂಬಂಧವೇ ಇರುವುದಿಲ್ಲ. ಪ್ರತಿದಿನವೂ ನಿಮಗೆ ಹೊಸ ಸವಾಲು, ಹೊಸ ಸರ್ಪ್ರೈಸ್! ಬೆಳಗ್ಗೆ 'ಇವತ್ತು ಮುದ್ದೆ ಸಾರು ಮಾಡೋಣ' ಎಂದು ಹೇಳಿದವಳು, ನೀವು ರಾಗಿ ಹಿಟ್ಟು ತರುವಷ್ಟರಲ್ಲಿ 'ಛೆ! ಮೂಡೇ ಹೋಯ್ತು, ನನಗೆ ಗೋಬಿ ಮಂಚೂರಿ ಬೇಕು' ಎನ್ನಬಹುದು. ಸ್ವಿಗ್ಗಿ, ಝೊಮ್ಯಾಟೋ ಪ್ರೀಮಿಯಂ ಮೆಂಬರ್‌ಶಿಪ್ ನಿಮ್ಮ ಜೀವನದ ಅವಿಭಾಜ್ಯ ಅಂಗವಾಗಲಿದೆ.

ಶಾಪಿಂಗ್‌ಗೆ ಹೋದರೆ, ಒಂದು ಗಂಟೆ ಹುಡುಕಿ ಒಂದು ನೀಲಿ ಬಣ್ಣದ ಡ್ರೆಸ್ ಆಯ್ಕೆ ಮಾಡಿ, ಬಿಲ್ ಕೌಂಟರ್‌ಗೆ ಬರುವಷ್ಟರಲ್ಲಿ 'ಅಯ್ಯೋ, ಈ ಬಣ್ಣ ನನಗಿಷ್ಟವಿಲ್ಲ, ಹಳದಿ ತೆಗೆದುಕೊಳ್ಳೋಣ' ಎಂದು ನಿಮ್ಮನ್ನು ಮತ್ತೆ ಅಂಗಡಿಯೊಳಗೆ ಎಳೆದುಕೊಂಡು ಹೋಗಬಹುದು. ನಿಮ್ಮನ್ನು ನೋಡಿದ ಸೇಲ್ಸ್‌ಮನ್‌ಗಳು ರಜೆ ಹಾಕಿ ಮನೆಗೆ ಹೋಗಬಹುದು! 'ಮುಂದಿನ ತಿಂಗಳು ಮಡಿಕೇರಿಗೆ ಹೋಗೋಣ' ಎಂದು ಪ್ಲ್ಯಾನ್ ಮಾಡಿ, ಹೋಟೆಲ್ ಬುಕ್ ಮಾಡಿದ ಮರುದಿನವೇ, 'ಮಡಿಕೇರಿ ಏನೋ ಬೋರು, ಗೋವಾಕ್ಕೆ ಹೋಗೋಣ' ಎಂದು ಹೇಳಬಹುದು. ಕೊನೆಗೆ, ನೀವು ಮನೆಯಲ್ಲೇ ಕುಳಿತು 'ಟ್ರಾವೆಲ್ ವ್ಲಾಗ್' ನೋಡುವಂತಾಗುತ್ತದೆ.

ಇದಕ್ಕೆ ಪರಿಹಾರವೇನು? ತಮಾಷೆ ಬಿಡಿ, ಚಂಚಲ ಮನಸ್ಸು ಇರುವವರು ಸಾಮಾನ್ಯವಾಗಿ ಬಹಳ ಸೃಜನಶೀಲರು ಮತ್ತು ಮಕ್ಕಳಂತೆ ನಿಷ್ಕಲ್ಮಶರು. ಅವರ ಜತೆ ಜೀವನ ಎಂದಿಗೂ 'ಬೋರಿಂಗ್' ಆಗುವುದಿಲ್ಲ. ನಿಮ್ಮ ಪಾಕೆಟ್‌ನಲ್ಲಿ ಒಂದು ನಾಣ್ಯ ಇಟ್ಟುಕೊಳ್ಳಿ. ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ, 'ತಲೆಯಾ, ಬಾಲನಾ? (Heads or Tails?) ಎಂದು ಕೇಳಿ ಟಾಸ್ ಹಾಕಿ. ಬಹುಶಃ ಇದು ಅವಳ ಮನಸ್ಥಿತಿಗಿಂತ ಹೆಚ್ಚು ಸ್ಥಿರವಾದ ಫಲಿತಾಂಶ ನೀಡಬಹುದು! ನೆನಪಿಡಿ, ನೀವು ಮದುವೆಯಾಗುತ್ತಿರುವುದು ಕೇವಲ ಒಬ್ಬ ವ್ಯಕ್ತಿಯನ್ನಲ್ಲ, ಬದಲಿಗೆ ಒಂದು 'ಸರ್ಪ್ರೈಸ್ ಪ್ಯಾಕೇಜ್' ಅನ್ನು. ಪ್ರತಿ ದಿನವೂ ಹೊಸ ಉಡುಗೊರೆಯನ್ನು ತೆರೆಯುವಷ್ಟೇ ಕುತೂಹಲ ನಿಮ್ಮ ಜೀವನದಲ್ಲಿರುತ್ತದೆ. ಆಲ್ ದಿ ಬೆಸ್ಟ್ ಗುರು! ಧೈರ್ಯವಾಗಿ ಮುನ್ನುಗ್ಗಿ!



ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೇ



ಕರೆದಲ್ಲಿಗೆ ಬರುವ ಗುರುವೆಂದರಿವರಯ್ಯ...

ಓಂ ಶ್ರೀ

॥ ಯಾಮೃಷಯೋ ಮಂತ್ರಕೃತೋ ಮನೀಷಿಣಃ ॥

ರಿತ್ತಿ ರಾಘವೇಂದ್ರ ಎಸ್ ಕೆ
ಬೆಂಗಳೂರು

ಭಾರತೀಯ ಸನಾತನ ಸತ್ಪರಂಪರೆಯಲ್ಲಿ ಅತಿ ಎತ್ತರಕ್ಕೆ ಏರಿ ಆಧ್ಯಾತ್ಮ, ವಾಙ್ಮಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮುನಿಯಾಗಿ, ಮೌನ ಸಾತ್ವಿಕ ಕ್ರಾಂತಿಯನ್ನು ಸಾಧಿಸಿದ ಮಹಾನುಭಾವರು ಶ್ರೀ ರಾಘವೇಂದ್ರ ತೀರ್ಥರು. ತಮ್ಮ ಜೀವಿತಾವಧಿಯಲ್ಲಿ ದಕ್ಷಿಣ ಭಾರತದುದ್ದಕ್ಕೂ ಸಂಚರಿಸಿ ತಮ್ಮ ವ್ಯಕ್ತಿತ್ವದ ಮೂಲಕ ಪ್ರಭಾವವನ್ನು ಬೀರಿದರೆ, ಜೀವಿತಾನಂತರ ಬೃಂದಾವನದಲ್ಲಿ ನೆಲೆಸಿ ತಮ್ಮ ತಪಃ ಪ್ರಭಾವದಿಂದ ಮತ-ಸಿದ್ಧಾಂತ, ಜಾತಿ-ಪಂಗಡ, ದೇಶ -ಭಾಷೆ, ದ್ವೇಷ-ಅಸೂಯೆ, ಬಂಧು- ಬಾಂಧವರು ಎಂಬ ಬಂಧನಗಳನ್ನು ಮೀರಿ, ಸನ್ಯಾಸವೆಂಬ ಪದಕ್ಕೆ ಅನ್ವರ್ಥಕವಾಗಿ ಸುಮಾರು 350 ವರ್ಷಗಳ ದೀರ್ಘಕಾಲ ಪ್ರಪಂಚದಾದ್ಯಂತ ಕೋಟ್ಯಂತರ ಅರ್ಥಿಗಳನ್ನು, ಜಿಜ್ಞಾಸುಗಳನ್ನು ಉದ್ಧರಿಸುತ್ತಿರುವ ಅತೀ ಅಪರೂಪದ ವ್ಯಕ್ತಿತ್ವ ಶ್ರೀ ರಾಘವೇಂದ್ರರದ್ದು. ಹೀಗಾಗಿ ಅವರು ಕಾಮಧೇನು, ಕಲ್ಪತರು ಎಂಬ ಉಪಮೇಯಗಳಿಂದ ಗೀಯಮಾನರು. ಶ್ರಾವಣಮಾಸ, ಪ್ರಕೃತಿಯಲ್ಲಿ ಹೊಸ ಚೈತನ್ಯವನ್ನು ತರುವ ಪರ್ವಕಾಲ, ಹಾಗಾಗಿ ಸಲಾದ ಹಬ್ಬ ಉತ್ಸವಗಳು, ಉಪಾಸನಾ ದೃಷ್ಟಿಯಿಂದ ಅತ್ಯಮೂಲ್ಯ. ಈ ಸಾಲಿನಲ್ಲಿ ಸೇರುವ ರಾಯರ ಆರಾಧನಾ ಮಹೋತ್ಸವವು ಪ್ರಪಂಚದೆಲ್ಲೆಡೆಯ ಭಕ್ತ ಸಮೂಹದಲ್ಲಿ ವಿವಿಧ ರೀತಿಯಿಂದ ರಾಯರ ಅನುಗ್ರಹ ಸಂಪಾದಿಸುವ ಮತ್ತು ಆಧ್ಯಾತ್ಮ ಚೈತನ್ಯವನ್ನು ತುಂಬಿಕೊಳ್ಳುವ ಬಹುದೊಡ್ಡ ಯಜ್ಞ. ಈ ಸಮಯದಲ್ಲಿ ಶ್ರೀ ರಾಯರು ಬಂದ ಪರಂಪರೆ ಹಾಗೂ ಅವರ ಗುಣ ಸಾಧನೆಗಳ ಪಕ್ಷಿ ನೋಟವನ್ನು ತಿಳಿಸುವುದು ಈ ಕಿರು ಲೇಖನದ ಪ್ರಯತ್ನವಾಗಿದೆ.

ರಾಯರ ವ್ಯಕ್ತಿತ್ವದ ಗುಣ ಸಾಧನೆಗಳ ವಿಶ್ಲೇಷಣೆಯ ದೀರ್ಘ ಸ್ಮರಣೆಯೂ ಅನೇಕ ಶತಮಾನಗಳಿಂದ ವಿವಿಧ ರೀತಿಯಲ್ಲಿ ನಡೆದಿದೆ. ಅವರು ತಮ್ಮ ಸಾಧನೆಗೆ ಆಯ್ದ ಮಾರ್ಗ ಇತಿಹಾಸದಲ್ಲಿ ಅತಿ ವಿಶೇಷ ಹಾಗೂ ವಿರಳ. ಸಮಾಜದಲ್ಲಿ ಅವರು ತಮ್ಮ ಅನಿಸಿಕೆಗಳನ್ನು ತಿಳಿಸಲು ಸೈನ್ಯ, ಪಡೆ, ಪಂಗಡಗಳನ್ನು ಕಟ್ಟಿ- ಬೆಳೆಸಲಿಲ್ಲ, ತಾವು ಬಂದ ಪರಂಪರೆಯ ಆಚಾರ - ಸಂಪ್ರದಾಯಗಳನ್ನು ಧಿಕ್ಕರಿಸಲಿಲ್ಲ, ತಾವು ನಂಬಿದ ಶಾಸ್ತ್ರ-ಧರ್ಮಗಳ ಚೌಕಟ್ಟನ್ನು ಬದಲಿಸಲಿಲ್ಲ, ತಮ್ಮ ವಿಚಾರಗಳನ್ನಿಟ್ಟು ವಿತಂಡವಾದಗಳನ್ನು ಮಾಡಲಿಲ್ಲ. ಬುದ್ಧದೇವನಿಂದಾರಂಭಿಸಿ ಮಧ್ವಾಚಾರ್ಯರನ್ನೊಳಗೊಂಡು ಎಲ್ಲ ಪ್ರಸಿದ್ಧ ಪುರುಷರು ಮತ್ತು ದಾರ್ಶನಿಕರು ಅಂದಿನ ಪ್ರಚಲಿತ ಆಚಾರ-ವಿಚಾರಗಳನ್ನು ಪ್ರಶ್ನಿಸಿ, ತಮ್ಮದೇ ಆದ ಹೊಸ ವಿಚಾರ ಪರಂಪರೆಯನ್ನು ಹುಟ್ಟುಹಾಕಿದವರು. ಆದರೆ ರಾಯರ ಮಾರ್ಗ ತೀರಾ ವಿಭಿನ್ನ, ಎಲ್ಲದರಲ್ಲಿದ್ದು ಎಲ್ಲವನ್ನೂ ಪಾಲಿಸಿ ಎಲ್ಲವನ್ನೂ ಮೀರಿದ ಅಪರೂಪದ ಸಾಧಕರು. ಪ್ರಾಯಶಃ ಈ ರೀತಿಯ ಉದಾಹರಣೆ ಇತಿಹಾಸದಲ್ಲಿ ಸಿಗುವುದು ಬಲು ವಿರಳ. ಈ ದೃಷ್ಟಿಯಿಂದ ಅವರ ಜೀವನ, ಚರಿತ್ರೆ, ನಡೆ-ನುಡಿ, ಗ್ರಂಥಗಳು, ರಾಯರ ಮಹಿಮೆ, ಉಪದೇಶಗಳೆಲ್ಲವೂ ಮೌಲ್ಯಯುತ ಸಮಾಜದ ನಿರ್ಮಾಣಕ್ಕೆ ಅಧ್ಯಯನ ಯೋಗ್ಯ ಹಾಗೂ ಅನುಕರಣೀಯ.

ರಾಯರ ನಡೆ ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಮ್ ಎಂಬ ಶ್ರೀರಾಮನ ಸಾಂಪ್ರದಾಯಿಕ ಮಾರ್ಗದಂತೆ ಮತ್ತು 'ಯುಕ್ತ: ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕಮ್' ಎಂಬ ಶ್ರೀಕೃಷ್ಣನ ಸಮ್ಯಕ್ ದೃಷ್ಟಿಯುಳ್ಳದ್ದು. ಎಲ್ಲದ್ದರಲ್ಲಿದ್ದು ಎಲ್ಲವನ್ನೂ ತ್ಯಜಿಸಿ ಎಲ್ಲವನ್ನೂ ಮೀರುವುದೇ ಆಗಿದೆ.

ದ್ವೈತ ಸಿದ್ಧಾಂತದ ಉಗಮ

ಕ್ರಿಶ 11-13ನೇ ಶತಮಾನಗಳು ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕ ಪ್ರಾಂತ್ಯವು ಉತ್ತರದ ದಿಕ್ಕಿನಿಂದ ದಾಳಿಗಳನ್ನು ಕಂಡಿತು. ಈ ಘಟ್ಟದಲ್ಲಿ ರಾಜಕೀಯ, ವ್ಯಾವಹಾರಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮ ಹೀಗೆ ಎಲ್ಲ ಕ್ಷೇತ್ರಗಳು ಹಿಂದೆಂದೂ ಕಾಣದಂತ ಬದಲಾವಣೆಗಳನ್ನು ಕಂಡಂತಹ ಸಂಧಿ ಸಮಯ. ಸಾಮಾಜಿಕ ವ್ಯವಸ್ಥೆಯ ಚೌಕಟ್ಟು ಸಡಿಲಗೊಳ್ಳುವ ಹಂತವನ್ನುತಲುಪಿದ ಸಮಯ. ಈ ಸಂದರ್ಭದಲ್ಲಿ ಅನೇಕ ಮಹನೀಯರು ಸಂದರ್ಭಕ್ಕನು ಗುಣವಾಗಿ ತಮ್ಮ ಕ್ಷೇತ್ರಗಳಲ್ಲಿ ಸಮಾಜವನ್ನು ಬಲಪಡಿಸಲು ಮುಂದಾದರು. ವಿದ್ಯಾರಣ್ಯರ ನೇತೃತ್ವದಲ್ಲಿ ವಿಜಯನಗರದಂತಹ ಹೊಸ ಸಾಮ್ರಾಜ್ಯಗಳ ಉಗಮವಾಯಿತು. ಬಸವಣ್ಣನವರ ನೇತೃತ್ವದಲ್ಲಿ ಶೈವ ಪಂಥದ ಬಲೋತ್ಕರ್ಷದ ಜತೆಗೆ ವಚನ ಸಾಹಿತ್ಯದ ಉಗಮ ನಡೆಯಿತು. ಇವುಗಳ ನಡುವೆ 13ನೇ ಶತಮಾನದಲ್ಲಿ ಕರಾವಳಿಯ ಉಡುಪಿಯ ಪರಿಸರದಲ್ಲಿ ಆನಂದತೀರ್ಥ ಅಥವಾ ಮಧ್ವಾಚಾರ್ಯರಿಂದ ವೈಷ್ಣವಪಂಥವು ವೈದಿಕ ತತ್ತ್ವವಾದವೆಂಬ ಹೆಸರಿನಿಂದ ಪುನರುತ್ಥಾನಗೊಂಡಿತು. ಸುಮಾರು 37 ಗ್ರಂಥಗಳಲ್ಲಿ ಮಧ್ವರು ಹರಿಸರ್ವೋತ್ತಮತ್ತ್ವವೇ ವೇದ ಪುರಾಣ, ಇತಿಹಾಸಗಳ ಸಾರವೆಂದು ತೋರಿಸಿಕೊಟ್ಟು ಭಕ್ತಿಪಂಥದ ಹರಿಕಾರರಾದರು.

ಆ ಸಮಯದಲ್ಲೇ ಹರಿದಾಸ ಸಾಹಿತ್ಯವು ಉಗಮಗೊಂಡು ಸಮಾಜದಲ್ಲಿ ಸಂಚಲನವನ್ನುಂಟು ಮಾಡಿ ಬದಲಾವಣೆಯ ಪರ್ವವು ಪ್ರಾರಂಭವಾದವು. ಕಾಲಾಂತರದಲ್ಲಿ ತತ್ತ್ವವಾದವು ದ್ವೈತ ಸಿದ್ಧಾಂತ ಅಥವಾ ದ್ವೈತ ಮತವೆಂದು ಪ್ರಚಲಿತಗೊಂಡು ದಕ್ಷಿಣ ಭಾರತದೆಲ್ಲೆಡೆ ಪ್ರಮುಖವಾಗಿ ನೂತನ ಸಾಮ್ರಾಜ್ಯವಾಗಿ ನಿರ್ಮಾಣ ಹಂತದಲ್ಲಿದ್ದ ವಿಜಯನಗರ ಪ್ರಾಂತ್ಯದಲ್ಲಿ ಪಸರಿಸತೊಡಗಿತು.

ಶ್ರೀ ರಾಘವೇಂದ್ರತೀರ್ಥರ ಪೂರ್ವ ಪರಂಪರೆ

ಮಧ್ವಾಚಾರ್ಯರ ನಂತರದಲ್ಲಿ ಅವರ ಪ್ರಮುಖ ಶಿಷ್ಯರಾದ ಪದ್ಮನಾಭ ತೀರ್ಥರು, ನರಹರಿ ತೀರ್ಥರು, ಮಾಧವ ತೀರ್ಥರು ಹಾಗೂ ಅಕ್ಷೋಭ್ಯತೀರ್ಥರು ಹೊಸದಾದ ದ್ವೈತ ದರ್ಶನವನ್ನು ಪರಿಚಯಿಸುತ್ತಾ ಹಾಗೂ ವಿಜಯನಗರ ಸಾಮ್ರಾಜ್ಯ ನಿರ್ಮಾಣ ಮತ್ತು ವಿಕಸನದ ಕಾರ್ಯಗಳಲ್ಲಿ ತಮ್ಮ ವಿಶೇಷ ಕೊಡುಗೆಗಳನ್ನು ನೀಡಿ ಗೌರವ ಪ್ರಾಯರಾದರು. ನರಹರಿ ತೀರ್ಥರು ಕಾಣಿಕೆಯ ರೂಪದಲ್ಲಿ ತಂದು ಅರ್ಪಿಸಿದ ಚತುರ್ಯುಗ ಶ್ರೀಮೂಲರಾಮಚಂದ್ರ ಮೂರ್ತಿಯನ್ನು ಶ್ರೀಮದಾಚಾರ್ಯರು ಪರಂಪರೆಯ ಉಪಾಸನಾ ಪ್ರತೀಕವಾಗಿ ನಿಯೋಜಿಸಿದರು.

ಅಷ್ಟ ಮಠಗಳು ಉಡುಪಿ ಪ್ರಾಂತ್ಯದಲ್ಲಿ ಮಧ್ವರ ಸಂದೇಶ ಪ್ರಚಾರ ಕಾರ್ಯ ಮುನ್ನಡೆಸಿದವು. ಮುಂದೆ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು 14ನೇ ಶತಮಾನದಲ್ಲಿ ಮಧ್ವಾಚಾರ್ಯರ ಸಿದ್ಧಾಂತದ ಆಳ ಅಗಲಗಳನ್ನು ವಿಪುಲಗೊಳಿಸಿ ವಿದ್ವಾಂಸ ಮಂಡಳಿಗಳಲ್ಲಿ ಮಂಡಿಸುವ ಸಲುವಾಗಿ 23 ಅತ್ಯುತ್ತಮ ಗ್ರಂಥ ರತ್ನಗಳಲ್ಲಿ ವಿಸ್ತೃತಗೊಳಿಸಿ ಶಿಷ್ಯರುಗಳಾದ ವಿದ್ಯಾಧಿರಾಜರು, ರಾಜೇಂದ್ರತೀರ್ಥರು, ಕವೀಂದ್ರತೀರ್ಥರುಗಳಿಗೆ ತಮ್ಮ ಗ್ರಂಥಗಳ ಪೂರ್ಣ ಸ್ವರೂಪವನ್ನು ತಿಳಿಸಿ ದ್ವೈತ ಸಿದ್ಧಾಂತವನ್ನು ವಿಜಯನಗರದ ಹೊರ ದಿಕ್ಕುಗಳಲ್ಲಿ ವಿದ್ವಾಂಸಮಂಡಳಿಗಳಲ್ಲಿ ವಾದ ರೂಪವಾಗಿ ಮಂಡಿಸಲು ಆದೇಶಿಸಿದರು. ಹಾಗಾಗಿ ಜಯತೀರ್ಥರು ಟೀಕಾಚಾರ್ಯರೆಂದೇ ಖ್ಯಾತರಾದರು.

ರಾಜೇಂದ್ರತೀರ್ಥರು ಹೆಚ್ಚಾಗಿ ಪೂರ್ವಪ್ರಾಂತ್ಯವಾದ ನವದ್ವೀಪ (ಬಂಗಾಳ) ಮುಂತಾದ ಕಡೆಗಳಲ್ಲಿ ಹೆಚ್ಚು ಪ್ರಚಾರಗೊಳಿಸಿದ ಕಾರಣವಾಗಿ ಅವರ ಪರಂಪರೆ ಪೂರ್ವ ಮಠವೆಂದು ಪ್ರಖ್ಯಾತವಾಯಿತು. 15ನೇ ಶತಮಾನದಲ್ಲಿ ವ್ಯಾಸರಾಜರು ಪೂರ್ವಾದಿ ಪರಂಪರೆಯನ್ನು ಅಲಂಕರಿಸಿ, ವಿಜಯನಗರದ ಸಾಮ್ರಾಜ್ಯದ ರಾಜರುಗಳಿಗೆ ರಾಜಗುರುವಾಗಿ, ವಿದ್ವಾಂಸಮಂಡಳಿಯ ಜತೆಗೆ ಹರಿದಾಸಪರಂಪರೆಯನ್ನು ಹಿರಿದುಗೊಳಿಸಿ ಸಾಮಾನ್ಯ ಜನರಿಗೂ ಮಧ್ವಾಚಾರ್ಯರ ಸಿದ್ಧಾಂತವನ್ನು ಮುಟ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಅವರ ಕಾಲಾನಂತರ ಪೂರ್ವಾಧಿ ಮಠವು ಶ್ರೀವ್ಯಾಸರಾಜ ಮಠವೆಂದೇ ಖ್ಯಾತವಾಗಿ ಮುಂದೆ ಪೆನುಗೊಂಡ, ಸೋಸಲೆ, ಕುಂದಾಪುರ ಕ್ಷೇತ್ರಗಳಲ್ಲಿ ಕೇಂದ್ರೀಕರಣಗೊಂಡಿತು.

(2ನೇ ಪುಟಕ್ಕೆ)

ಧರ್ಮರಹಿತ ರಾಮರಾಜ್ಯ ಅಸಾಧ್ಯ

ಸಂದರ್ಶನ
ನಂಜನಗೂಡು ಪ್ರದ್ಯುಮ್ನ

ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿಗಳ ಮಠದ 40ನೇ ಪೀಠಾಧಿಪತಿಗಳಾಗಿರುವ ಜಗದ್ಗುರು ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರದ್ದು ಆಪ್ತವ್ಯಕ್ತಿತ್ವ. ಸೂಜಿಗಲ್ಲಿನಂತಹ ಆಕರ್ಷಣೆ. 'ಸ್ಮಿತಪೂರ್ವಾ ಭಾಷಿತ್ವ' ಎಂಬಂತೆ ಮೊದಲು ಮಂದಹಾಸ, ನಂತರ ಶಿಷ್ಯ ಭಕ್ತರೊಂದಿಗೆ ಸಂಭಾಷಣೆ ಅವರದ್ದು. ಸಮಾಜಮುಖಿ ಚಿಂತಕರಾದ ಶ್ರೀಗಳು ತಮ್ಮ ಸರಳತೆ, ಸಹಜ ಶಿಸ್ತು, ಧಾರ್ಮಿಕ ನಾಯಕತ್ವ ಮತ್ತು ಭಕ್ತ ವಾತ್ಸಲ್ಯ ಮುಂತಾದ ಗುಣಗಳಿಂದ ಸ್ಫೂರ್ತಿಯಾಗಿದ್ದಾರೆ. ಮಠದೊಂದಿಗೆ, ಗುರುಸಾರ್ವಭೌಮರನ್ನು ಭಕ್ತರ ಮನೆ-ಮನಗಳಿಗೆ ಕೊಂಡೊಯ್ದ ಅಪರೂಪದ ಯತಿಶ್ರೇಷ್ಠರು ಇವರು. 'ಗುರವೋ ವಿರಲಾಸಂತಿ ಶಿಷ್ಯ ಚಿತ್ತಾಪಹಾರಕಾಃ' ಎಂಬಂತೆ ಶಿಷ್ಯನ ಮನಸ್ಸನ್ನು ಅಪಹರಿಸುವ ಗುರುಗಳು ಇಂದು ವಿರಳ. ಆದರೆ ಶ್ರೀ ಸುಬುಧೇಂದ್ರ ತೀರ್ಥರು ಅಪಾರ ಶಿಷ್ಯಕೋಟಿಯ ಜನಮಾನಸದ ಪ್ರೀತಿ ಗಳಿಸಿದ್ದಾರೆ. ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ಆರಾಧನೆ ಮಹೋತ್ಸವದ ಅಂಗವಾಗಿ ಪೂಜ್ಯರು 'ವಿಶ್ವವಾಣಿ'ಯೊಂದಿಗೆ ಮಾತನಾಡಿದ್ದಾರೆ.

- **ಪೂಜ್ಯರೇ, ಇಂದಿನ ಕಾಲಮಾನಕ್ಕೆ ಮಠದ ಪರಿಕಲ್ಪನೆ ಏನು ?**

'ಯಸ್ತು ಕೃತಯುಗೇ ಧರ್ಮೋ ನಕರ್ತವ್ಯಂ ಕಲೌಯುಗೇ' ಎಂಬುದಾಗಿ ಆದಿತ್ಯ ಪುರಾಣದಲ್ಲಿ ಹೇಳಿರುವಂತೆ ಕೃತಯುಗದ ಧರ್ಮ-ಸಿದ್ಧಾಂತವನ್ನು ಕಲಿಯುಗದಲ್ಲಿ ಸ್ವೀಕರಿಸಬಾರದು ಎಂಬ ಮಾತಿದೆ. ನಮ್ಮ ಹಿಂದಿನ ದಾರ್ಶನಿಕರು ಸಾವಿರಾರು ವರ್ಷಗಳ ಹಿಂದೆ ಮಠಮಾನ್ಯಗಳ ವ್ಯವಸ್ಥೆಯನ್ನು ಜನರ ಕಲ್ಯಾಣಕ್ಕಾಗಿ ಲೋಕಾರ್ಪಣೆ ಮಾಡಿದರು. ಆದರೆ ಪ್ರಸ್ತುತ ಕಾಲ,ದೇಶ, ವರ್ತಮಾನ ಬದಲಾಗಿದೆ. ಮಠ-ಮಂದಿರಗಳು ನೇರವಾಗಿ ಶ್ರೀಸಾಮಾನ್ಯನ ಭಕ್ತಿ, ಭರವಸೆಯ ಧಾರ್ಮಿಕ ಕೇಂದ್ರಗಳಾಗಿವೆ. ಇಂತಹ ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಮಠ ಮತ್ತು ಧಾರ್ಮಿಕ ಕೇಂದ್ರಗಳು ತಮ್ಮ ಆಚಾರ ,ವಿಚಾರ ಹಾಗೂ ಸತ್ಸಂಪ್ರದಾಯಗಳಿಗೆ ಲೋಪ ಬರದಂತೆ ಸಮಾಜಮುಖಿಯಾಗಿ ಸಾಗುವುದು ಇಂದು ಅತ್ಯವಶ್ಯ. ಖ್ಯಾತ ಬರಹಗಾರ ಚರ್ಚಿಲ್ ತಾಡ್ರೋಸ್ ಹೇಳುವಂತೆ, "Nothing in this world can survive and remain useful without an UPDATE. ..even Religion. ..especially RELIGION' .. ಶಾಶ್ವತವೆಂದು ಭಾವಿಸುವ ಧರ್ಮವೂ ಕೂಡ ಕಾಲಕಾಲಕ್ಕೆ Update ಆಗುತ್ತಿರಬೇಕು. ಇಲ್ಲದಿದ್ದರೆ Outdated ಆಗುವ ಸಾಧ್ಯತೆ ಹೆಚ್ಚು ಎಂಬುದಾಗಿ ವಿಶ್ವೇಶ್ವರ ಭಟ್ ಅವರು ತಮ್ಮ ಯಾವುದೋ ಅಂಕಣದಲ್ಲಿ ಬರೆದ ಮಾತುಗಳು ಪ್ರಸ್ತುತವಲ್ಲವೇ?

- **ಹಿಂದಿಗಿಂತಲೂ ಸಮಾಜದಲ್ಲಿ ಧಾರ್ಮಿಕ ಜಾಗೃತಿ ಇಂದು ಹೆಚ್ಚಾಗುತ್ತಿರಲು ಕಾರಣ ಏನು?**

ಜಗತ್ತಿನ ಮನುಜರೆಲ್ಲರೂ ಒಂದಲ್ಲಾ ಒಂದು ಧರ್ಮದ ಬಗ್ಗೆ ನಂಬಿಕೆ ಮತ್ತು ವಿಶ್ವಾಸದೊಂದಿಗೆ ಶತಶತಮಾನಗಳಿಂದ ಜೀವನ ಕಟ್ಟಿಕೊಂಡಿದ್ದಾರೆ. ಧರ್ಮವಿಲ್ಲದೆ 'ರಾಮರಾಜ್ಯ'ದ ಕಲ್ಪನೆ ಸಾಧ್ಯವೇ ಇಲ್ಲ. ಧರ್ಮ

(2ನೇ ಪುಟಕ್ಕೆ)

ನವ ಮಂತ್ರಾಲಯ ನಿರ್ಮಾಣ

ಬಸವರಾಜ ನಾಗಡದಿನ್ನಿ
ರಾಯಚೂರು

ಗುರುರಾಯರಿಗೆ ಭಕ್ತರ ದೊಡ್ಡ ದಂಡೇ ಇದೆ. ಲಕ್ಷಾಂತರ ಭಕ್ತರು ವಾರಕ್ಕೊಮ್ಮೆ ಬಂದು ಬೃಂದಾವನನ್ನು ನೋಡುವವರೂ ಇದ್ದಾರೆ. ಇಂತಹ ಭಕ್ತರಿಗೆ ಮಂತ್ರಾಲಯ ಸದಾ ಕೈಬೀಸಿ ಕರೆಯುತ್ತಿರುತ್ತದೆ. ರಾಯರ ದರ್ಶನ ಪಡೆಯಲು ಬರುವ ಭಕ್ತರಿಗೆ ಆಶೀರ್ವಾದ ದೊಂದಿಗೆ ಮೂಲಸೌಕರ್ಯದಲ್ಲಿಯೂ ಸಮಸ್ಯೆಯಾಗದಂತೆ ನವ ಮಂತ್ರಾಲಯದ ನಿರ್ಮಾಣ ಕಾಮಗಾರಿ ಸಾಗಿದೆ.

ಸುಬುಧೇಂದ್ರ ತೀರ್ಥರು, ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಯಾದ ನಂತರ ಮಂತ್ರಾಲಯ ಮಠದಲ್ಲಿ ಅಭಿವೃದ್ಧಿಯ ಮಹಾಪೂರವಾಗಿದೆ. ಸದಾ ಶ್ರೀಮಠದ ಪ್ರಗತಿಯ ಬಗ್ಗೆ ಚಿಂತಿಸುವ ಪೂಜ್ಯರು ನೂರಾರು ಕೋಟಿ ರು. ವೆಚ್ಚದಲ್ಲಿ ಹತ್ತಾರು ಕಾಮಗಾರಿ ಮುಗಿಸಿದ್ದು, ಎಲ್ಲಿ ನೋಡಿದರಲ್ಲಿ ಹೊಸತನ ಕಾಣಬಹುದಾಗಿದೆ. ರಾಘವೇಂದ್ರ ಸ್ವಾಮಿ ಬೃಂದಾವನವಿರುವ ಶಿಲಾ ಮಂಟಪವನ್ನು 8 ಕೋಟಿ ರು. ವೆಚ್ಚದಲ್ಲಿ ಆಧುನೀಕರಣ ಗೊಳಿಸಲಾಗಿದೆ. ಶ್ರೀಮಠವು ಹಮ್ಮಿಕೊಳ್ಳವ ವಿವಿಧ ಕಾರ್ಯಕ್ರಮಗಳಿಗಾಗಿ 3 ಕೋಟಿ ರು.ವೆಚ್ಚದಲ್ಲಿ ರಾಜಾಂಗಣವನ್ನು ಸಿದ್ಧಗೊಳಿಸಲಾಗಿದೆ. ಹೊಸದಾಗಿ 3 ಕೋಟಿ ರು. ವಿನಿಯೋಗಿಸಿ ಮಠದಲ್ಲಿ ಡೋಲೋತ್ಸವ ಮಂಟಪವನ್ನು ಮತ್ತು ಯಾಗ ಶಾಲೆಯನ್ನು ಅನಾವರಣಗೊಳಿಸಲಾಗಿದೆ.

ಭಕ್ತರಿಗೆ ವಸತಿ ಗೃಹಗಳ ನಿರ್ಮಾಣ

ಸಂಕಷ್ಟ ಪರಿಹರಿಸುವಂತೆ ನಿತ್ಯವೂ ಸಾವಿರಾರು ಭಕ್ತರು ರಾಘವೇಂದ್ರ ಸ್ವಾಮಿಗಳ ಸನ್ನಿಧಿಗೆ ಧಾವಿಸುತ್ತಲೇ ಇರುತ್ತಾರೆ. ಬಂದ ಭಕ್ತರ ಹಿತ ರಾಯರು ಕಾಪಾಡಿದರೆ, ತಂಗಲು ಬೇಕಾಗುವ ವಸತಿ ನಿಲಯಗಳನ್ನು ಶ್ರೀಗಳು ಹೊಸದಾಗಿ ನಿರ್ಮಿಸಿ ಅನುಕೂಲ ಮಾಡಿ ಕೊಟ್ಟಿದ್ದಾರೆ. 16 ಕೋಟಿ ರು. ವೆಚ್ಚದಲ್ಲಿ ಪೂಜ್ಯ ಗುರುಗಳಾದ ಸುಯತೀಂದ್ರ ತೀರ್ಥರ ಹೆಸರಿನಲ್ಲಿ 200 ಕೊಠಡಿಗಳ ಸುಸಜ್ಜಿತ ವಸತಿ ಗೃಹ ನಿರ್ಮಿಸಿದ್ದು, ಇನ್ನೂ 18 ಕೋಟಿ ರು.ವಿನಿಯೋಗಿಸಿ 200 ಹೆಚ್ಚುವರಿ ಕೊಠಡಿಗಳನ್ನು ಕಟ್ಟಲಾಗಿದೆ. 100 ಕೊಠಡಿಗಳ ನರಹರಿ ವಸತಿ ಗೃಹವನ್ನು 14 ಕೋಟಿ ರು.ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಮಂತ್ರಾಲಯಕ್ಕೆ ಸಾಮಾನ್ಯ ಭಕ್ತರಲ್ಲದೇ, ಸಚಿವರು, ಉದ್ದಿಮೆದಾರರು ಸೇರಿದಂತೆ ವಿಐಪಿಗಳು ಆಗಮಿಸುವ ಹಿನ್ನಲೆ 4 ಕೋಟಿ ರು. ವೆಚ್ಚದಲ್ಲಿ ಪದ್ಮನಾಭ ತೀರ್ಥ ಗೆಸ್ಟ್ ಹೌಸ್ ನ್ನುಲೋಕಾರ್ಪಣೆ ಮಾಡಲಾಗಿದೆ. 100 ಕೊಠಡಿಗಳ ಸುಶೀಲೇಂದ್ರ ವಸತಿಗೃಹ ನಿರ್ಮಾಣ ಮಾಡಲಾಗಿದೆ. ಮೂಲರಾಮ ವಸತಿಗೃಹವು 100 ಕೊಠಡಿಗಳನ್ನು 15 ಕೋಟಿ ರು.ವೆಚ್ಚದಲ್ಲಿ ಕಟ್ಟುವ ಮೂಲಕ ಭಕ್ತರಿಗೆ ವಸತಿ ಸೌಕರ್ಯ ಒದಗಿಸಲಾಗುತ್ತಿದೆ.

ಸುಬುಧೇಂದ್ರ ತೀರ್ಥರ ಒತ್ತಾಸೆ ಮೇರೆಗೆ 60 ಕೋಟಿ ರು. ಪಿಲಿಗ್ರಿಂ ಎಮಿನಿಟಿ ಸೆಂಟರ್‌ನ್ನು ಮಂತ್ರಾಲಯ ಮಠದ ಮುಖ್ಯ ದ್ವಾರದ ಬಳಿ ನಿರ್ಮಿಸಲಾಗುತ್ತಿದ್ದು, 300 ಕೊಠಡಿಗಳು, ಡಾಲಮೆಟ್ರಿ, ರೆಸ್ಟೋರೆಂಟ್, ಸ್ವಾಗತ ಕೌಂಟರ್ ಸೇರಿದಂತೆ ಸಕಲ ಸೌಲಭ್ಯಗಳು ಈ ಕಟ್ಟಡ ಹೊಂದಿರಲಿದೆ.

ಭಕ್ತರಿಗೆ ಸಕಲ ಸೌಲಭ್ಯದ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣ

ತಿರುಪತಿಯಂತೆ ರಾಯಚೂರಿನ ಮಂತ್ರಾಲಯಕ್ಕೂ ನಿತ್ಯ ಸಹಸ್ರಾರು ಭಕ್ತರು ಆಗಮಿಸಿ, ಗುರು ಸಾರ್ವಭೌಮ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯುತ್ತಾರೆ. ಶ್ರೀ ಕ್ಷೇತ್ರಕ್ಕೆ ಬಂದಂತಹ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಶ್ರೀಮಠ ಸಕಲ ವ್ಯವಸ್ಥೆ ಮಾಡುತ್ತಾ ಬರುತ್ತಿದ್ದು, ಇದೀಗ ಮಲ್ಟಿ ಸ್ಟೋರ್ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸುವ ಮೂಲಕ ಭಕ್ತರಿಗೆ ಮತ್ತಷ್ಟು ಅನುಕೂಲ ಮಾಡಿಕೊಡಲಿದೆ. ಸಂಕಷ್ಟ ಪರಿಹಾರಕ್ಕಾಗಿ ರಾಯರ ಸನ್ನಿಧಿಗೆ ಬರುವ ಭಕ್ತರಿಗಾಗಿ ಮಂತ್ರಾಲಯದಲ್ಲಿ ಈಗಿರುವ ವ್ಯಾಸ ಮಂದಿರದ ಮ್ಯೂಸಿಯಂ ಹಿಂದೆ 10 ಕೋಟಿ ರು. ವೆಚ್ಚದಲ್ಲಿ ಶ್ರೀ ಮಠವು ಮಲ್ಟಿ ಸ್ಟೋರ್ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಮುಂದಾಗಿದ್ದು, ಆರಾಧನಾ ಹಿನ್ನೆಲೆಯಲ್ಲಿ ತಾತ್ಕಾಲಿಕ ಪ್ರಾಯೋಗಿಕವಾಗಿ ಟಿನ್‌ಗಳಿಂದ ನಿರ್ಮಿಸುವುದಕ್ಕೆ ಸುಬುಧೇಂದ್ರ ತೀರ್ಥರು ಚಾಲನೆ ನೀಡಲಿದ್ದಾರೆ. ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಒಂದೇ ಸೂರಿನಡಿ ಸಕಲ ಸೌಲಭ್ಯ ಸಿಗಲಿದೆ.

ಕ್ಯೂ ಕಾಂಪ್ಲೆಕ್ಸ್ ನಲ್ಲಿ ಸ್ನಾನಕೋಣೆ, ಶೌಚಾಲಯ, ಫ್ಯಾನ್‌ಗಳನ್ನು ಅಳವಡಿಸಿ ಯಾವುದೇ ಸಮಸ್ಯೆಯಾಗದಂತೆ ಸೌಕರ್ಯ ಒದಗಿಸುವ ಯೋಜನೆಯಾಗಿದೆ. ಯಾಕೆಂದರೆ ಮಂತ್ರಾಲಯಕ್ಕೆ ಬಂದಂತಹ ಭಕ್ತರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಬೇಕಿದೆ. ವಯೋವೃದ್ಧರು, ಮಹಿಳೆಯರು ಮತ್ತು ಚಿಕ್ಕ ಮಕ್ಕಳಿಗೆ ನದಿಯಲ್ಲಿ ಸ್ನಾನ ಮಾಡುವುದು ಕಷ್ಟದಾಯಕವಾಗಿದೆ. ಹಾಗಾಗಿ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಿ ಅಲ್ಲಿಯೇ ಎಲ್ಲ ಸೌಲಭ್ಯ ಒದಗಿಸುವ ಉದ್ದೇಶ ಶ್ರೀಗಳಾದ್ದಾಗಿದ್ದು, ಪ್ರಸ್ತುತ ಆರಾಧನಾ ಸಂದರ್ಭದಲ್ಲಿ ತಾತ್ಕಾಲಿಕ ಟಿನ್ ಶೆಡ್‌ನ್ನು ನಿರ್ಮಿಸಿ, ನಂತರ ಸುಸಜ್ಜಿತ ಕಟ್ಟಡ ನಿರ್ಮಿಸುವ ಮೂಲಕ ಕಾರ್ಯರೂಪಕ್ಕೆ ಬರಲಿದೆ.

4 ಕೋಟಿ ವೆಚ್ಚದಲ್ಲಿ ಪುಷ್ಕರಣಿ

ಮಂತ್ರಾಲಯದ ತುಂಗಾ ತೀರದಿ ನೆಲೆಸಿರುವ ಭಕ್ತರ ಪಾಲಿನ ಕಾಮಧೇನು ರಾಘವೇಂದ್ರ ಸ್ವಾಮಿಗಳ ಆರಾಧನೆ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ಕಾಗಿ ಶ್ರೀಮಠ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಅದರ ಫಲವಾಗಿ ಪುಷ್ಕರಣಿ ನಿರ್ಮಾಣಗೊಂಡಿದ್ದು, ರಾಯರ ಆರಾಧನೆಯ ಹಿಂದಿನ ದಿನ ಲೋಕಾರ್ಪಣೆಗೊಳ್ಳಲಿದೆ.

ತುಂಗಭದ್ರಾ ನದಿ ಇದ್ದರೂ, ಎಲ್ಲ ಕಾಲದಲ್ಲಿ ನದಿಯಲ್ಲಿ ನೀರಿರದೆ ನದಿ ಖಾಲಿ ಇರುವುದರಿಂದ ಧಾರ್ಮಿಕ ಕೈಂಕರ್ಯಗಳಿಗಾಗಿ ಮತ್ತು ತೆಪ್ಪೋತ್ಸವ ಮಾಡಲು ಸಮಸ್ಯೆಯಾಗಿ ಪುಷ್ಕರಣಿ ನಿರ್ಮಾಣ ಮಾಡುವುದು ಅವಶ್ಯಕವಾಗಿತ್ತು. ಇದು ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರ ಸಂಕಲ್ಪ ಕೂಡ ಆಗಿತ್ತು. ಹಾಗಾಗಿ ರಾಘವೇಂದ್ರ ಸ್ವಾಮಿ ಮಠದ ಮುಂಭಾಗದಲ್ಲಿರುವ ಮಂಚಾಲಮ್ಮ ದೇವಸ್ಥಾನದ ಈಶಾನ್ಯ ಭಾಗದಲ್ಲಿ ನಾಲ್ಕು ಕೋಟಿ ರು. ವೆಚ್ಚದಲ್ಲಿ 170 ಅಡಿ ಉದ್ದ ಮತ್ತು 64 ಅಡಿ ಅಗಲದ ಕಲ್ಯಾಣಿ ನಿರ್ಮಾಣಗೊಂಡಿದ್ದು, ಆ.10 ರಂದು ಸುಬುಧೇಂದ್ರ ತೀರ್ಥರು ಉದ್ಘಾಟನೆ ಮಾಡಲಿದ್ದಾರೆ. ನದಿಯಿಂದ ನೀರನ್ನ ಲಿಫ್ಟ್ ಮಾಡಿ ಪುಷ್ಕರಣಿ ತುಂಬಿಸಲಾಗುತ್ತಿದ್ದು, ಪ್ರಾಯೋಗಿಕವಾಗಿ ನೀರನ್ನು ಸಂಗ್ರಹಿಸಿ ಪರೀಕ್ಷಿಸಲಾಗಿದೆ. ಹುಣ್ಣಿಮೆ ದಿನ ಶ್ರೀಮಠದ ಉತ್ಸವದ ಸಂದರ್ಭದಲ್ಲಿ, ಕಾರ್ತಿಕ ಮಾಸದಲ್ಲಿ ಹಾಗೂ ರಾಘವೇಂದ್ರ ಸ್ವಾಮಿಗಳ ಆರಾಧನಾ ಸಮಯದಲ್ಲಿ ತೆಪ್ಪೋತ್ಸವ ಮಾಡಲು ಪುಷ್ಕರಣಿ ನಿರ್ಮಾಣ ಮಾಡಲಾಗಿದೆ.

(2ನೇ ಪುಟಕ್ಕೆ)

ಧರ್ಮರಹಿತ ರಾಮರಾಜ್ಯ ಅಸಾಧು

(1ನೇ ಪುಟದಿಂದ) ...

ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ಎಂದು ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳಿ ಧರ್ಮದ ಮಹತ್ವವನ್ನು ನಮಗೆಲ್ಲಾ ತಿಳಿಸಿಕೊಟ್ಟಿದ್ದಾನೆ. ಧರ್ಮ-ಅಧರ್ಮಗಳ ನಡುವಿನ ಹೋಯ್ದಾಟ ಅನಾದಿಕಾಲದಿಂದಲೂ ಇದ್ದದ್ದೆ, ಮುಂದೆಯೂ ಇರುವಂತದ್ದೆ. ಆದರೆ ಯಾವುದು ಧರ್ಮ, ಯಾವುದು ಅಧರ್ಮ ಎಂದು ಅರಿವು ಮೂಡಿಸುವುದು ಮಠಮಾನ್ಯಗಳ ಬಹುದೊಡ್ಡ ಗುರುತರ ಜವಾಬ್ದಾರಿ.

• ಧರ್ಮದ ಉಳಿವೇ ಮಠಮಾನ್ಯಗಳ ಸಂಕಲ್ಪವಾಗಿದ್ದಲ್ಲಿ ಮಠ-ಮಠಗಳ ನಡುವೆ ಭಿನ್ನಾಭಿಪ್ರಾಯ ಏಕೆ? ಕೋರ್ಟು ಕಚೇರಿಗಳ ವ್ಯಾಜ್ಯಗಳೇಕೆ?

ನಿಜ. ಅಂಥಹ ಬೆಳವಣಿಗೆಗಳು ನಮಗೂ ಬೇಸರ ಮೂಡಿಸಿದೆ. ನಾವು ಕೇವಲ ಸನ್ಯಾಸಿಯಾಗಿದ್ದರೆ ಇವೆಲ್ಲದ್ದರಿಂದ ದೂರವಿರಬಹುದಿತ್ತು. ಆದರೆ, ಪರಂಪರೆಯ ಪ್ರತಿಷ್ಠಿತ



ಪೀಠವೊಂದರ ಪೀಠಾಧಿಪತಿಗಳೂ ಆಗಿರುವ ಕಾರಣ ಕೆಲವು ಲೌಕಿಕ ವಿವಾದಗಳಿಗೂ ತಲೆ ಕೊಡಲೇ ಬೇಕಾಗುತ್ತದೆ. ಇಲ್ಲವಾದಲ್ಲಿ ಮಠದ ಲಕ್ಷಾಂತರ ಅನುಯಾಯಿಗಳು, ಭಕ್ತರ ಮತ್ತು ಶಿಷ್ಯರ ಭಾವನೆಗೆ ಘಾಸಿ ಮಾಡಿದಂತಾಗುತ್ತದೆ. ಆದರೆ ಧಾರ್ಮಿಕ ಶ್ರದ್ಧಾ ಕೇಂದ್ರಗಳು ವಿವಾದ ಮತ್ತು ಕೋರ್ಟು ಕಚೇರಿಯ ವ್ಯಾಜ್ಯಗಳಿಂದ ದೂರವಿರಬೇಕು ಎಂಬುದು ನನ್ನ ವೈಯಕ್ತಿಕ ನಿಲುವು. ಜೊತೆಗೆ ನಾವು ಅದಕ್ಕೆ ಬದ್ಧರೂ ಕೂಡ.

• ರಾಘವೇಂದ್ರ ತೀರ್ಥರು ಹೇಗೆ ಉಳಿದೆಲ್ಲಾ ಯತಿಗಳಿಗಿಂತ ಶ್ರೇಷ್ಠರು ಮತ್ತು ಮಾನ್ಯರು?

ರಾಘವೇಂದ್ರ ಸ್ವಾಮಿಗಳನ್ನು ಮತ್ತು ರಾಘವೇಂದ್ರ ಸ್ವಾಮಿಗಳ ಮಠವನ್ನು ಜಗದ್ಗುರು ಮತ್ತು ಜಗದ್ಗುರು ಪೀಠ ಎಂದು ಭಕ್ತಿಭಾವದಿಂದ ಮಾನ್ಯ ಮಾಡಲ್ಪಟ್ಟಿರುವುದು ಜಗತ್ತಿನಾದ್ಯಂತ ವ್ಯಾಪಿಸಿರುವ ಕೋಟ್ಯಂತರ ಭಕ್ತರು. ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿ ಈಗಲೂ ಮಂತ್ರಾಲಯದ ಮೂಲ ಬೃಂದಾವನದಲ್ಲಿ ಸನ್ನಿಹಿತರಾಗಿ ಮನುಕುಲದ ಒಳಿತಿಗಾಗಿ ಸುದೀರ್ಘ ತಪಸ್ಸಿನೊಂದಿಗೆ ತಮ್ಮ ಸರ್ವಸ್ವವನ್ನೂ ಧಾರೆ ಎರೆಯುತ್ತಾ ಭಕ್ತರ ಸಕಲ ಮನೋಭಿಷ್ಟಗಳನ್ನು ಅನುಗ್ರಹಿಸುತ್ತಿರುವ ಶ್ರೀಗುರುರಾಜರಿಗೆ ಗುರುರಾಜರೇ ಸಾಟಿ. ಶ್ರೇಷ್ಠ ಮಾನವೀಯ ಮೌಲ್ಯಗಳಾದ ಸತ್ಯ ಮತ್ತು ಧರ್ಮಗಳು ತಮ್ಮ ಉಸಿರೆಂದು ಜಗತ್ತಿಗೆ ಸಾರಿದವರು ರಾಘವೇಂದ್ರಸ್ವಾಮಿಗಳು. ಜಾತಿ, ಭಾಷೆ ಮತ್ತು ಪ್ರಾಂತ್ಯಾತೀತವಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಹಾಗಾಗಿಯೇ ಅವರನ್ನು ಕಲ್ಪವೃಕ್ಷ-ಕಾಮಧೇನು ಸದೃಷರು ಎಂದು ಕೊಂಡಾಡಲಾಗಿದೆ.

ಭಕ್ತರ ಧ್ಯಾನ-ಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ಇನ್ನು ಮುಂದೆ ವಿವಿಧ ಪ್ರದೇಶಗಳಲ್ಲಿ ಶಾಖಾ ಮಠಗಳ ಮಾದರಿಯಲ್ಲಿ ಧ್ಯಾನ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ. ರಾಯರ ಅಂತರಂಗ ಭಕ್ತರು ಈಗಾಗಲೇ ಈ ಸೇವಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಇದರಿಂದಾಗಿ ರಾಯರ ಮತ್ತು ಭಕ್ತರ ನಡುವಿನ ಸಂಬಂಧ ಮತ್ತಷ್ಟು ಹತ್ತಿರವಾಗಲಿದೆ.

ಮಂತ್ರಾಲಯ ಭವಿಷ್ಯ ಕುರಿತಂತೆ ನಿಮ್ಮ ಕನಸು ಏನು ?

ನವಮಂತ್ರಾಲಯ ನಿರ್ಮಾತೃರು, ನಮ್ಮ ಪೂರ್ವಾಶ್ರಮದ ತಾತಂದಿರೂ ಮತ್ತು ನಮ್ಮ ಪರಮೇಷ್ಠಿ ಗುರುಗಳಾದ ಶ್ರೀ ಸುಜಯೀಂದ್ರ ತೀರ್ಥರನ್ನು ನಾವು ಈ ಸಂದರ್ಭದಲ್ಲಿ ಭಕ್ತಿಯಿಂದ ಸ್ಮರಿಸಲೇಬೇಕು. ಮಂತ್ರಾಲಯವೆಂಬ ಕುಗ್ರಾಮವನ್ನು ಲೋಕವಿಖ್ಯಾತಗೊಳಿಸಿದವರು ನಮ್ಮ ಪರಮೇಷ್ಠಿಗುರುಗಳು. ಅವರ ದೂರಾಲೋಚನೆ, ಸಂಕಲ್ಪ, ಶ್ರದ್ಧೆಯೇ ನಮಗೆ ಸ್ಫೂರ್ತಿ ಮತ್ತು ದಾರಿದೀಪ. ಅವರು ಅಂದು ಕೈಗೊಂಡ ನಿರ್ಧಾರಗಳಿಂದಾಗಿ ಇಂದಿಗೂ ದ್ವೈತ ವೇದಾಂತ ಪ್ರಚಾರ, ಸಂಸ್ಕೃತ ಪಾಠಶಾಲೆ, ಗೋಶಾಲೆ, ಗ್ರಂಥ ಪ್ರಕಟಣೆ ಮುಂತಾದ ಕಾರ್ಯಗಳು ನಿರಾತಂಕವಾಗಿ ನಡೆಯುತ್ತಾ ಬಂದಿದೆ. ಇತ್ತೀಚಿನ ದಿನಗಳಲ್ಲಂತೂ ಯಾತ್ರಾರ್ಥಿಗಳಿಗೆ ವಸತಿ, ಅನ್ನಪ್ರಸಾದ ಮತ್ತು ದರ್ಶನ ವ್ಯವಸ್ಥೆ ಗಮನಾರ್ಹವಾಗಿ ಸುಧಾರಣೆಗೊಂಡಿದೆ. ಪರಿಣಾಮವಾಗಿ ದಿನೇ ದಿನೇ ಭಕ್ತರ ಪ್ರವಾಹ ಮಂತ್ರಾಲಯಕ್ಕೆ ಹರಿದು ಬರುತ್ತಿದೆ. ಜೊತೆಗೆ ಆದಾಯವೂ ಕೂಡ ಸಮೃದ್ಧವಾಗಿದೆ. ಒಂದು ರೀತಿಯಲ್ಲಿ ತಿರುಪತಿಯನ್ನು ಬಿಟ್ಟರೆ ಮಂತ್ರಾಲಯ ಪ್ರಮುಖ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಭಕ್ತರಿಗೆ ಕಿಂಚಿತ್ತೂ ಲೋಪ ಕಾಣದಂತೆ ಮಂತ್ರಾಲಯ ಕ್ಷೇತ್ರವನ್ನು ಸಿದ್ಧಗೊಳಿಸುವನಿಟ್ಟಿನಲ್ಲಿ ನಾವು ಹಲವಾರು ಯೋಜನೆಗಳನ್ನು ಸಮಯ ಮಿತಿಯಲ್ಲಿ ಕಾರ್ಯರೂಪಕ್ಕೆ ತರಲು ಸಂಕಲ್ಪಿಸಿದ್ದೇವೆ. ಎಲ್ಲವನ್ನೂ ಗುರುರಾಜರು ಸುಲಲಿತವಾಗಿ ನೆರವೇರಿಸುವರೆಂಬ ವಿಶ್ವಾಸ ಮತ್ತು ಅಪಾರ ನಂಬಿಕೆ ನಮಗಿದೆ.

ಭಕ್ತರ ಧ್ಯಾನ-ಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ಇನ್ನು ಮುಂದೆ ವಿವಿಧ ಪ್ರದೇಶಗಳಲ್ಲಿ ಶಾಖಾ ಮಠಗಳ ಮಾದರಿಯಲ್ಲಿ ಧ್ಯಾನ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ. ರಾಯರ ಅಂತರಂಗ ಭಕ್ತರು ಈಗಾಗಲೇ ಈ ಸೇವಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಇದರಿಂದಾಗಿ ರಾಯರ ಮತ್ತು ಭಕ್ತರ ನಡುವಿನ ಸಂಬಂಧ ಮತ್ತಷ್ಟು ಹತ್ತಿರವಾಗಲಿದೆ.

ಭವಿಷ್ಯದ ಮಂತ್ರಾಲಯ

- ಮಂತ್ರಾಲಯ ರಾಯಚೂರು ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀರಾಮಚಂದ್ರನ ಸನ್ನಿಧಾನ ಶೀಘ್ರದಲ್ಲಿ ಪೂರ್ಣಗೊಂಡು ಸದ್ಯದಲ್ಲೇ ಲೋಕಾರ್ಪಣೆಗೊಳ್ಳಲಿದೆ. ಇದರ ಸಮೀಪದಲ್ಲೇ ನೂರು ಎಕರೆ ಪ್ರದೇಶದಲ್ಲಿ ಬೃಹತ್ ಕೆರೆ ನಿರ್ಮಿಸಿ ಮಂತ್ರಾಲಯ ಮತ್ತು ಸುತ್ತಮುತ್ತಲ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ.
- ಭಕ್ತರಿಗೆ ಶೀಘ್ರ ಮತ್ತು ಅನಾಯಾಸ ದರ್ಶನಕ್ಕಾಗಿ ತಿರುಪತಿ ಮಾದರಿಯಲ್ಲಿ ಶಾಶ್ವತ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಲಾಗುತ್ತಿದೆ.
- ರಾಯರ ಬೃಂದಾವನ ಸನ್ನಿಧಾನದ ಹೊರ ಪ್ರಾಕಾರದ ಬಂಗಾರ ಕವಚ ಅಳಡಿಸುವ ಕೆಲಸ ಪ್ರಗತಿಯಲ್ಲಿದೆ.
- ಯಾತ್ರಾರ್ಥಿಗಳಿಗಳ ವಸತಿ ಸೌಲಭ್ಯಕ್ಕಾಗಿ ಶ್ರೀಮಠದವತಿಯಿಂದ ಒಂದು ಸಾವಿರ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಯೋಜನೆ ಕಾರ್ಯರೂಪದಲ್ಲಿದೆ.
- ಮಂಚಾಲಮ್ಮ ಗುಡಿಯ ಮುಂಭಾಗದಲ್ಲಿ ನಿರ್ಮಾಣಗೊಂಡಿರುವ ಪರಿಮಳ ತೀರ್ಥ ಕಲ್ಯಾಣಿಯಲ್ಲಿ ವಿಶೇಷ ದಿನಗಳಲ್ಲಿ ಗುರುರಾಜರ ತೆಪ್ಪೋತ್ಸವ ಭಕ್ತರ ಕಣ್ತುಂಬಿಸಲಿದೆ.
- ಮಂತ್ರಾಲಯ ಸಂಸ್ಕೃತ ಪಾಠಶಾಲೆಯಿಂದ ಸುಧಾಮಂಗಳ ಪೂರ್ಣಗೊಳಿಸಿದ ಯುವ ಪಂಡಿತರು ಶಾಸ್ತ್ರಪ್ರಚಾರದಲ್ಲಿ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಚಾರ.
- ಸುಮಾರು 15ಕೋಟಿ ರು.ಗಳಿಗೂ ಹೆಚ್ಚು ನಿರ್ಮಾಣ ವೆಚ್ಚದ ಮಂತ್ರಾಲಯ ಒಳಚರಂಡಿ ವ್ಯವಸ್ಥೆ ಯೋಜನೆ ಅಂತಿಮ ಹಂತದಲ್ಲಿದ್ದು ಅಕ್ಟೋಬರ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ.
- ಸುಮಾರು 300 ಹಾಸಿಗೆ ಸೌಲಭ್ಯವುಳ್ಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾರ್ಯ ಚಾಲನೆಗೊಂಡಿದೆ.

ನವ ಮಂತ್ರಾಲಯ ನಿರ್ಮಾಣ

(1ನೇ ಪುಟದಿಂದ)

ಧಾರ್ಮಿಕ ಕಾರ್ಯಗಳ ಜತೆಗೆ ರಾಯರ ಸನ್ನಿಧಿಗೆ ಬರುವ ಭಕ್ತರ ಆಕರ್ಷಣೆಗೂ ಪುಷ್ಕರಣಿ ಒಳಗಾಗಲಿದೆ. ಶ್ರೀ ಮಠದ ಸದಾ ಒಂದಿಲ್ಲೊಂದು ಹೊಸತನಕ್ಕೆ ಮುಂದಡಿ ಇಡುವ ಮೂಲಕ ಭಕ್ತರನ್ನು ಮತ್ತಷ್ಟು ಸೆಳೆಯಲು ಕಾರಣವಾಗಿದೆ.

ಟೊಂಕ ಕಟ್ಟಿ ನಿಂತ ಸ್ವಯಂ ಸೇವಕರ ತಂಡ

ಕರುಣೆಯ ಸಾಕಾರ ಮೂರ್ತಿ, ನಂಬಿ ಬಂದವರ ಕೈ ಹಿಡಿದು ಕಾಪಾಡುವ ಆರಾಧ್ಯ ದೈವ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆ ಇನ್ನೇನು ಆರಂಭಗೊಳ್ಳಲಿದೆ. ಆರಾಧನಾ ವೈಭವ ಕಣ್ತುಂಬಿಕೊಳ್ಳಲು ದೇಶದ ಮೂಲೆ ಮೂಲೆಯಿಂದಲೂ ಲಕ್ಷಾಂತರ ಭಕ್ತರು ಸಾಗರೋಪಾದಿಯಲ್ಲಿ ಮಂತ್ರಾಲಯಕ್ಕೆ ಹರಿದು ಬರಲಿದ್ದಾರೆ. ಬಂದ ಲಕ್ಷಾಂತರ ಜನ ಸಮೂಹಕ್ಕೆ ಕಿಂಚಿತ್ತು ಲವಲೇಶದ ಲೋಪವಿಲ್ಲದಂತೆ ಕೆಲಸ ನಿರ್ವಹಿಸುವ ಸ್ವಯಂ ಸೇವಕರ ತಂಡವೇ ಟೊಂಕಕಟ್ಟಿ ನಿಂತಿರುತ್ತದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಮಹಿಳೆಯರು ಸೇರಿದಂತೆ 1400 ಸ್ವಯಂ ಸೇವಕರು ಏಳು ದಿನಗಳ ಕಾಲ ನಡೆಯುವ ಆರಾಧನಾ ಮಹೋತ್ಸವದಲ್ಲಿ ಶ್ರೀ ಮಠದ ಸ್ವಚ್ಛತೆ, ಮಠದ ಸುತ್ತ ಸ್ವಚ್ಛತೆ ಮತ್ತು ಮಧ್ವ ಮಾರ್ಗದ ಶುಚಿತ್ವ ಕಾಪಾಡುತ್ತಾ, ಪರಿಮಳ ಪ್ರಸಾದ ಪ್ಯಾಕೇಟ್ ಸಿದ್ಧತೆ, ಅಡುಗೆ ಸಿದ್ಧತೆಗೆ ಸಹಕರಿಸುವುದು, ಭಕ್ತಾದಿಗಳಿಗೆ ಊಟ ಬಡಿಸುವುದು, ರಾಯರ ದರ್ಶನಕ್ಕೆ ಸರದಿ ಸಾಲಿನ ಸುವ್ಯವಸ್ಥೆ ಅನುಕ್ಷಣವು ಲೋಪವಾಗದಂತೆ ಸ್ವಯಂ ಸೇವಕರ ತಂಡಗಳು ಹಗಲಿರಳು ಎನ್ನದೆ ಕರ್ತವ್ಯ ನಿರ್ವಹಿಸಿ ರಾಯರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಇನ್ಫೋಸಿಸ್ ಮುಖ್ಯಸ್ಥೆ ಸುಧಾ ಮೂರ್ತಿ ಅವರಂತಹ ಮಹಾನ್ ವ್ಯಕ್ತಿಗಳು ಯಾವುದೇ ಹಮ್ಮುಬಿಮ್ಮು ಇಲ್ಲದೇ ಸಾಮಾನ್ಯ ಮಹಿಳೆಯಂತೆ ಆರಾಧನಾ ಮಹೋತ್ಸವದ ಸಂದರ್ಭದಲ್ಲಿ ಭಾಗಿಯಾಗುತ್ತಾರೆ. ಭಕ್ತರಿಗಾಗಿ ಅಡುಗೆ ಮಾಡುವಾಗ ತರಕಾರಿ ಹೆಚ್ಚುವ ಕಾರ್ಯ ಮಾಡುತ್ತಾ ತಮ್ಮ ಅಳಿಲು ಸೇವೆಯನ್ನು ಗುರು ಸಾರ್ವಭೌಮರಿಗೆ ಸಮರ್ಪಿಸಿ ಧನ್ಯತೆ ಅನುಭವಿಸುತ್ತಾ ಬರುತ್ತಿದ್ದಾರೆ. ಲೆಕ್ಕಕ್ಕೆ ಸಿಗದಂತೆ ಹಲವರು ಸ್ವಯಂ ಪ್ರೇರಿತರಾಗಿ ಶ್ರೀ ಮಠದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಂತಸ ಪಡುವ ದೃಶ್ಯ ಆರಾಧನಾ ಸಂದರ್ಭದಲ್ಲಿ ಕಾಣ ಸಿಗುತ್ತದೆ. ಲಕ್ಷಾಂತರ ಭಕ್ತ ಸಾಗರವೇ ಮಂತ್ರಾಲಯಕ್ಕೆ ಹರಿದು ಬಂದರೂ, ರಾಯರ ಅನುಗ್ರಹದಿಂದ ಯಾವುದೇ ಲೋಪಗಳಾಗದಂತೆ ಎಲ್ಲವು ಸೂಸುತ್ರವಾಗಿ ನೆರವೇರುತ್ತಲೇ ಬಂದಿವೆ.

37 ಅಡಿ ಎತ್ತರ ಅಭಯಾಂಜನೇಯ ಮೂರ್ತಿ ಪ್ರತಿಷ್ಠಾಪನೆ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು ಪ್ರಾಣ ದೇವರನ್ನು ಬಿಟ್ಟು ಇರಲಾರರು ಎಂಬ ಪ್ರತೀತಿ ಇದೆ. ರಾಯರಿದ್ದಲ್ಲಿ ಹನುಮನಿರಲೇಬೇಕು. ಹಾಗಾಗಿ ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು 37 ಅಡಿ ಎತ್ತರ ಅಭಯಾಂಜನೇಯ ಮೂರ್ತಿ ಪ್ರತಿಷ್ಠಾಪಿಸಿ, ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಮಂತ್ರಾಲಯವೆಂದರೆ ಕೇವಲ ಆಧ್ಯಾತ್ಮದ ನೆಲೆಯಾಗಿರದೆ, ಪ್ರವಾಸಿ ತಾಣವಾಗಿಯೂ ಜನಾಕರ್ಷಣೆಗೊಳಗಾಗಿದೆ. ನಿತ್ಯ ತನ್ನರಸಿ ಬರುವ ಭಕ್ತರ ಸಮಸ್ಯೆಗಳನ್ನು ಪರಿಹರಿಸೋ ಕರುಣಾಮಯಿ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ನಮಿಸಿ, ಪಡೆಯುವ ಭಕ್ತರು ನಂತರ ಪಂಚಮುಖಿ ಆಂಜನೇಯ ಮತ್ತು ಬಿಚ್ಚಾಲಿಯಲ್ಲಿ ರಾಯರ ತಪಗೈದ ಸ್ಥಳದ ದರ್ಶನ ಪಡೆಯುವುದು ಸಾಮಾನ್ಯವಾಗಿತ್ತು. ಆದರೆ ಇತ್ತೀಚೆಗೆ ಮಂತ್ರಾಲಯ ಹೊರವಲಯದ ಮಾಧವರಂ ರಸ್ತೆಯಲ್ಲಿ 5 ಕೋಟಿ ರು.ವೆಚ್ಚದಲ್ಲಿ 37 ಅಡಿ ಎತ್ತರದ ಅಭಯಾಂಜನೇಯ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, 50 ಅಡಿ ಎತ್ತರದ ದೇವಸ್ಥಾನ ನಿರ್ಮಿಸಿದ್ದಾರೆ. ರಾಯರ ಸನ್ನಿಧಿಗೆ ಬಂದ ಭಕ್ತರು ಇಲ್ಲಿಗೆ ಭೇಟಿ ನೀಡಿ ಆಂಜನೇಯಸ್ವಾಮಿ ಕೃಪೆಗೆ ಪಾತ್ರರಾಗುತ್ತಾರೆ. ಅಭಯಾಂಜನೇಯ್ಯ ಮೂರ್ತಿ ಎದುರಿಗೆ 41 ಅಡಿ ಎತ್ತರದ ಏಕ ಶಿಲೆಯಲ್ಲಿ ಶ್ರೀರಾಮಚಂದ್ರ ಮೂರ್ತಿಯನ್ನು ತರಲಾಗಿದ್ದು, ದೇವಸ್ಥಾನ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಇದಕ್ಕಾಗಿ 8 ಕೋಟಿ ರು.ವ್ಯಯಿಸಲು ಶ್ರೀಮಠ ಮುಂದಾಗಿದೆ. ಮಂತ್ರಾಲಯಕ್ಕೆ ಬರುವ ಜನತೆಗೆ ಭಕ್ತಿಯ ಜತೆಗೆ ಪ್ರವಾಸ ಖುಷಿ ಅನುಭವಿಸುವಂತಾಗಿದೆ.

ರಾಘವೇಂದ್ರ ತೀರ್ಥರ ರಥೋತ್ಸವ ವಿಶೇಷತೆ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಸಪ್ತ ರಾತ್ರೋತ್ಸವ ಆರನೇ ದಿನ ಮಹಾ ರಥೋತ್ಸವ ಜರುಗುತ್ತಾ ಬಂದಿದೆ. ರಥೋತ್ಸವ 1925 ನೇ ಇಸ್ವಿ 2025ಕ್ಕೆ ನೂರು ವರ್ಷಗಳ ಹಿಂದೆ ಮಹಾ ರಥೋತ್ಸವವನ್ನು ಆರಂಭಿಸಲಾಗಿದೆ. ಹಂಸನೆಂಬ ಪರಮಾತ್ಮನ ಅನುಸಂಧಾನ ಪ್ರಕಾರ ಶ್ರೀಮಠದ 49ನೇ ಪೀಠಾಧಿಪತಿ ಅಥವಾ ಮಧ್ವಾಚಾರ್ಯರ ಕಾಲದ ಲೆಕ್ಕದಲ್ಲಿ 34ನೇ ಪೀಠಾಧಿಪತಿಯಾಗಿದ್ದ ಸುಶೀಲೇಂದ್ರ ತೀರ್ಥರಿಂದ ಮಹಾರಥೋತ್ಸವ ಆರಂಭಗೊಂಡಿದೆ. ಮಹಾರಥವು 37 ಅಡಿ ಎತ್ತರದ ನಾಲ್ಕು ಚಕ್ರಗಳನ್ನು ಹೊಂದಿದ್ದು, ಸಾಗುವಾನಿ ಕಟ್ಟಿಗೆಯಲ್ಲಿ ಕೆತ್ತನೆ ಮಾಡಲಾಗಿದೆ.

ಸಾಮಾನ್ಯವಾಗಿ ರಥೋತ್ಸವ ಎಂಬುವುದು ದೇವತೆಗಳ ಉತ್ಸವ ಮತ್ತು ಜಾತ್ರೆಗಳಲ್ಲಿ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ರಥೋತ್ಸವವನ್ನ ಯತಿಗಳಾದ ರಾಘವೇಂದ್ರ ಸ್ವಾಮಿಗಳವರಿಗೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಎದುರಾಗುತ್ತದೆ. ಆಗ ಮಠದ ಪೀಠಾಧಿಪತಿಯಾಗಿದ್ದ ಸುಶೀಲೇಂದ್ರ ತೀರ್ಥರು ವಿದ್ವಾಂಸರ ಗೋಷ್ಠಿಯನ್ನ ಕರೆದು ಚರ್ಚಿಸಿದಾಗ ರಾಘವೇಂದ್ರ ಸ್ವಾಮಿಗಳ ರಥೋತ್ಸವ ಆರಂಭದ ಬಗ್ಗೆ ಹಲವು ಅಭಿಪ್ರಾಯಗಳು ಕೇಳಿ ಬಂದವು. ರಾಘವೇಂದ್ರ ಸ್ವಾಮಿಗಳು ಮೂಲತಃ ಶಂಕು ಕರ್ಣನೆಂಬ ಕರ್ಮಜ ದೇವತೆ ಅವರು ಬ್ರಹ್ಮದೇವರ ಆದೇಶದಂತೆ ಪ್ರಲ್ಹಾದ ರಾಜರಾಗಿ, ಬಾಲಿಕ್ಯ ರಾಜರಾಗಿ, ಶ್ರೀ ವ್ಯಾಸರಾಜರಾಗಿ ಅವತರಿಸಿ, ಕಟ್ಟ ಕಡೆಯದಾಗಿ ಶ್ರೀಮದ್ ರಾಘವೇಂದ್ರ ತೀರ್ಥರಾಗಿ ಅವತಾರ ಮಾಡಿದ್ದಾರೆ ಎಂಬ ಹಿನ್ನೆಲೆ ಇದೆ. ಕರ್ಮಜ ದೇವತೆಯೆ ಅನೇಕ ರೂಪಗಳನ್ನ ತೆಗೆದುಕೊಂಡು ಅವತರಿಸಿದ ಹಿನ್ನೆಲೆಯಲ್ಲಿ ಹಾಗೂ ನರಸಿಂಹ ದೇವರ ಭಕ್ತನಾಗಿ, ಪ್ರಲ್ಹಾದ ರಾಜನಾಗಿ ಅವತಾರಗೈದದಕ್ಕಾಗಿ ಪ್ರಲ್ಹಾದರಾಜರ ವಿಗ್ರಹ ಮಾಡಿ ಅದರಿಂದಲೇ ವಿವಿಧ ಉತ್ಸವಗಳನ್ನ ಮಾಡಲು ನಿಶ್ಚಯ ಮಾಡಿದರು.

ಅಂಗಪೂಜೆ

ಯಾವುದೇ ಸನ್ನಿಧಾನಕ್ಕೆ ಮೂರು ವಿಧವಾದ ಪೂಜೆಗಳಿರುತ್ತವೆ. ಅಂಗಪೂಜೆ, ರಂಗಪೂಜೆ ಮತ್ತು ವೈಭವ ಪೂಜೆಗಳಾಗಿದ್ದು, ಅಂಗಪೂಜೆ ಎಂಬುವುದು ಆಯಾ ದೇವರುಗಳ, ಗುರುಗಳ ಶರೀರಕ್ಕೆ ಮಾಡುವ ಪೂಜೆಯಾಗಿದೆ. ರಾಯರ ಶರೀರವೆಂದರೆ ಅವರ ಬೃಂದಾವನ ಅದನ್ನ ಮುಟ್ಟಿ ಪೂಜೆ ಮಾಡುವ ಅಧಿಕಾರ, ಪದ್ಧತಿ ಇವೆಲ್ಲವು ಕೇವಲ ಅವರ ಪೀಠದಲ್ಲಿ ಕುಳಿತಿರುವ ಶ್ರೀಗಳವರಿಗೆ ಮತ್ತು ಅವರಿಂದ ಆಜ್ಞೋತ್ತರರಾಗಿರುವ ಅರ್ಚಕರಿಗೆ ಮಾತ್ರ ಇರುತ್ತದೆ. ಹಾಗಾಗಿ ಅಂಗಪೂಜೆ ಮಾಡಲು ಎಲ್ಲರಿಗೂ ಅವಕಾಶ ವಿರುವುದಿಲ್ಲ.

ರಂಗಪೂಜೆ

ಇನ್ನೂ ರಂಗ ಪೂಜೆ ಎಂಬುವುದು ಒಂದು ನಿರ್ದಿಷ್ಟವಾದ ವೇದಿಕೆಗೆ ಉತ್ಸವ ಮೂರ್ತಿಗಳನ್ನ ಕರೆತಂದು ಸೇವಾ ಕರ್ತರುಗಳಿಂದ ಸೇವೆಯನ್ನು ಮಾಡಿಸುವ ಪಾದಪೂಜೆ, ಕನಕಾಭಿಷೇಕ, ಅರ್ಚನೆ ಇತ್ಯಾದಿಗಳು ಇರುತ್ತವೆ. ಇದು ಸೇವಾಕರ್ತರಿಗೆ ಮಾತ್ರ ಮೀಸಲಾಗಿದ್ದು, ಸಾರ್ವಜನಿಕರಿಗೆ ಅವಕಾಶವಿಲ್ಲ.

ವೈಭವ ಪೂಜೆ

ವೈಭವ ಪೂಜೆಯು ಸಾರ್ವಜನಿಕವಾಗಿ ಭಕ್ತರಿಗಾಗಿ ಭಕ್ತರಿಂದಲೇ ನಡೆಯುವ ಪೂಜೆಯಾಗಿರುತ್ತದೆ. ಪ್ರತಿ ನಿತ್ಯದಲ್ಲಿ ನಡೆಯುವ ರಥೋತ್ಸವಗಳಾಗಲಿ ಅಥವಾ ಆರಾಧನಾ ದಿನಗಳಲ್ಲಿ ನಡೆಯುವ ಮಹಾ ರಥೋತ್ಸವವಾಗಲಿ ಎಲ್ಲರಿಗೂ ಮುಕ್ತ ಅವಕಾಶವಿರುವ ಉತ್ಸವವಾಗಿರುತ್ತದೆ. ಅಂದು ಅಭಿಷೇಕಾಧಿಗಳು ಮುಗಿದ ನಂತರ, ಉತ್ಸವ ಮೂರ್ತಿಯನ್ನ ಅಲಂಕರಿಸಿ, ವಸಂತೋತ್ಸವ ಮುಂತಾದ ಪ್ರಕ್ರಿಯೆಗಳನ್ನ ಮುಗಿಸಿದ ನಂತರ ರಾಜಬೀದಿಗೆ ಉತ್ಸವ ಮೂರ್ತಿಯನ್ನ ಕರೆದು ತರುತ್ತಾರೆ. ಉತ್ಸವ ವಿಗ್ರಹವನ್ನ ರಥದಲ್ಲಿ ಪ್ರತಿಷ್ಠಾಪಿಸಿ ಶ್ರೀಗಳು ಭಕ್ತರಿಗೆ ಧಾರ್ಮಿಕ ಸಂದೇಶ ನೀಡಿ ಮಹಾ ಮಂಗಳಾರತಿ ಮಾಡಿ ರಥೋತ್ಸವಕ್ಕೆ ಚಾಲನೆ ನೀಡುತ್ತಾರೆ. ಲಕ್ಷಾಂತರ ಭಕ್ತರ ಜೈಕಾರದ ನಡುವೆ ರಥೋತ್ಸವ ಮಧ್ವ ಮಾರ್ಗದಲ್ಲಿ ಸಾಗಲಿದೆ.

ಕರೆದಲ್ಲಿಗೆ ಬರುವ ಗುರುವೆಂದರಿವರಯ್ಯ...

(1ನೇ ಪುಟದಿಂದ)

ಕವೀಂದ್ರತೀರ್ಥರ ನಂತರ ಅವರ ಶಿಷ್ಯರಾದ ವಾಗೀಶ ತೀರ್ಥರು, ರಾಮಚಂದ್ರತೀರ್ಥರು ಹೆಚ್ಚಾಗಿ ದಕ್ಷಿಣ ಮುಖವಾಗಿ ಸಂಚರಿಸಿದ್ದರಿಂದ ಆ ಪರಂಪರೆಯು ದಕ್ಷಿಣಾದಿ ಮಠವೆಂದು ಪ್ರಸಿದ್ಧಿ ಪಡೆಯಿತು. 15ನೇ ಶತಮಾನದಲ್ಲಿ ರಾಮಚಂದ್ರತೀರ್ಥರ ನಂತರ ಅವರ ನೇರ ಶಿಷ್ಯರಾದ ವಿಭುದೇಂದ್ರತೀರ್ಥರು ಮೊದಲಬಾರಿಗೆ ದ್ವೈತ ಸಿದ್ಧಾಂತ ವನ್ನು ಭಾರತ ದೇಶದ ಉದ್ದಗಲಕ್ಕೂ ಪರಿಚಯಿಸಿದ ಕೀರ್ತಿಶಾಲಿಗಳು. ಕಾಶಿ, ಹಿಮಾಲಯ, ನವದ್ವೀಪ, ಮುಂತಾದ ವಿದ್ಯಾ ಕ್ಷೇತ್ರಗಳಲ್ಲಿ ಆ ಕಾಲದ ಉತ್ಕೃಷ್ಟ ವಿದ್ವಾಂಸರ ಮುಂದೆ ದ್ವೈತ ಸಿದ್ಧಾಂತವನ್ನು ಮಂಡಿಸಿ ಎಲ್ಲರಿಂದಲೂ ಮಾನ್ಯತೆಯನ್ನು ಪಡೆದವರು. ವಿಭುದೇಂದ್ರತೀರ್ಥರು ದ್ವೈತ ಸಿದ್ಧಾಂತಕ್ಕೆ ಬೇಕಾದ ಶಾಸ್ತ್ರೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಮನ್ನಣೆಗಳನ್ನು ಕಲ್ಪಿಸಿ ಭದ್ರ ಬುನಾದಿಯನ್ನು ಹಾಕಿಕೊಟ್ಟರು. ವಿಭುದೇಂದ್ರತೀರ್ಥರಿಂದ ಹೊರಟ ವಿದ್ಯಾ ಪರಂಪರೆಯು ಬ್ರಹ್ಮಣ್ಯತೀರ್ಥರು, ವಿಷ್ಣುದಾಸಾಚಾರ್ಯರು, ಶ್ರೀಪಾದರಾಜರು, ಅವರ ಮೂಲಕ ವ್ಯಾಸರಾಜರು, ವಿಜಯೀಂದ್ರತೀರ್ಥರು,ವಾದಿರಾಜರು, ಸುಧೀಂದ್ರತೀರ್ಥರ ಮುಖಾಂತರ ರಾಘವೇಂದ್ರತೀರ್ಥರಲ್ಲಿ ತಲುಪಿ ಅವರಿಂದ ಸಿದ್ಧಾಂತವು ಘನೀಕೃತಗೊಂಡಿತು. ಇವರ ಸಾಧನೆಯೇ ದ್ವೈತ ಸಿದ್ಧಾಂತದ ಉತ್ಕೃಷ್ಟತೆಗೆ ಕಾರಣೀಭೂತವಾದ ಕಾರಣ ದಕ್ಷಿಣಾದಿಮಠವು ವಿದ್ಯಾಮಠವೆಂದೇ ವಿಖ್ಯಾತಗೊಂಡಿತು. ಇವರ ಕಾಲದಲ್ಲಿ ದ್ವೈತ ಮಠ ಪರಂಪರಾ ವ್ಯವಸ್ಥೆಯಲ್ಲಿ ವಿದ್ಯಾನಿಧಿತೀರ್ಥರಿಂದ ಇನ್ನೊಂದು ಕವಲು ಪ್ರಚಲಿತಕ್ಕೆ ಬಂದು ಮುಂದೆ ಉತ್ತರಾಧಿಮಠವೆಂದು ಖ್ಯಾತವಾಯಿತು.

ವಿಭುದೇಂದ್ರತೀರ್ಥರ ತರುವಾಯ ಜಿತಾಮಿತ್ರತೀರ್ಥರು, ರಘುನಂದನತೀರ್ಥರು, ಸುರೇಂದ್ರತೀರ್ಥರು ದಕ್ಷಿಣಾದಿ ಪರಂಪರೆಯನ್ನು ಮುಂದುವರೆಸಿದರು. ರಘುನಂದನತೀರ್ಥರು ಕೈತಪ್ಪಿದ್ದ ಮೂಲರಾಮಚಂದ್ರ ಮೂರ್ತಿಯನ್ನು ಮರಳಿ ಪರಂಪರೆಯ ಉಪಾಸ್ಯ ಮೂರ್ತಿಯಾಗಿ ಪುನರ್ನಿಯುಕ್ತಿಗೊಳಿಸಿದರು.

ಸುರೇಂದ್ರತೀರ್ಥರ ನಂತರ 16ನೇ ಶತಮಾನದಲ್ಲಿ ದಕ್ಷಿಣಾದಿ ಕವೀಂದ್ರತೀರ್ಥ ಪರಂಪರೆಯನ್ನು ಅಲಂಕರಿಸಿ ಕುಂಭಕೋಣ ನಗರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು 64 ವಿದ್ಯೆಯಲ್ಲಿ ನಿಷ್ಣಾತರಾಗಿ, 104 ಗ್ರಂಥಗಳ ಕರ್ತೃಗಳಾಗಿ ಖ್ಯಾತರಾದವರು ಶ್ರೀವಿಜಯೀಂದ್ರತೀರ್ಥರು. ಈ ಕಾಲಘಟ್ಟವು ಸಹ ಸಾಮಾಜಿಕ,ರಾಜಕೀಯವಾಗಿ ಹಲವಾರು ಬದಲಾವಣೆಗಳನ್ನು ಕಂಡಂತಹ ಸಮಯ. ವಿಜಯನಗರದ ಅವನತಿಯ ಜತೆಗೆ ಹಲವಾರು ಕವಲುಗಳನ್ನೊಳಗೊಂಡ ದ್ವೈತ ಸಿದ್ಧಾಂತವು ವಿದ್ವಾಂಸ ಮಂಡಳಿಗಳಲ್ಲಿ ಅಗ್ನಿ ಪರೀಕ್ಷೆಗೆ ಒಳಪಟ್ಟು ಎಲ್ಲೆಡೆಯಿಂದ ವೈರುಧ್ಯ ,ವಿಮರ್ಶೆ,ಆಪಾದನೆ ಮತ್ತು ಕುಹಕಗಳನ್ನುಎದುರಿಸಿದ ಸಂದಿಗ್ಧ ಸಮಯ. ಈ ತಾತ್ವಿಕ ದಾಳಿಗಳನ್ನು ಚಾತುರ್ಯದಿಂದ ಸಮರ್ಥವಾಗಿ ಎದುರಿಸಿ ದ್ವೈತ ಸಿದ್ಧಾಂತವನ್ನಲ್ಲದೆ ಸನಾತನ ಸಂಪ್ರದಾಯಗಳನ್ನು ಸಂರಕ್ಷಿಸಿ ಕುಂಭಕೋಣಾಧೀಶರೆಂದು, ಅಜೇಯರೆಂದು ಘೋಷಿತರಾದ ಮಹಾನ್ ಕೀರ್ತಿವಂತರು ಹಾಗೂ ಜಗದ್ವಂದ್ಯರು ಶ್ರೀವಿಜಯೇಂದ್ರತೀರ್ಥರು. ಹಾಗಾಗಿ ವಿದ್ಯಾಮಠವು ಶ್ರೀವಿಜಯೀಂದ್ರ ಮಠವೆಂದು ಪ್ರಚಲಿತವಾಯಿತು.

ವಿಜಯೇಂದ್ರತೀರ್ಥರ ನಂತರ ಸುಧೀಂದ್ರತೀರ್ಥರು ದಕ್ಷಿಣಾದಿ ಪರಂಪರೆಯನ್ನಲಂಕರಿಸಿ ತಮ್ಮ ಗುರುಗಳಂತೆ ಸಮಾಜಮುಖಿಯಾಗಿ ರಾಜರುಗಳ ಮನ್ನಣೆಯನ್ನು ಸ್ವೀಕರಿಸಿ ಹರಿತತ್ತ್ವವನ್ನು ಸಾರುವ ಕಾರ್ಯ ಮುಂದುವರೆಸಿದರು. ಭಾರತೀಯ ತತ್ತ್ವ ಪ್ರಪಂಚಕ್ಕೆ ಸುಧೀಂದ್ರತೀರ್ಥರು ನೀಡಿದ ಅತ್ಯುತ್ಕೃಷ್ಟ ಕೊಡುಗೆಯೇ ರಾಘವೇಂದ್ರತೀರ್ಥರು.

ಕಿರಿಯ ಪ್ರಾಯದಲ್ಲೇ ವೆಂಕಟನಾಥರ ಪ್ರತಿಭೆಯನ್ನು ಗುರುತಿಸಿ ತಮ್ಮ ಗುರುಗಳಿಂದ ಪ್ರೇರಿತವಾದ ಸಕಲ ವಿದ್ಯೆಯನ್ನು ಧಾರೆಯೆರೆದು ಸಾಧ್ಯ ಸಾಧನ ಉಪಾಯಗಳನ್ನು ತಿಳಿಸಿ, ವ್ಯಕ್ತಿತ್ವದ ವಿಕಸನಕ್ಕೆ ಬೇಕಾದ ವೈರಾಗ್ಯವನ್ನು ಅಂಕುರಾರ್ಪಣ ಮಾಡಿ, ವೆಂಕಟನಾಥರಿಗೆ ಸನ್ಯಾಸದೀಕ್ಷೆ ಕೊಟ್ಟು ರಾಘವೇಂದ್ರತೀರ್ಥರೆಂದು ಅಭಿದಾನನೀಡಿ ತಮ್ಮ ಸ್ಥಾನವನ್ನೇ ಕೊಟ್ಟು ದಕ್ಷಿಣಾದಿ ಕವೀಂದ್ರ ಪರಂಪರೆಯ ಪೀಠಾಧಿಪತಿಯನ್ನಾಗಿ ನಿಯಮಿಸಿ ಸಮಾಜದ ಉದ್ಧಾರಕ್ಕೆ ಕಟ್ಟಿಹಾಕಿದ ಕ್ಷಣ ಭಾರತೀಯ ತತ್ತ್ವ ಇತಿಹಾಸದ ಇನ್ನೊಂದು ಪುಟವನ್ನೇ ತೆರೆಯಿತು. ಭಾರತೀಯ ಸನಾತನ ಧರ್ಮದ ಮೂಲ ಸೆಲೆಯಾದ ಅಧ್ಯಾತ್ಮ ಸಂಪತ್ತನ್ನು ಹಂಚುವ ಕಾರ್ಯದಲ್ಲಿ ತೊಡಗಿಸಿದರು.

ಭಾರತ ದೇಶದ ಅಧ್ಯಾತ್ಮ ಇತಿಹಾಸವೇ ಹಾಗೆ. ಕಾಲಕಾಲಕ್ಕೆ ಮಹಾತ್ಮರ ಅವತಾರವಾಗಿ ಅವರು ತಮ್ಮ ತಪಸ್ಸಿನ ಮೂಲಕ ಅಧ್ಯಾತ್ಮ ಸಂಪತ್ತನ್ನು ವೃದ್ಧಿ ಗೊಳಿಸಿದರೆ, ಕೆಲವು ಅವತಾರ ಪುರುಷರು ವೃದ್ಧಿಯಾದ ಸಂಪತ್ತನ್ನು ತ್ಯಾಗದ ಮೂಲಕ ಸಮಾಜದಲ್ಲಿ ಹಂಚುವ ಕಾರ್ಯವನ್ನು ನಿರಂತರವಾಗಿ ನಡೆಸಿರುವುದು ಸನಾತನ ಅಧ್ಯಾತ್ಮ ವ್ಯವಸ್ಥೆಯ ಭಾಗವೇ ಆಗಿದೆ. ಮೊದಲನೆಯ ವರ್ಗಕ್ಕೆ ಸೇರಿದ ಮಹನೀಯರು ನಿವೃತ್ತಿ ಮಾರ್ಗವನ್ನು ಹಿಡಿದು ಹಿಮಾಲಯ ಮುಂತಾದ ನಿರ್ಜನ ಪ್ರದೇಶಗಳಲ್ಲಿ ವಿಶೇಷ ಸಾಧನೆಗೈದರೆ, ಎರಡನೇ ವರ್ಗದ ಅವತಾರ ಪುರುಷರು ಪ್ರವೃತ್ತಿ ಮಾರ್ಗವನ್ನು ಅನುಸರಿಸಿ ಸಮಾಜದಲ್ಲಿ ಸಮತೋಲನ ಕಾಯುವ ಕಾರ್ಯದಲ್ಲಿ ತೊಡಗುವುದು ವಿಶೇಷ. ಆ ಹಿನ್ನೆಲೆಯಲ್ಲಿ ಸುಧೀಂದ್ರತೀರ್ಥರಂತಹ ಗುರುವಿನ ಮಾರ್ಗದರ್ಶನ ಮತ್ತು ಕರ್ತವ್ಯವು ಅತ್ಯವಶ್ಯಕ.

ಶ್ರೀರಾಘವೇಂದ್ರತೀರ್ಥರ ಕಾಲಘಟ್ಟ :

17ನೇ ಶತಮಾನದಂಚಿನಲ್ಲಿ (ಕ್ರಿಶ 1595) ತಿರುಪತಿ ಶ್ರೀವೆಂಕಟೇಶ್ವರನ ವರಪ್ರಸಾದದಿಂದ ತಮಿಳುನಾಡಿನ ಕಾವೇರಿ ತೀರದ ಭುವನಗಿರಿ ಗ್ರಾಮದಲ್ಲಿ ಷಾಷ್ಠಿಕ ಮನೆತನದ ಬೀಗಮುದ್ರಾ ಮನೆತನದಲ್ಲಿ ಜನಿಸಿ, ವೆಂಕಟನಾಥ ಭಟ್ಟರೆಂಬ ನಾಮಧೇಯದಿಂದ ಅಂದಿನ ಶ್ರೇಷ್ಠ ವಿದ್ಯಾಕೇಂದ್ರಗಳಾದ ತಂಜಾವೂರು, ಕುಂಭಕೋಣಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಅಧ್ಯಯನವನ್ನು ಕೈಗೊಂಡು, ತಮ್ಮ ಮನೆತನದ ಪಾರಂಪರಿಕ ವಿದ್ಯೆಯಾದ ವೀಣಾ ಪರಿಣಿತಿಯನ್ನು ಹೊಂದಿ, ಅಸಾಧಾರಣ ತೇಜಸ್ಸಿನಿಂದ ಕುಡಿದವರಾಗಿ ವಿದ್ವತ್ ಸಭೆಗಳಲ್ಲಿ ಪ್ರೌಢ ವಾಕ್ಯಾರ್ಥಗಳಲ್ಲಿ ಪಾಲ್ಗೊಂಡು ಸಜ್ಜನರ ಪ್ರೀತಿ - ಗೌರವವನ್ನು ಸಂಪಾದಿಸಿ, ಷಾಷ್ಠಿಕ ಚಿನ್ನಬಂಡಾರಿ ಮನೆತನದ ಸಾಧ್ವಿಮಣಿ ಸರಸ್ವತಮ್ಮನವರನ್ನು ವರಿಸಿ ಗೃಹಸ್ಥ ಜೀವನದಲ್ಲಿನ ಸುಖ ದುಃಖಗಳ ಬಿರುಗಾಳಿಯನ್ನು ಶಾಂತವಾಗಿ, ಸಮಚಿತ್ತತೆಯಿಂದ ಸ್ವೀಕರಿಸಿ ಸಂತೃಪ್ತ ಜೀವನ ನಡೆಸಿದ ರೀತಿಯು ಸಮಸ್ತ ಗೃಹಸ್ಥರಿಗೆ ಆಚರಣೀಯ ಮಾದರಿಯೇ ಸರಿ.

ಈ ಸಂಧಿಸಮಯದಲ್ಲಿ ಸುಧೀಂದ್ರತೀರ್ಥರು ತಮ್ಮ ಉತ್ತರಾಧಿಕಾರಿಯ ಆಯ್ಕೆಯಲ್ಲಿದ್ದಾಗ ಅವರ ದೃಷ್ಟಿಯಲ್ಲಿ ಬಂದು, ವಾಗ್ದೇವತೆಯ ಪ್ರೇರಣೆಯೊಂದಿಗೆ, ಪ್ರಿಯ ಪತ್ನಿ ಸರಸ್ವತಮ್ಮನವರ ಅನುಮತಿಯೊಂದಿಗೆ 26ರ ಪ್ರಾಯದಲ್ಲೇ (ಕ್ರಿ.ಶ 1621 ರಲ್ಲಿ) ಗೃಹಸ್ಥಾಶ್ರಮವನ್ನು ತ್ಯಜಿಸಿ ಸುಧೀಂದ್ರತೀರ್ಥರಿಂದ ಸನ್ಯಾಸಾಶ್ರಮವನ್ನು ಪಡೆದು ಶ್ರೀಮದಾಚಾರ್ಯರ ಹಂಸನಾಮಕ ಪೀಠದ ಶ್ರೀ ಕವೀಂದ್ರತೀರ್ಥರ ಮೂಲ ಪರಂಪರೆಯ ಉತ್ತರಾಧಿಕಾರಿಗಳಾಗಿ ನಿಯುಕ್ತರಾದರು. ಗುರುಗಳ ಸೇವೆ ಮತ್ತು ಉಪದೇಶಗಳ ಅನುಷ್ಠಾನತತ್ಪರರಾದರು.

ನೂತನ ಯತಿಗಳೊಂದಿಗೆ ಸುಧೀಂದ್ರತೀರ್ಥರು ಸಂಚಾರದಲ್ಲಿ ತೊಡಗಿ ತಮ್ಮ ಪರಂಪರೆಯ ಮೂಲ ಸ್ಥಳವಾದ ವಿಜಯನಗರ ಪ್ರಾಂತವನ್ನು ತಲುಪಿ ಅಲ್ಲಿ ನೆಲೆಸಿರುವ ಪೂರ್ವ ಯತಿಗಳ ಬೃಂದಾವನಗಳನ್ನು ಸಂದರ್ಶಿಸಿದರು ಹಾಗು ಅಲ್ಲಿರುವ ಮಠದ ಸಂಪನ್ಮೂಲಗಳನ್ನು ಶಿಷ್ಯ ಸಮುದಾಯಕ್ಕೆ ನೂತನ ಪೀಠಾಧಿಪತಿಗಳನ್ನು ಪರಿಚಯಿಸಿ ಹಿತೋಪದೇಶಗಳನ್ನು ಅನುಗ್ರಹಿಸುವ ಸಮಯದಲ್ಲಿ ಸುಧೀಂದ್ರತೀರ್ಥರು ವಯೋಸಹಜದಿಂದ ದೇಹಾಲಸ್ಯಗೊಂಡು ತಮ್ಮ ಅಂತೇವಾಸಿಗಳಾದ ರಾಘವೇಂದ್ರತೀರ್ಥರಿಗೆ ಪರಂಪರಾ ಪ್ರಾಪ್ತವಾದ ಮಠದ ಸಕಲ ಸಂಪನ್ಮೂಲವನ್ನು ಹಸ್ತಾಂತರಿಸಿ, ಪೀಠಾಧಿಪತ್ಯವನ್ನು ನೀಡಿ ಕೊನೆಯ ಉಪದೇಶವೇಶವನ್ನು ಮಾಡಿ ತಮ್ಮ ಪರಂಪರೆಯ ಮೂಲ ಯತಿಗಳಾದ ಪದ್ಮನಾಭತೀರ್ಥರ ಸಹಿತ ಅಷ್ಟಯತಿಗಳ ಬೃಂದಾವನ ಸನ್ನಿಧಾನವಾಗಿದ್ದ ಆನೆಗೊಂದಿ ಸಮೀಪದ ನಡುಗಡ್ಡೆಯಲ್ಲಿ ಹರಿಪಾದವನ್ನೈದರು.

ರಾಘವೇಂದ್ರತೀರ್ಥರು ತಮ್ಮ ಗುರುಗಳ ಬೃಂದಾವನವನ್ನು 8 ಮಧ್ವ ಸಿದ್ಧಾಂತ ದಿಗ್ಗಜ ಯತಿ ಶ್ರೇಷ್ಠರ ನಡುವೆ 9ನೇಯ ಬೃಂದಾವನವಾಗಿ ಪ್ರತಿಷ್ಠಾಪನೆಗೊಳಿಸಿ ಸಂಪ್ರದಾಯ ರೀತ್ಯ ಪೂಜಾರಾಧನೆಯನ್ನು ನೆರವೇರಿಸಿ ತಮ್ಮ ಗುರುಗಳ ಗುಣಸಾಧನೆಯನ್ನು ಚರಮಶ್ಲೋಕದ ಮೂಲಕ ಸ್ಮರಿಸಿದರು. ಈ ಮೂಲಕವಾಗಿ ನಡುಗಡ್ಡೆಯು ಮುಂದಿನ ದಿನಗಳಲ್ಲಿದ್ದ'ನವಬೃಂದಾವನ' ವೆಂದೇ ಪ್ರಚಲಿತವಾಯಿತು.

ತಮ್ಮ ಗುರುಗಳು ಮತ್ತು ಪರಮಗುರುಗಳಂತೆ ಕುಂಭಕೋಣವನ್ನು ಕೇಂದ್ರವಾಗಿಸಿಕೊಂಡು ತಮ್ಮ ಆಶ್ರಮ ವಿಹಿತವಾದ ಸಂಕಲ್ಪಪೂರ್ವಕ ನಿತ್ಯ ನೈಮಿತ್ತಿಕ ಕಾರ್ಯಗಳಲ್ಲಿ ಸಮರ್ಪಣಾ ಭಾವದಿಂದ ತೊಡಗಿ, ತಮ್ಮ ಸಿಬ್ಬಂದಿ ಬಾಂಧವರಿಂದಲೂ ಶ್ರೀಹರಿ ಪ್ರೀತಿಗಳಿಕೆಯ ಕಾರ್ಯಗಳನ್ನು ಮಾಡಿಸಿ ಭಗವಂತನಿಗೆ ಸಮರ್ಪಿಸುವುದು ಶ್ರೀಗಳ ಮೊದಲ ಆದ್ಯತೆ. ವಿದ್ಯಾಪೀಠದಲ್ಲಿ ವಿಶೇಷ ವಿದ್ಯಾ ಪ್ರಸರಣ ಕಾರ್ಯವನ್ನು ಎಡಬಿಡದೆ ನಡೆಸಿ ಸುಮತೀಂದ್ರತೀರ್ಥರು, ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು, ಅಪ್ಪಣ್ಣಾಚಾರ್ಯರಂಥಹ ಅನೇಕ ಸನ್ಯಾಸ ಹಾಗು ಗೃಹಸ್ಥ ಪಂಡಿತ ರತ್ನಗಳನ್ನು ವಿದ್ಯಾ ಪ್ರಪಂಚಕ್ಕೆ ನೀಡಿ ವಿದ್ಯಾ ಪರಂಪರೆಯನ್ನು ಮುಂದುವರೆಸಿದರು. ಜತೆಯಲ್ಲಿ ನಿರಂತರ ಗ್ರಂಥರಚನಾ ಕಾರ್ಯವನ್ನು ನಡೆಸಿ ವಿದ್ವದ್ ಗೋಷ್ಠಿಗಳು, ಖಂಡನಾ ಮಂಡನೆಗಳು, ಚರ್ಚೆ, ಪಂಡಿತ ಘೋಷಣೆ ಮುಂತಾದವು ಎಡಬಿಡದೆ ಸಾಗಿದವು.

ಸಂಚಾರತ್ವೇನ ಮಧುರೈ, ತಂಜಾವೂರು, ಮೈಸೂರು, ಮಲಬಾರ್ , ಮರಾಠ ಮೊದಲಾದ ರಾಜ್ಯಗಳಲ್ಲಿನ ಪ್ರಮುಖ ಕ್ಷೇತ್ರಗಳನ್ನು ಸಂದರ್ಶಿಸಿ, ಚಾತುರ್ಮಾಸಾದಿ ವ್ರತಗಳನ್ನು ಕೈಗೊಂಡು ಶಿಷ್ಯ ಮತ್ತು ಭಕ್ತ ವರ್ಗಕ್ಕೆ ಯತೋಚಿತ ಉಪದೇಶ ನೀಡುತ್ತಾ, ಅರ್ಥಿಗಳಾಗಿ ಬಂದವರಿಗೆ ಕಾರುಣ್ಯ ಪೂರಕ ಸಾಂತ್ವನ ಮತ್ತು ಅನುಗ್ರಹ ನೀಡುತ್ತಾ ಅನೇಕ ಮಹಿಮೆಗಳನ್ನು ತೋರಿದರು. ರಾಜರುಗಳಿಂದ ಸನ್ಮಾನಗಳನ್ನು ಸ್ವೀಕರಿಸಿ ಸಮಾಜಮುಖಿಯಾಗಿ ಸರ್ವೋತೋಮುಖ ಅಭಿವೃದ್ಧಿಯನ್ನು ಮುಂದುವರೆಸಿದರು. ಉಡುಪಿ, ನಂಜನಗೂಡು ಮತ್ತು ಕಪಿಲೆಯ ಸೊಗಸು ಶ್ರೀಗಳ ವಿಶೇಷ ಗಮನ ಸೆಳೆದ ಕ್ಷೇತ್ರಗಳು.

ಶ್ರೀ ರಾಘವೇಂದ್ರತೀರ್ಥರು ತಾವು ರಚಿಸಿದ ಸುಮಾರು 45 ದೀರ್ಘ ಕೃತಿಗಳಲ್ಲಿ ಸಿಂಹಭಾಗವನ್ನು ತಮ್ಮ ಪೂರ್ವಾಚಾರ್ಯರುಗಳು ರಚಿಸಿದ ಗ್ರಂಥ ರಾಶಿಗಳ ಅಂತರಂಗವನ್ನು ತೆರೆದು ತಿಳಿಗೊಳಿಸಿ ಕ್ರೋಢೀಕರಣಕ್ಕೆ ಮೀಸಲಿಟ್ಟವರು. ಅವರ ಸ್ವತಂತ್ರ ಗ್ರಂಥಗಳು ಅತ್ಯಲ್ಪ, ಆದರೆ ಕೊಟ್ಟ ಉಪದೇಶಗಳು ಉಪನಿ ಷತ್ ಸಂದೇಶದಂತೆ ಅತ್ಯುತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಬಲ್ಲಷ್ಟು ಮೌಲ್ಯಯುತವಾದದ್ದು.

ಜಯತೀರ್ಥರ ನಂತರದ ಸುಮಾರು 250 ವರ್ಷಗಳ ಕಾಲ ದ್ವೈತ ಸಿದ್ಧಾಂತವು ಅನೇಕ ಕವಲುಗಳಲ್ಲಿ ಹರಿದು ಸಿದ್ಧಾಂತದಲ್ಲಿ ಅನೇಕ ಪ್ರಕ್ರಿಯೆಗಳಿಗೆ ಸಹಜವಾಗಿ ಅಭಿಪ್ರಾಯಬೇಧಗಳು ಅಥವಾ ಭಿನ್ನಾರ್ಥಗಳು ಕಾಣಿಸಿ ನಿಖರವಾದ ತತ್ತ್ವಾರ್ಥ ನಿಲುಕದಾದ ಸಂದರ್ಭವನ್ನು ಮನಗಂಡು ಅಂದಿನ ಹಂತದಲ್ಲಿ ಇದ್ದ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಶ್ರೀಮದಾಚಾರ್ಯರ ಹಾಗೂ ಜಯತೀರ್ಥರ ಹೃದಯಾಂತರ್ಯವನ್ನು ನಿಖರವಾಗಿ ತಿಳಿಸುವ ವಿಸ್ತೃತವಾದ ಕೌಶಲ್ಯಪೂರ್ಣ ಗ್ರಂಥ ರಚನೆಯನ್ನು ಕೈಗೊಂಡು ತನ್ಮೂಲಕ ಸರಳತೆಯಿಂದ ಕೂಡಿದ ದ್ವೈತ ಸಿದ್ಧಾಂತವೆಂಬ ಹೆಮ್ಮರದಲ್ಲಿ ಸಜ್ಜನರು ಫಲವನ್ನು ಕಾಣುವಂತೆ ಮಾಡಿದ್ದು ಮತ್ತೊಂದು ಮಹಾನ್ ಕೊಡುಗೆ. ಹಾಗಾಗಿ ಶ್ರೀ ವಾದೀಂದ್ರತೀರ್ಥರು ತಮ್ಮ ಗುರುಗುಣಸ್ತವನ ಸ್ತೋತ್ರದಲ್ಲಿ ರಾಯರನ್ನು ಹೃದಯತುಂಬಿ ಸ್ತುತಿಸಿದ್ದಾರೆ.

ಮುಂದಿನ ಸುಮಾರು 50 ವರ್ಷಗಳು ಸನ್ಯಸ್ತರಾಗಿ ಶ್ರೀ ರಾಘವೇಂದ್ರರು ಸಮರ್ಪಣಾಭಾವದಿಂದ ಅಧ್ಯಯನ ಪ್ರಾಧ್ಯಾಪನಗಳನ್ನು, ವ್ರತ ನಿಯಮಗಳನ್ನು ಸರಿ ತೂಕದಲ್ಲಿ ನಡೆಸಿ, ಪೀಠಾಧಿಪತಿಗಳಾಗಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜತೆಗೆ ಸಮಾಜದ ಡೊಂಕುಗಳನ್ನು ಸರಿಪಡಿಸುವಲ್ಲಿ ಪ್ರವೃತ್ತರಾಗಿ ಸಮಯೋಚಿತ ಉಪದೇಶಗಳನ್ನು ನೀಡಿದರು. ಅರ್ಥಿಗಳಿಗೆ ಸಂದರ್ಭಯೋಚಿತ ಅನುಗ್ರಹವನ್ನು ನೀಡಿ ಭಗವದ್ ಪ್ರಸಾದ ಪೂರ್ವಕವಾಗಿ ಸ್ವರೂಪಾನಂದದಲ್ಲಿದ್ದು ಪಕ್ವಗೊಂಡರು. ಭಗವಂತನ ಸೂಚನೆಯಂತೆ ಸಮಾಜದಿಂದ ವಿಮುಖಗೊಂಡು ಪರಮ ವೈರಾಗ್ಯ ಶಾಲಿಗಳಾಗಿ ದೇಹಾಭಿಮಾನವನ್ನು ಸಂಪೂರ್ಣವಾಗಿ ತೊರೆದರು. ಯೋಗ ಸಾಧನೆಯ ಉತ್ಕೃಷ್ಟ ವಿಧಿಯಾದ ಸಮಾಧಿಸ್ಥಿತ ತಪಸ್ಸನ್ನು ಮುಂದುವರಿಸುವ ನಿರ್ಧಾರ ಕೈಗೊಂಡರು. ಅದಕ್ಕೆ ಬೇಕಾದ ಸಿದ್ಧತೆಗಾಗಿ ಮಂತ್ರಾಲಯವನ್ನು ತಮ್ಮ ತಪಃ ಕ್ಷೇತ್ರವನ್ನಾಗಿಸಿಕೊಂಡು, ಯೋಗೀಂದ್ರತೀರ್ಥರಿಗೆ ಪೀಠಾಧಿಪತ್ಯವನ್ನು ವಹಿಸಿ, ತಾವೇ ಸಿದ್ಧಗೊಳಿಸಿದ ಬೃಂದಾವನವನ್ನು 1672ನೇ ಶ್ರಾವಣ ಬಹುಳ ದ್ವಿತೀಯ ದಿನದಂದು ಪ್ರವೇಶಿಸಿ ಸಮಾಧಿಸ್ಥಿತರಾಗಿ ಮಂತ್ರಾಲಯಪ್ರಭುಗಳೆನಿಸಿ ಇಂದಿಗೂ ಸಶರೀರರಾಗಿ ಖ್ಯಾತಿವಂತರಾಗಿದ್ದಾರೆ.

ಮುಂದೆ ಬೃಂದಾವನದಲ್ಲಿ ನೆಲೆಸಿ ಸುಮಾರು 350 ವರ್ಷಗಳು ಕಳೆದರೂ ಕೋಟ್ಯಂತರ ಅರ್ಥಿಗಳಿಗೆ, ಜಿಜ್ಞಾಸುಗಳಿಗೆ ಆಧಾರವಾಗಿದ್ದು ಉದ್ಧರಿಸುವ ಲೋಕ ಗುರುವಾಗಿ, ಕರೆದಲ್ಲಿಗೆ ಬರುವ, ಬಂದಲ್ಲಿ ಕಷ್ಟ ನೀಗುವ, ಇಷ್ಟಾರ್ಥಗಳನ್ನು ನೆರವೇರಿಸುವ, ಕಾರುಣ್ಯ ಮೂರ್ತಿಯಾಗಿ ಜನಮಾನಸದಲ್ಲಿ ನೆಲೆಸಿ, ವಿಶ್ವದೆಲ್ಲೆಡೆ ಲೋಕೋದ್ಧಾರಕರೆಂದೇ ಮನೆ-ಮನಗಳಲ್ಲಿ ನೆಲೆಯಾಗಿದ್ದಾರೆ. ರಾಘವೇಂದ್ರರ ಅಪಾರ ಖ್ಯಾತಿಗೆ ಅನುಗುಣವಾಗಿ ಕವೀಂದ್ರತೀರ್ಥರ ಪರಂಪರೆಯ ದಕ್ಷಿಣಾದಿ ಮಠವು (ವಿದ್ಯಾ ಮಠ) ಶ್ರೀ ರಾಘವೇಂದ್ರ ಮಠವೆಂದೇ ಖ್ಯಾತಿಗೊಂಡಿದೆ.

ಶ್ರೀ ರಾಘವೇಂದ್ರತೀರ್ಥರ ಉತ್ತರ ಪರಂಪರೆ:

ಮುಂದೆ ಯೋಗೀಂದ್ರತೀರ್ಥರು, ಸೂರೀಂದ್ರತೀರ್ಥರು, ಸುಮತೀಂದ್ರತೀರ್ಥರು, ಉಪೇಂದ್ರತೀರ್ಥರು ರಂಗನಾಥನ ಕ್ಷೇತ್ರವಾದ ಶ್ರೀರಂಗವನ್ನು ತಮ್ಮ ಮಠದ ಕೇಂದ್ರವನ್ನಾಗಿಸಿಕೊಂಡು ಅಲ್ಲಿಯೇ ನೆಲೆಸಿದರು. 18ನೇ ಶತಮಾನದಲ್ಲಿ ಸುಮತೀಂದ್ರತೀರ್ಥರು ರಾಯರ ನಂತರ ಕಾಲದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ, ವಾಙ್ಮಯ ಕ್ಷೇತ್ರಗಳಲ್ಲಿ ಪ್ರತಿಭಾ ಯುಕ್ತ ಕೊಡುಗೆಗಳಿಂದ ಆದರಣೀಯರಾದರು. ಹಾಗಾಗಿ ಆ ಕ್ಷೇತ್ರದಲ್ಲಿ ವಿದ್ಯಾಮಠವು ಸುಮತೀಂದ್ರ ಮಠವೆಂದೇ ಖ್ಯಾತಿಯನ್ನು ಹೊಂದಿದೆ. ವಾದೀಂದ್ರತೀರ್ಥರು ರಾಯರ ಮಂತ್ರಿಗಳಂತೆ ಅವರ ವಾಙ್ಮಯದ ಸ್ಥೂಲ ಪರಿಚಯವನ್ನು ಲೋಕಕ್ಕೆ ನೀಡಿ ಮಠ ಪರಂಪರೆಯ ಆಚರಣಾ ಚೌಕಟ್ಟನ್ನು ಭದ್ರಪಡಿಸಿದರು. ವಸುಧೇಂದ್ರತೀರ್ಥರ ಶಿಷ್ಯರಾದ ವರದೇಂದ್ರತೀರ್ಥರು ಪೇಶ್ವೆಗಳ ರಾಜಧಾನಿ ಪೂನಾ ಕ್ಷೇತ್ರದಲ್ಲಿ ದ್ವೈತ ತತ್ತ್ವವನ್ನು ಪಂಡಿತಮಂಡಳಿಯಲ್ಲಿ ಪ್ರಸ್ತುತಪಡಿಸಿ ಬಹು ಪ್ರಶಂಸೆಗಳಿಂದ ಅಲ್ಲಿಯೇ ನೆಲೆಸಿದರು. ಹಾಗಾಗಿ ವಿದ್ಯಾಮಠವು ಆ ಪ್ರಾಂತ್ಯದಲ್ಲಿ ಶ್ರೀ ವರದೇಂದ್ರಮಠ ವೆಂದೇ ಖ್ಯಾತವಾಯಿತು.

ಧೀರೇಂದ್ರತೀರ್ಥರ ಕೊಡುಗೆಯು ದ್ವೈತ ಸಿದ್ಧಾಂತದಲ್ಲಿ ಮತ್ತೊಂದು ಮೈಲಿಗಲ್ಲು, ತಮ್ಮ ಸಾಹಸದಿಂದ ಹೊಸ ಪ್ರಯೋಗಗಳನ್ನು ಕೈಗೊಂಡು ನೇರ ವೇದ ವಾಙ್ಮಯಕ್ಕೆ ತತ್ತ್ವವಾದದ ಬೆಳಕಿನಲ್ಲಿ ಹೊಸ ಅರ್ಥಗಳನ್ನು ಪ್ರಚುರ ಪಡಿಸಿದ ಧೀರಯೋಗಿಗಳು. ಅವರು ರಿತ್ತಿ ಕ್ಷೇತ್ರದಲ್ಲಿ ನೆಲೆಸಿ ರಿತ್ತಿ ರಾಯರು ಎಂಬ ಖ್ಯಾತಿಯನ್ನು ಪಡೆದಿರುವರು. ಭುವನೇಂದ್ರತೀರ್ಥರು ಪೀಠಾಧಿಪತಿಗಳಾಗಿ ಪರಂಪರೆಯನ್ನು ಮುಂದುವರೆಸಿದರು.

19ನೆ ಶತಮಾನದಲ್ಲಿ ಯುದ್ಧಗಳ ಸಾಲಿನಿಂದ ಸಾಮಾಜಿಕ ಸ್ಥಿತಿಯು ಸಡಿಲಗೊಂಡ ಪರಿಸ್ಥಿತಿಯಲ್ಲಿ, ಚದುರಿದ ಸಮಾಜವನ್ನು ಚತುರತೆಯಿಂದ ಒಗ್ಗೂಡಿಸಿ ಮುನ್ನಡೆಸಿದ ಸೌಜನ್ಯಶೀಲರು ಸುಭೋದೇಂದ್ರತೀರ್ಥರು. ಪ್ರಿಯ ಶಿಷ್ಯರಾದ ಸುಜನೇಂದ್ರತೀರ್ಥರು ತಮ್ಮ ಅಸಾಧಾರಣ ಪ್ರತಿಭೆಯಿಂದ ಮೈಸೂರು ರಾಜ್ಯಕ್ಕೆ ಬಂದೊದಗಿದ ವಿಪತ್ತನ್ನು ಪರಿಹರಿಸಿ ಗೌರವಯುಕ್ತವಾಗಿ ಪಡೆದ ನಂಜನಗೂಡು ಕ್ಷೇತ್ರವನ್ನು ಶ್ರೀ ರಾಘವೇಂದ್ರಮಠದ ಕೇಂದ್ರವನ್ನಾಗಿಸಿಕೊಂಡರು. ಸುಜನೇಂದ್ರತೀರ್ಥರು ಧೀರೇಂದ್ರತೀರ್ಥರಂತೆ ಹೊಸ ಪ್ರಯೋಗಗಳನ್ನು ಕೈಗೊಂಡು ತತ್ತ್ವವಾದದ ವ್ಯಾಪ್ತಿಯನ್ನು ಹಿರಿದುಗೊಳಿಸಿದರು. ಸುಜ್ಞಾನೇಂದ್ರತೀರ್ಥರು ರಾಯರ ಕಾರುಣ್ಯವನ್ನು ಗಳಿಸಿ ತಾವಿದ್ದ ನಂಜನಗೂಡು ಕ್ಷೇತ್ರದಲ್ಲೇ ರಾಯರ ಏಕಮಾತ್ರ ಪ್ರತೀಕದ ಸಾನಿಧ್ಯವನ್ನು ಪಡೆದವರು. ಮುಂದಿನ ದಿನಗಳಲ್ಲಿ ಸುಧರ್ಮೇಂದ್ರತೀರ್ಥರು, ಸುಗುಣೇಂದ್ರತೀರ್ಥರು, ಸುಪ್ರಜ್ಞೇಂದ್ರತೀರ್ಥರು, ಸುಕೃತೀಂದ್ರತೀರ್ಥರು, ಸುಶಿಲೇಂದ್ರತೀರ್ಥರು, ಸುವ್ರತೀಂದ್ರತೀರ್ಥರು ನಂಜನಗೂಡನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ತಪೋನಿಷ್ಠರಾದರು. ಮುಂದಿನ ಕಾಲಘಟ್ಟದಲ್ಲಿ ಮತ್ತು ಪ್ರಸ್ತುತವಾಗಿ ನಂಜನಗೂಡು ಶ್ರೀ ರಾಘವೇಂದ್ರ ಮಠದ ಕೇಂದ್ರ ಸ್ಥಾನವಾಗಿ ಹರಿತತ್ತ್ವದ ಹಿರಿಮೆಯನ್ನು ಮತ್ತು ಫಲವನ್ನು ಪ್ರಪಂಚಕ್ಕೆ ಹಂಚುವ ಕಾರ್ಯದಲ್ಲಿ ನಿರತವಾಗಿದೆ.

20- 21ನೆ ಶತಮಾನದಲ್ಲಿ ಸುಯಮಿಂದ್ರತೀರ್ಥರು ಮತ್ತು ಸುಜಯೀಂದ್ರತೀರ್ಥರ ವಿಶೇಷ ಸಂಕಲ್ಪದಿಂದ ಆರಂಭವಾದ ಮಂತ್ರಾಲಯ ಕ್ಷೇತ್ರಾಭಿವೃದ್ಧಿಯು, ಸುಶಮೀಂದ್ರತೀರ್ಥರು ಹಾಗೂ ಸುಯತೀಂದ್ರತೀರ್ಥರ ಸತತ ಪರಿಶ್ರಮದಿಂದ ಮುಂದುವರೆದು ಇಂದು ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಪೂರ್ಣಾಭಿವೃದ್ಧಿಯ ಹಂತವನ್ನು ತಲುಪಿ ಆಧುನಿಕ ಸಮಾಜದ ಭಕ್ತಸಾಗರವು ಗುರುರಾಜರ ಸೇವೆಯಲ್ಲಿ ರತರಾಗುವಂತೆ ಮಾಡಿ, ತನ್ಮೂಲಕ ಶ್ರೀಹರಿ ಪ್ರೀತಿಯ ಸಂಪಾದನೆಯ ಸಾಧನ ಮಾರ್ಗವನ್ನು ಎಲ್ಲರಿಗೂ ಒದಗಿಸಿ, ಶತಮಾನಗಳ ಪರಂಪರೆಯಲ್ಲಿ ಮಹನೀಯರುಗಳಿಂದ ಸಾಧನರೂಪವಾಗಿ ಸಂಗ್ರಹಿತವಾದ ಆಧ್ಯಾತ್ಮ ಸಂಪತ್ತನ್ನು ಎಲ್ಲರಲ್ಲೂ ಹಂಚುವ ನಿರಂತರ ಕಾರ್ಯವು ನಡಯುತ್ತಿರುವುದು ಸನಾತನ ಯಜ್ಞ ಸ್ವರೂಪವೇ ಆಗಿದೆ.

ಉಪಸಂಹಾರ :

ಹೀಗೆ ಶ್ರೀಮದಾನಂದತೀರ್ಥರ ಅಂತರ್ಯದಲ್ಲಿ ಉಡುಪಿಯ ಸಮುದ್ರ ತಟದಲ್ಲಿ ಜನಿಸಿದ ಜ್ಞಾನದ ಬುಗ್ಗೆಯು, ತುಂಗಭದ್ರೆ ತಪ್ಪಲಿನ ಹಂಪೆಯ ಪರಿಸರದಲ್ಲಿ ಪುಷ್ಟಿಗೊಂಡು, ಕಾವೇರಿ ಮಡಿಲಿನ ಕುಂಭಕೋಣದಲ್ಲಿ ವಿದ್ಯಾಮಠವೆಂದು ಕೀರ್ತಿಹೊಂದಿ, ಶ್ರೀರಂಗ ಕ್ಷೇತ್ರದಲ್ಲಿ ವೃದ್ಧಿಗೊಂಡು, ಕಪಿಲೆಯ ದಡದಲ್ಲಿ ದಕ್ಷಿಣಕಾಶಿಯೆಂದೇ ಪ್ರಸಿದ್ಧವಾದ ನಂಜನಗೂಡಿನಲ್ಲಿ ರಾಜಮನ್ನಣೆಯೊಂದಿಗೆ ಶಾಶ್ವತವಾಗಿ ನೆಲೆಸಿತು. ಶ್ರೀಮದಾಚಾರ್ಯರ ಮೂಲ ಪರಂಪರೆಯು ಧೀರರಾದ ರಾಘವೇಂದ್ರತೀರ್ಥರ ನೇತೃತ್ವದಲ್ಲಿ ದಶ ದಿಕ್ಕುಗಳಲ್ಲೂ ಭವ್ಯವಾಗಿ ಅವ್ಯಾಹತವಾಗಿ ಶ್ರೀ ಹರಿಯ ಜ್ಞಾನ ಸೇವೆಯಲ್ಲಿ ತೊಡಗಿರುವುದು ಎಲ್ಲರ ಅನುಭವದಲ್ಲಿದೆಯೆಂದು ಸ್ಮರಿಸುತ್ತಾ, ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಪರಂಪರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಕಿರು ಪ್ರಯತ್ನ ಇದು.

ಶ್ರೀ ಕೃಷ್ಣಾರ್ಪಣ ಮಸ್ತು.

ಬಂದ ಭಕ್ತರ ಪೊರೆಯೋ ರಾಘವೇಂದ್ರ

ತುಂಗಾತೀರದಿ ನಿಂತ ಸುಯತಿ ವರನಾರೇ... ಪೇಳಮ್ಮಯ್ಯ.. ಸಂಗೀತಪ್ರಿಯ ಮಂಗಳ ಸುಗುಣತರಂಗ ಮುನಿಕುಲೋತ್ತುಂಗ.. ಕಾಣಮ್ಮ.. ಕಾಣಮ್ಮ....

ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಕುರಿತಾಗಿ, ಮಂತ್ರಾಲಯ ಮಹಾತ್ಮೆಯ ಕುರಿತಾಗಿ, ಆರಾಧನೆಯ ಕುರಿತಾಗಿ ಈ ದೇಶದ ಭಕ್ತಸಮೂಹ ಅರಿಯದೇ ಹೋದದ್ದು ಏನೂ ಇಲ್ಲ. ವರ್ಷಕ್ಕೊಮ್ಮೆ ನಡೆಯುವ ಮಂತ್ರಾಲಯದ ಗುರುರಾಘವೇಂದ್ರ ಸ್ವಾಮಿಗಳ ಆರಾಧನೆ ಶ್ರದ್ಧೆ ಮತ್ತು ಭಕ್ತಿಯ ಸಮಾಗಮ. ರಾಯರು ಅಂದರೆ ದೇವರು, ದೇವದೂತರು, ದೈವಾಂಶ ಸಂಭೂತರು.. ಏನೇ ಅಂದರೂ ಅದು ಸತ್ಯವೇ. ನಂಬಿದವರ ಭಾವಭಕುತಿಗೆ ತಕ್ಕಂತೆ ಕಂಡ ವಿಶ್ವವಂದಿತರು ಗುರುರಾಯರು. ಸಂಗೀತ, ಸಾಹಿತ್ಯವನ್ನು ಆವಾಹಿಸಿ ಕೊಂಡಿದ್ದ ಸರಸ್ವತಿಪುತ್ರರಾಗಿದ್ದರು ರಾಘವೇಂದ್ರಸ್ವಾಮಿಗಳು. ಮಧ್ವಮತವನ್ನು ದೇಶಾದ್ಯಂತ ಪ್ರಚಾರ ಮಾಡಿದ ರಾಯರು ಜನರಿಗೆ ಮುಕ್ತಿ ಮಾರ್ಗ ತೋರಿಸಲೆಂದೇ ಅವತರಿಸಿದ ಯತಿವರ್ಯರು. ವೀಣೆ ಹಿಡಿದೆ ಹಾಡಲು ಕುಳಿತರೆ ಇಡೀ ಜಗತ್ತು ತಲೆದೂಗಿ ಮೈಮರೆಯುತ್ತಿತ್ತು.

ರಾಯರು ಬೃಂದಾವನದಲ್ಲಿ ಐಕ್ಯರಾಗಿ ಮುನ್ನೂರಾ ಐವತ್ನಾಲ್ಕು ವರ್ಷಗಳು ಉರುಳಿವೆ. ರಾಘವೇಂದ್ರ ಸ್ವಾಮಿಗಳು ಇಂದಿಗೂ ಬೃಂದಾವನದಲ್ಲೇ ನೆಲೆಸಿದ್ದಾರೆ. ಇನ್ನೂ ಮುನ್ನೂರಾನಲವತ್ತಾರು ವರ್ಷಗಳನ್ನು ಅಲ್ಲಿಯೇ ಸವೆಸಲಿದ್ದಾರೆ. ಏಳುನೂರು ವರ್ಷಗಳು ಬೃಂದಾವನದಲ್ಲಿದ್ದು ಎಲ್ಲ ಜನರ ಸಂಕಷ್ಟಗಳನ್ನು ಪರಿಹರಿಸುವುದಾಗಿ ರಾಯರೇ ಹೇಳಿಕೊಂಡಿದ್ದರೆಂಬ ಮಾತಿದೆ. ಬೃಂದಾವನಸ್ಥರಾದ ನಂತರವೂ ರಾಯರು ಹಲವರಿಗೆ ದರ್ಶನ ಕೊಟ್ಟಿದ್ದು ರಾಯರ ಇರುವಿಕೆಗೆ ಸಾಕ್ಷಿಯಾಗಿದೆ. ವಿಶ್ವದ ಎಲ್ಲೆಡೆಯೂ ರಾಯರ ಭಕ್ತರಿದ್ದಾರೆ. ಮಂತ್ರಾಲಯಕ್ಕೆ ಬಂದು ಪಾವನರಾದವರಿದ್ದಾರೆ. ಬೃಂದಾವನ ದರ್ಶನದಿಂದ ಬದುಕಿನಲ್ಲಿ ಮಹತ್ತರ ಬದಲಾವಣೆ, ಏಳಿಗೆ, ನೆಮ್ಮದಿ ಶಾಂತಿ ಹೊಂದಿದವರಿದ್ದಾರೆ. ಭಕ್ತರ ಶಕ್ತಿ ಕೇಂದ್ರವೆನಿಸಿರುವ ಮಂತ್ರಾಲಯದ ಬೃಂದಾವನದಲ್ಲಿ ನಿಜಕ್ಕೂ ಅನೂಹ್ಯ ಶಕ್ತಿ ಇದೆ. ಹಾಗಂತ ಇದು ಕೇವಲ ಧಾರ್ಮಿಕ ಕೇಂದ್ರವಲ್ಲ. ಸಾಮಾಜಿಕ ಕೈಂಕರ್ಯಗಳಿಂದಲೂ ಸಮಾಜವನ್ನು ಮೇಲಕ್ಕೆತ್ತುತ್ತಾ, ಅಶಕ್ತರಿಗೆ ಶಕ್ತಿ ನೀಡುತ್ತಾ ಮುನ್ನಡೆದಿದೆ. ಪ್ರಸ್ತುತ ಗುರುಗಳಾಗಿರುವ ಶ್ರೀ ಸುಬುಧೇಂದ್ರ ತೀರ್ಥರ ಮಾರ್ಗದರ್ಶನದಲ್ಲಿ ಭಕ್ತರ ಕಷ್ಟ ಕಾರ್ಪಣ್ಯಗಳು ಕಳೆಯುತ್ತಿವೆ. ಅಶಕ್ತರಿಗೆ ಆತ್ಮಸ್ಥೈರ್ಯ ದೊರಕುತ್ತಿದೆ.

ಕಾಯೋ ಗುರುರಾಯ

ಭಾರತ ದೇಶದ ವೈದಿಕ ಸಿದ್ಧಾಂತ ತತ್ವಗಳ. ಧರ್ಮಗಳ ಪ್ರಚಾರಕ್ಕಾಗಿ ಲೋಕಮಾನ್ಯ ಗ್ರಂಥಗಳನ್ನು ರಚಿಸಿ, ಮಹದುಪಕಾರ ಮಾಡಿ ಮಾನವ ಜನಾಂಗದ ಕಲ್ಯಾಣ, ನಾಡು, ನುಡಿಗಳ ಬೆಳವಣಿಗೆ ಅಭಿವೃದ್ಧಿಗಾಗಿ, ಶಾಂತಿ ಸ್ಥಾಪನೆಗಾಗಿ ತಮ್ಮ ಅಖಂಡ ಪುಣ್ಯ ರಾಶಿಯನ್ನು ಕಾಮಧೇನು, ಕಲ್ಪವೃಕ್ಷದಂತೆ ಧಾರೆಯೆರೆಯುತ್ತಾ ಮಂತ್ರಾಲಯ ಮಹಾಕ್ಷೇತ್ರದಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದವರು ಶ್ರೀರಾಘವೇಂದ್ರ ಗುರುಸಾರ್ವಭೌಮರು. ಗುರುರಾಯರನ್ನು ನೆನೆದಾಗ ಮೊದಲು ನೆನಪಾಗುವುದೇ ರಾಯರ ಸನ್ನಿಧಿ ಮಂತ್ರಾಲಯ. ಯಾವುದೇ ಕಷ್ಟವಿದ್ದರೂ ರಾಯರನ್ನು ನೆನೆದರೆ, ರಾಯರ ದರ್ಶನ ಮಾಡಿದರೆ ಕಷ್ಟಗಳೆಲ್ಲಾ ನಿವಾರಣೆಯಾಗುತ್ತದೆ ಎಂಬುದು ಅಸಂಖ್ಯಾತ ಭಕ್ತರ ಅಗಾಧ ನಂಬಿಕೆ. ಆಂಧ್ರಪ್ರದೇಶದಲ್ಲಿದ್ದರೂ ಕರ್ನಾಟಕದ ಭಕ್ತಾದಿಗಳೇ ಹೆಚ್ಚು ಸಂದರ್ಶಿಸುವ ಕ್ಷೇತ್ರ ಅಂದರೆ ಅದು ಮಂತ್ರಾಲಯ. ಮಂತ್ರಾಲಯ ಕೇವಲ ಪುಣ್ಯಕ್ಷೇತ್ರ ಮಾತ್ರವೇ ಅಲ್ಲ, ಅಧ್ಯಾತ್ಮಿಕ ಮತ್ತು ದೈವಿಕ ಪ್ರವಾಸಿ ತಾಣವೂ ಹೌದು.

ಮಂತ್ರಾಲಯವು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಿಂದ 74 ಕಿ.ಮೀ ಮತ್ತು ಹೈದರಾಬಾದ್ ನಿಂದ 250 ಕಿ.ಮೀ ದೂರದಲ್ಲಿರುವ ಪವಿತ್ರ ಪಟ್ಟಣ. ಕರ್ನಾಟಕದ ಗಡಿಯ ಬಳಿ ಮತ್ತು ತುಂಗಭದ್ರಾ ನದಿಯ ದಡದಲ್ಲಿರುವ ಮಂತ್ರಾಲಯ ಕರ್ನಾಟಕದ್ದೇ ಅನಿಸುವ ಭಾವ ಕೊಡುತ್ತದೆ. ಹಿಂದೂ ಧಾರ್ಮಿಕ ಸ್ಥಳವಾಗಿರುವ ಮಂತ್ರಾಲಯದಲ್ಲಿರುವುದೇ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನ. ಶ್ರೀ ಗುರು ರಾಘವೇಂದ್ರ ಸ್ವಾಮಿ (1601–1671) ಹಿಂದೂ ಧರ್ಮದ ಅತ್ಯಂತ ಪೂಜನೀಯ ಸಂತರು. ವೈಷ್ಣವ ಸಂಪ್ರದಾಯ ಮತ್ತು ಶ್ರೀ ಮಧ್ವಾಚಾರ್ಯರ ದ್ವೈತ ತತ್ವವನ್ನು ಪ್ರತಿಪಾದಿಸಿದ ಧೀಮಂತ ಯತಿಗಳು.

ಭಕ್ತ ಪ್ರಹ್ಲಾದರ ಪುನರ್ಜನ್ಮ

ಶ್ರೀ ರಾಘವೇಂದ್ರ ಸ್ವಾಮಿ ತಮ್ಮ ಜೀವಿತಾವಧಿಯಲ್ಲಿ ಅನೇಕ ಅದ್ಭುತಗಳನ್ನು ಮಾಡಿದ್ದಾರೆ. ಇಂದಿಗೂ ತಮ್ಮ ಭಕ್ತರ ಬದುಕಲ್ಲಿ

ಪವಾಡ ನಡೆಸಿ ಆಶೀರ್ವದಿಸುತ್ತಾರೆ ಎಂದು ನಂಬಲಾಗಿದೆ. ಮಂತ್ರಾಲಯ ಕ್ಷೇತ್ರ ಸಂಪೂರ್ಣವಾಗಿ ಸಮರ್ಪಿತವಾಗಿರುವುದೇ ಗುರು ರಾಘವೇಂದ್ರ ಸ್ವಾಮಿಗಳಿಗೆ. ಅವರನ್ನು ನರಸಿಂಹ ಅವತಾರದಲ್ಲಿ ವಿಷ್ಣುವಿನಿಂದ ರಕ್ಷಿಸಲ್ಪಟ್ಟ ಭಕ್ತ ಪ್ರಹ್ಲಾದನ ಪುನರ್ಜನ್ಮ ಎಂದು ಕೂಡ ಪರಿಗಣಿಸಲಾಗಿದೆ.

ಪರಿಮಳ ಪ್ರಸಾದ

ಪ್ರತಿಯೊಬ್ಬ ರಾಯರ ಭಕ್ತರಿಗೂ ಸೇವೆಗೆ ಅವಕಾಶ ಕಲ್ಪಿಸಲಾಗಿದೆ. 50 ರು ಮೀರಿದ ಸೇವೆಗಳನ್ನು ನೀಡುತ್ತಿದ್ದರೆ, ಬೆ.8 ಗಂಟೆಯ ಮೊದಲು ಗರ್ಭಗುಡಿಯ ಬಲಭಾಗದಲ್ಲಿರುವ ಸೇವಾ ಹಾಲ್‌ನಲ್ಲಿ ಇರಬೇಕು. ಅದಕ್ಕೆ ನೀವು ಹಿಂದಿನ ದಿನವೇ ಸೇವಾ ಟಿಕೆಟ್‌ಗಳನ್ನು ಖರೀದಿಸಬೇಕಾಗುತ್ತದೆ. ಪರಿಮಳ ಪ್ರಸಾದ ಇಲ್ಲಿನ ವಿಶೇಷ ರೀತಿಯ ಪ್ರಸಾದಗಳಾಗಿವೆ. ಇದನ್ನು ಮಂತ್ರಾಲಯದಲ್ಲಿ ಬೃಂದಾವನಕ್ಕೆ ಸಮರ್ಪಿಸಲಾಗುತ್ತದೆ. ದೇಗುಲದ ಹೊರಗಿನ ಕೌಂಟರ್‌ಗಳಲ್ಲಿ ಮಾತ್ರ ಇದು ಲಭ್ಯವಿರುತ್ತದೆ. ರಾಯರು ಪರಿಮಳ ಎನ್ನುವ ಗ್ರಂಥವನ್ನು ಬರೆದಿದ್ದರು. ಇದು ನಾಡಿನಲ್ಲೆಡೆ ಪಸರಿಸಲಿ ಎನ್ನುವ ಕಾರಣಕ್ಕೆ ಈ ವಿಶೇಷ ಪ್ರಸಾದಕ್ಕೆ ಪರಿಮಳ ಎನ್ನುವ ಹೆಸರನ್ನು ಇಡಲಾಗಿದೆ. ಮಧ್ಯಾಹ್ನದ ಸಮಯದಲ್ಲಿ ಅನ್ನಪೂರ್ಣ ಭೋಜನಾ ದೊಡ್ಡ ಊಟದ ಹಾಲ್‌ನಲ್ಲಿ ಸಾಮೂಹಿಕ ಊಟ ನಡೆಯುತ್ತದೆ. ರಾತ್ರಿಯ ಸಮಯದಲ್ಲಿ ಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ.

ಪ್ರಮುಖ ಆಕರ್ಷಣೆ

ಇಲ್ಲಿನ ಪ್ರಮುಖ ಆಕರ್ಷಣೆ ದೇವಾಲಯ ಮತ್ತು ಮಠ ಸಂಕೀರ್ಣ. ದೇವಾಲಯದ ಸುತ್ತಲೂ ನಿತ್ಯ ದೇವರನ್ನು ಹೊತ್ತೊಯ್ಯುವ ದೇವಾಲಯದ ರಥಗಳು ಅದ್ಭುತ ದೃಶ್ಯವಾಗಿದ್ದರೆ, ತುಂಗಭದ್ರಾ ನದಿಯೂ ಸಹ ನೋಡಬೇಕಾದ ಆಕರ್ಷಣೆಯಾಗಿದೆ. ಜೊತೆಗೆ ಮಂತ್ರಾಲಯಕ್ಕೆ ಪ್ರವೇಶದ ದ್ವಾರದ ಬಳಿ ಬೃಹತ್ ಅಭಯಾಂಜನೇಯ ದೇಗುಲವಿದೆ. ಇಲ್ಲಿಗೆ ಪ್ರತಿಯೊಬ್ಬರೂ ಭೇಟಿ ನೀಡಿ ಕೆಲಸ ಸಮಯ ಧ್ಯಾನ ಮಾಡಿ ಫೋಟೊ ಕ್ಲಿಕಿಸಬಹುದು.

ಹಸಿರು ಮಂತ್ರಾಲಯ -ಸ್ವಚ್ಛತೆಗೆ ಪ್ರಾಶಸ್ತ್ಯ

ಮಂತ್ರಾಲಯದಲ್ಲಿ ವೃಕ್ಷ ಪ್ರಸಾದ ಎಂಬ ಹೆಸರಿನಲ್ಲಿ ಸಸಿಯನ್ನು ವಿತರಿಸುವ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿ ಮಕ್ಕಳಿಗಾಗಿಯೇ ಎಪ್ಪತ್ತು ಲಕ್ಷಕ್ಕೂ ಹೆಚ್ಚು ವೆಚ್ಚದ ಹಸಿರು ಉದ್ಯಾನ ನಿರ್ಮಾಣವಾಗಿದೆ. ಮಂತ್ರಾಲಯ ಎಂಬುದು ಕಟ್ಟಡಗಳ ಬೀಡಾಗಬಾರದು ಎಂಬ ಕನಸು ಶ್ರೀ ಸುಬುಧೇಂದ್ರ ತೀರ್ಥ ಪಾದಂಗಳವರದ್ದು. ಅವರ ಆಶಯದಂತೆ ರಾಯರ ಕ್ಷೇತ್ರವನ್ನು ಸ್ವಚ್ಛ ಮತ್ತು ಹಸಿರು ಮಂತ್ರಾಲಯವಾಗುವ ಸರ್ವ ಶ್ರಮ ನಡೆಯುತ್ತಲೇ ಇದೆ.

ಮರೆಯದೇ ಗೋಶಾಲೆ ಹೋಗಿಬನ್ನಿ

ಯಾತ್ರಾರ್ಥಿಗಳು ಮಂತ್ರಾಲಯದ ಗೋಶಾಲೆಗೆ ಭೇಟಿ ನೀಡದೇ ಬಂದಲ್ಲಿ ಕಾಮಧೇನುವಿನ ದರ್ಶನ ಕಳೆದುಕೊಂಡಂತೆ. ಇಲ್ಲಿ ಸುಸ್ಥಿತಿಯಲ್ಲಿರುವ ಗೋವುಗಳಿಗಿಂತ ಬರಪೀಡಿತ ಜಾಗಗಳಲ್ಲಿರುವ, ಬಡ ರೈತರಿಗೆ ಸೇರಿದ್ದ ಈ ವಾರಸುದಾರರಿಲ್ಲದ ಗೋವುಗಳಿಗೆ ಆದ್ಯತೆ ನೀಡು ಅವುಗಳೀಗೆ ಅನ್ನಾಹಾರ ನೀಡಿ ಸಲಹುವ ಕೆಲಸ ನಡೆಯುತ್ತದೆ. ಶ್ರೀಗಳು ಅತ್ಯಂತ ಆಪ್ತತೆಯಿಂದ ಗೋವುಗಳೊಂದಿಗೆ ಸಮಯ ಕಳೆದು ಅವುಗಳನ್ನು ಲಾಲಿಸುತ್ತಾರೆ.

ಶ್ರೀಗುರು ರಾಯರ ಸಂಕ್ಷಿಪ್ತ ಪರಿಚಯ

- ಮೂಲರೂಪ: ಶಂಕುಕರ್ಣ
- ಅವತಾರಗಳು: ಪ್ರಹ್ಲಾದರಾಜರು, ಬಾಹೀಕರಾಜರು, ವ್ಯಾಸರಾಜರು
- ಮನೆತನ: ಪಾಷ್ಠಿಕ ವಂಶದ ಬೀಗಮುದ್ರೆ ಮನೆತನ
- ಗೋತ್ರ: ಗೌತಮ
- ಮುತ್ತಾತನ ಹೆಸರು: ಕೃಷ್ಣಭಟ್ಟರು
- ತಾತನ ಹೆಸರು: ಕನಕಾಚಲ ಭಟ್ಟರು
- ತಂದೆ ಹೆಸರು: ತಿಮ್ಮಣ್ಣ ಭಟ್ಟರು
- ತಾಯಿ : ಗೋಪಿಕಾಂಬ
- ಅಕ್ಕ: ವೆಂಕಟಾಂಬ
- ಅಣ್ಣನ ಹೆಸರು: ಗುರುರಾಜ ಆಚಾರ್ಯ
- ಜನನ: ಕ್ರಿಶ 1595ನೇ ಮನ್ಮಥನಾಮ ಸಂವತ್ಸರ, ಫಾಲ್ಗುಣ ಶುದ್ಧ ಸಪ್ತಮಿ, ಗುರುವಾರ
- ಜನ್ಮನಕ್ಷತ್ರ : ಮೃಗಶಿರ
- ಜನ್ಮಸ್ಥಳ: ಭುವನಗಿರಿ
- ಅಕ್ಷರಾಭ್ಯಾಸ : 1595
- ಉಪನಯನ : 1604
- ಪೂರ್ವಾಶ್ರಮದ ಹೆಸರು: ವೆಂಕಟನಾಥ
- ಪ್ರಾಥಮಿಕ ಗುರುಗಳು: ಲಕ್ಷ್ಮೀನರಸಿಂಹಾಚಾರ್ಯರು
- ಗುರುಕುಲ : ಕಾವೇರಿಪಟ್ಟಣಂ
- ಉನ್ನತ ವಿದ್ಯಾಭ್ಯಾಸ: ಶ್ರೀ ಸುಧೀಂದ್ರ ತೀರ್ಥರು, ಕುಂಭಕೋಣಂ
- ಪತ್ನಿ : ಸರಸ್ವತಿ
- ಪೂರ್ವಾಶ್ರಮದ ಪುತ್ರ ಲಕ್ಷ್ಮಿನಾರಾಯಣ
- ಆಶ್ರಮದ ಗುರುಗಳು: ಶ್ರೀ ಸುಧೀಂದ್ರ ತೀರ್ಥರು
- ಸನ್ಯಾಸ ಸ್ವೀಕಾರ : 1621
- ಆಶ್ರಮ ನಾಮ : ಶ್ರೀ ರಾಘವೇಂದ್ರ ತೀರ್ಥರು
- ವೃಂದಾವನ ಪ್ರವೇಶ : ಶ್ರಾವಣ ಬಹುಳ ಬಿದಿಗೆ, ವಿರೋಧಿ ಸಂವತ್ಸರ
- ವೃಂದಾವನ ಶಿಲೆ : ಕೃಷ್ಣವರ್ಣ
- ವೃಂದಾವನ ಸ್ಥಳ: ಮಂತ್ರಾಲಯದ ತುಂಗಭದ್ರಾ ನದಿ ತೀರ
- ಮಠದ ಪೂರ್ವನಾಮ : ವಿಭುದೇಂದ್ರ ತೀರ್ಥ ಮಠ
- ಬಿರುದು : ಬಹಾಭಾಷ್ಯಾಚಾರ್ಯ
- ರಾಯರ ಅಂಕಿತ : ಧೀರವೇಣುಗೋಪಾಲ
- ಆಶ್ರಮ ಶಿಷ್ಯರು: ಶ್ರೀ ಯೋಗೀಂದ್ರ ತೀರ್ಥರು
- ರಚಿಸಿದ ಗ್ರಂಥಗಳು: ಶ್ರೀಮನ್ ನ್ಯಾಯಸುಧಾ ಟಿಪ್ಪಣಿ, ಪರಿಮಳ ಸುಧಾ, ಸೂತ್ರ ಪ್ರಸ್ಥಾನ, ಋಗ್ ಮತ್ತು ಉಪನಿಷತ್ ಪ್ರಸ್ಥಾನ, ಗೀತಾ ಪ್ರಸ್ಥಾನ, ಶ್ರೀರಾಮಚರಿತ ಮಂಜರಿ, ಶ್ರೀಕೃಷ್ಣಚರಿತ ಮಂಜರಿ, ಪ್ರಾತಃ ಸಂಕಲ್ಪ ಗದ್ಯಾ ಸೇರಿ ಒಟ್ಟು 48 ಗ್ರಂಥಗಳು

ಸುವರ್ಣ ಮಂತ್ರಾಲಯದ ನಿರ್ಮಾತೃ ಡಾ. ಸುಬುಧೇಂದ್ರ ತೀರ್ಥರು

ಆಚಾರ್ಯ ನಾಗರಾಜು ಹಾವೇರಿ
ಗುರು ವಿಜಯ ಪ್ರತಿಷ್ಠಾನ

ವೇದವೇದಾಂಗ ಚತುರಂ
ಮಧ್ವ ಸಿದ್ಧಾಂತ ಕೋವಿದಮ್ !
ಸುಯತೀಂದ್ರ ಸುತಂ ಶ್ರೇಷ್ಠಂ
ಸುಬುಧೇಂದ್ರ ಗುರುಂ ಭಜೇ

ಶ್ರೀ ಗುರುಗಳ ವಂಶ

ತಮ್ಮ ಮತ್ತು ನಿಮ್ಮ ನಮ್ಮೆಲ್ಲರ ಆರಾಧ್ಯ ಗುರುಗಳೂ, ಮಂತ್ರ ಮಂದಿರ ನಿಲಯರೂ, ತಮ್ಮನ್ನು ನಂಬಿ ಬಂದ ಭಕ್ತ / ಶಿಷ್ಯರ ಮನೋಭೀಷ್ಟ ಪೂರೈಸುತ್ತಾ ಕಲಿಯುಗ ಕಲ್ಪವೃಕ್ಷ ಕಾಮಧೇನುವೆಂದು ಹದಿನಾಲ್ಕು ಲೋಕಗಳಲ್ಲಿ ಪ್ರಸಿದ್ಧರೂ, ಅದ್ಯಪಿ ಶ್ರೀ ಕ್ಷೇತ್ರ ಮಂತ್ರಾಲಯದ ಮೂಲ ವೃಂದಾವನದಲ್ಲಿ ಸಶರೀರವಾಗಿ ಇದ್ದು ಬಂದ ಭಕ್ತರಿಗೆ ಪ್ರತ್ಯಕ್ಷವಾಗಿ ಕಾಣಿಸಿಕೊಂಡು ತಾಯಿಯಂತೆ ಮಾತನಾಡಿಸಿ ನಿರಂತರ ಅನುಗ್ರಹ ಮಾಡುತ್ತಿರುವವರು ಶ್ರೀ ರಾಘವೇಂದ್ರ ತೀರ್ಥರು.

ರಾಯರು ನೆಲೆಸಿರುವ ಗುರುಸಾರ್ವಭೌಮರ ಮೂಲ ಬೃಂದಾವನಕ್ಕೆ ಬಂಗಾರದ ಕವಚ, ವಜ್ರ ಕವಚ, ಬಂಗಾರದ ಪ್ರತೀಕ, ಗರ್ಭ ಗುಡಿಯ ಶಿಲಾ ಮಂಟಪದ ಕಂಬಗಳಿಗೆ ಬಂಗಾರದ ಕವಚ, ಶ್ರೀ ಪ್ರಹ್ಲಾದ ರಾಜರಿಗೆ ಬಂಗಾರ ಕವಚ ಮತ್ತು ವಿಧ ವಿಧವಾದ ಬಂಗಾರ ವಜ್ರದ ಆಭರಣಗಳೂ, ಶ್ರೀ ಚತುರ್ಮುಖ ಬ್ರಹ್ಮದೇವರ ಕರಾರ್ಚಿತ ಶ್ರೀ ಮೂಲ ರಾಮಚಂದ್ರ ದೇವರರಿಗೆ ಶ್ರೀ ಮಧ್ವಾಚಾರ್ಯರ ಕರಾರ್ಚಿತ ಶ್ರೀ ದಿಗ್ವಿಜಯ ರಾಮಚಂದ್ರ ದೇವರು ಶ್ರೀ ಜಯತೀರ್ಥ ಕರಾರ್ಚಿತ ಶ್ರೀ ಜಯರಾಮದೇವರಿಗೆ ಬಂಗಾರದ ಆಭರಣ, ವಿಧ ವಿಧವಾದ ನವರತ್ನ ಖಚಿತ ಹಾರಗಳೂ, ಶ್ರೀ ಮಠದ ಸಂಸ್ಥಾನ ಪೂಜೆಗೂ, ಶ್ರೀ ರಾಘವೇಂದ್ರ ಸ್ವಾಮಿಗಳ ಮತ್ತೂ ಎಲ್ಲಾ ಯತಿಗಳ ಬೃಂದಾವನ ಪೂಜೆಗೆ ಉಪಯೋಗಿಸುವ ಎಲ್ಲಾ ವಸ್ತುಗಳೂ (ಪರಿಕರಗಳೂ) ಬಂಗಾರದ್ದೇ ಆಗಿವೆ. ಇದೆಲ್ಲದಕ್ಕೂ ಕಾರಣಕರ್ತರು 'ಶ್ರೀ ಸ್ವರ್ಣತೀರ್ಥ' ಪರಮಪೂಜ್ಯ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು

ಶಿಲಾ ಮಂಟಪ ನಿರ್ಮಾಣ ಮತ್ತು ಬಂಗಾರ ಕವಚ

ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ತುಂಗಭದ್ರಾ ಪ್ರವಾಹ ದಿಂದ ಯಾವುದೇ ತೊಂದರೆ ಆಗಬಾರದೆಂದು ಶಿಲಾ ಮಂಟಪ (ಕಲ್ಲಿನ ಮಂಟಪ) ನಿರ್ಮಿಸಿ ಭಕ್ತರ ಸಹಾಯ ಸಹಕಾರದಿಂದ ಬಂಗಾರದ ಕವಚ ಮಾಡಿಸುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವು, ಬಂಗಾರದ ಮಠ –(Golden Matha) ವಾಗಿ ಪರಿವರ್ತನೆಯಾಗುತ್ತವುದಕ್ಕೆ ಲಕ್ಷ ಲಕ್ಷ ಶ್ರೀ ಮಠದ ಭಕ್ತರು, ಶಿಷ್ಯರು ಸಾಕ್ಷಿಯಾಗಲಿದ್ದಾರೆ.

ಪುಷ್ಕರಣಿ ನಿರ್ಮಾಣ

ಶ್ರೀ ಕ್ಷೇತ್ರ ಮಂತ್ರಾಲಯದ ಶ್ರೀ ಮಂಚಾಲಮ್ಮ ದೇವಸ್ಥಾನದ ಮುಂಭಾಗ ಬೃಂದಾವನ ಗಾರ್ಡನ್ಸ್ ಮುಂಭಾಗದಲ್ಲಿ ಸುಸಜ್ಜಿತ ಪರಿಮಳ ತೀರ್ಥ ಎಂಬ ಹೆಸರಿನ ಪುಷ್ಕರಣಿ ಈಗಾಗಲೇ ಲೋಕಾರ್ಪಣೆಗೊಂಡಿದೆ. ಇನ್ನು ಮುಂದೆ ಭಕ್ತರು ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ವಿಶೇಷ ದಿನಗಳಲ್ಲಿ ತೆಪ್ಪೋತ್ಸವ ಸೇವೆ ಸಲ್ಲಿಸಬಹುದಾಗಿದೆ.

ಅಭಿವೃದ್ಧಿ ಕಾರ್ಯಗಳು

ಪ್ರಾತಃ ಸ್ಮರಣೀಯ ಪರಮಪೂಜ್ಯ ಶ್ರೀ ಸುಜಯೀಂದ್ರ ತೀರ್ಥ ತೀರ್ಥರ ಪೂರ್ವಾಶ್ರಮದ ಮೊಮ್ಮಕ್ಕಳು ಶ್ರೀ ಸುಬುಧೇಂದ್ರ ತೀರ್ಥರು. ತಮ್ಮ ಪರಮೇಷ್ಠಿ ಗುರುಗಳಂತೆ ಶ್ರೀಗಳು ಸಹ, ಶ್ರೀ ಕ್ಷೇತ್ರ ಮಂತ್ರಾಲಯದ ಸರ್ವಾಂಗೀಣ ಅಭಿವೃದ್ಧಿ ಮಾಡುತ್ತಿರುವ ಹರಿಕಾರರು. ಶ್ರೀ ಕ್ಷೇತ್ರ ಮಂತ್ರಾಲಯಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಸುಮಾರು 1200 ಸುಸಜ್ಜಿತ ವಸತಿ ಸಮುಚ್ಚಯ, ಎರಡೂ ಹೊತ್ತು

ಭಕ್ತರಿಗೆ ತೀರ್ಥ ಪ್ರಸಾದದ (ಭೋಜನ) ವ್ಯವಸ್ಥೆ, ಸುಸಜ್ಜಿತ ಸ್ನಾನ ಘಟ್ಟಗಳ ವ್ಯವಸ್ಥೆ, ಕುಡಿಯಲು ಪರಿಶುದ್ಧವಾದ ನೀರಿನ ವ್ಯವಸ್ಥೆ, ನಾಡಿನ ಎಲ್ಲಾ ನಗರ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಿನ ಭಕ್ತರಿಗೆ ಅನುಕೂಲವಾಗಲೆಂದು ಸುಸಜ್ಜಿತ ದಿವ್ಯ ಭವ್ಯ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಮೃತ್ತಿಕಾ ವೃಂದಾವನ ಸನ್ನಿಧಾನ ಶಾಖಾ ಮಠಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ಧೀಮಂತ ಆಡಳಿತಗಾರರು.

ವಿದ್ಯಾಪಕ್ಷಪಾತಿಗಳು

ವಿದ್ವಜ್ಜನ ಪೋಷಣೆ, ವಿದ್ಯಾ ಸಂಸ್ಥೆಗಳ ನಿರ್ವಹಣೆ, ಪುಟ್ಟ ವಿದ್ಯಾರ್ಥಿ ಗಳನ್ನು ಮೊದಲ್ಗೊಂಡು ಸುಧಾ ಪಂಡಿತರ ವರೆಗೆ ಹಾಗೂ ನುರಿತ ಅಧ್ಯಾಪಕರನ್ನು ನೇಮಿಸಿ ಅವರೆಲ್ಲರಿಗೂ ಮತ್ತು ಶ್ರೀ ಕ್ಷೇತ್ರ ಮಂತ್ರಾಲಯ ಮತ್ತು ದೇಶದ ವಿವಿಧ ಭಾಗಗಳಲ್ಲಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿ ಆಶ್ರಯ ನೀಡಿರುವವರು ಸುಬುಧೇಂದ್ರ ತೀರ್ಥರು.

ಭಕ್ತರವಾರಿಧಿ

ಶ್ರೀ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ಬರುವ ಭಕ್ತರನ್ನು ಪ್ರೀತಿವಾತ್ಸಲ್ಯ ಅಂತಃಕರಣದಿಂದ ಮಾತನಾಡಿಸಿ ಅವರ ನೋವುಗಳಿಗೆ ಸ್ಪಂದಿಸಿ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಪ್ರಾರ್ಥಿಸಿ ಫಲ ಮಂತ್ರಾಕ್ಷತೆ ಕೊಟ್ಟು ನಿರಂತರವೂ ಅನುಗ್ರಹಿಸುತ್ತಿದ್ದಾರೆ ಶ್ರೀಪಾದಂಗಳವರು. ಶ್ರೀ ರಾಘವೇಂದ್ರ ಸ್ವಾಮಿಗಳಿಗೂ ಮತ್ತು ಅವರ ಅಂತರಂಗ ಭಕ್ತ / ಶಿಷ್ಯರ ನಡುವೆ ಸಂಪರ್ಕ ಕೊಂಡಿಯಾಗಿದ್ದಾರೆ ಈ ನಗುಮೊಗದ ಸಂತ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು.

ಶ್ರೀ ಸ್ವರ್ಣತೀರ್ಥ ಪ್ರಶಸ್ತಿ

ನಮ್ಮ ನಿಮ್ಮೆಲ್ಲರ ಪ್ರೀತಿಯ ಗುರುಗಳಾದ ಸುಬುಧೇಂದ್ರ ತೀರ್ಥರನ್ನು ಭಕ್ತರು 'ಸ್ವರ್ಣತೀರ್ಥರು' ಎಂದು ಪ್ರೀತಿಯಿಂದ ಕರೆಯುತ್ತಾರೆ. ಅಪ್ಪಟ ಬಂಗಾರದಂತೆ ನಿಷ್ಕಲ್ಮಶ ಮನಸ್ಸುಳ್ಳ , ವಿದ್ಯಾ ಪಕ್ಷಪಾತಿಗಳಾದ ಭಕ್ತ ಶಿಷ್ಯರ ಮೇಲೆ ವಾತ್ಸಲಿ ಹೊಂದಿರುವ ಪರಪಶ್ರೀಗಳನ್ನು ಸ್ವರ್ಣತೀರ್ಥ ಸುಬುಧೇಂದ್ರ ತೀರ್ಥರೆಂದು ಕರೆದರೆ ಶ್ರೀ ಹರಿ ವಾಯು ಗುರುಗಳು ಮತ್ತು ರಾಘವೇಂದ್ರ ಸ್ವಾಮಿಗಳಿಗೆ ಅತ್ಯಂತ ಸಂತೋಷವಾಗುತ್ತದೆ.

ಇಂಥಾ ಗುರುಗಳ ಕಾರುಣ್ಯ ಛತ್ರದಲ್ಲಿ ಇರುವ ನಾವೇ ಧನ್ಯರೂ – ಮಾನ್ಯರು!!

ನಾನು ಕಂಡಂತೆ ಸುಬುಧೇಂದ್ರ ತೀರ್ಥರು
ವೇದ ವೇದಾಂಗ ನಿಪುಣಂ
ಮಧ್ವ ಟೀಕಾರ್ಯ ಸೇವಕಂ !
ರಾಘವೇಂದ್ರ ಕೃಪಾ ಪಾತ್ರಂ
ಸುಬುಧೇಂದ್ರಗುರುಂಭಜೇ !! ಎಂದು ಪ್ರಾರ್ಥಿಸುತ್ತೇನೆ.

ನಂಜನಗೂಡು ತಾಲೂಕು ಹೊಸಕೋಟೆ ಮೂಲದ ಬೆಂಗಳೂರು ನಿವಾಸಿ ಡಾ.ಎಚ್.ಎಸ್. ರಾಘವೇಂದ್ರ ಅವರ ಸಾಧನೆ ಎಲೆಮರೆಯ ಹಣ್ಣಿನಂತೆ. ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ರಾಘವೇಂದ್ರ ಅವರದ್ದು ಸದ್ದಿಲ್ಲದ ಸಾಧನೆ. ಕುಗ್ರಾಮದಿಂದ ಬಂದು ಸಂಸ್ಥೆಯೊಂದನ್ನು ಕಟ್ಟಿ ನೂರಾರು ಜನರಿಗೆ ಅನ್ನದಾತರಾಗಿರುವ ಅವರು, ದೇಶ ರಕ್ಷಣೆಯ ಸೇವೆಯೊಂದಿಗೆ, ಧಾರ್ಮಿಕ ಸೇವಾ ಕಾರ್ಯದಲ್ಲಿಯೂ ಮುಂಚೂಣಿಯಲ್ಲಿದ್ದಾರೆ.

ಹೊಸಕೋಟೆ ರಾಘಣ್ಣ ಅವರದ್ದು ರಕ್ಷಣೆ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಅಬ್ಬರವಿಲ್ಲದ ಸೇವೆ

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಹೊಸಕೋಟೆ ಗ್ರಾಮದಲ್ಲಿ 1878ರ ಆಸುಪಾಸಿನಲ್ಲಿದ್ದ ಎರಡೇ ಎರಡು ಮಾಧ್ವ ಬ್ರಾಹ್ಮಣ ಕುಟುಂಬವೊಂದಲ್ಲಿ ಶ್ರೀ ರಾಘವಯ್ಯನವರ ಮಗ ರಂಗಣ್ಣನವರು ಗ್ರಾಮದ ಶ್ಯಾನುಭೋಗರಾಗಿದ್ದರು. ರಂಗಣ್ಣನವರು ಆ ಕಾಲದಲ್ಲಿ ಮೈಸೂರು ಮಹಾರಾಜರ ಆಸ್ಥಾನದಲ್ಲಿ ಬಂಗಾರದ ಕಲಶ ಕಳುವಾಗಿದ್ದಾಗ ಕಳ್ಳರನ್ನು ಹಿಡಿದುಕೊಟ್ಟು ಶ್ರೀಮನ್ ಮಹಾರಾಜರಿಂದ ಪ್ರಶಂಸೆ, ಬೆಳ್ಳಿ ಕಡಗ ಮತ್ತು ಐವತ್ತೆರಡು ಎಕರೆ ರತ್ನಕಲ್ಲುಮುಟ್ಟಿ ಬೋರೆ ಹೊಲವನ್ನು ಬಳುವಳಿಯಾಗಿ ಪಡೆದವರು. ಇವರಿಗೆ ಸುಬ್ಬರಾಯರು ಎಂಬ ಏಕೈಕ ಪುತ್ರ. ಸುಮಾರು ಕ್ರಿ.ಶ.1924/25 ರಲ್ಲಿ ಟಿ. ನರಸೀಪುರ ತಾಲೂಕು ಸೋಸಲೆಗ್ರಾಮದ ಸುತ್ತಮುತ್ತ ಭೀಕರ ಪ್ಲೇಗ್ ರೋಗ ವ್ಯಾಪಿಸಿಕೊಂಡಿತ್ತು. ಆಗ ಸೋಸಲೆ ವ್ಯಾಸರಾಯರ ಮಠ ಸ್ವಸ್ಥಾನ ಬಿಡಬೇಕಾದ ಪರಿಸ್ಥಿತಿ ಬಂದಿತ್ತು.

ರಂಗಣ್ಣ ಮತ್ತು ಸುಬ್ಬರಾಯರು ಕೂಡಿ ಇಡೀ ವ್ಯಾಸರಾಯರ ಮಠವನ್ನೇ ಗ್ರಾಮಕ್ಕೆ ಸ್ಥಳಾಂತರಗೊಳಿಸಿ, ತಮ್ಮ ನಿವಾಸವನ್ನು ತೆರವುಗೊಳಿಸಿ ಸ್ವಾಮಿಗಳಿಗೆ ಆಶ್ರಯ ನೀಡಿದವರು. ಸರಿ ಸುಮಾರು ಮೂರು ತಿಂಗಳುಗಳ ಕಾಲ ಮಠದ ಪರಿಪೂರ್ಣ ಕಾರ್ಯಕ್ರಮಗಳನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತರು. ಆ ಸಂದರ್ಭದಲ್ಲಿ ಸುಬ್ಬರಾಯರ ಪತ್ನಿ ಪುಟ್ಟಮ್ಮನವರು ಗರ್ಭಿಣಿಯಾಗಿದ್ದರು. ಆಕೆಗೆ ಅನುಕೂಲಕರವಾಗುವಂತೆ ಬೇರೆ ಕಡೆ ವಾಸದ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಶ್ರೀ ಸುಬ್ಬರಾಯರಿಗೆ ಎರಡು ಹೆಣ್ಣು ಮತ್ತು ನಾಲ್ಕು ಗಂಡು ಮಕ್ಕಳಲ್ಲಿ ಎರಡನೇ ಪುತ್ರರೇ ಶ್ಯಾನುಭೋಗ್ ಶ್ರೀ ಶಾಮರಾವ್‌ರವರು. ತಾತನಂತೆ ಬಹಳ ಧೈರ್ಯಶಾಲಿ.

ಸಂಪ್ರದಾಯ, ಪೂಜೆ, ಪುನಸ್ಕಾರ ಮತ್ತು ಕೃಷಿಯ ಜತೆಗೆ ಗ್ರಾಮದಲ್ಲಿ ಜಾತಿಭೇದವಿಲ್ಲದೇ ಸಮಾಜ ಸೇವೆಗೆ ಒತ್ತುಕೊಟ್ಟವರು. ಹೊಸಕೋಟೆ ಗ್ರಾಮವೂ ಸೇರಿದಂತೆ ಸುತ್ತ-ಮುತ್ತಲ ಹತ್ತು ಹಳ್ಳಿಗಳ ಸಮಸ್ತ ಜನರಿಗೆ ವ್ಯಾಜ್ಯಗಳಲ್ಲಿ ನ್ಯಾಯ ಹೇಳುತ್ತಿದ್ದರು. ಇವರ ಅಂತಿಮ ತೀರ್ಮಾನಕ್ಕೆ ಪ್ರತಿಯೊಬ್ಬರು ಬದ್ಧರಾಗಿರುತ್ತಿದ್ದರು. 1960ರಲ್ಲಿ ಕಪಿಲಾನದಿಯಲ್ಲಿ ಭೀಕರ ಪ್ರವಾಹ ಬಂದಿತ್ತು. ಆಗ ನದಿ ದಡದ ಸ್ವಲ್ಪ ಎತ್ತರದಲ್ಲಿ ಉಪ್ಪಲಿಗೆ ಶೆಟ್ಟರ ಮೇಳವೆಂಬ ಸ್ಥಳ ಪೂರ್ಣ ಮುಳುಗಿ ಇಡೀ ಪ್ರದೇಶವೇ ಜಲಾವೃತವಾದಾಗ ಅಲ್ಲಿನ ಜನರೆಲ್ಲರನ್ನೂ ಹೊಸಕೋಟೆ ಗ್ರಾಮದಲ್ಲಿನ ಸರಕಾರಿ ಶಾಲೆಯಲ್ಲಿ ಇರಿಸಿ ತಿಂಗಳಾನುಗಟ್ಟಲೇ ಪೋಷಿಸಿದರು. ಸರಕಾರದ ಜತೆ ತಮ್ಮ ವಿಶ್ವಾಸ, ಪ್ರಭಾವವನ್ನು ಬಳಸಿ ಈ ಜನರಿಗೆ ಶೀಘ್ರವಾಗಿ ಪುನರ್ವಸತಿ ಕಲ್ಪಿಸಿದರು. ಸುತ್ತೂರು-ಹೊಸಕೋಟೆ ಸೇತುವೆ ನಿರ್ಮಾಣವಾದಾಗ ಪಶ್ಚಿಮ ತುದಿಯ ತಮ್ಮ ಜಾಗವನ್ನು ಪುಕ್ಕಟೆಯಾಗಿ ಪರಿಹಾರ ತೆಗೆದುಕೊಳ್ಳದೇ ಕೊಟ್ಟು ಸಮಾಜಕ್ಕೆ ಒಳಿತನ್ನು ಬಯಸಿದರು.

ಶ್ರೀ ಶಾಮರಾವ್ ಮತ್ತು ಅವರ ಪತ್ನಿ ಶ್ರೀಮತಿ ಶಕುಂತಳರವರಿಗೆ ಆರು ಜನ ಮಕ್ಕಳು. ಮೂವರು ಗಂಡು ಮಕ್ಕಳಾದ ರಮೇಶ್, ಸುಬ್ಬಣ್ಣ ಮತ್ತು ರಾಘವೇಂದ್ರರಾವ್, ಮೂವರು ಹೆಣ್ಣುಮಕ್ಕಳಾದ ಸುಜಾತ, ಸುವರ್ಣ ಮತ್ತು ವಸಂತ. ಮೊದಲನೇ ಮಗ ರಮೇಶ್, ಆರಂಭಿಕ ಶಿಕ್ಷಣವನ್ನು ತಮ್ಮ ಹಳ್ಳಿಯಲ್ಲಿ ಪಡೆದು ಮುಂದೆ ಬಿಎಸ್‌ಸಿ, ಬಿಇ (ಸಿವಿಲ್ ಎಂಜಿಯರಿಂಗ್) ಪಿ.ಎಚ್‌ಡಿ (ಸಿವಿಲ್ ಎಂಜಿನಿಯರಿಂಗ್) ಪಡೆದು ಮೈಸೂರಿನಲ್ಲಿ ಪ್ರಖ್ಯಾತ ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎನ್‌ವಿರಾನ್‌ಮೆಂಟಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾಗಿದ್ದರು. ಇವರ ಶೈಕ್ಷಣಿಕ ಪರಿಣತಿಯ ಫಲವಾಗಿ ಶ್ರೀ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೆನೆಟ್ ಮೆಂಬರ್ ಆಗಿ ಸೇವೆ ಸಲ್ಲಿಸಿದರು. ಬಾಲ್ಯದಿಂದಲೂ ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡು ಕನ್ನಡ ಭಾಷೆಯಲ್ಲಿ ಎಂಜಿನಿಯರಿಂಗ್ ಪುಸ್ತಕಗಳನ್ನು ಬರೆದು ವಿಶ್ವವಿದ್ಯಾಲಯಗಳ ಪ್ರಸಾರಾಂಗದಲ್ಲಿ ಪ್ರಕಟಿಸಿದರು. ಇವರ ಪರಿಸರ ವಿಷಯ ಜ್ಞಾನಕ್ಕೆ ಪುರಸ್ಕಾರವೆಂಬಂತೆ ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಲ್ಲಿ ಮೂರು ವರ್ಷ ಅತ್ಯುನ್ನತ ಮಟ್ಟದ ಪರಿಸರ ಪರವಾನಗಿ ದಯಪಾಲಿಸುವ ತಜ್ಞರ ಸಮಿತಿಯಲ್ಲಿದ್ದರು. ಇದರ ಜತೆಗೆ ಕರ್ನಾಟಕ ಸರಕಾರದಲ್ಲಿ ಆರು ವರ್ಷಗಳ ಕಾಲ ಪರಿಸರ ಪ್ರಭಾವದ ಮೌಲ್ಯಮಾಪನ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಪೂರ್ವ ಮತ್ತು ಪಶ್ಚಿಮಗಳಲ್ಲಿರುವ ಪ್ರಖ್ಯಾತ ದೇಶಗಳಲ್ಲಿ ತಮ್ಮ ತಾಂತ್ರಿಕ ಸಂಶೋಧನಾ ಲೇಖನಗಳನ್ನು ಪ್ರಸ್ತುತಪಡಿಸಿದರು.

ಎರಡನೇ ಮಗ ಸುಬ್ಬಣ್ಣ

ಇವರು ಗ್ರಾಮೀಣ ಪರಿಸರದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪಡೆದರು. ತಂದೆಯಂತೆ ಕೃಷಿ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು. ಹಳ್ಳಿಯಲ್ಲೇ ಉಳಿದು ರೈತರಾದವರು. ಮೈಸೂರು ಜಿಲ್ಲೆಯಲ್ಲೇ 'ಅತ್ಯುತ್ತಮ ಬೆಳೆಗಾರ'ನೆಂಬ ಪ್ರಶಸ್ತಿಯನ್ನು ಪಡೆದವರು. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆಯನ್ನು ತಿಳಿಯಲು ಇಸ್ರೇಲ್ ದೇಶಕ್ಕೆ ಭೇಟಿ ನೀಡಿ, ಹಲವಾರು ಪ್ರಯೋಗಗಳನ್ನು ತಮ್ಮ ಹಳ್ಳಿಯಲ್ಲಿ ಮಾಡಿ ಸಹ ರೈತರಿಗೂ ಮಾರ್ಗದರ್ಶನ ಮಾಡಿದವರು. ತಂದೆಯಂತೆ ರೈತರಿಗೆ ಸರಕಾರಿ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ನಿರತರಾದವರು. ತನ್ನ ಹಳ್ಳಿಯಲ್ಲದೇ ಬೇರೆ ಊರಿನ ದೇವಸ್ಥಾನಗಳ ನಿರ್ಮಾಣ-ಪುನರ್‌ನಿರ್ಮಾಣಗಳಿಗೆ ಧನಸಹಾಯದ ಜತೆ ಸೂಕ್ತ ಸಲಹೆಗಳನ್ನು ನೀಡುತ್ತಿರುವವರು. ಇನ್ನೂ 2ನೇ ಮಗಳಾದ ಸುವರ್ಣ, ಬೆಂಗಳೂರಿನಲ್ಲಿ ದೂರದರ್ಶನ ಕೇಂದ್ರ, ಆರಂಭ ಆಗಿದ್ದ ಹೊಸದರಲ್ಲಿ ಸುದ್ದಿವಾಚಕಿ (ನ್ಯೂಸ್ ರೀಡರ್) ಆಗಿ ಕೆಲಸ ಮಾಡಿದವರು.

ಮೂರನೇ ಮಗ ಡಾಕ್ಟರ್ ಎಚ್.ಎಸ್.ರಾಘವೇಂದ್ರರಾವ್. ಅವರು 1969ನೇ ಸಭೆಯಲ್ಲಿ ಹೊಸಕೋಟೆ ಗ್ರಾಮದಲ್ಲಿ ಜನಿಸಿ, ಹೊಸಕೋಟೆ ಸುತ್ತೂರು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು. 1989ರಲ್ಲಿ ತಾಂತ್ರಿಕ ವೃತ್ತಿಯನ್ನು ಆರಿಸಿಕೊಂಡು ಮಾರ್ಕೆಟಿಂಗ್ ಕಾರ್ಯತಂತ್ರ, ಪೂರೈಕೆ ನೀತಿ ಮತ್ತು ಆರ್ಥಿಕ ತಜ್ಞರಾಗಿ ಕಳೆದ ಮೂರು ದಶಕಗಳಲ್ಲಿ ಪೂರ್ಣ ಅನುಭವವನ್ನು ಪ್ರಮುಖವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ಯುನ್ಮಾನ ಉತ್ಪಾದನಾ ಕ್ಷೇತ್ರದಲ್ಲಿ ಹೆಸರು ಗಳಿಸಿಕೊಂಡವರು.

ಕಾರ್ಪೊರೇಟ್ ವಲಯದ ಅನೇಕ ಪ್ರಧಾನ ಕೈಗಾರಿಕಾ ನಿಯೋಜನೆ, ಆಡಳಿತಾತ್ಮಕ ಕಾರ್ಯತಂತ್ರ ಯೋಜನೆ, ವಿಪತ್ತು ನಿರ್ವಹಣೆ ಮತ್ತು ಯೋಜನಾ ಮೌಲ್ಯಮಾಪನಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡವರು. ಇದೆಲ್ಲವನ್ನು ಪರಿಗಣಿಸಿ ಲಂಡನ್ ನಗರದ ಹೌಸ್ ಆಫ್ ಕಾಮನ್ಸ್‌ನ ಕೈಗಾರಿಕಾ ಕ್ಷೇತ್ರದ ಮಹಾತ್ಮಗಾಂಧಿ ಸಮ್ಮಾನ್ ಪ್ರಶಸ್ತಿಗೆ ಭಾಜನರಾದರು. 2011ರಲ್ಲಿ ರಕ್ಷಣಾ ಮತ್ತು ಬ್ಯಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿತ **M/s DCX INDIA** ಎಂಬ ಕಂಪನಿಯನ್ನು ಸ್ಥಾಪಿಸಿ ಅದರ ಮೂಲಕ ಪ್ರಮುಖವಾಗಿ ರಕ್ಷಣಾ ವಿದ್ಯುನ್ಮಾನ ಉಪಕರಣಗಳ ಉತ್ಪಾದನೆ ಪ್ರಾರಂಭಿಸಿದರು. ಪ್ರಥಮ ಬಾರಿ ಈ ಬೃಹತ್ ಕ್ಷೇತ್ರಕ್ಕೆ ಉದ್ಯಮಿಯಾಗಿ ಧುಮುಕಿದ ಇವರು ಆರಂಭಿಕ ಹಂತದಲ್ಲಿ ಹಲವು ಏಳು-ಬೀಳುಗಳನ್ನು ಅನುಭವಿಸಿ ಈಗ ನಮ್ಮ ದೇಶದ ರಕ್ಷಣಾ ವಲಯ ಕ್ಷೇತ್ರದಲ್ಲಿ ಒಂದು ಅತ್ಯಂತ ಸದೃಢ, ಸ್ವಶಕ್ತಿಯ ಕಂಪನಿಯಾಗಿಸಿ ಸುಮಾರು ಮುನ್ನೂರು ಜನರಿಗೂ ಹೆಚ್ಚು ಉದ್ಯೋಗ ದಯಪಾಲಿಸಿದ್ದಾರೆ.

ಸಂಸ್ಥೆಯಲ್ಲಿ ಬಹುಪಾಲು ನೌಕರರು ಸ್ಥಳೀಯರು ಅದರಲ್ಲೂ ಗ್ರಾಮೀಣ ಪ್ರದೇಶದ ಯುವಕರೇ ಅವಕಾಶ ಪಡೆದಿರುವುದು ಪ್ರಶಂಶನೀಯವಾಗಿದೆ. ರಾಘವೇಂದ್ರ ಅವರ ಬೆಳವಣಿಗೆಯನ್ನು ಪರಿಗಣಿಸಿ ಜರ್ಮನಿಯ ಇಂಟರ್‌ನ್ಯಾಷನಲ್ ಪೀಸ್ ವಿಶ್ವವಿದ್ಯಾಲಯವು ವ್ಯವಹಾರ ನಿರ್ವಹಣೆಯಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸತ್ಕರಿಸಿದೆ. ಇದರೊಂದಿಗೆ ಹಲವು ಹನ್ನೆರಡು ಪ್ರಶಸ್ತಿಗಳನ್ನು ಗಳಿಸಿಕೊಂಡಿರುವುದು ಡಾ. ರಾಘವೇಂದ್ರರಾವ್ ಅವರ ನಾಯಕತ್ವ ಬಿಂಬಿಸುತ್ತದೆ. ತಾಂತ್ರಿಕ ಕೌಶಲ್ಯ ವಿನಿಮಯದಿಂದ ಅತ್ಯಂತ ಅತ್ಯುತ್ತಮ ಬ್ಯಾಹ್ಯಾಕಾಶ ಮತ್ತು ರಕ್ಷಣಾ ಉಪಕರಣಗಳನ್ನು ನಮ್ಮ ದೇಶದ ರಕ್ಷಣಾ ವಿಭಾಗಕ್ಕೆ ಕೊಡುಗೆ ನೀಡುವುದರೊಂದಿಗೆ ಅತ್ಯುತ್ತಮ ದೇಶಪ್ರೇಮಿಯಾಗಿ ಹೊರಹೊಮ್ಮಬೇಕೆಂಬುದು ರಾಘವೇಂದ್ರ ಅವರ ಮುಂದಿನ ಕನಸಾಗಿದೆ.

ತಮ್ಮ ವೈಯಕ್ತಿಕ ಸಂಪಾದನೆಯಲ್ಲಿ ಬಹಳಷ್ಟು ಪಾಲನ್ನು ಬಡವಿದ್ಯಾರ್ಥಿಗಳಿಗೆ ಸಹಾಯಧನ ನೀಡುವುದು, ದೇವಸ್ಥಾನಗಳ ನಿರ್ಮಾಣ, ಪುನರ್ ನಿರ್ಮಾಣಗಳಿಗೆ ಆರ್ಥಿಕ ಸೌಲಭ್ಯ ಮತ್ತು ಸಲಹೆ ನೀಡುವುದು. ಮಠಗಳು, ವಿದ್ಯಾರ್ಥಿ ನಿಲಯಗಳು, ದೇವಸ್ಥಾನಗಳು, ಅಶಕ್ತ ಸಂಘಗಳು, ವೃದ್ಧಾಶ್ರಮ, ಅಂಗವೈಕಲ್ಯ ಶಿಕ್ಷಣ ಸಂಸ್ಥೆಗಳು ಮುಂತಾದವುಗಳಿಗೆ ಆರ್ಥಿಕ ಬೆಂಬಲ ನೀಡುವಲ್ಲಿ ರಾಘವೇಂದ್ರ ಅವರು ಕೊಡುಗೈ ದಾನಿಯಾಗಿದ್ದಾರೆ. ರಾಘವೇಂದ್ರ ಅವರದ್ದು ಮೂಲ ಸಾಮಾಜಿಕ ಧರ್ಮವಾಗಿದೆ. ಸಮಾಜಮುಖಿ ಸೇವೆಗಳಲ್ಲಿ ಸದಾ ಮುಂದು. ಹಲವಾರು ಕೈಗಾರಿಕಾ ಪ್ರಾಮುಖ್ಯ ದೇಶಗಳನ್ನು ಸಂಚರಿಸುತ್ತ ತಮ್ಮ ಅನುಭವವನ್ನು ಹೆಚ್ಚು ಮಾಡಿಕೊಳ್ಳುತ್ತಾ, ಅವುಗಳನ್ನು ದೇಶದ ರಕ್ಷಣಾ ವ್ಯವಸ್ಥೆಗೆ ಪೂರಕವಾಗುವಂತೆ ತೊಡಗಿಸಿಕೊಳ್ಳುವುದರಲ್ಲಿ ಅವರು ಸದಾಕಾಲ ಅತ್ಯುತ್ಸಾಹಿ.

ರಾಘವೇಂದ್ರ ಅವರಿಗೆ ಸಂದ ಪ್ರಮುಖ ಸನ್ಮಾನಗಳು

- ಮಹಾತ್ಮಾ ಗಾಂಧಿ ಸನ್ಮಾನ್
- ಯಂಗ್ ಎಂಟರ್‌ಪ್ರೆನರ್ ಆಫ್ ದಿ ಇಯರ್ 2018
- ಇಂಡೋ ನೇಪಾಳ ರತ್ನ ಅವಾರ್ಡ್ 2028
- ಎಕ್ಸಲೆನ್ಸ್ ಇನ್ ಡಿಫೆನ್ಸ್ ಅಂಡ್ ಏರೋಸ್ಪೇಸ್ 2021
- ಇಂಡಿಯಾ ಗ್ರೇಟೆಸ್ಟ್ ಲೀಡರ್ಸ್ ಅವಾರ್ಡ್
- ಭಾರತೀಯ ಉದ್ಯೋಗ್ ಲೀಡರ್‌ಶಿಪ್ ಅವಾರ್ಡ್ 2023
- ಶ್ರೀ ಮಂತ್ರಾಲಯ ಪರಿಮಳ ಪ್ರಶಸ್ತಿ 2024
- ವೀರಕನ್ನಡಿಗ ಪ್ರಶಸ್ತಿ 2024
- ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ 2024
- ಎಕ್ಸ್‌ಪೋರ್ಟ್ ಎಕ್ಸಲೆನ್ಸ್ ಪ್ರಶಸ್ತಿ 2023 ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

ಹಲವು ಶ್ರೀಗಳ ಆಶೀರ್ವಾದ

ಡಾ. ಎಚ್.ಎಸ್.ರಾಘವೇಂದ್ರ ರಾವ್ ಅವರ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವುದು ಸಹ ಸೇರಿದೆ. ನಮ್ಮ ಸುತ್ತಲಿನ ಪರಿಸರ ಉಳಿಸಲು ಮರಗಳನ್ನು ಬೆಳೆಸುವುದು ಅತಿ ಮುಖ್ಯವಾದುದು. ಇವರ ಸಂಸ್ಥೆಯು ಹೊಣೆ ಹೊತ್ತಿರುವ ಸಾಮಾಜಿಕ ಜವಾಬ್ದಾರಿ ಯೋಜನೆಯಲ್ಲಿ, ಹಲವು ಕಡೆ ಗಿಡಗಳನ್ನು ನೆಡುವುದರ ಮೂಲಕ, ನಮ್ಮ ಪರಿಸರ ರಕ್ಷಣೆಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ಹಲವು ಪ್ರದೇಶಗಳಲ್ಲಿ ಸ್ವತಃ ತಾವೇ ಗಿಡಗಳನ್ನು ನೆಟ್ಟು, ತಮ್ಮ ಸಹೋದ್ಯೋಗಿಗಳು ಮತ್ತು ಹಿತೈಷಿಗಳ ಜತೆ ಕಾರ್ಯಕ್ರಮವನ್ನು ಏರ್ಪಡಿಸುವುದು ಇವರ ನೆಚ್ಚಿನ ಹವ್ಯಾಸಗಳಲ್ಲಿ ಒಂದು. ಜತೆಗೆ, ಅಧ್ಯಾತ್ಮ ಕ್ಷೇತ್ರದಲ್ಲಿ ಕೊಡುಗೆ ನೀಡುತ್ತಿರುವ ಹಲವು ಅಧ್ಯಾತ್ಮಿಕ ಸಂಸ್ಥೆಗಳಿಗೆ ತಮ್ಮದೇ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಇವರ ಉದ್ಯಮ ಮತ್ತು ಪರಿಸರ ರಕ್ಷಣಾ ಕಾರ್ಯದಲ್ಲಿ ಮಂತ್ರಾಲಯ ಮಠ, ಸುತ್ತೂರು ಮಠ ಹಾಗೂ ವ್ಯಾಸರಾಜ ಮಠ ಮತ್ತು ಉಡುಪಿಯ ಅಷ್ಟಮಠಗಳ ಸ್ವಾಮೀಜಿಗಳ ಆಶೀರ್ವಾದ ಇರುವುದು ವಿಶೇಷ.

ಅಮೆರಿಕ-ಇಸ್ರೇಲ್ ರಕ್ಷಣಾ ವ್ಯವಸ್ಥೆಗೂ ಕೊಡುಗೆ

ಭಾರತ ಮಾತ್ರವಲ್ಲ ಅಮೆರಿಕ ಮತ್ತು ಇಸ್ರೇಲ್ ರಕ್ಷಣಾ ವ್ಯವಸ್ಥೆಗೂ ಇವರ ಕಂಪನಿ ತನ್ನದೇ ಆದ ಕೊಡುಗೆ ನೀಡುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿ ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ, ಇವರ ಸಂಸ್ಥೆ ಗಮನಾರ್ಹ ಕೆಲಸ ಮಾಡುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ಇದನ್ನು ಬಿಲಿಯರ್ ಡಾಲರ್ ಕಂಪನಿಯನ್ನಾಗಿ ರೂಪಿಸುವ ಕನಸು ಮತ್ತು ಗುರಿಯನ್ನು ಇವರು ಹೊಂದಿದ್ದಾರೆ. ಡಾ ಎಚ್ ಎಸ್ ರಾಘವೇಂದ್ರ ರಾವ್ ಅವರು ನಿಜಕ್ಕೂ ನಾಡಿನ ಹೆಮ್ಮೆ. ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೂ ಸಹ ಅವರು ಭಾಜನರಾಗಿ ಮಾಲ್ಡೀವ್ಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ, ಗೌರವಕ್ಕೆ ಪಾತ್ರರಾದರು.